ಸೋಮವಾರ, ಫೆಬ್ರುವರಿ 22, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 53 | ಪುಟ 12 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಎಂಜಿನಿಯರಿಂಗ್ ಕ್ಷೇತ್ರ ಅಗಾಧವಾಗಿದ್ದು ವಿವಿಧ ರೀತಿಯ ಎಂಜಿನಿಯರಿಂಗ್ ಪದವಿಗಳಿಂದಾಗಿ ವೃತ್ತಿ ಆಯ್ಕೆಗಳೂ ವಿಪುಲವಾಗಿವೆ.

ಅನುಭವ ಮಂಟಪ ಬಲಿಷ್ಠರು ಇನ್ನೂ ಬಲಗೊಳ್ಳಲು ಬೇಕಾಗಿದೆ ಮೀಸಲು

ಕಾಫಿನಾಡು, ಕರಾವಳಿಯಲ್ಲಿ ಮಳೆ 4

‘ರಾಮ–ಕೃಷ್ಣ ಇತಿಹಾಸ ಪುರುಷರಷ್ಟೇ’ 6

ನಾಲ್ಕು ತಿಂಗಳಿನಿಂದ ತೆರಿಗೆ ಸಂಗ್ರಹದಲ್ಲಿ ಸುಧಾರಣೆ ಪರಿಣಾಮ

ತಗ್ಗಲಿದೆ ಜಿಎಸ್‌ಟಿ ಆದಾಯ ಕೊರತೆ 10

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

‘ಪೊಗರು’: ಬ್ರಾಹ್ಮಣರ ಅವಹೇಳನ ದೃಶ್ಯಗಳನ್ನು ತೆಗೆಯಲು ಆಗ್ರಹ 6

ಚಿನಕುರಳಿ
ಪ್ರಕಾಶ್ ಶೆಟ್ಟಿ

ರಾಜಧಾನಿಯಲ್ಲಿ ಧರಣಿ ಆರಂಭಿಸಿದ ಪಂಚಮಸಾಲಿಗಳು ● ಮಾರ್ಚ್ 4 ರವರೆಗೆ ಗಡುವು

ಪಂಚಮಸಾಲಿ ಪಟ್ಟು ತಂದ ಇಕ್ಕಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಪ್ರವರ್ಗ ‘2ಎ’ ಅಡಿಯಲ್ಲಿ ಮೀಸಲಾತಿಗೆ ಆಗ್ರಹಿಸಿ ಆರಂಭಿಸಿರುವ ಹೋರಾಟವನ್ನು ತಾತ್ಕಾಲಿಕವಾಗಿ ಕೈಬಿಡುವಂತೆ ಪಂಚಮಸಾಲಿ ಸಮುದಾಯದ ಮಠಾಧೀಶರು ಮತ್ತು ಮುಖಂಡರ ಮನವೊಲಿಸುವ ರಾಜ್ಯ ಸರ್ಕಾರದ ಪ್ರಯತ್ನ ವಿಫಲವಾಗಿದೆ. ಮೀಸಲಾತಿ ಘೋಷಣೆಗೆ ಮಾರ್ಚ್ 4 ರ ಗಡುವು ನೀಡಿರುವ ಸಮುದಾಯದ ಜನರು, ನಗರದ ಮೌರ್ಯ ವೃತ್ತದಲ್ಲಿ ಧರಣಿ ಆರಂಭಿಸಿದ್ದಾರೆ.

ಪ್ರವರ್ಗ ‘2ಎ’ ಅಡಿಯಲ್ಲಿ ಮೀಸಲಾತಿಗೆ ಆಗ್ರಹಿಸಿ ಜನವರಿ 14ರಂದು ಕೂಡಲಸಂಗಮದ ಪಂಚಮಸಾಲಿ ಪೀಠದಿಂದ ಆರಂಭವಾದ ಪಾದಯಾತ್ರೆಗೆ ಅರಮನೆ ಮೈದಾನದಲ್ಲಿ ಭಾನುವಾರ ತೆರೆಬಿತ್ತು.

ಸಮಾವೇಶದಲ್ಲಿ ಭಾರಿ ಸಂಖ್ಯೆಯಲ್ಲಿ ಪಾಲ್ಗೊಂಡು ಶಕ್ತಿ ಪ್ರದರ್ಶಿಸಿದ ಸಮುದಾಯದ ಜನರು, ‘2ಎ’ ಪಟ್ಟಿಯಲ್ಲಿ ಮೀಸಲಾತಿ ಘೋಷಿಸಲು ಒಕ್ಕೊರಲಿನ ಧ್ವನಿ ಮೊಳಗಿಸಿದರು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಸಮಾವೇಶದಲ್ಲಿ ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮತ್ತು ಹರಿಹರದ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಪಂಚಮಸಾಲಿ ಬಾವುಟವನ್ನು ಬೀಸಿದರು –ಪ್ರಜಾವಾಣಿ ಚಿತ್ರ

ಮನೆಯಿಂದಲೇ ನಿಗಾ ಇರಿಸಿದ್ದ ಮುಖ್ಯಮಂತ್ರಿ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಭಾನುವಾರ ಇಡೀ ದಿನ ಮನೆಯಲ್ಲೇ ಕುಳಿತು ಪಂಚಮಸಾಲಿ ಸಮುದಾಯದ ಸಮಾವೇಶ ಮತ್ತು ನಂತರದ ಬೆಳವಣಿಗೆಗಳ ಮೇಲೆ ನಿಗಾ ಇರಿಸಿದ್ದರು. ಮುಖ್ಯಮಂತ್ರಿಯವರ ಜತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಕೂಡ ಇದ್ದರು. ಸಮಾವೇಶದ ವೇದಿಕೆಯಲ್ಲಿದ್ದ ಸಚಿವರಾದ ಸಿ.ಸಿ.ಪಾಟೀಲ ಮತ್ತು ಮುರುಗೇಶ ನಿರಾಣಿ ಜತೆ ದೂರವಾಣಿ ಸಂಪರ್ಕದಲ್ಲಿದ್ದ ಗೃಹ ಸಚಿವರು, ವೇದಿಕೆಯಲ್ಲಿನ ಬೆಳವಣಿಗೆಗಳ ಕುರಿತು ಯಡಿಯೂರಪ್ಪ ಅವರಿಗೆ ಮಾಹಿತಿ ನೀಡುತ್ತಿದ್ದರು. ಕೂಡಲ ಸಂಗಮದ ಸ್ವಾಮೀಜಿ ವಿಧಾನಸೌಧಕ್ಕೆ ಪಾದಯಾತ್ರೆ ಹೊರಡುವುದಾಗಿ ಘೋಷಿಸುತ್ತಿದ್ದಂತೆ ಸಿ.ಸಿ. ಪಾಟೀಲ, ನಿರಾಣಿ ಮತ್ತು ವೇದಿಕೆಯಲ್ಲಿದ್ದ ಕೆಲವು ಶಾಸಕರು ಮುಖ್ಯಮಂತ್ರಿ ನಿವಾಸಕ್ಕೆ ದೌಡಾಯಿಸಿದರು. ಅವರೊಂದಿಗೆ ಯಡಿಯೂರಪ್ಪ, ಬಿಕ್ಕಟ್ಟು ಶಮನದ ಕುರಿತು ಚರ್ಚಿಸಿದರು.

ಹೋರಾಟದಲ್ಲಿ ಒಡಕು?

ಅರಮನೆ ಮೈದಾನದಿಂದ ವಿಧಾನಸೌಧದತ್ತ ಪಾದಯಾತ್ರೆ ಆರಂಭವಾಗುತ್ತಿದ್ದಂತೆ ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೋರಾಟದಿಂದ ಹಿಂದೆ ಸರಿದರು. ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಸಭೆಗೂ ಗೈರಾದರು. ಪಂಚಮಸಾಲಿ ಹೋರಾಟದಲ್ಲಿ ಒಡಕು ಮೂಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ಹೀಗೆಯೇ ಆಗುತ್ತದೆ ಎಂದು ನಮಗೆ ಗೊತ್ತಿತ್ತು. ಅವರಿಂದ ಏನೂ ಆಗದು. ನೀವು (ಬಸವ ಜಯ ಮೃತ್ಯುಂಜಯ ಸ್ವಾಮೀಜಿ) 24 ಕ್ಯಾರಟ್ ಚಿನ್ನ. ಅದು (ವಚನಾನಂದ ಸ್ವಾಮೀಜಿ) 12 ಕ್ಯಾರಟ್ ಚಿನ್ನ. ಹೋದರೆ ಹೋಗಲಿ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ವಾಗ್ದಾಳಿ ನಡೆಸಿದರು.

ಖಾಸಗಿ ಕೃಷಿ ಮಾರುಕಟ್ಟೆ ನಿರ್ಮಾಣಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕೇಂದ್ರ ಸರ್ಕಾರ ರೂಪಿಸಿರುವ ಕೃಷಿ ತಿದ್ದುಪಡಿ ಕಾಯ್ದೆಗಳಿಗೆ ರೈತರಿಂದ ಭಾರಿ ವಿರೋಧದ ಬೆನ್ನಲ್ಲೇ ಹಿರಿಯೂರು ತಾಲ್ಲೂಕಿನಲ್ಲಿ ಖಾಸಗಿ ಕೃಷಿ ಮಾರುಕಟ್ಟೆ ನಿರ್ಮಾಣಕ್ಕೆ ಸಿದ್ಧತೆಗಳು ನಡೆಯುತ್ತಿವೆ. ಮಾರುಕಟ್ಟೆ ಏಪ್ರಿಲ್ ತಿಂಗಳಿಂದ ಕಾರ್ಯಾರಂಭವಾಗುವ ಸಾಧ್ಯತೆ ಇದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಕಾಯ್ದೆ ತಿದ್ದುಪಡಿಯಾದ ಬಳಿಕ ಅಸ್ತಿತ್ವಕ್ಕೆ ಬರುವ ರಾಜ್ಯದ ಮೊದಲ ಖಾಸಗಿ ಕೃಷಿ ಮಾರುಕಟ್ಟೆ ಇದು ಎನ್ನಲಾಗಿದೆ. ಈ ಸಂಬಂಧ ‘ಅಕ್ಷಯ ಫುಡ್ ಪಾರ್ಕ್’ ಎಂಬ ಸಂಸ್ಥೆ ಅಕ್ಟೋಬರ್‌ನಲ್ಲೇ ಪರವಾನಗಿ ಪಡೆದಿದೆ.

ಹಿರಿಯೂರು ತಾಲ್ಲೂಕಿನ ಹುಚ್ಚವ್ವನಹಳ್ಳಿಯ 106 ಎಕರೆ ವಿಸ್ತೀರ್ಣದಲ್ಲಿ ‘ಅಕ್ಷಯ ಫುಡ್ ಪಾರ್ಕ್’ ಅಸ್ತಿತ್ವಕ್ಕೆ ಬರಲಿದೆ. ಆಹಾರ ಧಾನ್ಯ, ತರಕಾರಿ, ಹಣ್ಣು ಸೇರಿದಂತೆ ಕೃಷಿ ಉತ್ಪನ್ನಗಳ ವರ್ಗೀಕರಣ, ಮೌಲ್ಯವರ್ಧನೆ ಹಾಗೂ ಪ್ಯಾಕಿಂಗ್ ವ್ಯವಸ್ಥೆ ಇದೆ. ಧಾನ್ಯ ಸಂಗ್ರಹ ಗೋದಾಮು, ತರಕಾರಿ ಹಾಗೂ ಹಣ್ಣುಗಳಿಗೆ ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯೂ ಇರಲಿದೆ.

> **ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುವ ರೈತರಿಗೆ ಯೋಗ್ಯ ಬೆಲೆ ಸಿಗಲಿದೆ. ಮಾರಾಟ ಮಾಡಲು ಸಾಧ್ಯವಾಗದಿದ್ದರೆ ಸಂಗ್ರಹಿಸಿಡಲು ಅವಕಾಶವಿದೆ**
> **ಎಂ.ನಾರಾಯಣಸ್ವಾಮಿ**
> ಎಂ.ಡಿ., ಅಕ್ಷಯ ಫುಡ್ ಪಾರ್ಕ್

6ನೇ ಪುಟ ನೋಡಿ

ಕಲ್ಲಿದ್ದಲು ಕಳ್ಳತನ ಪ್ರಕರಣ

ಮಮತಾ ಸೋದರಳಿಯ ನಿವಾಸದಲ್ಲಿ ಸಿಬಿಐ ಶೋಧ

ನವದೆಹಲಿ/ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರ ಕೋಲ್ಕತ್ತ ನಿವಾಸದಲ್ಲಿ ಸಿಬಿಐ ಅಧಿಕಾರಿಗಳು ಭಾನುವಾರ ಶೋಧ ಕಾರ್ಯ ನಡೆಸಿದ್ದಾರೆ.

ಪಶ್ಚಿಮ ಬಂಗಾಳ ಮತ್ತು ಬಿಹಾರದ ಕಲ್ಲಿದ್ದಲು ಗಣಿಯಲ್ಲಿ ಅದಿರು ಕಳ್ಳತನ ಪ್ರಕರಣದ ತನಿಖೆಗೆ ಸಂಬಂಧಿಸಿ ಅಭಿಷೇಕ್ ಬ್ಯಾನರ್ಜಿ ಅವರ ಪತ್ನಿ ರುಜಿರಾ ಬ್ಯಾನರ್ಜಿ ಅವರಿಗೆ ಸಿಬಿಐ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.

ಇನ್ನೇನು ವಿಧಾನಸಭಾ ಚುನಾವಣೆ ಎದುರಿಸಲಿರುವ ಪಶ್ಚಿಮ ಬಂಗಾಳ ರಾಜಕಾರಣದಲ್ಲಿ ಈ ಬೆಳವಣಿಗೆಯು ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿದೆ. ಆಡಳಿತಾರೂಢ ಟಿಎಂಸಿ, ಇದು ರಾಜಕೀಯ ಪ್ರೇರಿತ ದಾಳಿ ಎಂದು ಟೀಕಿಸಿದೆ. ಈ ಪ್ರಕರಣ ಬಹಳ ಹಿಂದೆಯೇ ದಾಖಲಾಗಿದೆ. ತನಿಖೆಯ ಭಾಗವಾಗಿ ಸಿಬಿಐ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಶೋಧಕಾರ್ಯ ನಡೆಸಿದ್ದಾರೆ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ.

ಕಲ್ಲಿದ್ದಲು ಕಳ್ಳಸಾಗಣೆ ಮತ್ತು ಕಳ್ಳತನ ಪ್ರಕರಣದ ಸಂಖ್ಯೆಯನ್ನು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

> **ಇದು ನಿರೀಕ್ಷಿತವೇ ಆಗಿತ್ತು. ಎನ್‌ಡಿಎಯ ಎಲ್ಲಾ ಮಿತ್ರಪಕ್ಷಗಳೂ ಬಿಜೆಪಿಯನ್ನು ತೊರೆದಿವೆ. ತೊರೆಯದ ಎರಡೇ ಎರಡು ನಿಷ್ಠ ಮಿತ್ರಪಕ್ಷಗಳೆಂದರೆ ಸಿಬಿಐ ಮತ್ತು ಇ.ಡಿ**
> **ಟಿಎಂಸಿ**

11ನೇ ಪುಟ ನೋಡಿ

ನರಭಕ್ಷಕ ಹುಲಿ ಸೆರೆ?

ಪೊನ್ನಂಪೇಟೆ (ಕೊಡಗು): ಶ್ರೀಮಂಗಲ ಸಮೀಪದ ಮಂಚಳ್ಳಿಯಲ್ಲಿ ಅಂದಾಜು 10 ವರ್ಷ ಪ್ರಾಯದ ಹೆಣ್ಣು ಹುಲಿಯನ್ನು ಭಾನುವಾರ ಸಂಜೆ ಸೆರೆ ಹಿಡಿಯಲಾಗಿದ್ದು, ಮೈಸೂರಿನಲ್ಲಿರುವ ಪ್ರಾಣಿ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗಿದೆ. ಆದರೆ, ಇದೇ ನರಭಕ್ಷಕ ಹುಲಿಯೇ ಎಂಬುದು ಖಚಿತವಾಗಿಲ್ಲ. 6

‘ಹೋದಲ್ಲಿ ಬಂದಲ್ಲಿ ನಿಮಗೇ ಟಿಕೆಟ್ ಎನ್ನಬೇಡಿ’

ಬೆಂಗಳೂರು: ‘ಈ ಬಾರಿ ನಿನಗೇ ಟಿಕೆಟ್ ಎನ್ನುವ ಭರವಸೆಯನ್ನು ನಾಯಕರು ಹೋದಲ್ಲಿ ಬಂದಲ್ಲಿ ಕಾರ್ಯಕರ್ತರಿಗೆ ನೀಡಬಾರದು. ಅದಕ್ಕೆಂದೇ ಒಂದು ಸಮಿತಿ ಇದೆ. ಹೈಕಮಾಂಡ್ ಇದೆ. ಪಕ್ಷದ ವೇದಿಕೆಯಲ್ಲಿ ಚರ್ಚಿಸಿ, ಎಲ್ಲರ ಒಪ್ಪಿಗೆ ಪಡೆದು ಅಭ್ಯರ್ಥಿಗಳಿಗೆ ಟಿಕೆಟ್ ನೀಡಬೇಕು’ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು. 6

ಇಂಧನ ದರ ಏರಿಕೆ ವಾಪಸ್ ಪಡೆಯಲು ಆಗ್ರಹ

ನವದೆಹಲಿ: ಇಂಧನ ದರ ಏರಿಕೆ ಮೂಲಕ ಸರ್ಕಾರ ಜನರ ಕಷ್ಟದಿಂದಲೂ ಲಾಭ ಮಾಡಿಕೊಳ್ಳಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ ಟೀಕಿಸಿದ್ದು, ದರ ಏರಿಕೆ ವಾಪಸು ಪಡೆಯಬೇಕು ಎಂದು ಆಗ್ರಹ ಪಡಿಸಿದ್ದಾರೆ. 7

ಮಹಾರಾಷ್ಟ್ರದಲ್ಲಿ ಸಮಾರಂಭಗಳಿಗೆ ನಿಷೇಧ

ಮುಂಬೈ/ಪುಣೆ: ಮುಂಬೈ, ಪುಣೆ, ಅಮರಾವತಿ ಸೇರಿದಂತೆ ಮಹಾರಾಷ್ಟ್ರದಾದ್ಯಂತ ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೆಲವು ನಿರ್ಬಂಧಗಳನ್ನು ಭಾನುವಾರ ಪ್ರಕಟಿಸಿದೆ. ರಾಜ್ಯದಲ್ಲಿ ಸೋಮವಾರದಿಂದ ಯಾವುದೇ ರಾಜಕೀಯ, ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸುವಂತಿಲ್ಲ ಎಂದು ತಿಳಿಸಿದೆ. 11

‘ಬಂಧಿಸಲು ಬಂದರೆ ಪೊಲೀಸರಿಗೆ ಮುತ್ತಿಗೆ’

ಚಂಡೀಗಡ (ಪಿಟಿಐ): ‘ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸುವವರನ್ನು ಬಂಧಿಸಲು ದೆಹಲಿ ಪೊಲೀಸರು ಬಂದರೆ, ಅವರನ್ನು ಘೇರಾವ್ ಮಾಡಿ’ ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ಬಲಬೀರ್ ಸಿಂಗ್ ರಾಜೇವಾಲ್ ಕರೆ ನೀಡಿದ್ದಾರೆ. 11

AMRITA VISHWA VIDYAPEETHAM
DEEMED TO BE UNIVERSITY UNDER SECTION 3 OF UGC ACT, 1956
School of Business

Among the 5% of B-Schools globally to have AACSB accreditation*

AACSB accreditation recognizes B-schools that have demonstrated a focus on excellence in all areas, including teaching, research, curricula development and student learning.

MBA
Master of Business Administration
ADMISSIONS OPEN
APPLY NOW
www.amrita.edu/mba
Last Date 28 FEB 2021

MBA-MS | University at Buffalo
Dual degree offered at Bengaluru campus
Taught by faculty of University at Buffalo and Amrita
Students visit USA as part of the Programme

GLOBAL UNIVERSITY RANKINGS
4th Best University in India — nirf National Institutional Ranking Framework 2020
Institution of Eminence — University Grants Commission, Government of India

No.1 Private University in India — THE World University Rankings 2020
No.1 for International Faculty in India — QS World University Rankings 2019

* Only Coimbatore Campus

MBA programme offered at following campuses
SCAN QR CODE

AMRITAPURI (KOLLAM)	BENGALURU	COIMBATORE	KOCHI
+91 90720 00196	+91 97410 18866	+91 99431 17777	+91 94009 98635
mba@am.amrita.edu	mba@blr.amrita.edu	asb@amrita.edu	mba@asb.kochi.amrita.edu

ಮೊತ್ತಮೊದಲು ಲೈಫ್ ಇನ್‌ಶ್ಯೂರೆನ್ಸ್

ನೀವು ನಿಮ್ಮ ಮಕ್ಕಳನ್ನು ‘ಭವಿಷ್ಯಕ್ಕಾಗಿ ರೆಡಿ ಮಾಡಿದ್ದೀರಾ’?

ಎಲ್‌ಐಸಿಯ ಜೀವನ್ ತರುಣ್ ಪ್ಲಾನ್.
ನಿಮ್ಮ ಮಕ್ಕಳ ಭವಿಷ್ಯವನ್ನು ಸುರಕ್ಷಿತವಾಗಿಸುತ್ತದೆ.

Plan No : 934 UIN No : 512N299V02

	ಸರ್ವೈವಲ್ ಪ್ರಯೋಜನ ಪ್ರತೀ 5 ವರುಷಕ್ಕೊಮ್ಮೆ 20 ರಿಂದ 24 ವರುಷದವರೆಗೆ	ಮೆಚ್ಯೂರಿಟಿ ಲಾಭಗಳು 25ನೇ ವರುಷದಲ್ಲಿ
ಆಯ್ಕೆ 1	ಯಾವುದೇ ಸರ್ವೈವಲ್ ಪ್ರಯೋಜನ ಇಲ್ಲ	ವಿಮೆಯ ಮೊತ್ತದ 100%
ಆಯ್ಕೆ 2	ವಿಮೆಯ ಮೊತ್ತದ 5%	ವಿಮೆಯ ಮೊತ್ತದ 75%
ಆಯ್ಕೆ 3	ವಿಮೆಯ ಮೊತ್ತದ 10%	ವಿಮೆಯ ಮೊತ್ತದ 50%
ಆಯ್ಕೆ 4	ವಿಮೆಯ ಮೊತ್ತದ 15%	ವಿಮೆಯ ಮೊತ್ತದ 25%

ಪ್ರಮುಖ ವೈಶಿಷ್ಟ್ಯಗಳು
- ಕನಿಷ್ಠ ಮೂಲಭೂತ ವಿಮೆಯ ಮೊತ್ತ (ಸಮ್ ಅಶ್ಯೂರ್ಡ್) : ₹75,000
- ಗರಿಷ್ಠ ಮೂಲಭೂತ ವಿಮೆಯ ಮೊತ್ತ (ಸಮ್ ಅಶ್ಯೂರ್ಡ್) : ಯಾವುದೇ ಲಿಮಿಟ್ ಇಲ್ಲ
- ಪ್ರವೇಶದ ವೇಳೆ ಪಾಲಿಸಿದಾರ ವ್ಯಕ್ತಿಯ ಕನಿಷ್ಠ ವಯಸ್ಸು : 90 ದಿನಗಳು (ಪೂರ್ಣಗೊಂಡಿರಬೇಕು)
- ಪ್ರವೇಶದ ವೇಳೆ ಪಾಲಿಸಿದಾರ ವ್ಯಕ್ತಿಯ ಗರಿಷ್ಠ ವಯಸ್ಸು : 12 ವರುಷ (ಪೂರ್ಣಗೊಂಡಿರಬೇಕು)
- ಪಾಲಿಸಿ ಅವಧಿ: (25 ಪ್ರವೇಶ ವಯಸ್ಸು) ವರುಷಗಳು
- ಪ್ರೀಮಿಯಮ್ ಪಾವತಿಯ ಅವಧಿ: (20 - ಪ್ರವೇಶ ವಯಸ್ಸು) ವರುಷಗಳು
- ಪ್ರೀಮಿಯಮ್ ಮನ್ನಾ / ರಿಯಾಯಿತಿ ಪ್ರಯೋಜನಗಳು

ಸಂಪರ್ಕಿಸಿ ನಿಮ್ಮ ಏಜೆಂಟ್‌ರನ್ನು / ಬ್ರಾಂಚ್ ಅಥವಾ ನಮ್ಮ ವೆಬ್ ಸೈಟ್ www.licindia.inಗೆ ವಿಸಿಟ್ ಮಾಡಿ ಅಥವಾ SMS 56767474

ಮೋಸದ ಫೋನ್ ಕರೆ/ಮಿಂಚಂಚೆಗಳು ಹಾಗೂ ಸುಳ್ಳು / ಠಕ್ಕಿನ ಕೊಡುಗೆಗಳ ಬಗೆಗೆ ಎಚ್ಚರದಿಂದಿರಿ.
ಸಾರ್ವಜನಿಕರಿಗೆ ಐಆರ್ ಡಿಎಐ ನೀಡುವ ಸ್ಪಷ್ಟನೆ: ಐಆರ್ ಡಿಎಐ ಅಥವಾ ಅದರ ಅಧಿಕಾರಿಗಳು ಯಾವುದೇ ಪ್ರಕಾರದ ವಿಮೆ ಅಥವಾ ವಿತ್ತೀಯ ಪ್ರಾಡಕ್ಟ್‌ಗಳ ಮಾರಾಟ ಅಥವಾ ಪ್ರೀಮಿಯಮ್‌ಗಳ ವಿನಿಯೋಜನೆಯಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದಿಲ್ಲ. ಐಆರ್ ಡಿಎಐ ಬೋನಸ್ ಘೋಷಿಸುವುದಿಲ್ಲ. ಇಂತಹ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಫೋನ್ ಕರೆಯ ನಂಬರಿನ ವಿವರಗಳೊಂದಿಗೆ ಪೋಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳಲಾಗಿದೆ.

ನಮ್ಮನ್ನು ಅನುಸರಿಸಿ: LIC India Forever

ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
LIC/AR/20-21/15/KAN

ಅಪಾಯದ ಅಂಶಗಳು, ಶರತ್ತು ಕರಾರುಗಳ ಹೆಚ್ಚಿನ ವಿವರಗಳಿಗಾಗಿ ವಿಕ್ರಯವನ್ನು ಸಮಾಪನಗೊಳ್ಳುವ ಮೊದಲು ದಯವಿಟ್ಟು ಮಾರಾಟ ಪುಸ್ತಿಕೆಯನ್ನು ಗಮಕೊಟ್ಟುಓದಿ.
IRDAI Regn. No. 512
ಜೀವನದೊಂದಿಗೂ, ಜೀವನದ ನಂತರವೂ.

ಸಂಸ್ಕೃತಿ ವಿನಿಮಯಕ್ಕೆ ವೇದಿಕೆಯಾದ ಜಪಾನ್ ಹಬ್ಬ

ಬೆಂಗಳೂರು: ಭಾರತ ಮತ್ತು ಜಪಾನ್‌ನ ವಿಶಿಷ್ಟ ಸಂಸ್ಕೃತಿ–ಕಲೆಗಳ ಪ್ರದರ್ಶನಕ್ಕೆ 'ಜಪಾನ್ ಹಬ್ಬ' ವೇದಿಕೆಯಾಯಿತು. ಈ ಹಬ್ಬದ 17ನೇ ಆವೃತ್ತಿಯು ಈ ಬಾರಿ ಆನ್‌ಲೈನ್‌ನಲ್ಲಿ ನಡೆದಿದ್ದರಿಂದ ದೇಶದ ಬೇರೆ–ಬೇರೆ ಭಾಗಗಳಿಂದಲೂ ಸದಸ್ಯರು ಪಾಲ್ಗೊಂಡಿದ್ದರು.

ಉಭಯ ದೇಶಗಳ 6,500 ಪ್ರತಿನಿಧಿಗಳು ಶನಿವಾರ–ಭಾನುವಾರ ಒಂದೇ ವೇದಿಕೆಯಲ್ಲಿ ಸೇರಿ 'ಹಬ್ಬ' ಆಚರಿಸಿದರು. 'ಜಪಾನ್ ಹಬ್ಬ' ಟ್ರಸ್ಟ್ ವತಿಯಿಂದ ನಡೆದ ಈ ಕಾರ್ಯಕ್ರಮವನ್ನು http://japanhabba.org ವೆಬ್‌ಸೈಟ್ ಮೂಲಕ ಸಾವಿರಾರು ಜನ ವೀಕ್ಷಿಸಿದರು.

ರಸಪ್ರಶ್ನೆ ಸ್ಪರ್ಧೆ, ವಿವಿಧ ಕಾರ್ಯಾಗಾರ, ತಾಂತ್ರಿಕ ಮೇಳಗಳನ್ನೂ ಹಮ್ಮಿಕೊಳ್ಳಲಾಗಿತ್ತು. ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ನಾಲ್ವರು ವಿದ್ಯಾರ್ಥಿಗಳಿಗೆ ತಲಾ ₹5 ಸಾವಿರ ಮೌಲ್ಯದ ಬಹುಮಾನಗಳನ್ನು ನೀಡಲಾಯಿತು.

ಮಂಡಳಿ ಸದಸ್ಯರಿಂದ ಆಕ್ಷೇಪ • ಹೆಸರಘಟ್ಟ ಹುಲ್ಲುಗಾವಲನ್ನು ಸಂರಕ್ಷಿತ ಪ್ರದೇಶವಾಗಿಸಲು ಒತ್ತಾಯ

ವನ್ಯಜೀವಿ ಸಲಹಾ ಮಂಡಳಿ: ಶಾಸಕರ ಹಸ್ತಕ್ಷೇಪ!

• ಪ್ರವೀಣ್ ಕುಮಾರ್ ಪಿ.ವಿ.

ಮುಖ್ಯಾಂಶಗಳು
- ವನ್ಯಜೀವಿ ಸಲಹಾ ಮಂಡಳಿ ಸಭೆಯಲ್ಲಿ ಭಾಗವಹಿಸಿದ ಶಾಸಕ
- ಹುಲ್ಲುಗಾವಲನ್ನು ಸಂರಕ್ಷಿತ ಪ್ರದೇಶ ಎಂದು ಘೋಷಿಸದಂತೆ ಒತ್ತಡ
- ಹುಲ್ಲುಗಾವಲನ್ನು ಸಂರಕ್ಷಿತ ಪ್ರದೇಶ ಎಂದು ಘೋಷಿಸಲು ಒತ್ತಾಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ವನ್ಯಜೀವಿ ಸಲಹಾ ಮಂಡಳಿ ಸಭೆಯಲ್ಲಿ ಮಂಡಳಿಯ ಸದಸ್ಯರಲ್ಲದ ಶಾಸಕರೊಬ್ಬರು ಭಾಗವಹಿಸಲು ಅವಕಾಶ ಕಲ್ಪಿಸಿದ್ದಕ್ಕೆ ಮಂಡಳಿಯ ಸದಸ್ಯರಿಂದಲೇ ಆಕ್ಷೇಪ ವ್ಯಕ್ತವಾಗಿದೆ.

'ಯಲಹಂಕ ಕ್ಷೇತ್ರದ ಶಾಸಕ ಎಸ್.ಆರ್.ವಿಶ್ವನಾಥ್ ಅವರು ವನ್ಯಜೀವಿ ಸಲಹಾ ಮಂಡಳಿಯ ಸಭೆಯಲ್ಲಿ ಭಾಗವಹಿಸಿದ್ದಲ್ಲದೇ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣೆ ವಿಚಾರದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಈ ವಿಚಾರವಾಗಿ ವಿಸ್ತೃತ ಚರ್ಚೆ ನಡೆಸುವುದಕ್ಕೂ ಅವರು ಅಡ್ಡಗಾಲು ಹಾಕಿದ್ದಾರೆ. ಇದು ಸರಿಯಲ್ಲ' ಎಂದು ದೂರಿ ಮಂಡಳಿಯ ಸದಸ್ಯ ತ್ಯಾಗ್ ಉತ್ತಪ್ಪ ಅವರು ಮಂಡಳಿಯ ಸದಸ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದಾರೆ.

'ಸಭೆಯಲ್ಲಿ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣೆ ವಿಚಾರ ಪ್ರಸ್ತಾಪವಾದಾಗ ಶಾಸಕ ವಿಶ್ವನಾಥ್ ಅವರು ಮಧ್ಯಪ್ರವೇಶ ಮಾಡಿದರು. ಬೆಂಗಳೂರಿನಿಂದ ಕೇವಲ 35 ಕಿ.ಮೀ ದೂರದಲ್ಲಿರುವ ಈ ವಿಶಾಲ ಜಾಗವನ್ನು ಮೀಸಲು ಪ್ರದೇಶವೆಂದು ಘೋಷಿಸಿದರೆ, ರೈತರು ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ಅದನ್ನು ಸಂರಕ್ಷಿತ ಪ್ರದೇಶ ಎಂದು ಘೋಷಿಸಲೇಬಾರದು ಎಂದು ಬಲವಂತಪಡಿಸಿದರು' ಎಂದು ತ್ಯಾಗ್ ಉತ್ತಪ್ಪ ಪತ್ರದಲ್ಲಿ ಆರೋಪಿಸಿದ್ದಾರೆ.

'10 ಸಾವಿರಕ್ಕೂ ಅಧಿಕ ಪ್ರಾಣಿ, ಸಸ್ಯ ಹಾಗೂ ಕೀಟ ಪ್ರಭೇದಗಳ ಆಶ್ರಯ ತಾಣವಾಗಿರುವ ಹುಲ್ಲುಗಾವಲಿದು. ಸಸ್ಯಾಹಾರಿ ಪ್ರಾಣಿಗಳಷ್ಟೇ ಅಲ್ಲದೆ, ದೊಡ್ಡ ಮಾಂಸಾಹಾರಿ ಪ್ರಾಣಿಗಳೂ ಇದನ್ನು ಅವಲಂಬಿಸಿವೆ. ಹುಲ್ಲುಗಾವಲನ್ನು ನಾಶಪಡಿಸಿದರೆ ಈ ಜೀವಿಗಳಿಗೆ ಬೆಂಬಲವಾಗಿರುವ ವ್ಯವಸ್ಥೆಯನ್ನೇ ಕಿತ್ತುಕೊಂಡಂತೆ' ಎಂದು ಅವರು ತಿಳಿಸಿದ್ದಾರೆ.

'ಹೆಸರಘಟ್ಟ ಹುಲ್ಲುಗಾವಲು ದೊಡ್ಡ ಚುಕ್ಕಿ ಗಿಡುಗ (ಗ್ರೇಟರ್ ಸ್ಪಾಟೆಡ್ ಈಗಲ್), ಲೆಸ್ಸರ್ ಫ್ಲೋರಿಕಾನ್‌ನಂತಹ ಪಕ್ಷಿಗಳಿಗೆ ನೆಲೆ ಒದಗಿಸಿದೆ. ಅಳಿವಿನಂಚಿನಲ್ಲಿರುವ ಲೆಸ್ಸರ್ ಫ್ಲೋರಿಕಾನ್ ಪಕ್ಷಿಗಳು ಬೆರಳೆಣಿಕೆಯಷ್ಟೇ ಸಂಖ್ಯೆಯಲ್ಲಿವೆ. ಅಲ್ಲದೇ, ಕಾಡುಪಾಪ (ಸ್ಲೆಂಡರ್ ಲೋರಿಸ್), ನೀರು ನಾಯಿ (ಸ್ಮೂತ್ ಕೋಟೆಡ್ ಓಟರ್) ಹಾಗೂ ಚಿರತೆಗಳೂ ಇಲ್ಲಿ ಕಂಡುಬಂದಿವೆ' ಎಂದು ನಿಸರ್ಗವಾದಿಗಳು ಮತ್ತು ವನ್ಯಜೀವಿ ಕಾರ್ಯಕರ್ತರು ಗುರುತಿಸಿದ್ದಾರೆ. ಬೆಂಗಳೂರಿನಲ್ಲಿ ಉಳಿದಿರುವ ಈ ಏಕೈಕ ಹುಲ್ಲುಗಾವಲಿನ ಪುನರುಜ್ಜೀವನವನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕಿದೆ' ಎಂದು ಅವರು ಒತ್ತಾಯಿಸಿದ್ದಾರೆ.

'ಹೆಸರಘಟ್ಟ ಹುಲ್ಲುಗಾವಲನ್ನು ಸಂರಕ್ಷಿತ ಪ್ರದೇಶ ಎಂದು ಘೋಷಿಸುವ ಅಗತ್ಯವಿದೆ. ಈ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಸುವುದಕ್ಕೆ ಅವಕಾಶ ನೀಡದಿರುವುದು ಸರಿಯಲ್ಲ. ಈ ಗಂಭೀರ ವಿಷಯದ ಚರ್ಚೆಯನ್ನು ವೃತ್ತಿಪರವಲ್ಲದ ರೀತಿ ತರಾತುರಿಯಲ್ಲಿ ಮುಗಿಸಿದ್ದು ಸರಿಯಲ್ಲ. ಚರ್ಚೆ ನಡೆದ ರೀತಿಗೆ ನನ್ನ ಅಸಮ್ಮತಿ ಇದೆ ಎಂದು ಪರಿಗಣಿಸಬಹುದು. ಈ ಹುಲ್ಲುಗಾವಲಿನ ಸಂರಕ್ಷಣೆ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ಮತ್ತೆ ಅವಕಾಶ ಕಲ್ಪಿಸಬೇಕು. ಮುಂಬರುವ ಮಂಡಳಿ ಸಭೆಯಲ್ಲಿ ಈ ವಿಚಾರವನ್ನು ಮತ್ತೆ ಸೇರ್ಪಡೆಗೊಳಿಸಬೇಕು' ಎಂದೂ ಅವರು ಸದಸ್ಯ ಕಾರ್ಯದರ್ಶಿ ಅವರನ್ನು ಆಗ್ರಹಿಸಿದ್ದಾರೆ.

ಈ ಹುಲ್ಲುಗಾವಲಿನ 150 ಎಕರೆ ಪ್ರದೇಶದಲ್ಲಿ ಚಿತ್ರನಗರಿ ನಿರ್ಮಿಸಲು ಸರ್ಕಾರ ಮುಂದಾಗಿತ್ತು. ಆದರೆ, ವನ್ಯಜೀವಿ ಕಾರ್ಯಕರ್ತರಿಂದ ಹಾಗೂ ಪರಿಸರ ಕಾರ್ಯಕರ್ತರಿಂದ ತೀವ್ರ ವಿರೋಧ ವ್ಯಕ್ತವಾದ ಬಳಿಕ ಈ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳಲು ಸರ್ಕಾರ ಹಿಂದೇಟು ಹಾಕಿದೆ. ನಗರ ಸಮೀಪ ಉಳಿದಿರುವ ಈ ಏಕೈಕ ಹುಲ್ಲುಗಾವಲನ್ನು ಮೀಸಲು ಪ್ರದೇಶ ಎಂದು ಘೋಷಿಸಬೇಕು ಎಂಬುದು ಪರಿಸರ ಕಾರ್ಯಕರ್ತರ ಒತ್ತಾಯ.

'ಸದಸ್ಯರಲ್ಲದವರು ಸಭೆಯಲ್ಲಿ ಭಾಗವಹಿಸುವುದು ಸರಿಯೇ'

'ಹುಬ್ಬಳ್ಳಿ– ಅಂಕೋಲಾ ರೈಲು ಮಾರ್ಗಕ್ಕೆ ಅನುಮತಿ ನೀಡುವ ಕುರಿತು ಚರ್ಚಿಸಲು ವನ್ಯಜೀವಿ ಸಲಹಾ ಮಂಡಳಿ ಸಭೆ ಸೇರಿದ್ದಾದ ಅದರಲ್ಲಿ ಇಬ್ಬರು ಸಚಿವರು ಭಾಗವಹಿಸಿದ್ದರು. ಮಂಡಳಿಯ ಸದಸ್ಯರಲ್ಲದವರು ಸಭೆಯಲ್ಲಿ ಭಾಗವಹಿಸಿದ್ದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ ಹೈಕೋರ್ಟ್, 'ಮಂಡಳಿಯ ನಿರ್ಣಯವನ್ನು ಮರುಪರಿಶೀಲಿಸುವ ಅಗತ್ಯವಿದೆ' ಎಂದು ಹೇಳಿತ್ತು. ಇದಾದ ಬಳಿಕವೂ ಮಂಡಳಿಯ ಸಭೆಗೆ ಸದಸ್ಯರಲ್ಲದವರು ಭಾಗವಹಿಸಲು ಅವಕಾಶ ನೀಡಿದ್ದು ಎಷ್ಟು ಸರಿ' ಎಂದು ವನ್ಯಜೀವಿ ಕಾರ್ಯಕರ್ತರು ಪ್ರಶ್ನಿಸಿದ್ದಾರೆ.

ಸುದ್ದಿ 2 ನಿಮಿಷ

'ದೇಶದ ಅಭಿವೃದ್ಧಿಗೆ ಖಾಸಗೀಕರಣ ಅನಿವಾರ್ಯ'

ಬೆಂಗಳೂರು: 'ಉತ್ತಮವಾಗಿ ಕಾರ್ಯ ನಿರ್ವಹಿಸದೇ ಇರುವ ಸಾರ್ವಜನಿಕ ಸಂಸ್ಥೆಗಳನ್ನು ಸಮರ್ಥವಾಗಿ ನಿರ್ವಹಿಸುವಂತೆ ಮಾಡಲು ಮತ್ತು ದೇಶದ ಅಭಿವೃದ್ಧಿ ಸಾಧಿಸಲು ಖಾಸಗೀಕರಣ ಅನಿವಾರ್ಯ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟರು.

ಬಿಜೆಪಿ ಆರ್ಥಿಕ ಪ್ರಕೋಷ್ಠವು ಕೇಂದ್ರ ಬಜೆಟ್ ಕುರಿತು ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು,

'ಭಾರತವೆಂದರೆ ಮೂಲಸೌಕರ್ಯಗಳ ಕೊರತೆ ಇರುವ ದೇಶ ಎಂಬ ಮಾತಿತ್ತು. ದೀನದಯಾಳ್ ಉಪಾಧ್ಯಾಯರ 'ಅಂತ್ಯೋದಯ' ಚಿಂತನೆಗಳೊಂದಿಗೆ ಇಂತಹ ಮಾತುಗಳನ್ನು ತೊಡೆದು ಹಾಕಲು ಕೇಂದ್ರ ಸರ್ಕಾರವು ಶ್ರಮಿಸುತ್ತಿದೆ' ಎಂದರು.

'ಉಜ್ವಲ, ಉಜಾಲಾ, ಸ್ವನಿಧಿ, ಮುದ್ರಾ, ಜನೌಷಧಿ, ಕಿಸಾನ್ ಸಮ್ಮಾನ್‌ನಂಥ ಯೋಜನೆಗಳ ಮೂಲಕ ಕೇಂದ್ರದ ಬಿಜೆಪಿ ಸರ್ಕಾರವು ಬಡವರ ಸಮಸ್ಯೆಗಳನ್ನು ನಿವಾರಿಸಲು ಆದ್ಯತೆ ನೀಡಿದೆ' ಎಂದು ಹೇಳಿದರು.

'ಉಜ್ವಲ ಯೋಜನೆಯಡಿ ಈಗಾಗಲೇ 8 ಕೋಟಿ ಬಡವರಿಗೆ ಉಚಿತ ಅಡುಗೆ ಅನಿಲ ಸಿಲಿಂಡರ್ ಸಂಪರ್ಕ ನೀಡಿದ್ದು, ಈ ಬಜೆಟ್‌ನಡಿ ಮತ್ತೆ 1 ಕೋಟಿಗಳಷ್ಟು ಅರ್ಹ ಬಡವರಿಗೆ ಈ ಸೌಲಭ್ಯ ವಿಸ್ತರಿಸಲಾಗುವುದು' ಎಂದರು.

ಪಿಂಚಣಿ ಹೆಚ್ಚಳಕ್ಕೆ ಸಾರಿಗೆ ನಿವೃತ್ತ ನೌಕರರ ಒತ್ತಾಯ

ಬೆಂಗಳೂರು: 'ಸಾರಿಗೆ ನಿವೃತ್ತ ನೌಕರರಿಗೆ ನ್ಯಾಯಸಮ್ಮತವಾದ ನಿವೃತ್ತಿ ವೇತನ (ಪಿಂಚಣಿ) ನೀಡುವಂತೆ ಒತ್ತಾಯಿಸಿ 'ಇಪಿಎಸ್–95 ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಸಾರಿಗೆ ನಿಗಮಗಳ ನಿವೃತ್ತ ನೌಕರರ ಸಂಘದ ವತಿಯಿಂದ ಇದೇ 22ರಂದು ಬೆಳಿಗ್ಗೆ 11 ಗಂಟೆಗೆ ಮೌರ್ಯ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಜಾಥಾ ನಡೆಸಲಾಗುವುದು' ಎಂದು ಸಂಘದ ಅಧ್ಯಕ್ಷ ಶಂಕರ್ ಕುಮಾರ್ ತಿಳಿಸಿದರು.

'ಸಾರಿಗೆ ಸಂಸ್ಥೆಗಳಲ್ಲಿ 35 ವರ್ಷ ಕಾಲ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿರುವವರಿಗೆ ₹1 ಸಾವಿರದಿಂದ ₹3 ಸಾವಿರ ನಿವೃತ್ತಿ ವೇತನವನ್ನು ಭವಿಷ್ಯನಿಧಿ ಪ್ರಾಧಿಕಾರ ನೀಡುತ್ತಿದೆ. ಇದರಿಂದ ಕುಟುಂಬ ನಿರ್ವಹಣೆ ಸಾಧ್ಯವಾಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸಂಘದ ಕಾರ್ಯಾಧ್ಯಕ್ಷ ನಂಜುಂಡೇಗೌಡ,'ನ್ಯಾಯಾಲಯವು ನ್ಯಾಯಸಮ್ಮತ ನಿವೃತ್ತಿ ವೇತನ ನೀಡುವಂತೆ ನಿರ್ದೇಶನ ನೀಡಿ ನಾಲ್ಕು ವರ್ಷಗಳು ಕಳೆದಿದ್ದರೂ ಭವಿಷ್ಯ ನಿಧಿ ಪ್ರಾಧಿಕಾರವು ನಿವೃತ್ತಿ ವೇತನ ಹೆಚ್ಚಿಸಿಲ್ಲ. ಈ ಬಗ್ಗೆ ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತರಿಗೆ ಮನವಿ ಸಲ್ಲಿಸಿದರೂ ಯಾವುದೇ ಉತ್ತರ ಬರಲಿಲ್ಲ' ಎಂದು ದೂರಿದರು.

ಪ್ರಣವಾನಂದಜೀ ಜನ್ಮದಿನ: ಜನರಿಗೆ ಸೌಲಭ್ಯ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: 'ಭಾರತ್ ಸೇವಾಶ್ರಮ ಸಂಘವು ದೇಶದ ವಿವಿಧ ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿದ್ದು, ಬಡಜನರ ಹಸಿವು ನೀಗಿಸಲು ಅನ್ನದಾನ, ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು ಮತ್ತು ಆರೋಗ್ಯಸೇವೆ ಸೇರಿದಂತೆ ಹಲವುರೀತಿಯ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ' ಎಂದು ಸಂಘದ ಕೋಲ್ಕತ್ತ ಶಾಖೆಯ ಮುಖ್ಯಸ್ಥ ಲೋಕೇಶಾನಂದ ಸ್ವಾಮೀಜಿ ಹೇಳಿದರು.

ಜಕ್ಕೂರು ಶಾಖೆಯಲ್ಲಿ ಆಯೋಜಿಸಿದ್ದ ಸಂಘದ ಸಂಸ್ಥಾಪಕ ಪ್ರಣವಾನಂದಜೀ ಮಹಾರಾಜ್ ಅವರ 126ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಸಮಾಜದ ಎಲ್ಲ ವರ್ಗದ ಜನರಿಗೆ ಆಧ್ಯಾತ್ಮ ಮತ್ತು ಜೀವನದ ಮೌಲ್ಯಗಳನ್ನು ತಿಳಿಸುವುದು ಸಂಘದ ಮೂಲ ಉದ್ದೇಶವಾಗಿದೆ' ಎಂದರು.

ಭಾರತ್ ಸೇವಾಶ್ರಮ ಸಂಘದ ಸುಖದೇವ್ ಸ್ವಾಮೀಜಿ, ಮಹಿಳೆಯರಿಗೆ ಸೀರೆ ಮತ್ತಿತರ ಸಾಮಗ್ರಿಗಳನ್ನು ಒಳಗೊಂಡ ಕಿಟ್ ವಿತರಿಸಿದರು. ಶಿವಪ್ರೇಮಾನಂದ ಸ್ವಾಮೀಜಿ, ಡಾ.ಎಸ್‌.ನಿರಂಜನಮೂರ್ತಿ ಇದ್ದರು

ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಎಸ್.ನಿರಂಜನಮೂರ್ತಿ,'ಸಂಘದ ವತಿಯಿಂದ ಪ್ರಾಕೃತಿಕ ವಿಕೋಪ ಸಂತ್ರಸ್ತರಿಗೆ ನೆರವಿನ ಜೊತೆಗೆ ಲಾಕ್‌ಡೌನ್ ಸಂದರ್ಭಲ್ಲಿ ಸಂಕಷ್ಟದಲ್ಲಿದ್ದ ಜನರಿಗೆ ಸಹಾಯಹಸ್ತ ನೀಡಲಾಗಿದೆ' ಎಂದರು.

1000 ಮಂದಿಗೆ ವಿವಿಧ ಸವಲತ್ತುಗಳ ವಿತರಣೆ: ಬಡಮಹಿಳೆಯರಿಗೆ ಸೀರೆ, ಪುರುಷರಿಗೆ ಬಟ್ಟೆ, ವೃದ್ಧರಿಗೆ ಕಂಬಳಿ ಹಾಗೂ ಸರ್ಕಾರಿ ಶಾಲಾಮಕ್ಕಳಿಗೆ ಅಧ್ಯಯನ ಸಾಮಗ್ರಿ, ಎಲ್.ಇ.ಡಿ ಬಲ್ಬ್ ಮತ್ತು ಟಾರ್ಚ್ ಮತ್ತಿತರ ಸೌಲಭ್ಯಗಳನ್ನು ವಿತರಿಸಲಾಯಿತು.

ಸಂಘದ ಜಕ್ಕೂರು ಶಾಖೆಗಳ ಮುಖ್ಯಸ್ಥರಾದ ಸುಖದೇವ್ ಸ್ವಾಮೀಜಿ, ಶಿವಪ್ರೇಮಾನಂದ ಸ್ವಾಮೀಜಿ, ಕೋಲ್ಕತ್ತ ಶಾಖೆಯ ಪದ್ಮನಾಭನಂದ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಉಚಿತ ಸಾಮೂಹಿಕ ವಿವಾಹ: ಅತಿಥಿಗಳು–ವಿಶ್ವ ಸಂತೋಷ ಭಾರತಿ ಸ್ವಾಮೀಜಿ, ಸಚಿವ ಆರ್.ಅಶೋಕ, ಸಂಸದ ತೇಜಸ್ವಿ ಸೂರ್ಯ, ಆಯೋಜನೆ–ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ಸ್ಥಳ–ಬನಶಂಕರಿ ದೇವಸ್ಥಾನ ಆವರಣ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 9.20

ಶ್ರೀರಾಮನವಮಿ ಗ್ಲೋಬಲ್ ಮ್ಯೂಸಿಕ್ ಫೆಸ್ಟಿವಲ್ ಕಾರ್ಯಕ್ರಮದ ಪೂರ್ವಸಿದ್ಧತೆಗೆ ಗುದ್ದಲಿ ಪೂಜೆ: ಆಯೋಜನೆ–ಶ್ರೀರಾಮ ಸೇವಾ ಮಂಡಳಿ, ರಾಮನವಮಿ ಆಚರಣಾ ಟ್ರಸ್ಟ್, ಸ್ಥಳ–ಕೋಟೆ ಪ್ರೌಢಶಾಲಾ ಮೈದಾನ, ಚಾಮರಾಜಪೇಟೆ, ಬೆಳಿಗ್ಗೆ 10.45

ವಿಶ್ವ ಎನ್ಸೆಫಲೈಟಿಸ್ ದಿನ ಹಾಗೂ ಬ್ರೈನ್ ಇನ್‌ಫೆಕ್ಷನ್ಸ್ ಗ್ಲೋಬಲ್ ಯೋಜನೆ ಉದ್ಘಾಟನೆ: ಅತಿಥಿ–ಕೆ.ಸುಧಾಕರ್, ಜಾವೇದ್ ಅಖ್ತರ್, ಜಿ.ಗುರುರಾಜ್, ಆಯೋಜನೆ, ಸ್ಥಳ–ನಿಮ್ಹಾನ್ಸ್ ಕನ್ವೆಂಷನ್ ಸೆಂಟರ್, ಸಂಜೆ 5.30

ಕೆ.ಪಿ. ಶಿವಲಿಂಗಯ್ಯ ಸಂಸ್ಮರಣಾರ್ಥ ಸಂಸ್ಥಾಪಕರ ದಿನ ಹಾಗೂ ಖ್ಯಾತ ಗಾಯಕ ಅಂಬಯ್ಯ ನುಲಿ ಅವರಿಗೆ 'ಶಿವಲಿಂಗ ಪ್ರಶಸ್ತಿ' ಪ್ರದಾನ: ಎಸ್.ರಂಗಪ್ಪ, ಉದ್ಘಾಟನೆ–ಸಿ.ಸೋಮಶೇಖರ್, ಅಧ್ಯಕ್ಷತೆ–ದೇವೇಂದ್ರ ಕುಮಾರ್ ಪತ್ತಾರ್, ಅತಿಥಿಗಳು–ಬಲವಂತರಾಯ್ ಪಾಟೀಲ, ಗಂಗಾಂಬಿಕಾ ಮಲ್ಲಿಕಾರ್ಜುನ್, ವೀರಕಪುತ್ರ ಶ್ರೀನಿವಾಸ್, ಆಯೋಜನೆ–ವಚನ ಜ್ಯೋತಿ, ಸ್ಥಳ–ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಸಂಜೆ 6


ಅಂಬಯ್ಯ ನುಲಿ

ನೂತನ ಕಚೇರಿಯನ್ನು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಉದ್ಘಾಟಿಸಿದರು. ಸುರೇಶ್, ಎಸ್ .ಜಿ.ನಾಗರಾಜ್ ಇದ್ದರು.

'ನೀರಿನ ಅಭಾವ ತಡೆಗೆ ಕ್ರಮ ವಹಿಸಿ'

ಕೆ.ಆರ್.ಪುರ: ನೀರಿನ ಅಭಾವ ತಡೆಯಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಜಲಮಂಡಳಿ ಅಧಿಕಾರಿಗಳಿಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಸೂಚಿಸಿದರು.

ಕ್ಷೇತ್ರದ ಎ.ನಾರಾಯಣಪುರದಲ್ಲಿ ಜಲಮಂಡಳಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ರ ನೂತನ ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು.

ಬೇಸಿಗೆ ಸನ್ನಿಹಿತವಾಗಿರುವ ಹಿನ್ನೆಲೆ ಕ್ಷೇತ್ರದಲ್ಲಿ ನೀರಿನ ಅಭಾವ ಬಾರದಂತೆ ಮುನ್ನೆಚ್ಚರಿಕಾ ಕ್ರಮಗಳನ್ನ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಸಾರ್ವಜನಿಕರು ಕೂಡಾ ಅನಾವಶ್ಯಕವಾಗಿ ನೀರನ್ನು ಪೋಲು ಮಾಡದೇ ಮಿತವಾಗಿ ಬಳಸುವಂತೆ ಮನವಿ ಮಾಡಿದರು.

ರಾಜ್ಯ ಬಿಜೆಪಿ ಮಹಿಳಾಮೋರ್ಚಾ ಅಧ್ಯಕ್ಷೆ ಗೀತಾ ವಿವೇಕಾನಂದ ಬಾಬು, ಸುರೇಶ್, ಎಸ್ .ಜಿ.ನಾಗರಾಜ್, ಅಧಿಕಾರಿಗಳಾದ ವೆಂಕಟೇಶ್, ಪ್ರದೀಪ್, ವೆಂಕಟರಮಣಪ್ಪ, ಎಸ್. ಸಿ. ನಾಯಕ್ ಮತ್ತಿತರರಿದ್ದರು.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,03,762 ಒಟ್ಟು ಸೋಂಕಿತರು

3,94,995 ಗುಣಮುಖರಾದವರು

4,315 ಸಕ್ರಿಯ ಪ್ರಕರಣ

4,451 ಸಾವು

ಭಾನುವಾರದ ಏರಿಕೆ

248 ದೃಢಪಟ್ಟ ಪ್ರಕರಣ

206	02
ಗುಣಮುಖ	ಸಾವು

ರಾಜ್ಯಮಟ್ಟದ ಕವನ ರಚನಾ ಸ್ಪರ್ಧೆ

ಬೆಂಗಳೂರು: ಕನ್ನಡದ ಪ್ರಥಮ ರಾಷ್ಟ್ರಕವಿ ಎಂ.ಗೋವಿಂದ ಪೈ ಅವರ ಜನ್ಮದಿನದ ಅಂಗವಾಗಿ ಕನ್ನಡ ಸಂಘರ್ಷ ಸಮಿತಿಯು ರಾಜ್ಯಮಟ್ಟದ ಕವನ ರಚನಾ ಸ್ಪರ್ಧೆ ಏರ್ಪಡಿಸಿದೆ.

ಈವರೆಗೆ ಒಂದೂ ಕವನ ಸಂಕಲನವನ್ನು ಪ್ರಕಟಿಸದಿರುವವರು ಮಾತ್ರ ಭಾಗವಹಿಸಬೇಕು. ವಯಸ್ಸಿನ ಮಿತಿ ಇಲ್ಲ. ಕವನವು 25 ಸಾಲುಗಳ ಮಿತಿಯಲ್ಲಿರಬೇಕು. ಪ್ರವೇಶ ಶುಲ್ಕ ₹100 ನಿಗದಿ ಪಡಿಸಲಾಗಿದ್ದು, ಕನ್ನಡ ಸಂಘರ್ಷ ಸಮಿತಿ ಬೆಂಗಳೂರು ಹೆಸರಿಗೆ ಡಿಡಿ ಪಡೆದು ಪಾವತಿಸಬೇಕು. ಕವನಗಳ ಸ್ವೀಕಾರಕ್ಕೆ ಕೊನೆಯ ದಿನ ಮಾರ್ಚ್ 3 ಎಂದು ಸಮಿತಿ ಹೇಳಿದೆ.

ವಿಳಾಸ, ಮತ್ತಿತರ ಮಾಹಿತಿಗೆ ಸಮಿತಿ ಅಧ್ಯಕ್ಷ ಡಾ.ಕೋ.ವೆಂ. ರಾಮಕೃಷ್ಣೇಗೌಡ (94488–51781 /99025–89424) ಅವರನ್ನು ಸಂಪರ್ಕಿಸಬಹುದು.

ಸಂಕ್ಷಿಪ್ತ ಸುದ್ದಿ

'ಬಸ್‌ಪಾಸ್ ಅವ್ಯವಸ್ಥೆ ಸರಿಪಡಿಸಿ'

ಬೆಂಗಳೂರು: 'ಶಾಲೆಗಳು ಪೂರ್ಣಪ್ರಮಾಣದಲ್ಲಿ ಪ್ರಾರಂಭವಾಗುತ್ತಿವೆ. ಗ್ರಾಮೀಣ ಪ್ರದೇಶದಿಂದ ಬೆಂಗಳೂರಿಗೆ ಹಾಗೂ ತಮ್ಮ ಹಳ್ಳಿಯ ಪಕ್ಕದ ಊರಿನ ಶಾಲೆಗಳಿಗೆ ತೆರಳುವ ಮಕ್ಕಳಿಗೆ ಬಸ್ ಪ್ರಯಾಣ ಅನಿವಾರ್ಯವಾಗಿದೆ. ಆದರೆ, ಪಾಸ್ ತೆಗೆದುಕೊಳ್ಳಲು ಸೂಚಿಸುತ್ತಿರುವ ಸ್ಥಳಗಳು ಅತಿ ದೂರದಲ್ಲಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ' ಎಂದು ಚೈಲ್ಡ್ ರೈಟ್ ಟ್ರಸ್ಟ್‌ನ ನಿರ್ದೇಶಕ ನಾಗಸಿಂಹ ಜಿ. ರಾವ್ ದೂರಿದ್ದಾರೆ.

'ಉದಾಹರಣೆಗೆ, ಬಾಗಲೂರು ಪಕ್ಕದ ಚಾಗಳಟ್ಟಿಯ ಮಕ್ಕಳು ಈವರೆಗೆ ಕಲ್ಯಾಣ ನಗರದಲ್ಲಿ ಪಾಸ್ ಪಡೆದುಕೊಳ್ಳುತ್ತಿದ್ದರು. ಇದು ಹೆಣ್ಣೂರು ಮತ್ತು ಬೈರತಿ ಬಸ್ ಡಿಪೊಗಳ ವ್ಯಾಪ್ತಿಗೆ ಬರುತ್ತದೆ. ಆದರೆ, ಈಗ ವಿದ್ಯಾರ್ಥಿಗಳು ಎಲ್.ಆರ್ ಬಂಡೆ, ಚಂದ್ರಗಿರಿ ಮಿನಿ, ಆಜಾದ್ ನಗರ, ಸುಬ್ರಹ್ಮಣ್ಯ ನಗರಗಳಿಗೆ ಹೋಗಿ ಪಾಸ್ ತೆಗೆದುಕೊಳ್ಳಬೇಕಾಗಿದ್ದು, ತುಂಬಾ ದೂರ ಆಗುತ್ತದೆ' ಎಂದು ಅವರು ಹೇಳಿದ್ದಾರೆ.

'ಅಧಿಕಾರಿಗಳು ಈ ಕ್ರಮ ಏಕೆ ತೆಗೆದುಕೊಂಡಿದ್ದಾರೆ ಎಂಬುದು ಬಿಎಂಟಿಸಿ ನಿರ್ವಾಹಕರಿಗಾಗಲಿ ಗೊತ್ತಿಲ್ಲ. ಮೊದಲಿನಂತೆ ಮಕ್ಕಳ ವಾಸಸ್ಥಳದ ಹತ್ತಿರದಲ್ಲಿರುವ ಡಿಪೊಗಳಲ್ಲಿಯೇ ಪಾಸ್ ತೆಗೆದುಕೊಳ್ಳಲು ವ್ಯವಸ್ಥೆ ಮಾಡಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ಓಸ್ವಾಲ್ ಬುಕ್ಸ್'ನ ಪುಸ್ತಕಗಳಿಗೆ ಬೇಡಿಕೆ

ಬೆಂಗಳೂರು:ಓಸ್ವಾಲ್ ಬುಕ್ಸ್ ಹೊರತಂದಿರುವ 'ಪ್ರಶ್ನೆಗಳ ಕೋಶ' ಮತ್ತು 'ಮಾದರಿ ಪ್ರಶ್ನೆಪತ್ರಿಕೆ'ಗಳೂ ಸೇರಿದಂತೆ ವಿವಿಧ ಶೈಕ್ಷಣಿಕ ಪುಸ್ತಕಗಳಿಗೆ ದೇಶದಾದ್ಯಂತ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಂದ ಬೇಡಿಕೆ ವ್ಯಕ್ತವಾಗಿದೆ.

'ಸಂಸ್ಥೆ ಪ್ರಕಟಿಸಿರುವ 650ಕ್ಕೂ ಹೆಚ್ಚು ಪುಸ್ತಕಗಳ ಪೈಕಿ ಈ ಎರಡು ಪುಸ್ತಕಗಳು ದೇಶದಲ್ಲಿ ಹೆಚ್ಚು ಮೆಚ್ಚುಗೆಗೆ ಪಾತ್ರವಾಗಿವೆ. ಪಠ್ಯಕ್ರಮ, ಶೈಕ್ಷಣಿಕ ವಾತಾವರಣದಲ್ಲಿನ ಇತ್ತೀಚಿನ ಬದಲಾವಣೆಗಳಿಗೆ ಅನುಗುಣವಾಗಿ ಪ್ರಶ್ನೆಪತ್ರಿಕೆ ಕೋಶಗಳನ್ನು ನವೀಕರಿಸಲಾಗುತ್ತಿದೆ' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಶೈಕ್ಷಣಿಕವಾಗಿ ಹೆಚ್ಚು ಅಂಕ ಪಡೆದವರ ಸರಳೀಕೃತ ಉತ್ತರಗಳು ಮತ್ತು ಪ್ರತಿಕ್ರಿಯೆಗಳಂತಹ ಸಂಪನ್ಮೂಲಗಳನ್ನೂ ಇವು ಒಳಗೊಂಡಿವೆ.

ಓಸ್ವಾಲ್ ಮಾದರಿ ಪ್ರಶ್ನೆ ಪತ್ರಿಕೆಗಳು ವಿದ್ಯಾರ್ಥಿಗಳ ಅಭ್ಯಾಸ ಕ್ರಮವನ್ನು ಸರಳಗೊಳಿಸಿದೆ. ಪುಸ್ತಕಗಳಲ್ಲಿ ಲಭ್ಯವಿರುವ ಕ್ಯೂ–ಆರ್ ಕೋಡ್‌ಗಳಿಂದ ಯಾವ ಸಮಯದಲ್ಲಾದರೂ ತ್ವರಿತ ಪುನರಾವರ್ತನೆ ಮಾಡಬಹುದು.

ಶೋಷಿತರ ಮೀಸಲಾತಿಗೆ ಧಕ್ಕೆ ಸಲ್ಲದು: ಆರ್. ಅಶೋಕ

ಒಕ್ಕಲಿಗರ ಮೀಸಲಾತಿ: ಇಂದು ಸ್ವಾಮೀಜಿ ಭೇಟಿ

ಪ್ರಜಾವಾಣಿ ವಾರ್ತೆ

ಜಿ.ಹೊಸಹಳ್ಳಿ (ದೊಡ್ಡಬಳ್ಳಾಪುರ): ಒಕ್ಕಲಿಗ ಸಮುದಾಯದ ಮೀಸಲಾತಿಗಾಗಿ ಹೋರಾಟ ರೂಪುರೇಷೆ ಕುರಿತು ಚರ್ಚಿಸಲು ಆದಿಚುಂಚನಗಿರಿ ಮಠದ ನಿರ್ಮಲಾನಂದಸ್ವಾಮಿ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸೋಮವಾರ ಸಭೆ ನಡೆಯಲಿದೆ. ನಾಳೆ ಸ್ವಾಮೀಜಿಯನ್ನು ಭೇಟಿ ಮಾಡಿ ಅಲ್ಲಿಯೇ ಮನವಿ ಸ್ವೀಕರಿಸಿ, ಚರ್ಚಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದ್ದಾರೆ.

ಭಾನುವಾರ ಗ್ರಾಮ ವಾಸ್ತವ್ಯ ಮುಗಿಸಿಕೊಂಡು ಹೊರಡುವ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೀಸಲಾತಿಗಾಗಿ ಯಾವುದೇ ಸಮುದಾಯದ ಸ್ವಾಮೀಜಿ ಗಡುವು ನೀಡದಂತೆ ಕೈಮುಗಿದು ಕೇಳಿಕೊಳ್ಳುತ್ತೇನೆ ಎಂದು ಮನವಿ ಮಾಡಿದರು.

ಕಂದಾಯ ಸಚಿವ ಆರ್‌.ಅಶೋಕ ಅವರು ಐತಿಹಾಸಿಕ ಗುಂಡಮಗೆರೆ ಕೆರೆ ಏರಿ ಮೇಲೆ ಭಾನುವಾರ ಬೆಳಿಗ್ಗೆ ವಾಯುವಿಹಾರ ಮಾಡಿದರು

'ರಾಜ್ಯದಲ್ಲಿ ಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವವರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ನಿಜವಾದ ಬಡವರಿಗೆ ಮೀಸಲಾತಿ ಸಿಗಬೇಕು ಎನ್ನುವುದು ಸಂವಿಧಾನದ ಆಶಯ. ತುಳಿತಕ್ಕೆ ಒಳಗಾದ ಸಮುದಾಯದವರ ಮೀಸಲಾತಿ ಕಿತ್ತು ಮತ್ತೊಂದು ಸಮುದಾಯಕ್ಕೆ ಕೊಡುವುದು ಒಳ್ಳೆಯದಲ್ಲ' ಎಂದರು.

'ಮೀಸಲಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ ಆಯೋಗದ ವರದಿಗ 30 ವರ್ಷಗಳಿಂದ ಹಾಗೆಯೇ ಇವೆ. ಆಯೋಗಕ್ಕೆ ಸಮೀಕ್ಷೆ ನಡೆಸುವ ಅಧಿಕಾರಿ ಇದೆ. ಆಯೋಗ ನೀಡುವ ವರದಿಯರೆಗೂ ಕಾಯಬೇಕು. ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸಮರ್ಥರಿದ್ದಾರೆ. ಮೀಸಲಾತಿ ಸಮಸ್ಯೆ ಸೂಕ್ತ ರೀತಿಯಲ್ಲಿ ಪರಿಹರಿಸಲಿದ್ದಾರೆ'ಎಂದರು.

ಈ ಸಂದರ್ಭದಲ್ಲಿ ಶಾಸಕ ಟಿ.ವೆಂಕಟರಮಣಯ್ಯ, ಪ್ರಾದೇಶಿಕ ಆಯುಕ್ತ ನವೀನ್‌ರಾಜ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಕ್ಲಾಸಿಫೈಡ್ಸ್
PROPERTY CORNER

Built to Suit For Rent
Commercial with
All Approvals
Completion by June 2022
Kanakapura Road, Nice Road Junction
12°51'43.7"N 77°31'50.2"E
goo.gl
Adjacent to Silk Institute Metro Station
Site Measuring 92020 Sq.ft,
Built- up Area 360000 Sq.ft
2 Level Car Parks for 400 Cars
Each Floor 32000 Sq.Ft + 11 Floors
20 Minutes Drive way for
Electronic City & Mysore Road
Foundation Completed
Commencement Certificate (CC)
Obtained from BBMP
Suitable for IT/ ITES, HD DATA CENTER, HOSPITALS & HOTELS
For Details Call- 9901453477
Email:- valueforgeassets@gmail.com

ROYALE CONCORDE INTERNATIONAL GROUP OF SCHOOLS
&
ROYALE KIDZ
Start your own early Childhood Center
Become an Entrepreneur

~ AREAS ~

INDIRANAGAR	MANYATHA TECH PARK	RAJARAJESHWARI NAGAR
BAGMANE TECH PARK	KARLE TECH PARK	VISHVESHWARAIAH LAYOUT
CMH ROAD	KEMPAPURA AGRAHARA	NAGARABAVI
C V RAMAN NAGAR	SANJAY NAGAR	BASAVESHWARA NAGAR
MARATHAHALLI	R T NAGAR	VIJAY NAGAR
K R PURAM	VIDYARANYAPURA	HOSAKEREHALLI
RAMAMURTHY NAGAR	YELAHANKA NEW TOWN	SHANTHI NAGAR
HENNUR	JALAHALLI	CHIKKABANAVARA
BYRATHI	NAGASANDRA	UTTARAHALLI
KOTHANUR	RAJAJI NAGAR	JAYANAGAR
HEGDE NAGAR	MAHALAKSHMI LAYOUT	BASAVANAGUDI

Excellent opportunity by announcing Joint Venture Rent Built to suit initiative for their Early Childhood Care and Education (ECCE) Center, aimed at promoting better overall learning, development and well-being.
LAND REQUIREMENT - 10,000 to 25,000 Sft.
LONG-LEASE / JOINT VENTURE AREAS / RENT / BUILT TO SUIT / INVESTORS ALSO WELCOME
E-mail: inforcet1@gmail.com / director@royalekidz.com
Phone: 98442 00188 / 94480 40257

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

RENTAL PROPERTIES

Accommodation Available
Commercial
SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

Accommodation Wanted
Commercial
WANTED OFFICE for Rent in Madekeri market,ground floor (Approx 25 to 35Sqft) Contact: 7066540011/ 8640866660

REAL ESTATE SELLING

House
Banashankari
BSK 6TH Stage Newly Constructed 30x40 fully furnished residential building G+ 2 floors for sale contact: 9019252373

Flat
Bommanahalli
LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 8618691434, 8073277210

JOB OPPORTUNITIES

General
REQUIRED HR Admin, Manager, Accounts, BE, Diploma, B-Tech, M-Tech, MSc, Mechanical, Electrical, Computer Engineers: 7676760299

Part-Time Jobs
COVID'19 SITUATION those who lost there job Our Company providing Work from home Earn 35-40K Per month Call 7019215243

BUSINESS

Business to Business
Finance
NRI'S INVESTMENT AND FINANCE AVAILABLE ON LOW INTEREST AGAINST PROPERTIES,LAND & BUILDINGS, SITES, FLATS ALSO COMPANIES, BUSINESSES CALL:7411265189

"URGENT LOAN Avail @ 3.5% p.a Personal, Business, Projects all types loan just 5 days OM SAI FINANCE LTD. Call/ Whatsapp: ::8130883900."

Business Offers
Business For Sale
GIFT SHOP For Sale, Near Muddalpallya Circle (Nagarabhavi Main Road) Size 11x16 Rent. 15000/- Good For Medical/ Cloth Shop: 9739407265

General
WELL ESTABLISHED AGRI Business for sale with E-Commerce website @Davanagere. DK Conslultancy 7676388918

PERSONAL

Change of Name
I, ANIL KUMAR RAMA, D.O.B. 23-07-1961, residing at No.1057 Upkar Spring Field, East Block, Neralluru, Attibele Hobli, Bangalore-562107 have changed my name to ANIL KUMAR P.R, vide affidavit dated 16-02-2021 before Notary Prakash.C, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಚೇತರಿಸಿಕೊಳ್ಳುತ್ತಿರುವ ಹೋಟೆಲ್‌ಗಳಿಗೆ ಹೊರೆಯಾದ ದರ ಏರಿಕೆ • ಕೋವಿಡ್ ಪೂರ್ವದ ಸ್ಥಿತಿಗೆ ತಲುಪಲು ಬೇಕು ಇನ್ನಷ್ಟು ಕಾಲಾವಕಾಶ

ಸವಾಲುಗಳ ಸುಳಿಯಲ್ಲಿ ಆತಿಥ್ಯ ಉದ್ಯಮ

• ವರುಣ್ ಹೆಗಡೆ

ಬೆಂಗಳೂರು: ಯಾವುದೇ ನಗರವು ಜಾಗತಿಕ ಮಟ್ಟದಲ್ಲಿ ಬೆಳವಣಿಗೆ ಹೊಂದಲು ಅಲ್ಲಿನ ಆತಿಥ್ಯ ಉದ್ಯಮದ ಪಾತ್ರವೂ ಪ್ರಮುಖವಾದುದು. ಕೋವಿಡ್ ಹಾಗೂ ಅದರ ನಿಯಂತ್ರಣಕ್ಕಾಗಿ ಹೇರಲಾದ ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ಈ ಉದ್ದಿಮೆ ವಲಯವು, ಇನ್ನೂ ಪೂರ್ಣ ಪ್ರಮಾಣದಲ್ಲಿ ಚೇತರಿಕೆ ಕಂಡಿಲ್ಲ. ಹಲವಾರು ಸವಾಲುಗಳ ಸುಳಿಯಲ್ಲಿ ಸಿಲುಕಿಕೊಂಡಿರುವ ಈ ಉದ್ದಿಮೆಯು ಕೋವಿಡ್ ಪೂರ್ವದ ಸ್ಥಿತಿಗೆ ತಲುಪಲು ಇನ್ನಷ್ಟು ದಿನಗಳು ಬೇಕಿವೆ.

ಅಗತ್ಯ ದಿನಬಳಕೆ ವಸ್ತುಗಳ ಬೆಲೆ ಏರಿಕೆ, ಐಟಿ–ಬಿಟಿ ಕಂಪನಿಗಳ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ನಿರ್ವಹಿಸುವುದಕ್ಕೆ ಅವಕಾಶ ಕಲ್ಪಿಸಿರುವುದು, ಸಭೆ–ಸಮಾರಂಭಗಳು ಮೊದಲಿನಂತೆ ನಡೆಯದಿರುವುದು, ವಿವಾಹ ಸೇರಿದಂತೆ ವಿವಿಧ ಶುಭ ಸಮಾರಂಭಗಳ ಸರಳ ಆಚರಣೆ, ಕಳೆಗುಂದಿದ ಪ್ರವಾಸೋದ್ಯಮ ಸೇರಿದಂತೆ ಕೋವಿಡ್ ನಂತರದ ವಿವಿಧ ಬೆಳವಣಿಗೆಗಳು ನಗರದಲ್ಲಿ ಆತಿಥ್ಯ ಉದ್ಯಮದ ಚೇತರಿಕೆಗೆ ಅಡ್ಡಿಯಾಗಿವೆ. ಈ ನಡುವೆ, ಈ ಉದ್ಯಮದಲ್ಲೇ ಬದುಕು ಕಟ್ಟಿಕೊಂಡಿದ್ದ ಸಾವಿರಾರು ಮಂದಿ ಉದ್ಯೋಗವನ್ನೂ ಕಳೆದುಕೊಂಡಿದ್ದಾರೆ.

ವಾಣಿಜ್ಯ ವ್ಯವಹಾರದ ಸಂಬಂಧ ಇಲ್ಲಿಗೆ ಅನ್ಯರಾಜ್ಯ ಹಾಗೂ ವಿದೇಶಗಳಿಂದ ಬರುವ ಪ್ರತಿನಿಧಿಗಳ ಸಂಖ್ಯೆ ಕಡಿಮೆಯಾಗಿದ್ದರಿಂದ ತಾರಾ ಹೋಟೆಲ್‌ಗಳು ನಲುಗಿ ಹೋಗಿವೆ. ನಗರದ ಹೋಟೆಲ್‌ಗಳಲ್ಲಿ ಕೆಲಸ ಕಂಡುಕೊಂಡಿದ್ದ ಉತ್ತರ ಭಾರತದ ಕಾರ್ಮಿಕರು ಕೋವಿಡ್ ಬಳಿಕ ತಮ್ಮ ಊರುಗಳಿಗೆ ನಿರ್ಗಮಿಸಿದ್ದು, ಇನ್ನೂ ಮರಳಿಲ್ಲ. ಇದರ ಪರಿಣಾಮ ದರ್ಶಿನಿಗಳಲ್ಲಿ ಕೋವಿಡ್ ಪೂರ್ವಕ್ಕೆ ಹೋಲಿಸಿದರೆ ಗ್ರಾಹಕರ ಸಂಖ್ಯೆ ಶೇ 40ರಷ್ಟು ಇಳಿಕೆಯಾಗಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಹೋಟೆಲ್‌ಗಳಿಗೆ ಬರುವವರ ಸಂಖ್ಯೆ ಕೆಲ ದಿನಗಳಿಂದ ಏರಿಕೆ ಕಾಣುತ್ತಿದ್ದು, ಶೇ 50ರಿಂದ ಶೇ 60ರಷ್ಟು ವಹಿವಾಟು ನಡೆಯುತ್ತಿದೆ. ಇದು ಹೋಟೆಲ್ ಉದ್ಯಮಿಗಳಲ್ಲಿ ಸ್ವಲ್ಪಮಟ್ಟಿನ ಆಶಾವಾದವನ್ನು ಮೂಡಿಸಿದೆ. ನಗರದ ಅಭಿವೃದ್ಧಿ ದೃಷ್ಟಿಯಿಂದಲೂ ಇದು ಚೇತೋಹಾರಿ ಬೆಳವಣಿಗೆ ಎನ್ನುತ್ತಾರೆ ಹೋಟೆಲ್ ಉದ್ಯಮಿಗಳು.

ಬಾಗಿಲು ಮುಚ್ಚಿದ ಹೋಟೆಲ್‌ಗಳು: ಲಾಕ್‌ಡೌನ್ ಅವಧಿಯಲ್ಲಿ ಹೋಟೆಲ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಮುಚ್ಚಲಾಗಿತ್ತು. ಬಳಿಕ ಪಾರ್ಸೆಲ್ ಸೇವೆಗೆ ಮಾತ್ರ ಅವಕಾಶ ನೀಡಲಾಗಿತ್ತು. ಆಗಲೂ ಗ್ರಾಹಕರಿಂದ ಉತ್ತಮ ಸ್ಪಂದನೆ ದೊರೆಯಲಿಲ್ಲ. ಇದರಿಂದಾಗಿ ಬಾಡಿಗೆ ಪಾವತಿ ಹಾಗೂ ವಿದ್ಯುತ್ ಸೇರಿದಂತೆ ವಿವಿಧ ಶುಲ್ಕಗಳನ್ನು ಪಾವತಿಸಲಾಗದೆಯೇ ನಗರದಲ್ಲಿ ನೂರಾರು ಹೋಟೆಲ್‌ಗಳು ಶಾಶ್ವತವಾಗಿ ಬಾಗಿಲು ಮುಚ್ಚಿದವು. ಈ ಸಂದರ್ಭದಲ್ಲಿ ಸರ್ಕಾರವು ವಿಶೇಷ ಪ್ಯಾಕೇಜ್ ಘೋಷಿಸದಿರುವುದು ಹಾಗೂ ವಿವಿಧ ಶುಲ್ಕಗಳಿಗೆ ವಿನಾಯಿತಿ ನೀಡದಿರುವುದು ಹೋಟೆಲ್ ಉದ್ಯಮಿಗಳ ಬೇಸರಕ್ಕೆ ಕಾರಣವಾಗಿದೆ.

'ದೇಶದಲ್ಲಿಯೇ ನಗರವು ಆತಿಥ್ಯದಲ್ಲಿ ಹೆಸರುವಾಸಿಯಾಗಿದೆ. ಆತಿಥ್ಯ ಉದ್ಯಮಕ್ಕೆ ಕೋವಿಡ್ ಸಾಕಷ್ಟು ಹೊಡೆತ ನೀಡಿದೆ. ಹಲವಾರು ಹೋಟೆಲ್‌ಗಳು ನಷ್ಟ ಭರಿಸಲಾರದೆಯೇ ಬಾಗಿಲು ಮುಚ್ಚಿವೆ. ಆದರೆ, ಸರ್ಕಾರವು ಯಾವುದೇ ರೀತಿಯ ನೆರವು ನೀಡದಿರುವುದು ಬೇಸರವನ್ನುಂಟು ಮಾಡಿದೆ. ನಮಗೆ ಪ್ರತ್ಯೇಕ ಪ್ಯಾಕೇಜ್ ನೀಡಬೇಕಿರಲಿಲ್ಲ. ಬದಲಾಗಿ, ನಾವು ಕಟ್ಟಬೇಕಾದ ಶುಲ್ಕದಲ್ಲಿ ವಿನಾಯಿತಿ ನೀಡಿದ್ದರೂ ತಕ್ಕ ಮಟ್ಟಿಗೆ ಸುಧಾರಿಸಿಕೊಳ್ಳುತ್ತಿದ್ದೇವು. ಅದೇ ರೀತಿ, ನಮ್ಮ ಕಾರ್ಮಿಕರಿಗೆ ಯಾವುದೇ ರೀತಿಯ ನೆರವು ನೀಡಲಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್.

'ಉತ್ತರ ಭಾರತದವರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿನ ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಬಳಿಕ ಊರಿಗೆ ತೆರಳಿದವರಲ್ಲಿ ಶೇ 10ರಷ್ಟು ಮಂದಿ ಮಾತ್ರ ವಾಪಸ್ ಬಂದಿದ್ದಾರೆ. ಸದ್ಯಕ್ಕೆ ಇನ್ನುಳಿದವರನ್ನು ಕರೆಯುವ ಪರಿಸ್ಥಿತಿಯಲ್ಲಿಯೂ ನಾವು ಇಲ್ಲ. ಈ ಉದ್ಯಮ ಮೊದಲಿನ ಸ್ಥಿತಿಗೆ ಬರಲು ಇಲ್ಲಿಗೆ ಈ ಹಿಂದಿನಂತೆ ವಿದೇಶಿ ಪ್ರತಿನಿಧಿಗಳು ಬರಬೇಕು. ಹಿರಿಯರು ಮತ್ತು ಮಕ್ಕಳಲ್ಲಿ ಶೇ 20ರಷ್ಟು ನಮ್ಮ ಗ್ರಾಹಕರು. ಅವರು ಹೆಚ್ಚಿನ ಸಂಖ್ಯೆಯಲ್ಲಿ ಹೋಟೆಲ್‌ಗಳಿಗೆ ಬರಬೇಕು. ಮದುವೆ ಸೇರಿದಂತೆ ಶುಭ ಸಮಾರಂಭಗಳು ಕೋವಿಡ್ ಪೂರ್ವದ ಸ್ಥಿತಿಗೆ ತಲುಪಬೇಕು. ನಿರ್ಬಂಧ ಸಡಿಲಿಸಿರುವ ಜತೆಗೆ ಕೋವಿಡ್‌ಗೆ ಲಸಿಕೆ ಬಂದ ಕಾರಣ ಏಪ್ರಿಲ್ ಅಥವಾ ಮೇ ತಿಂಗಳ ವೇಳೆಗೆ ಪರಿಸ್ಥಿತಿ ಸುಧಾರಿಸಬಹುದು' ಎಂದು ತಿಳಿಸಿದರು.

ಸಂಕಷ್ಟದಲ್ಲಿ ತಾರಾ ಹೋಟೆಲ್‌ಗಳು: ಕೋವಿಡ್ ಬಳಿಕ ವ್ಯಾಪಾರ ವ್ಯವಹಾರದ ಸಂಬಂಧ ಸಿಲಿಕಾನ್ ಸಿಟಿಗೆ ಬರುವವರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ವಾಣಿಜ್ಯೋದ್ಯಮಿಗಳ ಸಭೆಗಳು ಕೂಡ ಅಷ್ಟಾಗಿ ನಡೆಯುತ್ತಿಲ್ಲ. ಅದೇ ರೀತಿ, ಸಭೆ–ಸಮಾರಂಭಗಳಿಗೆ ವಿಧಿಸಿದ ನಿರ್ಬಂಧಗಳು ಪೂರ್ಣ ಪ್ರಮಾಣದಲ್ಲಿ ತೆರವಾಗದ ಕಾರಣ ತಾರಾ ಹೋಟೆಲ್‌ಗಳು ಸೊರಗಿವೆ. ಬೆರಳಣಿಕೆಯಷ್ಟು ಕೊಠಡಿಗಳು ಮಾತ್ರ ಭರ್ತಿಯಾಗುತ್ತಿವೆ. ಅಶೋಕ, ಶಾಂಗ್ರಿಲಾ, ದಿ ಪಾರ್ಕ್ ಸೇರಿದಂತೆ ಬಹುತೇಕ ತಾರಾ ಹೋಟೆಲ್‌ಗಳು 2020ರ ಡಿಸೆಂಬರ್‌ನಲ್ಲಿ ಪುನರಾರಂಭವಾಗಿವೆ. ಇವುಗಳಲ್ಲಿ ಶೇ 20ರಷ್ಟು ವಹಿವಾಟು ಮಾತ್ರ ನಡೆಯುತ್ತಿದ್ದು, ಕೆಲ ಮಹಡಿಗಳಲ್ಲಿನ ಕೊಠಡಿಗಳನ್ನು ಮಾತ್ರ ಬಾಡಿಗೆಗೆ ಕೊಡುತ್ತಿವೆ.

ಕೋವಿಡ್ ಪ್ರಕರಣಗಳು ಏರಿಕೆ ಕಂಡ ಬಳಿಕ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ತಲೆದೋರಿತ್ತು. ಆ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳು 46 ಹೋಟೆಲ್‌ಗಳನ್ನು ಬಾಡಿಗೆಗೆ ಪಡೆದು, ಅಲ್ಲಿ 4 ಸಾವಿರ ಹಾಸಿಗೆಯನ್ನು ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಿದ್ದವು. ಕೋವಿಡ್ ಕಾಣಿಸಿಕೊಂಡ ಪ್ರಾರಂಭಿಕ 6 ತಿಂಗಳು ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು ಸ್ಥಗಿತವಾಗಿದ್ದವು. ಇದರಿಂದಾಗಿ ವಿದ್ಯುತ್ ಸೇರಿದಂತೆ ವಿವಿಧ ನಿಗದಿತ ಶುಲ್ಕವನ್ನು ಪಾತಿಸಲಾಗದೆಯೇ ಅವು ಸಂಕಷ್ಟ ಎದುರಿಸಿದ್ದವು.

ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ಅಗತ್ಯ: 'ಕೋವಿಡ್‌ನಿಂದ ಹೋಟೆಲ್ ಹಾಗೂ ಪ್ರವಾಸೋದ್ಯಮ ಬಹಳಷ್ಟು ನಷ್ಟ ಅನುಭವಿಸಿವೆ. ಕಳೆದ 11 ತಿಂಗಳಲ್ಲಿ ಹೋಟೆಲ್ ಉದ್ಯಮದಾರರಷ್ಟೇ ಅಲ್ಲದೆ, ಇದನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದ ಕಾರ್ಮಿಕರು ಸಮಸ್ಯೆ ಎದುರಿಸಿದ್ದಾರೆ. ರೈತರು, ಹೈನುಗಾರರು, ವ್ಯಾಪಾರಿಗಳು ಸೇರಿದಂತೆ ಹಲವರು ಪರೋಕ್ಷವಾಗಿ ನಷ್ಟ ಅನುಭವಿಸಿದ್ದಾರೆ. ಈಗ ಮತ್ತೆ ಮೊದಲಿನ ಹಾದಿಗೆ ಮರಳಬೇಕಿದೆ. ಸರ್ಕಾರವು ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡಿದಲ್ಲಿ ಹೋಟೆಲ್ ಉದ್ಯಮ ಕೂಡ ಬೆಳವಣಿಗೆ ಹೊಂದುತ್ತದೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಖಜಾಂಚಿ ವೀರೇಂದ್ರ ಎನ್. ಕಾಮತ್ ತಿಳಿಸಿದರು.

'ಪ್ರವಾಸಿ ಕೇಂದ್ರಗಳತ್ತ ಜನಸಂಚಾರ ಹೆಚ್ಚಿದಂತೆ ಜನರ ಅಗತ್ಯಗಳಿಗೆ ಅನುಗುಣವಾಗಿ ಹೋಟೆಲ್‌ಗಳು, ವಾಣಿಜ್ಯ ಕೇಂದ್ರಗಳು ಸ್ಥಾಪನೆಯಾಗುತ್ತವೆ. ಸ್ಥಳೀಯ ಉತ್ಪನ್ನಗಳಿಗೆ ಬೇಡಿಕೆಗಳೂ ಕುದುರುತ್ತವೆ. ಜೀವನ ಮಟ್ಟ ಸುಧಾರಿಸುತ್ತದೆ. ಪ್ರವಾಸಿ ಕೇಂದ್ರಗಳಲ್ಲಿ ಜನ ಬಯಸುವುದು ಮುಖ್ಯವಾಗಿ ಶುಚಿ–ರುಚಿಯಾದ ಊಟೋಪಚಾರ, ಉತ್ತಮ ವಸತಿಗೃಹ, ನೀರು ಮತ್ತು ಶೌಚಾಲಯದ ಸೂಕ್ತ ವ್ಯವಸ್ಥೆ. ಸರ್ಕಾರವು ರಸ್ತೆ ಮತ್ತು ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿದಲ್ಲಿ ಊಟ, ವಸತಿ, ನೀರು ಇತ್ಯಾದಿ ಸೌಲಭ್ಯವನ್ನು ಹೋಟೆಲ್ ಉದ್ಯಮದಾರರು ನಿರ್ವಹಿಸಲು ಸಮರ್ಥರಿದ್ದಾರೆ' ಎಂದರು.

ಯಾವುದೇ ಮಹಾನಗರದ ಬ್ರ್ಯಾಂಡ್ ಮೌಲ್ಯ ಹೆಚ್ಚಿಸುವಲ್ಲಿ ಅಲ್ಲಿನ ಆತಿಥ್ಯ ಕೂಡ ಪ್ರಮುಖ ಪಾತ್ರವಹಿಸುತ್ತದೆ. ಅದರಲ್ಲೂ ಎಲ್ಲ ವರ್ಗದ ಜನತೆಯನ್ನು ಒಳಗೊಂಡಿರುವ ರಾಜಧಾನಿ ಬೆಂಗಳೂರು ಇನ್ನಷ್ಟು ಬೆಳವಣಿಗೆ ಹೊಂದಲು ಈ ಕ್ಷೇತ್ರಕ್ಕೆ ಸರ್ಕಾರದ ಪ್ರೋತ್ಸಾಹ ಕೂಡ ಅಗತ್ಯ. ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆತಲ್ಲಿ ಆತಿಥ್ಯ ವಲಯವೂ ವಿಸ್ತರಿಸಿಕೊಳ್ಳಲಿದೆ. ಆಗ ಈ ಕ್ಷೇತ್ರದಲ್ಲಿ ಇನ್ನಷ್ಟು ಉದ್ಯೋಗ ಸೃಷ್ಟಿ ಕೂಡ ಸಾಧ್ಯವಾಗುತ್ತದೆ ಎನ್ನುತ್ತಾರೆ ಆತಿಥ್ಯ ಉದ್ಯಮದ ಆಳ–ಅಗಲವನ್ನು ಬಲ್ಲ ಉದ್ಯಮಿಗಳು.

ಗಾಂಧಿ ಬಜಾರ್ ನಲ್ಲಿರುವ ಹೋಟೆಲ್ ವಿದ್ಯಾರ್ಥಿ ಭವನದ ಒಂದು ನೋಟ
ಪ್ರಜಾವಾಣಿ ಚಿತ್ರ/ ರಂಜು ಪಿ

ಆತಿಥ್ಯ ವಲಯದ ಸ್ಥಿತಿಗತಿ

- **24,500** ನಗರದಲ್ಲಿರುವ ಒಟ್ಟು ಹೋಟೆಲ್‌ಗಳು
- **21,000** ಸಣ್ಣ, ಮಧ್ಯಮ ಮತ್ತು ದೊಡ್ಡ ಗಾತ್ರದ ಹೋಟೆಲ್‌ಗಳು
- **3,500** ನಗರದಲ್ಲಿರುವ ತಾರಾ ಹೋಟೆಲ್‌ಗಳು
- **1,000** ಕೋವಿಡ್ ಬಳಿಕ ಮುಚ್ಚಲ್ಪಟ್ಟ ಹೋಟೆಲ್‌ಗಳು
- **50** ಕೋವಿಡ್ ನಂತರ ಪ್ರಾರಂಭವಾದ ಹೊಸ ಹೋಟೆಲ್‌ಗಳು
- **1.40 ಲಕ್ಷ** ಆತಿಥ್ಯ ಉದ್ಯಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳು
- **60 ಸಾವಿರ** ಕೋವಿಡ್ ಬಳಿಕ ಆತಿಥ್ಯ ಕ್ಷೇತ್ರದಲ್ಲಿ ಉದ್ಯೋಗ ಕಳೆದುಕೊಂಡವರು
- **40 ಸಾವಿರ** ಆತಿಥ್ಯ ವಲಯ ಅವಲಂಬಿತ ದಿನಗೂಲಿ ನೌಕರರು
- **₹ 600 ಕೋಟಿ** ಆತಿಥ್ಯ ವಲಯ ನಡೆಸುವ ಒಂದು ತಿಂಗಳ ವಹಿವಾಟು

'ಏಪ್ರಿಲ್ ಬಳಿಕ ದರ ಏರಿಕೆ ಬಗ್ಗೆ ಚಿಂತನೆ'

ಪಿ.ಸಿ ರಾವ್

'ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳದಿಂದ ಅಗತ್ಯ ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೆ ಏರಿಕೆಯಾಗಿದೆ. ಹೀಗಿದ್ದರೂ ಹೋಟೆಲ್‌ಗಳು ಸದ್ಯಕ್ಕೆ ದರವನ್ನು ಏರಿಸುತ್ತಿಲ್ಲ. ಕೆಲವೇ ದಿನಗಳಲ್ಲಿ ಹಾಲು, ವಿದ್ಯುತ್ ಬೆಲೆ ಕೂಡ ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ. ಆ ಕಾರಣದಿಂದ ಏಪ್ರಿಲ್ ತಿಂಗಳ ಬಳಿಕ ದರ ಏರಿಕೆಯ ಬಗ್ಗೆ ಚಿಂತನೆ ನಡೆಸಲಿದ್ದೇವೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

'ನಗರದಲ್ಲಿ ಸುಮಾರು 12 ಸಾವಿರ ಐಟಿ ಕಂಪನಿಗಳಿವೆ. ಅವುಗಳು ಇನ್ನೂ ಪೂರ್ಣಪ್ರಮಾಣದಲ್ಲಿ ಕಚೇರಿಗಳನ್ನು ಪ್ರಾರಂಭಿಸಿಲ್ಲ. ಇದು ಹೋಟೆಲ್ ಉದ್ಯಮಕ್ಕೆ ಹೊಡೆತ ನೀಡಿದೆ. ಕಂಪನಿಗಳ ಆವರಣದಲ್ಲಿರುವ ಫುಡ್ ಕೋರ್ಟ್‌ಗಳು ಮುಚ್ಚಿದ್ದು, ಹಲವಾರು ಮಂದಿ ನಿರುದ್ಯೋಗಿಗಳಾಗಿದ್ದಾರೆ. ವೈಟ್‌ಫೀಲ್ಡ್, ಎಲೆಕ್ಟ್ರಾನಿಕ್ ಸಿಟಿ ಮತ್ತು ಮಾನ್ಯತಾ ಟೆಕ್ ಪಾರ್ಕ್‌ನಲ್ಲಿರುವ ಹೋಟೆಲ್‌ಗಳ ವಹಿವಾಟು ಸಂಪೂರ್ಣ ಕುಸಿದಿದೆ. ತಾರಾ ಹೋಟೆಲ್‌ಗಳಲ್ಲಿ ಕೊಠಡಿಗಳು ಬುಕ್ ಆಗದಿರುವುದು ಸಮಸ್ಯೆಯಾಗಿದೆ' ಎಂದರು.

'ಸರ್ಕಾರದಿಂದಲೂ ಪ್ರೋತ್ಸಾಹ ಅಗತ್ಯ'

ಚಂದ್ರಶೇಖರ್ ಹೆಬ್ಬಾರ್

'ಹೋಟೆಲ್ ಉದ್ಯಮ ಬೇರೆ ಎಲ್ಲ ಉದ್ಯಮಗಳಿಗಿಂತ ವಿಭಿನ್ನ. ಪ್ರವಾಸೋದ್ಯಮ ಬೆಳೆದಲ್ಲಿ ಈ ಉದ್ಯಮ ಕೂಡ ಬೆಳವಣಿಗೆ ಹೊಂದುತ್ತದೆ. ಸರ್ಕಾರವು ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಿ, ಹೋಟೆಲ್ ತೆರೆಯಲು ಅವಕಾಶ ನೀಡಬೇಕು. ಈಗ ಹೋಟೆಲ್ ಪ್ರಾರಂಭಿಸಲು 15–18 ಇಲಾಖೆಗಳಿಂದ ಪರವಾನಗಿ ಪಡೆಯಬೇಕಾಗಿದೆ. ಇದನ್ನು ಆದಷ್ಟು ಸರಳೀಕರಣ ಮಾಡಬೇಕು. ಅದೇ ರೀತಿ, ಪ್ರತಿ ವರ್ಷ ಪರವಾನಗಿಯನ್ನು ನವೀಕರಣ ಮಾಡಿಸಿಕೊಳ್ಳಬೇಕಿದೆ. ಇದು ಕೂಡ ಅವೈಜ್ಞಾನಿಕ' ಎಂದು ಕರ್ನಾಟಕ ಪ್ರದೇಶ ಹೋಟೆಲ್ ಮತ್ತು ಉಪಹಾರ ಮಂದಿರಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ತಿಳಿಸಿದರು.

'ಸರ್ಕಾರವು ಹೋಟೆಲ್ ಉದ್ಯಮವನ್ನು ನಿರ್ಲಕ್ಷಿಸಿದಂತೆ ಕಾಣುತ್ತಿದೆ. ಕೋವಿಡ್ ಕಾಣಿಸಿಕೊಂಡ ಬಳಿಕ ಆಸ್ತಿ ತೆರಿಗೆಯನ್ನು ಕೂಡ ಕಡಿಮೆ ಮಾಡಿಲ್ಲ. 5 ವರ್ಷಕ್ಕೊಮ್ಮೆ ಪರವಾನಗಿ ಶುಲ್ಕವನ್ನು ಹೆಚ್ಚು ಮಾಡಲಾಗುತ್ತಿದೆ. ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಕ್ಕ ಕಾರಣ ಈಗ ಮತ್ತೆ ಹೆಚ್ಚಳ ಮಾಡಕೂಡದು. ಸರ್ಕಾರದ ಒತ್ತಡ ಇದ್ದಲ್ಲಿ ಹೋಟೆಲ್ ಉದ್ಯಮದ ಬೆಳೆವಣಿಗೆ ಸಾಧ್ಯವಾಗದು' ಎಂದು ವಿವರಿಸಿದರು.

'ಬೆಲೆ ಏರಿಕೆಯಿಂದ ನಿರ್ವಹಣೆ ಸಮಸ್ಯೆ'

'ಕೋವಿಡ್ ಪ್ರಕರಣಗಳು ಇಳಿಕೆ ಕಂಡ ಬಳಿಕ ಜನತೆ ಹೋಟೆಲ್‌ಗಳಿಗೆ ಬರಲಾರಂಭಿಸಿದ್ದಾರೆ. ಉದ್ಯಮವು ಈಗ ಚೇತರಿಕೆಯ ಹಾದಿ ಹಿಡಿದಿದೆ. ಆದರೆ, ಈ ವೇಳೆ ಆಹಾರಧಾನ್ಯಗಳ ಬೆಲೆ ಶೇ 30ರಷ್ಟು ಜಾಸ್ತಿಯಾದ ಕಾರಣ ಸಮಸ್ಯೆಯಾಗಿದೆ. ತಿಂಡಿ ತಿನಿಸುಗಳ ಬೆಲೆ ಏರಿಕೆ ಮಾಡಿದಲ್ಲಿ ಜನರಿಗೆ ಸಮಸ್ಯೆಯಾಗುತ್ತದೆ. ಇದರಿಂದ ಮತ್ತೆ ನಷ್ಟವನ್ನು ಅನುಭವಿಸಬೇಕಾಗಿದೆ. ಕೋವಿಡ್ ಸಂಬಂಧ ತಮ್ಮ ಊರುಗಳಿಗೆ ತೆರಳಿದ್ದ ಕಾರ್ಮಿಕರು ಕೂಡ ಮರಳಲಿಲ್ಲ. ಇದರಿಂದ ಇದ್ದವರೇ ಎಲ್ಲ ಕೆಲಸವನ್ನು ನಿರ್ವಹಿಸಬೇಕಿದೆ. ಈ ಸಂದರ್ಭದಲ್ಲಿ ಸರ್ಕಾರದ ಸಹಕಾರ ಅತ್ಯಗತ್ಯ' ಎಂದು ಕದಂಬ ಹೋಟೆಲ್ ಸಮೂಹದ ಮಾಲೀಕ ರಾಘವೇಂದ್ರ ರಾವ್ ತಿಳಿಸಿದರು.

'ಕೋವಿಡ್ ಕಾಣಿಸಿಕೊಂಡ ಬಳಿಕ ಜನತೆ ಹೋಟೆಲ್‌ಗಳಿಗೆ ಬಾರದ ಪರಿಣಾಮ ಈ ಉದ್ಯಮವನ್ನು ನಂಬಿಕೊಂಡಿದ್ದವರು ಸಾಕಷ್ಟು ಸಮಸ್ಯೆ ಎದುರಿಸಬೇಕಾಯಿತು. ಶುಚಿತ್ವ ಕಾಯ್ದುಕೊಳ್ಳುವ ಜತೆಗೆ ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸಿ, ಗ್ರಾಹಕರಿಗೆ ಸೇವೆ ಒದಗಿಸುತ್ತಿದ್ದೇವೆ. ಈಗ ಉದ್ಯಮವು ಚೇತರಿಕೆ ಕಾಣುತ್ತಿದೆ. ಪ್ರವಾಸೋದ್ಯಮ ಹಾಗೂ ಹೋಟೆಲ್ ಉದ್ಯಮ ನಗರದ ಪ್ರಗತಿಗೆ ಪೂರಕ. ಹಾಗಾಗಿ, ಸರ್ಕಾರವು ವಿವಿಧ ತೆರಿಗೆ ಹಾಗೂ ಶುಲ್ಕದಲ್ಲಿ ವಿನಾಯಿತಿ ನೀಡಿದಲ್ಲಿ ಸಹಕಾರಿಯಾಗಲಿದೆ' ಎಂದು ನಿಸರ್ಗ ಗ್ರ್ಯಾಂಡ್ ಹೋಟೆಲ್‌ನ ಮಾಲೀಕ ಎಸ್.ಪಿ. ಕೃಷ್ಣರಾಜ್ ವಿವರಿಸಿದರು.

'ಕೋವಿಡ್‌ನಿಂದ ನಮಗೆ ಸಾಕಷ್ಟು ಹೊಡೆತ ಬಿದ್ದಿದೆ. ಶುಚಿತ್ವ ಕಾಪಾಡಿಕೊಂಡು ಗ್ರಾಹಕರಿಗೆ ಸಹಕರಿಸುತ್ತಿದ್ದೇವೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಾದರೂ ನಾವು ತಿನಿಸುಗಳ ಬೆಲೆ ಹೆಚ್ಚಳ ಮಾಡಿಲ್ಲ. ಗ್ರಾಹಕರ ಸಹಕಾರ ಕೂಡ ಅಗತ್ಯ' ಎಂದು ಚಿಕ್ಕಪೇಟೆ ದೊನ್ನೆ ಬಿರಿಯಾನಿ ಹೌಸ್‌ನ ಮಾಲೀಕ ಯೋಗೇಶ್ ತಿಳಿಸಿದರು.

ಕೋವಿಡ್ ಹಾಗೂ ಅದರ ನಿಯಂತ್ರಣಕ್ಕಾಗಿ ಹೇರಲಾದ ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ಆತಿಥ್ಯ ಉದ್ದಿಮೆ ವಲಯವು, ಚೇತರಿಕೆ ಕಂಡಿಲ್ಲ. ಸದ್ಯ ಯಾವೆಲ್ಲ ಸವಾಲುಗಳನ್ನು ಎದುರಿಸುತ್ತಿದೆ ಎನ್ನುವುದನ್ನು ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಅನ್ಯ ರಾಜ್ಯಗಳಲ್ಲಿ ಸೋಂಕು ಹೆಚ್ಚಳ– ಬಿಬಿಎಂಪಿ ವ್ಯಾಪ್ತಿಯಲ್ಲಿ ನಿಯಂತ್ರಣ ಕಾರ್ಯ ತೀವ್ರಗೊಳಿಸಲು ಸೂಚನೆ

ಕೋವಿಡ್ ನಿಯಂತ್ರಣ: ಕಟ್ಟೆಚ್ಚರ ವಹಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ಕಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಕೇರಳಗಳಲ್ಲೂ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿವೆ. ಇತ್ತೀಚೆಗೆ ಪಂಜಾಬ್, ಮಧ್ಯಪ್ರದೇಶ, ಛತ್ತೀಸಗಡ ರಾಜ್ಯಗಳಲ್ಲೂ ಹೆಚ್ಚು ಕೋವಿಡ್ ಪ್ರಕರಣಗಳು ಕಂಡುಬರುತ್ತಿವೆ. ಆದ್ದರಿಂದ ನಗರದಲ್ಲಿ ಕೋವಿಡ್ ಸೋಂಕನ್ನು ನಿಯಂತ್ರಿಸಲು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಆರೋಗ್ಯಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ಕುರಿತು ಆಯುಕ್ತರು ಎಲ್ಲಾ ವಲಯಗಳ ಜಂಟಿ ಆಯುಕ್ತರು, ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ಜೊತೆ ವಿಡಿಯೊ ಸಂವಾದವನ್ನು ಭಾನುವಾರ ನಡೆಸಿದರು.

'ಕೆಲದಿನಗಳಿಂದ ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದೆ. ಪರೀಕ್ಷೆಗೊಳಗಾಗುವವರಲ್ಲಿ ಕೊರೊನಾ ಸೋಂಕು ಪತ್ತೆ ಪ್ರಮಾಣ ಹಾಗೂ ಈ ಸೋಂಕಿನಿಂದ ಮರಣ ಹೊಂದುವವರ ಪ್ರಮಾಣವೂ ಹೆಚ್ಚುತ್ತಿದೆ. ಹಾಗಾಗಿ ರೋಗ ನಿಯಂತ್ರಣದ ಬಗ್ಗೆ ನಿರ್ಲಕ್ಷ್ಯ ಸಲ್ಲದು. ಕೋವಿಡ್

ಎನ್. ಮಂಜುನಾಥ ಪ್ರಸಾದ್

ಹೊಸ ಪ್ರಕರಣಗಳು ಹಾಗೂ ಹೆಚ್ಚು ಪ್ರಕರಣಗಳು ಕಂಡುಬರುವ ಕ್ಲಸ್ಟರ್‌ಗಳಲ್ಲಿ ವ್ಯವಸ್ಥಿತವಾಗಿ ಯೋಜನೆ ರೂಪಿಸಿಕೊಂಡು ಕೋವಿಡ್ ಸೋಂಕನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕು. ಸಕಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಸೂಚನೆ ನೀಡಿದರು.

'ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್ ಪರೀಕ್ಷೆಗಳನ್ನು ತ್ವರಿತವಾಗಿ ಹೆಚ್ಚಳ ಮಾಡಬೇಕು. ಕೋವಿಡ್ ಪರೀಕ್ಷೆ ನಡೆಸಲೆಂದು 500 ತಂಡಗಳನ್ನು ಅಣಿಗೊಳಿಸಲಾಗಿದೆ. ಲಭ್ಯ ಇರುವ ಸಿಬ್ಬಂದಿಯನ್ನು ಸಮರ್ಪಕವಾಗಿ ಬಳಸಿಕೊಂಡು ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ನಡೆಸಬೇಕು. ಸೋಂಕಿತರ ಜೊತೆ ನೇರ ಹಾಗೂ ಪರೋಕ್ಷ ಸಂಪರ್ಕ ಹೊಂದಿದವರನ್ನು ಪತ್ತೆಹಚ್ಚಿ ಪರೀಕ್ಷೆಗೆ ಒಳಪಡಿಸಬೇಕು. ಆರೋಗ್ಯಾಧಿಕಾರಿಗಳ ಜೊತೆಗೆ ಕಂದಾಯ ಅಧಿಕಾರಿಗಳನ್ನು ಹಾಗೂ ಎಂಜಿನಿಯರ್‌ಗಳನ್ನೂ ಈ ಉದ್ದೇಶಕ್ಕೆ ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸಲು ಕ್ರಮವಹಿಸಬೇಕು. ಶೀತ ಜ್ವರ, ತೀವ್ರ ಉಸಿರಾಟದ ತೊಂದರೆ ಹೊಂದಿರುವವರು ಕಡ್ಡಾಯವಾಗಿ ಕೋವಿಡ್ ಪರೀಕ್ಷೆಗೆ ಒಳಪಡುವಂತೆ ನೋಡಿಕೊಳ್ಳಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳು ತಮ್ಮ ವ್ಯಾಪ್ತಿಯಲ್ಲಿ ಕೋವಿಡ್ ಪತ್ತೆಯಾದ ಪ್ರಕರಣಗಳ ವರದಿಯನ್ನು ಪ್ರತಿನಿತ್ಯ ಕೇಂದ್ರ ಕಚೇರಿಗೆ ಸಲ್ಲಿಸಬೇಕು. ಯಾವುದೇ ಪ್ರಕರಣ ಕಂಡುಬರದಿದ್ದರೆ ಶೂನ್ಯ ಪ್ರಕರಣ ಎಂದು ವರದಿಯನ್ನು ನೀಡಬೇಕು' ಎಂದು ಸೂಚನೆ ನೀಡಿದರು.

'ನಗರದ ಆಸ್ಪತ್ರೆಗಳಲ್ಲಿ ರೋಗಿಗಳು ಕೋವಿಡ್‌ನಿಂದ ಮೃತಪಟ್ಟರೆ, ಪಾಲಿಕೆಗೆ ಅದೇ ದಿನ ವರದಿ ನೀಡಬೇಕು. ಎಷ್ಟು ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂಬ ನಿಖರ ಮಾಹಿತಿಯನ್ನು ಒದಗಿಸಬೇಕು. ಈ ಸಂಬಂಧ ಪ್ರತಿವಲಯದಲ್ಲೂ ವಾರಕ್ಕೊಮ್ಮೆ ಪರಿಶೀಲನೆ ಸಭೆ ನಡೆಸಬೇಕು' ಎಂದು ಆಯುಕ್ತರು ಸೂಚಿಸಿದರು.

ವಿಶೇಷ ಆಯುಕ್ತರಾದ ರಾಜೇಂದ್ರ ಚೋಳನ್, ತುಳಸಿ ಮದ್ದಿನೇನಿ, ಡಿ.ರಂದೀಪ್, ರವೀಂದ್ರ ಅವರು ಸಲಹೆ ನೀಡಿದರು.

'ಮದುವೆ ಮನೆಗೆ ಮಾರ್ಷಲ್‌ಗಳನ್ನು ಕಳುಹಿಸಿ'

'ಸಾಮಾಜಿಕ ಸಮಾರಂಭಗಳು, ಕಾರ್ಯಕ್ರಮಗಳು, ಮದುವೆ ಸಮಾರಂಭಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುತ್ತಿದ್ದಾರೆ. ಕೊರೊನಾ ಸೋಂಕಿತರು ಇಂತಹ ಸಮಾರಂಭಗಳಲ್ಲಿ ಭಾಗವಹಿಸಿದರೆ, ಸೋಂಕು ತೀವ್ರಗತಿಯಲ್ಲಿ ಹರಡಲಿದೆ. ಸೂಪರ್ ಸ್ಪ್ರೆಡರ್ ಆಗಬಲ್ಲ ಕಾರ್ಯಕ್ರಮಗಳ ಬಗ್ಗೆ ಎಚ್ಚರವಹಿಸುವ ಅಗತ್ಯವಿದೆ' ಎಂದು ಬಿಬಿಎಂಪಿ ಆಯುಕ್ತರು ನೆನಪಿಸಿದರು.

'ನಗರದಲ್ಲಿ ಮದುವೆ ಸಮಾರಂಭಗಳು ನಡೆಯುವ ಕಡೆ ಕೋವಿಡ್ ನಿಯಮಗಳನ್ನು ಪಾಲನೆ ಮಾಡುವ ಕುರಿತ ಭಿತ್ತಿಪತ್ರಗಳನ್ನು ಅಂಟಿಸಬೇಕು. ಕಾರ್ಯಕ್ರಮಗಳಲ್ಲಿ ಕೋವಿಡ್ ನಿಯಮ ಪಾಲನೆ ಮಾಡಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಲು ಮಾರ್ಷಲ್‌ಗಳನ್ನು ಸಮಾರಂಭಗಳಿಗೆ ಕಳುಹಿಸಬೇಕು' ಎಂದು ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದರು.

'ಕಲ್ಯಾಣಮಂಟಪದ ಮಾಲೀಕರ ಸಂಘದ ಜೊತೆ ಶೀಘ್ರವೇ ಸಭೆ ನಡೆಸಿ ಕೋವಿಡ್ ನಿಯಂತ್ರಣ ನಿಯಮಗಳ ಪಾಲನೆ ಮಾಡುವ ಜಾಗೃತಿ ಮೂಡಿಸಲಾಗುತ್ತದೆ' ಎಂದರು.

'ಶಾಲಾ, ಕಾಲೇಜುಗಳಿಗೆ ಆರೋಗ್ಯ ತಂಡ'

ನಗರದಲ್ಲಿ ಈಗಾಗಲೇ ಶಾಲಾ-ಕಾಲೇಜುಗಳು ಪ್ರಾರಂಭವಾಗಿವೆ. ಪಾಲಿಕೆಯ ಆರೋಗ್ಯ ಸಿಬ್ಬಂದಿಯ ತನಿಖಾ ತಂಡವು ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಕೋವಿಡ್ ಪ್ರಕರಣಗಳು ಕಂಡುಬರುವ ಬಗ್ಗೆ, ಕೋವಿಡ್ ನಿಯಮಗಳನ್ನು ಪಾಲನೆ ಮಾಡುತ್ತಿರುವ ಬಗ್ಗೆ ವಿಚಾರಣೆ ನಡೆಸಲಿದೆ.

'ಶಾಲಾ- ಕಾಲೇಜುಗಳು ವಿದ್ಯಾರ್ಥಿಗಳ ಪಟ್ಟಿ ಮತ್ತು ಸಿಬ್ಬಂದಿಯ ಪಟ್ಟಿಯನ್ನು ತನಿಖಾ ತಂಡಕ್ಕೆ ಒದಗಿಸಬೇಕು. ವಿದ್ಯಾರ್ಥಿಗಳಲ್ಲಿ ಹಾಗೂ ಸಿಬ್ಬಂದಿಯಲ್ಲಿ ಸೋಂಕು ಲಕ್ಷಣಗಳು ಕಂಡುಬಂದರೆ ತನಿಖಾ ತಂಡಕ್ಕೆ ಮಾಹಿತಿ ಒದಗಿಸಬೇಕು' ಎಂದು ಮಂಜುನಾಥ ಪ್ರಸಾದ್ ಸೂಚಿಸಿದರು.

ಸುದ್ದಿ 2 ನಿಮಿಷ

'ಪೂರ್ವ ಲಡಾಖ್‌ನಲ್ಲಿ ಸೇನೆ ಹಿಂಪಡೆಯುವಿಕೆ ಪ್ರಕ್ರಿಯೆ ಪೂರ್ಣ'

ಸೇಲಂ (ತಮಿಳುನಾಡು): ಪೂರ್ವ ಲಡಾಖ್‌ನಲ್ಲಿ ಭಾರತ–ಚೀನಾ ಸೇನೆ ಹಿಂಪಡೆಯುವಿಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಒಂಬತ್ತು ಸುತ್ತಿನ ರಾಜತಾಂತ್ರಿಕ ಹಾಗೂ ಸೇನಾ ಮಟ್ಟದ ಮಾತುಕತೆ ಬಳಿಕ ಇದು ಸಾಧ್ಯವಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.

ಭಾರತೀಯ ಜನತಾ ಯುವ ಮೋರ್ಚಾದ ರಾಜ್ಯ ಮಟ್ಟದ ಸಮಾವೇಶದಲ್ಲಿ ಮಾತನಾಡಿದ ಅವರು, 'ಭಾರತವು ತನ್ನ ಗಡಿಯಲ್ಲಿ ಯಾವುದೇ ದೇಶಕ್ಕೆ ಏಕಪಕ್ಷೀಯ ಕ್ರಮಕ್ಕೆ ಅವಕಾಶ ನೀಡುವುದಿಲ್ಲ ಮತ್ತು ಅಂತಹ ಪ್ರಯತ್ನ ಕಂಡುಬಂದಲ್ಲಿ ಅದನ್ನು ತಡೆಯಲು ಯಾವುದೇ ರೀತಿಯ ಬೆಲೆ ತೆರಲು ಸಿದ್ಧವಿದೆ' ಎಂದು ಹೇಳಿದ್ದಾರೆ.

'ಸೇನಾ ಹಿಂಪಡೆಯುವಿಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ದುರದೃಷ್ಟವಶಾತ್, ಭಾರತೀಯ ಸೇನೆಯ ಶೌರ್ಯದ ಬಗ್ಗೆ ಕಾಂಗ್ರೆಸ್ ಅನುಮಾನ ವ್ಯಕ್ತಪಡಿಸುತ್ತಿದೆ. ಇದು ಮಹೋನ್ನತ ತ್ಯಾಗ ಮಾಡುವ ಯೋಧರನ್ನು ಅವಮಾನಿಸಿದಂತಲ್ಲವೇ' ಎಂದು ರಾಜನಾಥ್ ಪ್ರಶ್ನಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶವು ಎಂದಿಗೂ ಏಕತೆ, ಭೌಗೋಳಿಕ ಸಮಗ್ರತೆ ಹಾಗೂ ಸಾರ್ವಭೌಮತ್ವದ ವಿಚಾರದಲ್ಲಿ ರಾಜಿ ಮಾಡಿಕೊಂಡಿಲ್ಲ. ಭವಿಷ್ಯದಲ್ಲೂ ರಾಜಿ ಮಾಡಿಕೊಳ್ಳುವುದಿಲ್ಲ' ಎಂದಿದ್ದಾರೆ.



ಸ್ಯಾಟಲೈಟ್ ಆಧರಿತ ಸುರಕ್ಷಿತ ಸಂವಹನ ತಂತ್ರಜ್ಞಾನ ಅಭಿವೃದ್ಧಿ

ಬೆಂಗಳೂರು: ರಾಮನ್ ಸಂಶೋಧನಾ ಸಂಸ್ಥೆಯ (ಆರ್‌ಆರ್‌ಐ) ವಿಜ್ಞಾನಿಗಳ ತಂಡವು ಸ್ಯಾಟಲೈಟ್ ಆಧರಿತ ಸುರಕ್ಷಿತ ಸಂವಹನ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ.

ಈ ಸಾಧನೆಯ ಕುರಿತು ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕ್ವಾಂಟಮ್ ಇನ್ಫರ್ಮೇಷನ್ ಆ್ಯಂಡ್ ಕಂಪ್ಯೂಟಿಂಗ್ ಲ್ಯಾಬ್‌ನ ಪ್ರೊ.ಊರ್ವಶಿ ಸಿನ್ಹಾ 'ರಕ್ಷಣೆ, ಬ್ಯಾಂಕಿಂಗ್ ಹಾಗೂ ಇನ್ನಿತರ ಪ್ರಮುಖ ಕ್ಷೇತ್ರಗಳಲ್ಲಿ ಪ್ರಸ್ತುತ ಕ್ಲಾಸಿಕಲ್ ಕಂಪ್ಯೂಟಿಂಗ್ ಭದ್ರತಾ ವ್ಯವಸ್ಥೆ ಜಾರಿಯಲ್ಲಿದೆ. ಭವಿಷ್ಯದಲ್ಲಿ ಕ್ವಾಂಟಮ್ ಕಂಪ್ಯೂಟರ್ ಮಾರುಕಟ್ಟೆಗೆ ಬಂದರೆ ಕ್ಲಾಸಿಕಲ್ 'ಕ್ರಿಪ್ಟೊಗ್ರಫಿ'ಗೆ ಅಪಾಯ ಎದುರಾಗುತ್ತದೆ. ರಹಸ್ಯ ಮಾಹಿತಿಗಳು ಸೋರಿಕೆಯಾಗುವ ಎಲ್ಲಾ ಸಾಧ್ಯತೆಗಳೂ ಇರುತ್ತದೆ. ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ನಾವು ಸ್ಯಾಟಲೈಟ್ ಆಧರಿತ ಸಂವಹನ ತಂತ್ರಜ್ಞಾನ ಅಭಿವೃದ್ಧಿಪಡಿಸಿದ್ದೇವೆ' ಎಂದರು.

'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಸಹಯೋಗದಲ್ಲಿ 2017ರಲ್ಲಿ ನಾವು ಕ್ವಾಂಟಮ್ ಕೀ ಡಿಸ್ಟ್ರಿಬ್ಯೂಷನ್ (ಕ್ಯುಕೆಡಿ) ಯೋಜನೆ ಆರಂಭಿಸಿದ್ದೆವು. ಅದು ಈಗ ಯಶಸ್ಸಿನ ಹಾದಿಯತ್ತ ಸಾಗಿದೆ. ಪ್ರೋಟಾನ್‌ಗಳ ನೆರವಿನಿಂದ ಈಗಾಗಲೇ ಸುರಕ್ಷಿತ ಸಂವಹನ ನಡೆಸಲಾಗಿದೆ. ಪ್ರಾಯೋಗಿಕವಾಗಿ ಒಂದು ಕಟ್ಟಡದಿಂದ ಮತ್ತೊಂದು ಕಟ್ಟಡಕ್ಕೆ (ಇವುಗಳ ನಡುವಣ ಅಂತರ 50 ಮೀಟರ್) ಯಾವುದೇ ತಡೆ ಇಲ್ಲದೆ ಮಾಹಿತಿ ರವಾನಿಸುವಲ್ಲಿ ಸಫಲರಾಗಿದ್ದೇವೆ. ಮುಂದಿನ ಮೂರು ವರ್ಷಗಳಲ್ಲಿ ಸ್ಯಾಟಲೈಟ್ ಆಧಾರಿತ ಸುರಕ್ಷಿತ ಸಂವಹನ ತಂತ್ರಜ್ಞಾನವನ್ನು ಪರಿಪೂರ್ಣವಾಗಿ ಅನುಷ್ಠಾನಗೊಳಿಸುವ ಗುರಿ ಇಟ್ಟುಕೊಂಡಿದ್ದೇವೆ' ಎಂದು ಮಾಹಿತಿ ನೀಡಿದರು.

ಸೋಂಕು ನಿಯಂತ್ರಣಕ್ಕೆ ಸಮುದಾಯ ಆಧರಿತ ಕಣ್ಗಾವಲು– ಬಿಬಿಎಂಪಿ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಪತ್ತೆಯಾದರೆ ಅವುಗಳು ಹರಡದಂತೆ ನೋಡಿಕೊಂಡು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಮುದಾಯದ ಸಹಭಾಗಿತ್ವ ಬಳಸಲು ಬಿಬಿಎಂಪಿ ಮುಂದಾಗಿದೆ.

ಬಿಬಿಎಂಪಿ ಅಧಿಕಾರಿಗಳು ನಾಗರಿಕರ ಸಹಕಾರದಿಂದ ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಬೇಕು. ಇದರಿಂದ ಯಾವುದೇ ಕ್ಲಸ್ಟರ್‌ನಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾದರೆ ತಕ್ಷಣವೇ ನಿಯಂತ್ರಣ ಕಾರ್ಯ ಕೈಗೊಳ್ಳುವುದು ಸುಲಭವಾಗಲಿದೆ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಸೂಚಿಸಿದ್ದಾರೆ.

ಆರೋಗ್ಯ ಸಂರಕ್ಷಣೆ ವ್ಯವಸ್ಥೆ ಬಲಪಡಿಸಲು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳ (ಆರ್‌ಡಬ್ಲ್ಯುಎ) ಜೊತೆ ಸಭೆ ನಡೆಸಬೇಕು. ಕೋವಿಡ್ ಹರಡುವಿಕೆಯ ಸರಪಣಿಯನ್ನು ತುಂಡರಿಸಲು ಅವರ ನೆರವನ್ನು ಪಡೆಯಬೇಕು. ಸೋಂಕಿತರ ಜೊತೆ ನೇರ ಮತ್ತು ಪರೋಕ್ಷ ಸಂಪರ್ಕಕ್ಕೆ ಬಂದವರ ಪತ್ತೆಗೆ ಆರ್‌ಡಬ್ಲ್ಯುಎಗಳ ಅಥವಾ ಇತರ ಸಾಮುದಾಯಿಕ ಸಂಘಟನೆಗಳ ಪ್ರತಿನಿಧಿಗಳ ನೆರವನ್ನು ಪಡೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ.

'ಕೋವಿಡ್ ನಿಯಂತ್ರಣಕ್ಕೆ ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿರುವ ಬಳಗಗಳ ಬಳಸಿಕೊಳ್ಳಬೇಕು. ಕೋವಿಡ್ ಹರಡುವಿಕೆಗೆ ಸಂಬಂಧಿಸಿದ ಮಾಹಿತಿ ಕಲೆಹಾಕುವಲ್ಲಿಯೂ ಇವುಗಳು ನೆರವಾಗಬಲ್ಲವು' ಎಂದು ಅವರು ತಿಳಿಸಿದ್ದಾರೆ.

ನಾಲ್ಕು ಗೋಡೆಗಳ ನಡುವಿನ ವ್ಯವಸ್ಥೆಗಳಲ್ಲೂ ಕೋವಿಡ್ ನಿಯಂತ್ರಣ ಕ್ರಮಗಳನ್ನು ಹೇಗೆ ಅಳವಡಿಸಿಕೊಳ್ಳಲಾಗಿದೆ ಎಂಬ ಬಗ್ಗೆಯೂ ನಿಗಾ ಇಡಬೇಕು. ಕಲ್ಯಾಣ ಮಂಟಪಗಳು, ಮದುವೆ ಸಭಾಂಗಣ, ಕಾರಾಗೃಹ, ವಸತಿ ಕಟ್ಟಡ, ವಿಶ್ರಾಂತ ಜೀವನ ನಡೆಸುವ ಸಮುದಾಯಗಳು, ವೃದ್ಧಾಶ್ರಮ, ಅಂಗವಿಕಲರ ಆಶ್ರಯ ತಾಣಗಳಲ್ಲಿನ ವ್ಯವಸ್ಥೆಗಳ ಮೇಲೂ ನಿಗಾ ಇಡಬೇಕು. ಕೋವಿಡ್ ಪತ್ತೆಯಾದ ಕಡೆ ಇನ್ನೂ ಹೆಚ್ಚಿನ ನಿಗಾ ವಹಿಸಬೇಕು ಎಂದು ಅವರು ಸೂಚಿಸಿದ್ದಾರೆ.

ರೂಪಾಂತರಗೊಂಡ ಕೊರೊನಾ ಸೋಂಕು ಪತ್ತೆಯಾದರೆ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸಿ, ಅವುಗಳ ಹರಡುವಿಕೆ ಬಗ್ಗೆ ಬಗ್ಗೆ ಹೆಚ್ಚಿನ ನಿಗಾವಹಿಸುವಂತೆಯೂ ಆಯುಕ್ತರು ಸೂಚಿಸಿದ್ದಾರೆ.

ಕೇರಳದಿಂದ ಜಿಲ್ಲೆಗೆ ಪ್ರವೇಶಿಸುವವರ ಮೇಲೆ ನಿಗಾ

ಗಡಿ ಭಾಗದಲ್ಲಿ ಕಟ್ಟುನಿಟ್ಟು

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇರಳದಲ್ಲಿ ಕೋವಿಡ್ ಪ್ರಮಾಣವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಗಡಿಯಲ್ಲಿನ ಸಂಪರ್ಕ ರಸ್ತೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದ್ದು, ಸೋಮವಾರದಿಂದ ತಪಾಸಣೆ ನಡೆಯಲಿದೆ.

ಕೇರಳಕ್ಕೆ ಸಂಪರ್ಕ ಕಲ್ಪಿಸುವ ನಾಲ್ಕು ರಸ್ತೆಗಳನ್ನು ಹೊರತು ಪಡಿಸಿ, ಉಳಿದೆಡೆ ಸಂಪರ್ಕ ಬಂದ್ ಮಾಡಲಾಗಿದೆ. ಈ ನಾಲ್ಕು ಕಡೆಗಳಲ್ಲಿ ಚೆಕ್‌ಪೋಸ್ಟ್ ತೆರೆಯಲಾಗಿದೆ.

ಭಾನುವಾರ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿರುವ ಜಿಲ್ಲಾಡಳಿತವು ಗಡಿಯ ರಸ್ತೆ ಬದಿಯಲ್ಲಿ ಟೆಂಟ್ ಹಾಕಿದ್ದು, ಆರೋಗ್ಯ ಕೇಂದ್ರದ ಸಹಾಯಕರನ್ನು ನಿಯೋಜಿಸಿದೆ. ಮಂಗಳೂರು–ಕಾಸರಗೋಡು ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 66ರ ತಲಪಾಡಿಯಲ್ಲಿ ಟೆಂಟ್ ಹಾಕಲಾಗಿದೆ.

ತಲಪಾಡಿ ಗಡಿಯಲ್ಲಿ ಚೆಕ್‌ಪೋಸ್ಟ್‌ಗೆ ಸಿದ್ಧತೆ ಮಾಡಿಕೊಂಡಿರುವುದು

'ಸೋಮವಾರದಿಂದ ಗಡಿಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಕೇರಳದಿಂದ ಬರುವವರು 72 ಗಂಟೆಯೊಳಗಿನ ಆರ್‌ಟಿಪಿಸಿಆರ್ ಕೋವಿಡ್ ನೆಗೆಟಿವ್ ವರದಿ ಹೊಂದಿರುವುದು ಕಡ್ಡಾಯವಾಗಿದೆ. ವರದಿ ಇಲ್ಲದಿದ್ದರೆ, ಆರ್‌ಟಿಪಿಸಿಆರ್ ಪರೀಕ್ಷೆ ಹಾಗೂ ರ್‍ಯಾಟ್ ಪರೀಕ್ಷೆಯನ್ನು ಗಡಿಯಲ್ಲಿ ಮಾಡಲಾಗುವುದು. ಎರಡು ದಿನ ವ್ಯವಸ್ಥೆ ಸರಿಪಡಿಸಲು ಸ್ವಲ್ಪ ಹೊಂದಾಣಿಕೆ ಮಾಡಿಕೊಳ್ಳಲಾಗುವುದು' ಎಂದು ಜಿಲ್ಲಾ ಆರೋಗ್ಯಾಧಿಕಾರಿ ರಾಮಚಂದ್ರ ಬಾಯರಿ ತಿಳಿಸಿದ್ದಾರೆ.

ಆದರೆ, ರೈಲ್ವೆ ಪ್ರಯಾಣಿಕರ ಪರೀಕ್ಷೆಗೆ ಈ ತನಕ ಯಾವುದೇ ಸಿದ್ಧತೆಗಳನ್ನು ಮಾಡಿಕೊಂಡಿಲ್ಲ ಎಂದು ಮೂಲಗಳು ತಿಳಿಸಿವೆ.

ರಾಜರಾಜೇಶ್ವರಿನಗರ ಕ್ಷೇತ್ರದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರೊ.ದೊಡ್ಡರಂಗೇಗೌಡ ಬೇಸರ

'ಆಳುವವರಿಗೆ ಕನ್ನಡ ಉಳಿಸುವ ಕಾಳಜಿಯಿಲ್ಲ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ಸಪ್ತಸಾಗರದ ಆಚೆಗೆ ಹೋಗಿ ಉದ್ಯೋಗ ಕಂಡುಕೊಂಡು ಕನ್ನಡ ಉಳಿಸುವ ಕೆಲಸವನ್ನು ಅಲ್ಲಿನ ಕನ್ನಡಿಗರು ಮಾಡುತ್ತಿದ್ದಾರೆ. ಆದರೆ ನಮ್ಮನ್ನಾಳುವ ರಾಜಕಾರಣಿಗಳು, ಅಧಿಕಾರಿಗಳು ಮಾತ್ರ ಕನ್ನಡ ಭಾಷೆ–ಸಂಸ್ಕೃತಿ ಉಳಿಸುವ ಕೆಲಸ ಮಾಡದೆ ಪ್ರಚಾರಕ್ಕೆ ಸೀಮಿತರಾಗಿದ್ದಾರೆ' ಎಂದು ಅಖಿಲ ಭಾರತ 86ನೇ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಡಾ. ದೊಡ್ಡ ರಂಗೇಗೌಡ ಬೇಸರ ವ್ಯಕ್ತಪಡಿಸಿದರು.

ರಾಜರಾಜೇಶ್ವರಿ ನಗರದಲ್ಲಿ ಭಾನುವಾರ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಎರಡನೇ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ವಿಶ್ವಕ್ಕೆ ಜ್ಞಾನವನ್ನು ಧಾರೆಯೆರೆದ ದೇಶ ನಮ್ಮದು. ನಮ್ಮಲ್ಲಿ ಮೌಲ್ಯಯುತ ಪಂಡಿತರು, ಸಂಶೋಧಕರಿದ್ದು ಪ್ರಾಚೀನ ಕಾಲದಿಂದಲೂ ವಿಶ್ವದ ಗಮನ ಸೆಳೆಯುವಲ್ಲಿ ಭಾರತೀಯರು ಯಶಸ್ವಿಯಾಗಿದ್ದಾರೆ' ಎಂದರು.

ಸಾಹಿತ್ಯ ಸಮ್ಮೇಳನದ ಮೆರವಣಿಗೆಯಲ್ಲಿ ಪೂರ್ಣಕುಂಭ ಹೊತ್ತು ಸಾಗಿದ ಮಹಿಳೆಯರು

ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಪ್ರೊ. ನಾರಾಯಣ ಘಟ್ಟ, 'ರಾಜಕಾರಣಿಗಳು ಸರ್ಕಾರಿ ಶಾಲೆಗಳನ್ನು ಮುಚ್ಚಿಸುವ ಉದ್ದೇಶದಿಂದಲೇ ಅವುಗಳಿಗೆ ಮೂಲಸೌಕರ್ಯವನ್ನು ಒದಗಿಸುತ್ತಿಲ್ಲ. ಆ ಮೂಲಕ ಇಂಗ್ಲಿಷ್ ಶಾಲೆಗಳ ಪರವಾಗಿ ನಿಂತು ಕನ್ನಡಕ್ಕೆ ದ್ರೋಹವೆಸಗುವ ಕೆಲಸ ಮಾಡುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕ ಮುನಿರತ್ನ, ಕಸಾಪ ರಾಜರಾಜೇಶ್ವರಿ ನಗರದ ಘಟಕದ ಅಧ್ಯಕ್ಷ ಕೆ.ಎನ್.ನಾಗೇಂದ್ರಕುಮಾರ್, ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ, ಚಿತ್ರ ಕಲಾವಿದ ಚಿ.ಸು.ಕೃಷ್ಣಾಶೆಟ್ಟಿ, ವಿಧಾನಪರಿಷತ್ ಸದಸ್ಯ ಅ.ದೇವೆಗೌಡ, ವಿಮರ್ಶಕ ಕರಿಗೌಡ ಬೀಚನಹಳ್ಳಿ, ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿದರು.

ವಿಮರ್ಶಕ ಡಾ.ಬೈರಮಂಗಲ ರಾಮೇಗೌಡ ಅವರು ರಾಷ್ಟ್ರಧ್ವಜವನ್ನು ಹಾಗೂ ಸಾಹಿತಿ ಗೊ.ರು. ಚನ್ನಬಸಪ್ಪ ಅವರು ನಾಡಧ್ವಜ, ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ ಅವರು ಪರಿಷತ್ತಿನ ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ ಅವರು ಬಾಲಕೃಷ್ಣ ಬಯಲು ರಂಗಮಂದಿರದ ಬಳಿ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಚಾಲನೆ ನೀಡಿದರು.ಮೆರವಣಿಗೆಯಲ್ಲಿ ರಾಜರಾಜೇಶ್ವರಿ ಶಾಲೆಯ ಮಕ್ಕಳು, ಮಹಿಳಾ ಮಂಡಳಿ ಸದಸ್ಯರು ಕುಣಿದು ಕುಪ್ಪಳಿಸುತ್ತಾ ಸಾಗಿ ಬಂದರು. ವಿವಿಧ ಜನಪದ ಕಲಾತಂಡಗಳ ಪ್ರದರ್ಶನ ಆಕರ್ಷಕವಾಗಿತ್ತು.

ಕವಿಗೋಷ್ಠಿಯಲ್ಲಿ ಮುದಲ್ ವಿಜಯ್, ಮಂಜು ಪಾಂಡವಪುರ, ರಘು ಬೆಟ್ಟಹಳ್ಳಿ, ಆದಿವಾಲ ಗಂಗಮ್ಮ ಮತ್ತಿತರರು ಭಾಗವಹಿಸಿದ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಎಲ್.ಎನ್. ಮುಕುಂದರಾಜ್ ವಹಿಸಿದ್ದರು.

500 ಮಂದಿ ಬೌದ್ಧ ಧರ್ಮ ಸ್ವೀಕಾರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಶ್ವ ಬುದ್ಧ ಧಮ್ಮ ಸಂಘದಿಂದ ನಗರದಲ್ಲಿ ಭಾನುವಾರ ನಡೆದ ಉತ್ತರ ಕರ್ನಾಟಕ ವಿಭಾಗ ಮಟ್ಟದ ಧಮ್ಮ ದೀಕ್ಷಾ ಸಮಾರಂಭದಲ್ಲಿ, ಸುಮಾರು 500 ಮಂದಿ ಬೌದ್ಧ ಧರ್ಮ ಸ್ವೀಕರಿಸಿದರು.

ರೈಲ್ವೆ ಆಫೀಸರ್ಸ್ ಕಾಲೊನಿಯಲ್ಲಿರುವ ಬುದ್ಧ ವಿಹಾರದಲ್ಲಿ ಬೀದರ್‌ನ ಧಮ್ಮದೀಪ ಭಂತೇಜಿ ಹಾಗೂ ಸಂಗಡಿಗರು ದೀಕ್ಷೆ ವಿಧಿ ವಿಧಾನಗಳನ್ನು ನಡೆಸಿಕೊಟ್ಟರು.

ಸಂಘದ ಪ್ರಧಾನ ಸಂಚಾಲಕ ಹಾಗೂ ನಾಗಸೇನಾ ಬುದ್ಧ ವಿಹಾರದ ಅಧ್ಯಕ್ಷ ಡಾ.ಎಂ. ವೆಂಕಟಸ್ವಾಮಿ ಮಾತನಾಡಿ, 'ಬುದ್ಧನೆಡೆಗೆ ಮರಳಿ ಮನೆಗೆ ಎಂಬ ಘೋಷ ವಾಕ್ಯದಡಿ 1956ರಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಬೌದ್ಧ ಧಮ್ಮ ಸ್ವೀಕರಿಸಿದರು. ಅಂದಿನಿಂದ ನಿರಂತರವಾಗಿ ದೇಶದಾದ್ಯಂತ ಧಮ್ಮಯಾನ ನಡೆಯುತ್ತಿದೆ' ಎಂದು ಹೇಳಿದರು.

'ಮುಂದಿನ ಅಕ್ಟೋಬರ್ 14ರಂದು ಬೆಂಗಳೂರಿನಲ್ಲಿ ಮಹಾ ಧಮ್ಮ ದೀಕ್ಷಾ ಸಮಾರಂಭ ನಡೆಯಲಿದ್ದು, ಸುಮಾರು 10 ಲಕ್ಷ ಮಂದಿ ದೀಕ್ಷೆ ಪಡೆಯಲಿದ್ದಾರೆ. ಧಮ್ಮ ಸ್ವೀಕಾರವೆಂದರೆ ಮತಾಂತರವಲ್ಲ. ನಮ್ಮ ಮನೆಗೆ ನಾವು ಮರಳುವುದು ಎಂದರ್ಥ' ಎಂದು ಅಭಿಪ್ರಾಯಪಟ್ಟರು.

ಹುಬ್ಬಳ್ಳಿಯಲ್ಲಿ ವಿಶ್ವ ಬುದ್ಧ ಧಮ್ಮ ಸಂಘದಿಂದ ಭಾನುವಾರ ನಡೆದ ಉತ್ತರ ಕರ್ನಾಟಕ ವಿಭಾಗ ಮಟ್ಟದ ಧಮ್ಮ ದೀಕ್ಷಾ ಸಮಾರಂಭದಲ್ಲಿ ದೀಕ್ಷೆ ಸ್ವೀಕರಿಸಿದ ಮಂದಿ – ಪ್ರಜಾವಾಣಿ ಚಿತ್ರ

'ಶೋಷಿತರು ಜಾತಿ ಸಂಕೋಲೆಯಿಂದ ಬಿಡುಗಡೆಯಾಗಲು ಧಮ್ಮ ಮಾರ್ಗವೇ ಪರಿಹಾರ. ಇದರಿಂದ ನವ ಬೌದ್ಧರ ಮೀಸಲಾತಿಗೆ ತೊಂದರೆಯಾಗುವುದಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇದನ್ನು ಖಚಿತಪಡಿಸಿವೆ' ಎಂದು ಹೇಳಿದರು.

ಸಮಾರಂಭ ಆರಂಭವಾಗುವ ಹೊತ್ತಿಗೆ ಜೋರಾಗಿ ಮಳೆ ಸುರಿದಿದ್ದರಿಂದ, ಆಯೋಜಕರು ಬೇಗನೆ ಕಾರ್ಯಕ್ರಮ ಮುಗಿಸಿದರು.

'ಕೇರಳ: ಇಸ್ಲಾಮಿಕ್ ರಾಜ್ಯವಾಗುವ ಅಪಾಯ'

ಮಂಗಳೂರು: 'ಕೇರಳದಲ್ಲಿ 'ಲವ್ ಜಿಹಾದ್' ನಿಯಂತ್ರಿಸಲು ಯಾವುದೇ ಕಠಿಣ ಕಾನೂನು ರೂಪಿಸಿಲ್ಲ. ಬದಲಿಗೆ ಅದನ್ನು ಬೆಂಬಲಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದೇ ಪ್ರವೃತ್ತಿ ಮುಂದುವರಿದರೆ ಮುಂದೊಂದು ದಿನ ಕೇರಳ ಇಸ್ಲಾಮಿಕ್ ರಾಜ್ಯವಾಗಿ ಬದಲಾಗುವ ಅಪಾಯವಿದೆ' ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು.

ಕಾಸರಗೋಡಿನಲ್ಲಿ ಭಾನುವಾರ ಬಿಜೆಪಿಯ ವಿಜಯ ಯಾತ್ರೆಯಲ್ಲಿ ಅವರು ಮಾತನಾಡಿದರು.

'ಕೇರಳದಲ್ಲಿ ಆಡಳಿತ ನಡೆಸುತ್ತಾ ಬಂದಿರುವ ಸಿಪಿಎಂ ಮತ್ತು ಕಾಂಗ್ರೆಸ್, ಭ್ರಷ್ಟಾಚಾರವನ್ನಷ್ಟೇ ಬಳುವಳಿಯಾಗಿ ನೀಡಿವೆ' ಎಂದು ವಾಗ್ದಾಳಿ ನಡೆಸಿದರು.

'ಕೇಂದ್ರ ಸರ್ಕಾರದಿಂದ ಬದುಕು ದುಸ್ತರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ನೀತಿಗಳಿಂದ ಜನಸಾಮಾನ್ಯರ ಬದುಕು ದುಸ್ತರಗೊಂಡಿದೆ. ಈ ಸರ್ಕಾರವು ಹಿಂದೂರಾಷ್ಟ್ರ ಪರಿಕಲ್ಪನೆ ಮುಂಚೂಣಿಗೆ ತಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಯತ್ನಿಸುತ್ತಿದೆ' ಎಂದು ಕಾಮ್ರೆಡ್ ಎಂ.ಎ.ಬೇಬಿ ಟೀಕಿಸಿದರು.

ಮಹಾನ್ ತತ್ವಜ್ಞಾನಿ ಫ್ರೆಡರಿಕ್ ಏಂಗೆಲ್ಸ್ ಅವರ ದ್ವಿಶತಮಾನ ವರ್ಷಾಚರಣೆಯ ಹಿನ್ನೆಲೆಯಲ್ಲಿ 'ಕಮ್ಯುನಿಸಂ ಎಂದರೇನು' ಕೃತಿಯ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ರೈತರು, ಕಾರ್ಮಿಕರು, ಆದಿವಾಸಿಗಳ ಮೇಲೆ ಮೋದಿ ಸರ್ಕಾರ ಗದಪ್ರಹಾರ ನಡೆಸುತ್ತಿದೆ. ಸರ್ಕಾರದ ನೀತಿಗಳು ಹಾಗೂ ಸರ್ವಾಧಿಕಾರಿ ಧೋರಣೆ ವಿರುದ್ಧ ರೈತರು ಬೀದಿಗಿಳಿದು ಹೋರಾಡುತ್ತಿದ್ದಾರೆ. ಕೇಂದ್ರವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಿತ್ತೊಗೆದು ನಿರಂಕುಶ ಪ್ರಭುತ್ವ ಹೇರುವ ಹುನ್ನಾರ ನಡೆಸುತ್ತಿದೆ. ಆರ್‌ಎಸ್‌ಎಸ್‌ನ ಹಿಂದೂ ರಾಷ್ಟ್ರ ಸಿದ್ಧಾಂತದ ವಿರುದ್ಧ ನಾವೆಲ್ಲ ಗಟ್ಟಿಯಾಗಿ ಧ್ವನಿ ಎತ್ತಬೇಕಿದೆ' ಎಂದರು.

'ಬಂಡವಾಳಶಾಹಿ ವ್ಯವಸ್ಥೆಯು ಶೋಷಣೆಗೆ ದಾರಿಮಾಡಿಕೊಡುತ್ತದೆ. ಬಂಡವಾಳಶಾಹಿಗಳಿಗೆ ಪ್ರಕೃತಿ ಬಗ್ಗೆ ಎಳ್ಳಷ್ಟೂ ಕಾಳಜಿ ಇಲ್ಲ. ಅವರು ಸಿಕ್ಕಿದ್ದನ್ನೆಲ್ಲಾ ಲೂಟಿ ಮಾಡುತ್ತಾರೆ. ಪ್ರಕೃತಿ ಉಳಿಸಿ ಬೆಳೆಸುವ ಕೆಲಸ ಆಗದಿದ್ದರೆ ಇಡೀ ಮಾನವ ಕುಲವೇ ನಿರ್ನಾಮಗೊಳ್ಳಲಿದೆ' ಎಂದು ಎಚ್ಚರಿಸಿದರು.

ಕಾಮ್ರೆಡ್ ಟಿ.ಸುರೇಂದ್ರ ರಾವ್ 'ಏಂಗೆಲ್ಸ್ ಅವರ 15 ಪುಟಗಳ ಮೂಲ ಕೃತಿಯನ್ನು ಓದುತ್ತಿದ್ದಂತೆ ರೋಮಾಂಚನ ಉಂಟಾಗಿತ್ತು. ಅವರ ಬರಹವನ್ನು ಸಾಮಾನ್ಯರಿಗೂ ಅರ್ಥವಾಗುವ ಹಾಗೆ ಬಹಳ ಸರಳವಾಗಿ ಕನ್ನಡಕ್ಕೆ ಅನುವಾದಿಸಿದ್ದೇನೆ' ಎಂದರು.

'ಫೆ.21ರಿಂದ ದೇಶದಾದ್ಯಂತ ಕೆಂಪು ಪುಸ್ತಕ ದಿನ ಆಚರಿಸಲು ಎಡಪಂಥೀಯ ಪ್ರಕಾಶಕರ ಸಂಘಟನೆ ತೀರ್ಮಾನಿಸಿದೆ. ಏಂಗೆಲ್ಸ್ ಅವರ ಕೃತಿಯೊಳಗೆ ಅಡಗಿರುವ ವಿಚಾರಗಳು ಎಲ್ಲಾ ವರ್ಗದವರಿಗೂ ತಲುಪಬೇಕು. ಹೀಗಾಗಿ ಇದನ್ನು ವಿಡಿಯೊ ಮತ್ತು ಆಡಿಯೊ ರೂಪದಲ್ಲೂ ಹೊರತರಲಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಈ ವಿಚಾರಗಳನ್ನು ಪಸರಿಸುವ ಕೆಲಸ ಮಾಡಬೇಕು' ಎಂದು ಮಾಹಿತಿ ನೀಡಿದರು.

ಸಿಪಿಎಂನ ರಾಜ್ಯ ಕಾರ್ಯದರ್ಶಿ ಯು.ಬಸವರಾಜ್, ಕೆ.ಪ್ರಕಾಶ್ ಇದ್ದರು.

ಶೌಚಾಲಯ ಸ್ವಚ್ಛಗೊಳಿಸಿದ ಗ್ರಾ.ಪಂ ಸದಸ್ಯ

ತೇರದಾಳ (ಬಾಗಲಕೋಟೆ): ಸಮೀಪದ ಸಸಾಲಟ್ಟಿ ಗ್ರಾಮ ಪಂಚಾಯಿತಿಯ ಸದಸ್ಯ ಹಾಗೂ ಸದಸ್ಯೆಯೊಬ್ಬರ ಪತಿ ಭಾನುವಾರ ಸಾರ್ವಜನಿಕ ಶೌಚಾಲಯ ಸ್ವಚ್ಛಗೊಳಿಸಿ ಗ್ರಾಮಸ್ಥರ ಮೆಚ್ಚುಗೆ ಗಳಿಸಿದರು. ವಾರ್ಡ್ ನಂ. 5ರ ಸದಸ್ಯ ದುಂಡಪ್ಪ ಸರಿಕರ ಹಾಗೂ ಅದೇ ವಾರ್ಡ್‌ನ ಸದಸ್ಯೆ ಜೇಬಾ ಕಮಾಲ ಪಠಾಣ ಅವರ ಪತಿ ಕಮಾಲಪಠಾಣ ಸ್ವಚ್ಛತಾ ಕಾರ್ಯ ಮಾಡಿದರು.

ರಾಜ್ಯ ಸಾರಿಗೆಗೆ ಶಿವಸೇನಾ ಧಮ್ಕಿ!

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹಾಗೂ ಇತರ ನಾಯಕರು ಕರ್ನಾಟಕದೊಂದಿಗೆ ಕಾಲು ಕೆರೆದು ಜಗಳ ತೆಗೆಯುತ್ತಿರುವ ನಡುವೆಯೇ, ಆ ರಾಜ್ಯದ ರಸ್ತೆ ಸಾರಿಗೆ ನಿಗಮವು ಕರ್ನಾಟಕದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಅಧಿಕೃತವಾಗಿಯೆ 'ಧಮ್ಕಿ ಪತ್ರ'ವೊಂದನ್ನು ಈಚೆಗೆ ರವಾನಿಸಿದೆ.

'ಮೀರಜ್‌ನ ಶಾಸ್ತ್ರಿ ವೃತ್ತದಲ್ಲಿ ಬಸ್‌ಗಳ ನಿಲುಗಡೆಯೇ ಇಲ್ಲ. ಅಲ್ಲಿಗೆ ಬರುವ ಕರ್ನಾಟಕದ 'ಪರ್ಮಿಟ್ ಇಲ್ಲದ' ಬಸ್‌ಗಳು ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗುತ್ತವೆ. ಇದನ್ನು ತಡೆಯದಿದ್ದರೆ ಫೆ.23ರಂದು ರಸ್ತೆ ತಡೆ ನಡೆಸಬೇಕಾಗುತ್ತದೆ' ಎಂದು ಶಿವಸೇನೆ ಸಾಂಗ್ಲಿ ಜಿಲ್ಲಾ ಘಟಕ ಅಲ್ಲಿನ ರಸ್ತೆ ಸಾರಿಗೆ ನಿಗಮಕ್ಕೆ ಪತ್ರ ಬರೆದಿದೆ. ಇದನ್ನು ಆಧರಿಸಿ ಅಲ್ಲಿಯ ಸಾರಿಗೆ ಅಧಿಕಾರಿಗಳು ವಾಯುವ್ಯ ಸಾರಿಗೆ ಚಿಕ್ಕೋಡಿ ವಿಭಾಗದ ಅಧಿಕಾರಿಗಳಿಗೆ ಫೆ. 18 ರಂದು ಖಡಕ್ ಆಗಿಯೇ ಪತ್ರ ಬರೆದಿದ್ದಾರೆ. ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಕರ್ನಾಟಕದ ಸಾರಿಗೆ ನಿಗಮದಲ್ಲಿ 'ಪರ್ಮಿಟ್ ಇಲ್ಲದ' ಬಸ್‌ಗಳು ಇರಲು ಸಾಧ್ಯವೇ ಇಲ್ಲ. ಅಲ್ಲದೇ ಒಂದು ರಾಜ್ಯದ ಅಧಿಕಾರಿಗಳು ಮತ್ತೊಂದು ರಾಜ್ಯದ ಅಧಿಕಾರಿಗಳಿಗೆ ಈ ರೀತಿ ಪತ್ರ ಬರೆಯುವುದೂ ಅಂತರರಾಜ್ಯ ಒಪ್ಪಂದಗಳ ಉಲ್ಲಂಘನೆಯೇ ಆಗುತ್ತದೆ' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಿಯಾವಕಿ ಮಾದರಿಯ ಅಮೃತವನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ಸ್ ಸಿಟಿ ಸಮೀಪದ ಸೂರ್ಯನಗರದಲ್ಲಿರುವ ಎಡಿಫೈ ಶಾಲೆಯಲ್ಲಿ ವಿಶಿಷ್ಟ ರೀತಿಯ 'ದತ್ತ ಅಮೃತವನ' ನಿರ್ಮಾಣಕ್ಕೆ ಶನಿವಾರ ಚಾಲನೆ ನೀಡಲಾಯಿತು. ಜಪಾನ್‌ನ ಮಿಯಾವಕಿ ಮಾದರಿಯಲ್ಲಿ ಇಲ್ಲಿ ಕಡಿಮೆ ಜಾಗದಲ್ಲಿ ಗಿಡಗಳನ್ನು ಒತ್ತು ಒತ್ತಾಗಿ ಬೆಳೆಸಲಾಗುತ್ತದೆ.

ಎಡಿಫೈ ಶಾಲೆಯ ಆವರಣದಲ್ಲಿ 50 ಅಡಿ ಉದ್ದ 50 ಅಡಿ ಅಗಲದ ಜಾಗದಲ್ಲಿ ಸುಮಾರು 625 ರಷ್ಟು ಗಿಡಗಳನ್ನು ನೆಟ್ಟು ಅದಕ್ಕೆ 'ದತ್ತ ಅಮೃತ ವನ' ಎಂದು ನಾಮಕರಣ ಮಾಡಲಾಯಿತು. ಆರ್‌ಎಸ್‌ಎಸ್‌ನ ಪರಿಸರ ವಿಭಾಗ ಹಾಗೂ ಎಡಿಫೈ ಶಾಲೆಯ ಸಹಯೋಗದಲ್ಲಿ ನಿರ್ಮಾಣವಾಗುವ ಅಮೃತವನದಲ್ಲಿ ಚಿತ್ರದುರ್ಗದ ಸಂಸದ ನಾರಾಯಣ ಸ್ವಾಮಿ ಗಿಡ ನೆಟ್ಟರು.

'ಪರಿಸರ ಮಾಲಿನ್ಯ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ನಗರಪ್ರದೇಶಗಳಲ್ಲಿ ಇಂತಹ ವನಗಳನ್ನು ನಿರ್ಮಿಸುತ್ತಿರುವುದು ಪ್ರಶಂಸನೀಯ. ಇಂತಹ ವನಗಳು ಎಲ್ಲೆಡೆ ಹೆಚ್ಚು ಹೆಚ್ಚು ನಿರ್ಮಾಣವಾಗಲಿ' ಎಂದು ನಾರಾಯಣ ಸ್ವಾಮಿ ಹಾರೈಸಿದರು.

ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್, 'ಪ್ರಕೃತಿಯೇ ನಮಗೆ ದೇವರು. ಅದನ್ನು ಸಂರಕ್ಷಿಸಿದರೆ, ಅದು ನಮ್ಮನ್ನು ಸಂರಕ್ಷಿಸುತ್ತದೆ. ಆ ಹಿನ್ನೆಲೆಯಲ್ಲಿಯೇ ಪ್ರಕೃತಿಯನ್ನು ಪೂಜಿಸುವ ಪರಂಪರೆ ನಮ್ಮಲ್ಲಿ ಬೆಳೆದಿದೆ' ಎಂದು ಹೇಳಿದರು.

ಅಮೃತವನದ ಪರಿಕಲ್ಪನೆಯನ್ನು ಶಾಲೆಗೆ ಪರಿಚಯಿಸಿದ ವಿಕ್ರಮ ವಾರಪತ್ರಿಕೆಯ ಸಂಪಾದಕ ವೃಷಾಂಕ ಭಟ್, 'ಯಾವುದೇ ಶಾಲೆ, ದೇವಸ್ಥಾನ, ಸಂಘ ಸಂಸ್ಥೆಗಳು ತಮ್ಮ ಜಾಗದಲ್ಲಿ ಇಂತಹ ಅಮೃತವನಗಳನ್ನು ನಿರ್ಮಾಣ ಮಾಡಲು ಮುಂದೆ ಬಂದರೆ ಸಹಕಾರ ನೀಡಲು ಸಿದ್ಧ' ಎಂದರು.

ಸೂರ್ಯನಗರದ ಎಡಿಫೈ ಶಾಲೆಯ ಆವರಣದಲ್ಲಿ ಮಿಯಾವಕಿ ಮಾದರಿಯಲ್ಲಿ ಗಿಡಗಳನ್ನು ನೆಡಲಾಯಿತು

ಯುರೋಪ್, ಆಗ್ನೇಯ ಏಷ್ಯಾದಲ್ಲಿ ಕಂಡು ಬರುವ ಕೊಕ್ಕರೆ

ಕಾಕೋಳು ಕೆರೆಯಲ್ಲಿ ಗ್ರೇ ಹೆರಾನ್

• ಸಿ.ಎಸ್.ನಿರ್ವಾಣ ಸಿದ್ದಯ್ಯ

ಹೆಸರಘಟ್ಟ: ಯುರೋಪ್, ಆಗ್ನೇಯ ಏಷ್ಯಾ, ರಷ್ಯಾದ ಕೆಲವು ಭಾಗಗಳಲ್ಲಿ ಕಂಡು ಬರುವ ಗ್ರೇ ಹೆರಾನ್ ಕೊಕ್ಕರೆಯು ಹೋಬಳಿಯ ಕಾಕೋಳು ಕೆರೆಯಲ್ಲಿ ಕಂಡು ಬಂದಿದೆ.

ಸಾಮಾನ್ಯವಾಗಿ ಈ ಕೊಕ್ಕರೆಯು ಉದ್ದವಾದ ಕುತ್ತಿಗೆಯನ್ನು ಹೊಂದಿರುತ್ತದೆ. ಅದು ಇಂಗ್ಲಿಷ್ ಅಕ್ಷರದ 'S' ನ್ನು ಹೋಲುತ್ತದೆ. ತಂಪಾದ ಪ್ರದೇಶಗಳಲ್ಲಿ ವಾಸಿಸುವ ಈ ಕೊಕ್ಕರೆಯು ರಾತ್ರಿಯ ವೇಳೆಯಲ್ಲಿಯೂ ಸಕ್ರಿಯವಾಗಿರುತ್ತದೆ. ಸುಮಾರು 110 ಸೆ.ಮೀ. ಎತ್ತರ ಮತ್ತು 1ರಿಂದ ಎರಡು ಕೆ.ಜಿ. ತೂಕವಿರುತ್ತದೆ.

ಬಿಳಿ ಬಣ್ಣದ ಪುಕ್ಕಗಳ ಜೊತೆ ತುಸು ಬೂದಿ ಬಣ್ಣವನ್ನು ಹೊಂದಿರುವ ಇದು, ಫೆಬ್ರುವರಿಯಿಂದ ಜೂನ್‌ವರೆಗೆ ವಿಶ್ವದ ನಾನಾ ಪ್ರದೇಶಗಳಿಗೆ ವಲಸೆ ಹೋಗುತ್ತದೆ.

ಕಾಕೋಳು ಕೆರೆಯಲ್ಲಿ ವಿದೇಶಿ ಕೊಕ್ಕರೆ 'ಗ್ರೇ ಹೆರಾನ್'

'ಪ್ರಾಚೀನ ಕಾಲದಿಂದ 19ನೇ ಶತಮಾನದ ಮಧ್ಯಭಾಗದವರೆಗೂ ಈ ಕೊಕ್ಕರೆಯನ್ನು ನೋಡಿದರೆ ಅಪಶಕುನ ಎಂದು, ಬದುಕಿಗೆ ಹಾನಿಕರ ಎಂದು ಕೊಲ್ಲಲಾಗುತ್ತಿತ್ತು. ಚೀನೀ ಜಾನಪದ ಕಲೆಯಲ್ಲಿ ಈ ಕೊಕ್ಕರೆಯನ್ನು ಸಂತೋಷ ಮತ್ತು ಯೋಗಕ್ಷೇಮದ ಸಂಕೇತವಾಗಿ ಬಳಕೆ ಮಾಡುತ್ತಾರೆ. ಇದು ಮೂಗಿನಿಂದ ಸದ್ದು ಮಾಡುತ್ತದೆ' ಎನ್ನುತ್ತಾರೆ ಪಕ್ಷಿ ತಜ್ಞ ಡಾ.ಮಹೇಂದ್ರಕುಮಾರ್.

'ಆಳವಿಲ್ಲದ ನೀರಿನಲ್ಲಿ ಮೀನು, ವಿವಿಧ ಸಣ್ಣ ಕಶೇರುಕಗಳು, ಕಪ್ಪೆ, ಹಾವುಗಳನ್ನು ತಿನ್ನುತ್ತದೆ. ನೀರಿನಲ್ಲಿ ಅಲುಗಾಡದಂತೆ ಗಂಟೆಗಳ ಕಾಲ ನಿಂತು ಬೇಟೆಯಾಡುವ ವಿಶಿಷ್ಟ ಶಕ್ತಿ ಇದಕ್ಕಿದೆ. ಈ ಕೊಕ್ಕರೆಯು ರೆಕ್ಕೆ ಬಿಚ್ಚಿ ಹಾರುವಾಗ ತುಂಬಾ ಸುಂದರವಾಗಿ ಕಾಣುತ್ತದೆ' ಎಂದೂ ಅವರು ಹೇಳಿದರು.

'ವಿದೇಶಿ ಹಕ್ಕಿಗಳು ಕಾಕೋಳು ಕೆರೆಗೆ ವಲಸೆ ಬರುತ್ತವೆ. ಆದರೆ ಕಾಕೋಳು ಕೆರೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಅಧಿಕಾರಿಗಳು ಕಾಳಜಿ ತೋರುತ್ತಿಲ್ಲ. ಕೆರೆಯ ಹೂಳು ತೆಗೆದು ನೀರು ಸಂಗ್ರಹವಾಗುವಂತೆ ಮಾಡಿದರೆ ಈ ಕೆರೆ ಅನೇಕ ಜೀವ ಸಂಕುಲದ ತಾಣವಾಗುತ್ತದೆ' ಎನ್ನುತ್ತಾರೆ ಪಾಂಚಜನ್ಯ ಫೌಂಡೇಷನ್‌ನ ಮುರಳಿ.

ಐಎಂಎ ಹಗರಣದಲ್ಲಿ ನನ್ನ ಪಾತ್ರವಿಲ್ಲ: ಎಚ್‌ಡಿಕೆ

ರಾಮನಗರ: 'ಐಎಂಎ ಹಗರಣದಲ್ಲಿ ನನ್ನ ಪಾತ್ರ ಇಲ್ಲ. ಈ ಹಗರಣ ಹೊರ ಬಂದಿದ್ದೇ ನನ್ನ ಆಡಳಿತದ ಅವಧಿಯಲ್ಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಐಎಂಎ ಹಗರಣದ ಆರೋಪಿಗಳಿಂದ ಕೆಲವರು ಕುಮಾರಸ್ವಾಮಿ ಹೆಸರಿನಲ್ಲಿ ಹಣ ಪಡೆದಿದ್ದಾರೆ ಎನ್ನುವ ಆರೋಪ ಕುರಿತು ನಗರದಲ್ಲಿ ಭಾನುವಾರ ಪತ್ರಕರ್ತರಿಗೆ ಅವರು ಪ್ರತಿಕ್ರಿಯೆ ನೀಡಿದರು.

'ಒಮ್ಮೆ ಶಾಸಕ ರೋಷನ್ ಬೇಗ್ ಇಫ್ತಾರ್ ಕೂಟಕ್ಕೆ ಬರಲೇಬೇಕು ಎಂದು ನನ್ನನ್ನು ಕರೆದೊಯ್ದರು. ಅಲ್ಲಿ ಇಬ್ಬರು ಅಪರಿಚಿತರಿದ್ದರು. 'ಇವರು ಮಹಾನ್ ದಾನಿಗಳು. ಶಿಕ್ಷಣ ಸಂಸ್ಥೆಗಳಿಗೆ ಸಾಕಷ್ಟು ದಾನ ಮಾಡಿದ್ದಾರೆ' ಎಂದು ಪರಿಚಯಿಸಿದ್ದರು. ಅಲ್ಲಿ ನಾನು ಕೇವಲ ಐದು ನಿಮಿಷ ಇದ್ದೆ. ಪೊಲೀಸ್ ಅಧಿಕಾರಿಗಳೂ ನನ್ನ ಜೊತೆಯಲ್ಲಿ ಇದ್ದರು' ಎಂದು ಸ್ಪಷ್ಟನೆ ನೀಡಿದರು.

ಜೆ.ಪಿ.ನಗರದ 7ನೇ ಹಂತದಲ್ಲಿ ತೆರೆಯಲಾಗಿರುವ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ನೂತನ ಶಾಖೆ 'ಕಾವೇರಿ ಪೆಟ್ರೊ ಸರ್ವೀಸಸ್' ಬಂಕ್ ಅನ್ನು ಬಿಪಿಸಿಎಲ್‌ನ ದಕ್ಷಿಣ ವಿಭಾಗದ ಮುಖ್ಯಸ್ಥ (ರಿಟೇಲ್) ಇಂದರ್‌ಜಿತ್ ಸಿಂಗ್ ಅವರು ಕಾರಿಗೆ ಇಂಧನ ತುಂಬುವ ಮೂಲಕ ಭಾನುವಾರ ಉದ್ಘಾಟಿಸಿದರು. ರಾಜ್ಯ ಮುಖ್ಯಸ್ಥ ಸಂಜೀವ್ ಕುಮಾರ್, ಬೆಂಗಳೂರು ವಿಭಾಗದ ವ್ಯವಸ್ಥಾಪಕ ಉಮೇಶ್ ಕುಲಕರ್ಣಿ, ಮಾರಾಟ ವ್ಯವಸ್ಥಾಪಕ ಎಸ್.ಶಬರಿನಾಥ್ ಇದ್ದರು.

ಯುದ್ಧದ ಸಾಹಸಿ ಆರ್.ಆರ್.ಸೂದ್‌ಗೆ ಸನ್ಮಾನ ● ದಿ. ಜೆಪಿಎ ನೊರೊನ್ಹಾ ಸ್ಮರಣೆ

1971ರ ಸಮರ ವೀರರಿಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದ ವಿರುದ್ಧ 1971ರಲ್ಲಿ ನಡೆದಿದ್ದ ಯುದ್ಧದಲ್ಲಿ ಸಾಹಸ ಮೆರೆದಿದ್ದ ಯೋಧರಿಗೆ ಮದ್ರಾಸ್ ಎಂಜಿನಿಯರ್ ಗ್ರೂಪ್ ಆ್ಯಂಡ್ ಸೆಂಟರ್‌ನ (ಎಂಇಜಿ) ವತಿಯಿಂದ ನಗರದಲ್ಲಿ ಭಾನುವಾರ ಗೌರವ ಸಲ್ಲಿಸಲಾಯಿತು.

ಈ ಯುದ್ಧದಲ್ಲಿ ಭಾರತ ಗೆದ್ದಿತ್ತು. ಇದರ ಸ್ವರ್ಣಿಮ ವಿಜಯ ವರ್ಷಾಚರಣೆಯ (50ನೇ ವರ್ಷಾಚರಣೆ) ಅಂಗವಾಗಿ ನವದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬೆಳಗಿಸಿದ್ದ 'ವಿಜಯ ಜ್ಯೋತಿ' ಶನಿವಾರ ಉದ್ಯಾನ ನಗರಿ ತಲುಪಿತ್ತು.

ಈ ಯುದ್ಧದ ಕಣ್ಮಣಿಯಾಗಿದ್ದ ಹಾಗೂ ರಿಯರ್ ಅಡ್ಮಿರಲ್ ಆಗಿ ನಿವೃತ್ತರಾಗಿರುವ ಆರ್.ಆರ್.ಸೂದ್ ಅವರ ನಿವಾಸಕ್ಕೆ ಎಂಇಜಿ ಯೋಧರ ತಂಡವು ವಿಜಯ ಜ್ಯೋತಿಯನ್ನು ಭಾನುವಾರ ಕೊಂಡೊಯ್ಯಿತು. ಸೂದ್ ಅವರು ಈ ಯುದ್ಧದಲ್ಲಿ ಅರಬ್ಬೀ-ಸಮುದ್ರದ ಆ್ಯಂಟಿ ಸಬ್‌ಮರೀನ್ ದಾಳಿ ಪಡೆಯ ನೇತೃತ್ವ ವಹಿಸಿದ್ದರು. ವಿರೋಧಿಗಳ ಸಬ್‌ಮರೀನ್ ಮೇಲೆ ಭೀಕರ ದಾಳಿ ನಡೆಸಿದ್ದರು. ಭಾರತದ ಹಡಗುಗಳ ಮೇಲೆ ದಾಳಿ ಮಾಡದಂತೆ ಎದುರಾಳಿಗಳ ಸದ್ದಡಗಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಯುದ್ಧವೀರ ಸೂದ್ ಅವರನ್ನು ಶಾಂತಿನಗರ ಕ್ಷೇತ್ರದ ಶಾಸಕ ಎನ್.ಎ. ಹ್ಯಾರಿಸ್ ಅವರು ಸನ್ಮಾನಿಸಿದರು.

'ವಿಜಯ ಜ್ಯೋತಿ'ಯೊಂದಿಗೆ ಆರ್.ಆರ್.ಸೂದ್, ಟಿಬಿಎಂ ನೊರೊನ್ಹಾ ಹಾಗೂ ಎಂಇಜಿ ಅಧಿಕಾರಿಗಳು

ನಂತರ ಈ ಜ್ಯೋತಿ ಯಾತ್ರೆಯು ದಿವಂಗತ ಜೆಪಿಎ ನೊರೊನ್ಹಾ ಅವರ ನಿವಾಸದತ್ತ ತೆರಳಿತು. ನೊರೊನ್ಹಾ ಅವರು 1971ರ ಯುದ್ಧದಲ್ಲಿ ಭಾರತೀಯ ನೌಕಾ ಪಡೆಯ 'ಐಎನ್‌ಎಸ್ ಪನ್ವೇಲ್' ಯುದ್ಧ ನೌಕೆಯ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ್ದರು. ಅವರ ನೇತೃತ್ವದಲ್ಲಿ ಭಾರತೀಯ ಹಡಗು ಮೋಂಗ್ಲಾ ಮತ್ತು ಖುಲ್ನ ಪ್ರದೇಶಗಳಲ್ಲಿ 1971ರ ಡಿ.8ರಿಂದ 11ರವರೆಗೆ ಸತತವಾಗಿ ದಾಳಿ ನಡೆಸಿತ್ತು. ಸತತವಾಗಿ ನಡೆಯುತ್ತಿದ್ದ ವಾಯು ದಾಳಿಯನ್ನೂ ಲೆಕ್ಕಿಸದೆ ಹಡಗನ್ನು ಮುನ್ನಡೆಸಿದ್ದರಲ್ಲದೇ, ಎದುರಾಳಿಯ ಕರಾವಳಿ ರಕ್ಷಣಾ ಪಡೆಯ ದಾಳಿಯನ್ನು ಹಿಮ್ಮೆಟ್ಟಿಸಿದ್ದರು. ನಿರ್ಬಂಧಿತ ಪ್ರದೇಶಗಳಿಗೂ ಹಡಗನ್ನು ನುಗ್ಗಿಸಿ ವಿರೋಧಿಗಳಿಗೆ ಭಾರಿ ಹಾನಿಯನ್ನು ಉಂಟುಮಾಡುವಲ್ಲಿ ನೊರೊನ್ಹಾ ಯಶಸ್ವಿಯಾಗಿದ್ದರು. ರವಿ ವಿಕ್ಟರ್ ಅವರು ನೊರೊನ್ಹಾ ಅವರ ಪತ್ನಿ ಟಿಬಿಎಂ ನೊರೊನ್ಹಾ ಅವರಿಗೆ ವಿಜಯ ಜ್ಯೋತಿಯನ್ನು ಹಸ್ತಾಂತರಿಸುವ ಮೂಲಕ ಗೌರವಿಸಿದರು.

ಎಂಇಜಿ ಯೋಧರು ಈ ಇಬ್ಬರೂ ಯುದ್ಧ ಸಾಹಸಿಗಳ ಮನೆಗಳಿಂದ ಹಿಡಿ ಮಣ್ಣು ಸಂಗ್ರಹಿಸಿದರು. ಇದನ್ನು ನವದೆಹಲಿಯಲ್ಲಿ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಗಿಡ ನೆಡಲು ಬಳಸಲಾಗುತ್ತದೆ.

'ವಿಜಯ ಜ್ಯೋತಿ' ಕಾರ್ಯಕ್ರಮದ ಅಂಗವಾಗಿ ಎಂಇಜಿ ಸಂಸ್ಥೆಯು ಮಕ್ಕಳಿಗೆ ಚಿತ್ರ ಬಿಡಿಸುವ ಸ್ಪರ್ಧೆಯನ್ನೂ ಆಯೋಜಿಸಿತ್ತು. ಇದರಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮುಖ್ಯಾಂಶಗಳು

- ಸಬ್‌ಮರೀನ್ ನಿಗ್ರಹ ದಾಳಿ ಪಡೆಯ ನೇತೃತ್ವ ವಹಿಸಿದ್ದ ಆರ್.ಆರ್.ಸೂದ್
- 'ಐಎನ್‌ಎಸ್ ಪನ್ವೇಲ್'ನ ಕಮಾಂಡರ್ ಆಗಿದ್ದ ದಿ.ಜೆಪಿಎ ನೊರೊನ್ಹಾ
- 'ವಿಜಯ ಜ್ಯೋತಿ' ಸ್ವೀಕರಿಸಿದ ದಿ.ಜೆಪಿಎ ನೊರೊನ್ಹಾ ಪತ್ನಿ

ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆಯಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ತರಳಬಾಳು ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಆದಿಕವಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇಸ್ರೋ ಮಾಜಿ ವಿಜ್ಞಾನಿ ಕೆ.ಹರೀಶ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್.ವೇಣುಗೋಪಾಲ್, ಧರ್ಮಜಾಗರಣ ಪ್ರಾಂತ ಸಹಸಂಯೋಜಕ ಡಾ.ಹನುಮಂತ ಮಳಲಿ, ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ರಘುನಂದನ್ ಭಟ್ ಇದ್ದಾರೆ.

'ಕನ್ನಡ–ಸಂಸ್ಕೃತ ತಾಯಿ ಮಗಳಂತೆ'

ಪ್ರಜಾವಾಣಿ ವಾರ್ತೆ

ಸಿರಿಗೆರೆ: 'ಕನ್ನಡ ಮತ್ತು ಸಂಸ್ಕೃತ ಭಾಷೆಗಳು ತಾಯಿ–ಮಗಳಂತೆ. ಆದರೆ, ಇತ್ತೀಚೆಗೆ ಇವು ಅತ್ತೆ–ಸೊಸೆ ಸಂಬಂಧದ ರೀತಿ ಬದಲಾದಂತೆ ಕಾಣುತ್ತಿವೆ' ಎಂದು ತರಳಬಾಳು ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಸಿರಿಗೆರೆ ತರಳಬಾಳು ಶಿಕ್ಷಣ ಸಂಸ್ಥೆಯಲ್ಲಿ ಭಾನುವಾರ ಸಮಾರಂಭದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಆದಿಕವಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು. 'ಪಾಶ್ಚಿಮಾತ್ಯ ಶಿಕ್ಷಣ ಭಾಷೆಗಳ ಮೇಲೂ ಪ್ರಭಾವ ಬೀರಿದೆ' ಎಂದರು.

ಪ್ರಶಸ್ತಿಯೊಂದಿಗೆ ನೀಡಿದ ₹ 1 ಲಕ್ಷ ನಗದನ್ನು ಸಿರಿಗೆರೆಯ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿಗಳನ್ನು ಪುರಸ್ಕರಿಸಲು ದತ್ತಿ ನಿಧಿ ಸ್ಥಾಪಿಸಲು ಮೀಸಲಿಡಲಾಗುವುದು ಎಂದು ಪ್ರಕಟಿಸಿದರು.

ವಾಗ್ದೇವಿ ಪ್ರಶಸ್ತಿ ಸ್ವೀಕರಿಸಿದ ಸಂಸ್ಕೃತ ವಿದ್ವಾಂಸ ಡಾ.ಶಂಕರ ರಾಜಾರಾಮನ್, 'ದೇಶ ಭಾಷೆಗಳನ್ನು ಸಂಸ್ಕೃತ ಕೀಳಾಗಿ ಕಂಡಿತು ಎಂಬ ತಪ್ಪು ಅಭಿಪ್ರಾಯ ಸಮಾಜದಲ್ಲಿ ಬೇರೂರಿದೆ. ಪಾಶ್ಚಿಮಾತ್ಯರು ಇಂತಹ ಅಪಪ್ರಚಾರ ಮಾಡಿದ್ದಾರೆ' ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಕಳವಳ

'ಕನ್ನಡದಲ್ಲಿ ಕ್ಷೀಣಿಸಿದ ವಿಮರ್ಶೆಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡದಲ್ಲಿ ಇಂದು ವಿಮರ್ಶೆಗಳು ತುಂಬಾ ಕ್ಷೀಣಿಸಿವೆ. ವಿಮರ್ಶೆ ಲೇಖಕನನ್ನು ಕೈಹಿಡಿದು ನಡೆಸುವ ದೀವಿಗೆ. ಆ ದೀವಿಗೆ ಇಂದು ಕಣ್ಮುಚ್ಚಿ ಕುಳಿತಿದೆ ಎಂಬ ಸಂಗತಿ ಬಹಳ ಕಾಡುತ್ತಿದೆ' ಎಂದು ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಬೇಸರ ವ್ಯಕ್ತಪಡಿಸಿದರು.

ಬಿಎಂಶ್ರೀ ಪ್ರತಿಷ್ಠಾನವು ಭಾನುವಾರ ಹಮ್ಮಿಕೊಂಡಿದ್ದ 'ಪ್ರೊ.ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ' ಹಾಗೂ 'ವಿ.ನಾಗರಾಜ ರಾವ್ ಸಮೂಹ ಮಾಧ್ಯಮ ಪ್ರಶಸ್ತಿ' ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈಗ ಬಹಳಷ್ಟು ಯುವಕರು ಬರೆಯುತ್ತಿದ್ದಾರೆ. ವಿಮರ್ಶೆಯ ವಿಚಾರದಲ್ಲಿ ಹಿರಿಯರು ಹೆಚ್ಚಾಗಿ ಮಾರ್ಗದರ್ಶನ ನೀಡುವ ಅಗತ್ಯವಿದೆ. ಎಡಪಂಥೀಯ ಚಿಂತನೆಗಳನ್ನು ಕಾಡಿದಂತಹ ಲೇಖಕ ಟಾಲ್‌ಸ್ಟಾಯ್. ಅನುವಾದದ ಮೂಲಕ ಅವರನ್ನು ಕನ್ನಡಕ್ಕೆ ಪರಿಚಯಿಸುವುದು ಮಹತ್ವದ ಕೆಲಸ' ಎಂದರು.

ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ, 'ವಿಮರ್ಶೆ ಎನ್ನುವ ಪ್ರಕಾರ ಕಣ್ಮರೆಯಾಗುತ್ತಿರುವುದು ವಿಷಾದನೀಯ. 'ನಮ್ಮ ಸಂಸ್ಕೃತಿ, ನಮ್ಮ ಹೆಮ್ಮೆ' ಎಂದು ಎಷ್ಟೇ ಹೆಗ್ಗಳಿಕೆ ಹೊಂದಿದ್ದರೂ ಈಗಿನ ಕಾಲದಲ್ಲಿ ಸಂವೇದನೆ ಇಲ್ಲದ, ಸೂಕ್ಷ್ಮತೆ ಬೇಕಾಗಿಲ್ಲದ, ಪ್ರೀತಿಗಿಂತಲೂ ದ್ವೇಷ, ಆಕ್ರೋಶವೇ ಮುಖ್ಯವಾಗಿರುವ ಸಾಹಿತ್ಯಗಳು ರಚನೆಯಾಗುತ್ತಿವೆ. ಕೇವಲ ರಾಷ್ಟ್ರ ಧೋರಣೆ ಹೊಂದಿರುವ ರಾಷ್ಟ್ರದಲ್ಲಿ ವಿಮರ್ಶಕರನ್ನೂ ರಾಷ್ಟ್ರದ್ರೋಹಿಗಳೆಂದು ಪರಿಗಣಿಸುವ ದಿನಗಳು ದೂರವಿಲ್ಲ. ಎಲ್ಲೆಲ್ಲೂ ರಾಷ್ಟ್ರಭಕ್ತಿ, ದೇಶದ್ರೋಹಿ, ಪ್ರಗತಿ ವಿರೋಧಿ ಎಂಬ ಪದಗಳೇ ಕೇಳುತ್ತಿವೆ' ಎಂದು ಟೀಕಿಸಿದರು.

ಪತ್ರಕರ್ತ ಡಿ.ವಿ.ರಾಜಶೇಖರ್, 'ಹಿಂದಿನ ಹಾಗೂ ಇಂದಿನ ಮಾಧ್ಯಮಗಳಲ್ಲಿ ಹಲವು ವ್ಯತ್ಯಾಸಗಳಿವೆ. ಮೇಲ್ನೋಟಕ್ಕೆ ಇದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ, ತಪ್ಪು ನಡೆಯುತ್ತಿರುವುದೆಲ್ಲಿ, ಎಲ್ಲಿ ಎಡವುತ್ತಿದ್ದಾರೆ ಎಂದು ಹೇಳುವವರು ಮರೆಯಾಗಿದ್ದಾರೆ' ಎಂದು ಹೇಳಿದರು.

ಪ್ರಶಸ್ತಿ ಪ್ರದಾನ: ಬಿ.ಎಂ.ಶ್ರೀ. ಪ್ರತಿಷ್ಠಾನದ ವತಿಯಿಂದ ಓ.ಎಲ್. ನಾಗಭೂಷಣ ಸ್ವಾಮಿ ಅವರಿಗೆ 'ಪ್ರೊ. ಎಲ್.ಎಸ್.ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ' ಹಾಗೂ ಡಿ.ವಿ.ರಾಜಶೇಖರ್ ಅವರಿಗೆ 'ವಿ.ನಾಗರಾಜ ರಾವ್ ಸಮೂಹ ಮಾಧ್ಯಮ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಎರಡೂ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಮತ್ತು ಸ್ಮರಣಿಕೆಗಳನ್ನು ಒಳಗೊಂಡಿವೆ.

ಬಿಎಂಶ್ರೀ ಪ್ರತಿಷ್ಠಾನದ ವತಿಯಿಂದ (ಕುಳಿತವರು ಎಡದಿಂದ ಮೊದಲನೆಯವರು) ಓ.ಎಲ್.ನಾಗಭೂಷಣ ಸ್ವಾಮಿ ಅವರಿಗೆ 'ಪ್ರೊ.ಎಲ್.ಎಸ್.ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ' ಹಾಗೂ ಡಿ.ವಿ.ರಾಜಶೇಖರ್ ಅವರಿಗೆ 'ವಿ.ನಾಗರಾಜ ರಾವ್ ಸಮೂಹ ಮಾಧ್ಯಮ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಎಲ್.ಹನುಮಂತಯ್ಯ, ಹಿರಿಯ ಪತ್ರಕರ್ತ ಬಿ.ಎಂ.ಹನೀಫ್, ಲೇಖಕ ದಂಡಪ್ಪ, ಪ್ರತಿಷ್ಠಾನದ ಅಧ್ಯಕ್ಷ ಆರ್.ಲಕ್ಷ್ಮೀನಾರಾಯಣ ಹಾಗೂ ಇತರರು ಇದ್ದರು.

'ಅಭ್ಯರ್ಥಿಯಾಗಲು ಸಿದ್ಧ'

ರಾಮದುರ್ಗ: 'ಬೆಳಗಾವಿ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಅಭ್ಯರ್ಥಿಯಾಗಬೇಕು ಎಂದು ಹೈಕಮಾಂಡ್ ಸೂಚಿಸಿದರೆ ಅಭ್ಯರ್ಥಿಯಾಗಲು ತಾವು ಸಿದ್ಧ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

ಭಾನುವಾರ ಮಾತನಾಡಿದ ಅವರು, 'ತಮ್ಮದು ಸೇರಿದಂತೆ ಹಲವರ ಹೆಸರುಗಳನ್ನು ಹೈಕಮಾಂಡ್‌ಗೆ ಕಳುಹಿಸಲಾಗಿದೆ. ಹೈಕಮಾಂಡ್ ಸೂಚಿಸಿದರೆ ಅಭ್ಯರ್ಥಿಯಾಗುವೆ, ಇಲ್ಲವೇ ಅಭ್ಯರ್ಥಿ ಗೆಲುವಿಗೆ ಶ್ರಮಿಸುವೆ ಎಂದರು.

26ಕ್ಕೆ ಟ್ರಕ್‌ಗಳ ಕಾರ್ಯಾಚರಣೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಕೆಲವು ಅಂಶಗಳನ್ನು ಮರುಪರಿಶೀಲಿಸಲು ಒತ್ತಾಯಿಸಿ ಅಖಿಲ ಭಾರತ ವರ್ತಕರ ಸಂಘಟನೆ (ಸಿಎಐಟಿ) ಇದೇ 26ಕ್ಕೆ ಕರೆ ನೀಡಿರುವ ಭಾರತ್ ಬಂದ್‌ಗೆ ಅಖಿಲ ಭಾರತ ಸಾರಿಗೆ ಕಲ್ಯಾಣ ಸಂಘಟನೆ (ಎಐಟಿಡಬ್ಲ್ಯುಎ) ಬೆಂಬಲ ನೀಡಿದೆ.

ಆ ದಿನ ರಸ್ತೆ ತಡೆ ಮಾಡಲಿದ್ದೇವೆ' ಎಂದು ಎಐಟಿಡಬ್ಲ್ಯುಎ ರಾಷ್ಟ್ರೀಯ ಅಧ್ಯಕ್ಷ ಮಹೇಂದ್ರ ಆರ್ಯ ತಿಳಿಸಿದ್ದಾರೆ.

'ತೈಲ ದರ ಏರಿಕೆ ಹಾಗೂ ಕೇಂದ್ರ ಸರ್ಕಾರ ಜಾರಿ ಮಾಡಿರುವ ಹೊಸ ಇ-ವೇ ಬಿಲ್ ಕಾನೂನುಗಳ ವಿರುದ್ಧ ಎಐಟಿಡಬ್ಲ್ಯುಎ ಕರೆ ನೀಡಿರುವ ಮುಷ್ಕರಕ್ಕೆ ಎಲ್ಲ ರಾಜ್ಯಗಳ ಸಾರಿಗೆ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ' ಎಂದರು.

'ಪ್ರತಿಭಟನೆಯ ಭಾಗವಾಗಿ ಅಂದು ಎಲ್ಲ ಬುಕ್ಕಿಂಗ್ ತಿರಸ್ಕರಿಸಲಾಗುವುದು. ಇ-ಬಿಲ್ ಕೇಂದ್ರಿತ ಸರಕು ಸಾಗಾಣಿಕೆಯನ್ನು ಸ್ಥಗಿಗೊಳಿಸಲಾಗುವುದು. ಬೆಳಿಗ್ಗೆ 6 ರಿಂದ ರಾತ್ರಿ 8 ಗಂಟೆಯವರೆಗೆ ಎಲ್ಲ ಸಂಘಟನೆಗಳಿಂದ ಟ್ರಕ್‌ಗಳ ಕಾರ್ಯಾಚರಣೆ ಇರುವುದಿಲ್ಲ. ಎಲ್ಲ ಸಾರಿಗೆ ಗೋದಾಮುಗಳ ಬಳಿ ಪ್ರತಿಭಟನಾ ಫಲಕಗಳನ್ನು ಪ್ರದರ್ಶಿಸಲಾಗುವುದು. ಹಾಗಾಗಿ, ಫೆ.26 ರಂದು ಯಾವುದೇ ಸರಕು ಸಾಗಾಣಿಕೆ ಬುಕ್ಕಿಂಗ್ ಮಾಡದಂತೆ ಅಥವಾ ಲೋಡ್ ಮಾಡದಂತೆ ಗ್ರಾಹಕರಿಗೆ ಮನವಿ ಮಾಡಲಾಗುವುದು' ಎಂದು ವಿವರಿಸಿದರು. 'ಸರಕುಸಾಗಾಣಿಕೆದಾರರು ಇತ್ತೀಚೆಗೆ ತಿದ್ದುಪಡಿಯಾಗಿರುವ ಜಿಎಸ್‌ಟಿ ಕಾನೂನುಗಳನ್ನು ಪಾಲಿಸುತ್ತಿದ್ದಾರೆ. ಅಂತರ ರಾಜ್ಯ ಮತ್ತು ರಾಜ್ಯದೊಳಗೆ ಸರಕು ಸಾಗಾಣಿಕೆಗೆ ಇರುವ ಇ-ವೇ ಬಿಲ್‌ಗಳ ಮಾನ್ಯತೆಯನ್ನು ದಿನಕ್ಕೆ 200 ಕಿ.ಮೀಗಳಿಂದ 100 ಕಿ.ಮೀಗಳಿಗೆ ಇಳಿಸಲಾಗಿದೆ. ಇದು ಸಾರಿಗೆ ವಲಯದ ಮೇಲೆ ಭಾರಿ ಪರಿಣಾಮ ಬೀರಲಿದೆ' ಎಂದು ಆತಂಕ ವ್ಯಕ್ತಪಡಿಸಿದರು. 'ಇ-ವೇ ಬಿಲ್ ನಿಯಮಗಳನ್ನು ಸರ್ಕಾರ ರದ್ದುಗೊಳಿಸಬೇಕು. ಫಾಸ್ಟ್ಯಾಗ್ ಸಂಪರ್ಕವನ್ನು ಇ-ಇನ್‌ವೈಸ್‌ನೊಂದಿಗೆ ಜೋಡಿಸಬೇಕು. ಈ ಮೂಲಕ ಸರ್ಕಾರ ವಾಹನಗಳ ಚಲನೆಯ ಮೇಲೆ ನಿಗಾ ಇಡಬಹುದು. ಡೀಸೆಲ್ ದರ ಇಳಿಸುವುದು ಹಾಗೂ ದೇಶವ್ಯಾಪಿ ಏಕರೂಪದ ಡೀಸೆಲ್ ದರ ನಿಗದಿಪಡಿಸಬೇಕು' ಎಂದೂ ಮಹೇಂದ್ರ ಆರ್ಯ ಆಗ್ರಹಿಸಿದರು.

ಖೋಟಾ ನೋಟು: ಆರೋಪಿಗಳಿಗೆ ಆರು ವರ್ಷ ಶಿಕ್ಷೆ

ಬೆಂಗಳೂರು: ಖೋಟಾ ನೋಟು ಚಲಾವಣೆ ಪ್ರಕರಣದ ಮೂವರು ಆರೋಪಿಗಳಿಗೆ ನಗರದ ಎನ್‌ಐಎ ವಿಶೇಷ ನ್ಯಾಯಾಲಯ, ಆರು ವರ್ಷಗಳ ಜೈಲು ಶಿಕ್ಷೆ ಹಾಗೂ ₹ 15 ಸಾವಿರ ದಂಡ ವಿಧಿಸಿ ಆದೇಶ ಹೊರಡಿಸಿದೆ.

2018ರಲ್ಲಿ ಬೆಂಗಳೂರಿನ ಆಲೂರು ಬಳಿಯ ಬಿಡಿಎ ಬಡಾವಣೆಯ 13ನೇ ಹಂತದ ಮನೆಯೊಂದರ ಮೇಲೆ ದಾಳಿ ಮಾಡಿದ್ದ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ದೆಹಲಿ ವಿಭಾಗದ ಇನ್‌ಸ್ಪೆಕ್ಟರ್ ವಿನೋದ್ ಕದಮ್ ನೇತೃತ್ವದ ತಂಡ, ಆರೋಪಿಗಳಾದ ಗಂಗಾಧರ್, ರಾಮಪ್ಪ ಕೋಲ್ಕರ್ ಮತ್ತು ಸಬೀರುದ್ದೀನ್ ಎಂಬುವರನ್ನು ಬಂಧಿಸಿತ್ತು. ಆರೋಪಿಗಳಿಂದ ಎರಡು ಸಾವಿರ ಮುಖಬೆಲೆ ₹ 6.84 ಲಕ್ಷದ ಖೋಟಾ ನೋಟುಗಳನ್ನು ಜಪ್ತಿ ಮಾಡಿತ್ತು. ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖೆ ನಡೆಸಿದ್ದ ಎನ್‌ಐಎ ಅಧಿಕಾರಿಗಳು, ಬಾಂಗ್ಲಾದೇಶದಿಂದ ಖೋಟಾ ನೋಟು ತಂದು ರಾಜ್ಯದಲ್ಲಿ ಚಲಾವಣೆ ಮಾಡುತ್ತಿದ್ದ ಆರೋಪಿಗಳ ಕೃತ್ಯವನ್ನು ಬಯಲು ಮಾಡಿದ್ದರು. ಅದನ್ನೇ ಉಲ್ಲೇಖಿಸಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

'ಸಮಾವೇಶಕ್ಕೆ ಮಳೆಯೇ ಶುಭ ಶಕುನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಸಮಾವೇಶ ನಡೆಯುತ್ತಿದ್ದ ವೇಳೆ 15 ನಿಮಿಷಗಳವರೆಗೆ ಜೋರು ಮಳೆ ಸುರಿಯಿತು. ಮಳೆಗೆ ಅಳುಕದ ಜನ, ಸಮಾವೇಶದ ಸ್ಥಳದಲ್ಲೇ ಕುಳಿತು 'ಜೈ ಪಂಚಮಸಾಲಿ' ಘೋಷಣೆ ಕೂಗಿದರು.

ಕೆಲವರು ಕುರ್ಚಿಗಳನ್ನೇ ತಲೆ ಮೇಲೆ ಇಟ್ಟುಕೊಂಡು ರಕ್ಷಣೆ ಪಡೆದರು. ಆದರೆ, ಸ್ಥಳ ಬಿಟ್ಟು ಕದಲಲಿಲ್ಲ. ಮಳೆ ಕಡಿಮೆಯಾಗಿ ಬಿಸಿಲು ಕಾಣಿಸಿಕೊಂಡ ಬಳಿಕ ಸಮಾವೇಶ ಮತ್ತಷ್ಟು ಚುರುಕುಗೊಂಡಿತು.

ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತನಾಡಿದ ಬಸನಗೌಡ ಯತ್ನಾಳ, 'ನಮ್ಮ ಹೋರಾಟ ನಡೆಯುತ್ತಿದ್ದ ವೇಳೆಯೇ ಮಳೆಯಾಗಿದ್ದು, ಇದು ಶುಭ ಶಕುನ. ಎಲ್ಲರೂ ಒಗ್ಗಟ್ಟಾಗಿ ಮತ್ತಷ್ಟು ಚುರುಕಿನಿಂದ 2ಎ ಮೀಸಲಾತಿ ಸಿಗುವವರೆಗೂ ಹೋರಾಡೋಣ' ಎಂದರು.

ದಿಢೀರ್ ಎದುರಾಯ್ತು ಪೊಲೀಸರ ಕೊರತೆ

ವಿಧಾನಸೌಧದತ್ತ ಪಾದಯಾತ್ರೆ ಹೊರಟಿದ್ದರಿಂದ ರಸ್ತೆಯುದ್ದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಬಸವೇಶ್ವರನಗರ ವೃತ್ತದ ಬಳಿಯೇ ಹೆಚ್ಚಿನ ಪೊಲೀಸರು ಇದ್ದರು. ಅಲ್ಲಿಯೇ ಹೋರಾಟಗಾರರನ್ನು ತಡೆಯಲು ಪೊಲೀಸರು ಸಜ್ಜಾಗಿದ್ದರು. ಆದರೆ, ಮಾರ್ಗ ಬದಲಾವಣೆ ಮಾಡಿ ಪಾದಯಾತ್ರೆಯನ್ನು ಸ್ವಾತಂತ್ರ್ಯ ಉದ್ಯಾನಕ್ಕೆ ಕಳುಹಿಸಲಾಯಿತು. ದಿಢೀರ್ ಆದ ಈ ಬದಲಾವಣೆಯಿಂದಾಗಿ ಉದ್ಯಾನದಲ್ಲಿ ಪೊಲೀಸ್ ಸಿಬ್ಬಂದಿ ಕೊರತೆ ಎದುರಾಯಿತು.

ಪಾದಯಾತ್ರೆಯಿಂದಾಗಿ ಹಲವೆಡೆ ದಟ್ಟಣೆಯೂ ಕಂಡುಬಂತು. ಬಸವೇಶ್ವರ ವೃತ್ತ, ಕಾವೇರಿ ಜಂಕ್ಷನ್ ಬಳಿ ಇದ್ದ ಪೊಲೀಸರು ವಾಹನಗಳಲ್ಲಿ ಉದ್ಯಾನಕ್ಕೆ ನಿಗದಿತ ಸಮಯಕ್ಕೆ ಬರಲು ಸಾಧ್ಯವಾಗಲಿಲ್ಲ. ಸ್ಥಳದಲ್ಲಿದ್ದ ಹಿರಿಯ ಅಧಿಕಾರಿಗಳೇ ಲಭ್ಯವಿದ್ದ ಸಿಬ್ಬಂದಿ ಜೊತೆಯಲ್ಲೇ ಪರಿಸ್ಥಿತಿ ನಿಭಾಯಿಸಿದರು. ಹೋರಾಟಗಾರರು ಉದ್ಯಾನಕ್ಕೆ ಬಂದು ಸಭೆ ನಡೆಸುತ್ತಿದ್ದ ವೇಳೆಯಲ್ಲೇ ಮತ್ತಷ್ಟು ಪೊಲೀಸರು ಸ್ಥಳಕ್ಕೆ ಬಂದು ಭದ್ರತೆ ಕೈಗೊಂಡರು.

'ನ್ಯಾಯ ಎಲ್ಲಿದೆ?' ಹಾಡು, ವೀರ ರಾಣಿ ಚನ್ನಮ್ಮ ಸಂಭಾಷಣೆ

ಪಾದಯಾತ್ರೆ ವೇಳೆ 'ಜೈ ಪಂಚಮಸಾಲಿ' ಘೋಷಣೆ ಜೋರಾಗಿತ್ತು. ಅದರ ಜೊತೆಯೇ 'ನ್ಯಾಯ ಎಲ್ಲಿದೆ?' ಹಾಡು ಹಾಗೂ ವೀರರಾಣಿ ಚನ್ನಮ್ಮ ಅವರ ಸಂಭಾಷಣೆಗಳು ಗಮನಸೆಳೆದವು. ಇದು ಹೋರಾಟಗಾರರನ್ನು ಹುರುಪುಗೊಳಿಸಿತು. ಪಾದಯಾತ್ರೆಯಲ್ಲಿ ಸಾಗಿದ ವಾಹನದಲ್ಲೇ ಧ್ವನಿವರ್ಧಕ ಬಳಸಲಾಯಿತು. ಪಂಚಮಸಾಲಿ ಧ್ವಜಗಳು ಪಾದಯಾತ್ರೆಯ ಉದ್ದಕ್ಕೂ ರಾರಾಜಿಸಿದವು.

ಯುವಕನ ಬೆತ್ತಲೆ ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವೈವಾಹಿಕ ಜಾಲತಾಣದಲ್ಲಿ ಪರಿಚಯವಾದ ಯುವಕನ ಜೊತೆ ಮದುವೆಯಾಗುವುದಾಗಿ ಹೇಳಿ ಸಲುಗೆ ಬೆಳೆಸಿದ್ದ ಯುವತಿಯೊಬ್ಬಳು, ಆತನ ಬೆತ್ತಲೆ ವಿಡಿಯೊ ಚಿತ್ರೀಕರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದು, ಈ ಸಂಬಂಧ ಹುಳಿಮಾವು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೃತ್ಯಸಂಬಂಧ ಹುಳಿಮಾವು ನಿವಾಸಿಯೊಬ್ಬರು ದೂರು ನೀಡಿದ್ದಾರೆ. ಆರೋಪಿ ಯುವತಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕ, ವೈವಾಹಿಕ ಜಾಲತಾಣವೊಂದರಲ್ಲಿ ಖಾತೆ ತೆರೆದು ಫೋಟೊ ಸಹಿತ ಸ್ವ-ವಿವರ ನಮೂದಿಸಿದ್ದರು. ಮದುವೆಯಾಗುವುದಾಗಿ ಕೋರಿಕೆ ಕಳುಹಿಸಿದ್ದ ಯುವತಿ, ಮೊಬೈಲ್ ನಂಬರ್ ಪಡೆದು ಸಲುಗೆಯಿಂದ ಮಾತನಾಡಲಾರಂಭಿಸಿದ್ದಳು. ಫೆ. 7ರಂದು ಯುವಕನಿಗೆ ವಾಟ್ಸ್ ಆ್ಯಪ್‌ನಲ್ಲಿ ವಿಡಿಯೊ ಕರೆ ಮಾಡಿದ್ದ ಯುವತಿ, 'ನೀನು ಎಷ್ಟು ಬಲಿಷ್ಠ ಎಂಬುದನ್ನು ನೋಡಬೇಕು' ಎಂದು ಹೇಳಿ ಬಟ್ಟೆ ಬಿಚ್ಚಿಸಿದ್ದಳು. ಅದೇ ವೇಳೆಯೇ ಅಶ್ಲೀಲವಾಗಿ ಮಾತನಾಡಿ, ಬೆತ್ತಲಾಗುವಂತೆ ಮಾಡಿದ್ದಳು. ಅದೇ ವಿಡಿಯೊವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಟ್ಟುಕೊಂಡಿದ್ದಳು' ಎಂದೂ ತಿಳಿಸಿವೆ.

'ಕೆಲ ದಿನ ಬಿಟ್ಟು ಯುವಕನಿಗೆ ಕರೆ ಮಾಡಿದ್ದ ಯುವತಿ, 'ನಿನ್ನ ಬೆತ್ತಲೆ ವಿಡಿಯೊ ನನ್ನ ಬಳಿ ಇದೆ' ಎಂದು ಹೇಳಿ ₹ 1 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದಳು. ಹೆದರಿದ್ದ ಆರೋಪಿ, ₹ 20 ಸಾವಿರ ಕೊಟ್ಟಿದ್ದ. ಪುನಃ ಹಣಕ್ಕೆ ಯುವತಿ ಬೇಡಿಕೆ ಇಟ್ಟಿದ್ದಳು. ನೊಂದ ಯುವಕ, ಠಾಣೆಗೆ ದೂರು ನೀಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಬೆಂಗಳೂರು ವಿಶ್ವವಿದ್ಯಾಲಯದ ಸಮೂಹ ಸಂವಹನ ವಿಭಾಗದಲ್ಲಿ ನಡೆದ ಪುನಶ್ಚೇತನ ಕಾರ್ಯಕ್ರಮದಲ್ಲಿ ಪ್ರೊ.ಎಚ್.ಎಸ್.ಈಶ್ವರ ಅವರನ್ನು ಸನ್ಮಾನಿಸಲಾಯಿತು. ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್.ವೇಣುಗೋಪಾಲ್, ವಿಭಾಗದ ಮುಖ್ಯಸ್ಥ ಬಿ.ಕೆ.ರವಿ, ಸಹ ಪ್ರಾಧ್ಯಾಪಕರಾದ ಎನ್.ಸಂಜೀವ್ ರಾಜ್ ಮತ್ತು ಬಿ.ಶೈಲಶ್ರೀ ಹಾಗೂ ಸಹಾಯಕ ಪ್ರಾಧ್ಯಾಪಕರಾದ ವಸುಂಧರಾ ಪ್ರಿಯದರ್ಶಿನಿ ಇದ್ದಾರೆ.

ಐವರ ದುರ್ಮರಣ, 13 ಮಂದಿಗೆ ಗಾಯ

ಹಾಸನ: ರಾಷ್ಟ್ರೀಯ ಹೆದ್ದಾರಿ 75ರ ಕೆಂಚಟ್ಟಹಳ್ಳಿ ಬಳಿ ಭಾನುವಾರ ಬೆಳಿಗ್ಗೆ ಟಾಟಾ ಸುಮೊಗೆ ಹಿಂಬದಿಯಿಂದ ಕ್ವಾಲಿಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ, ಕ್ವಾಲಿಸ್‌ನಲ್ಲಿದ್ದ ಐವರು ಮೃತಪಟ್ಟಿದ್ದಾರೆ. 13 ಮಂದಿ ಗಾಯಗೊಂಡಿದ್ದಾರೆ.

ಕೆಜಿಎಫ್‌ನ ನವೀನ್ ಕುಮಾರ್, ಪ್ರದೀಪ್, ಸುನಿಲ್ ಕುಮಾರ್, ಪುನೀತ್ ಸ್ಥಳದಲ್ಲೇ ಮೃತಪಟ್ಟರೆ, ಅನಿಲ್ ಕುಮಾರ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಗಾಯಾಳುಗಳು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೆಜಿಎಫ್‌ನ ಎಂಟು ಮಂದಿ ಕ್ವಾಲಿಸ್ ವಾಹನದಲ್ಲಿ ಮದುವೆ ನಿಮಿತ್ತ ಉಡುಪಿಗೆ ತೆರಳುತ್ತಿದ್ದರು. ಕೋಲಾರ ಜಿಲ್ಲೆಯ ಮುಳಬಾಗಿಲಿನ ಒಂದೇ ಕುಟುಂಬದ ಹತ್ತು ಜನ ಟಾಟಾ ಸುಮೊದಲ್ಲಿ ಧರ್ಮಸ್ಥಳಕ್ಕೆ ಪ್ರಯಾಣಿಸುತ್ತಿದ್ದರು. ಕೆಂಚಟ್ಟಹಳ್ಳಿ ಬಳಿ ರೋಡ್ ಹಂಪ್ಸ್ ಹಾಕಿದ್ದರಿಂದ ಸುಮೊ ಚಾಲಕ ವಾಹನ ನಿಧಾನ ಮಾಡಿದ್ದಾನೆ. ವೇಗವಾಗಿ ಬರುತ್ತಿದ್ದ ಕ್ವಾಲಿಸ್ ಚಾಲಕನ ನಿಯಂತ್ರಣ ತಪ್ಪಿ ಟಾಟಾ ಸುಮೊಗೆ ಹಿಂದಿನಿಂದ ಡಿಕ್ಕಿ ಹೊಡೆಯಿತು.

ಬನ್ನಂಜೆ ಅವರಿಗೆ ನುಡಿನಮನ ಸಲ್ಲಿಸಿದ ಒಡನಾಡಿಗಳು, ಆಪ್ತರು

'ಆಧ್ಯಾತ್ಮಿಕ ಕ್ಷೇತ್ರದ ಆಲದ ಮರ ಗೋವಿಂದಾಚಾರ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬನ್ನಂಜೆ ಗೋವಿಂದಾಚಾರ್ಯರು ಆಧ್ಯಾತ್ಮಿಕ ಕ್ಷೇತ್ರದ ಆಲದ ಮರದಂತಿದ್ದರು. ಮಾಧ್ವ ತತ್ವದಲ್ಲಿ ಅದ್ವಿತೀಯ ಪಾಂಡಿತ್ಯ ಹೊಂದಿದ್ದ ಅವರು, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಕ್ಕೆ ಅಚ್ಚಳಿಯದ ಕೊಡುಗೆ ನೀಡಿದ್ದಾರೆ. ಅವರು ನೀಡಿದ ಮಾರ್ಗದರ್ಶನಗಳು ಹಾಗೂ ಪ್ರವಚನಗಳು ಜೀವನದುದ್ದಕ್ಕೂ ನೆನಪಿನಲ್ಲಿ ಇರುವಂತಹವು' ಎಂದು ಬನ್ನಂಜೆ ಗೋವಿಂದಾಚಾರ್ಯರ ಒಡನಾಡಿಗಳು ಹಾಗೂ ಆಪ್ತರು ಸ್ಮರಿಸಿದರು.

ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಆಯೋಜಿಸಿದ 'ಆಚಾರ್ಯ ಅಭಿಜ್ಞಾನ' ಕಾರ್ಯಕ್ರಮದಲ್ಲಿ ಪ್ರೊ.ಕೆ.ಎಸ್. ನಾರಾಯಣ ಆಚಾರ್ಯ, ಲಕ್ಷ್ಮೀಶ ತೋಳ್ಪಾಡಿ, ಗುರುರಾಜ ಕರಜಗಿ, ಮಲ್ಲೇಪುರಂ ಜಿ. ವೆಂಕಟೇಶ್, ಎಚ್. ವಿ. ನಾಗರಾಜರಾವ್, ವಿದ್ಯಾಭೂಷಣ, ಡುಂಡಿರಾಜ್, ಗಂಜೀಫ ರಘುಪತಿ ಭಟ್, ಆರ್. ಗಣೇಶ್ ಮತ್ತು ವಿನಯಾ ಪ್ರಸಾದ್ ಅವರು ಗೋವಿಂದಾಚಾರ್ಯ ಅವರಿಗೆ ನುಡಿನಮನ ಸಲ್ಲಿಸಿದರು. ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರು ಆಚಾರ್ಯರ ಕಾದಂಬರಿಗಳನ್ನು ಓದಿದರು. ಕವಿತಾ ಉಡುಪ ಅವರು ತಂದೆ ಗೋವಿಂದಾಚಾರ್ಯರು ರಚಿಸಿದ ಗೀತೆಗಳನ್ನು ಹಾಡಿದರು.

'ಕೌಟುಂಬಿಕ, ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಹೊಂದಾಣಿಕೆಯನ್ನು ಮಾಡಿಕೊಳ್ಳಬಹುದು. ಆದರೆ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಹೊಂದಾಣಿಕೆ ಸಾಧ್ಯವಿಲ್ಲ. ಈ ಕ್ಷೇತ್ರದಲ್ಲಿ ಸತ್ಯ, ನಿಷ್ಠುರತೆ ಅತ್ಯಗತ್ಯ. ಬನ್ನಂಜೆ ಅವರು ಸತ್ಯಕ್ಕಾಗಿ ನಿಷ್ಠುರ ಬದುಕನ್ನು ನಡೆಸಿದರು. ಅವರು ಎಂದೂ ಓಲೈಕೆಯ ಮಾರ್ಗವನ್ನು ಅನುಸರಿಸಲಿಲ್ಲ. ಕೆಲವು ಸಂದರ್ಭದಲ್ಲಿ ಎಷ್ಟೇ ವಿರೋಧಗಳು ವ್ಯಕ್ತವಾದರೂ ತಾವು ನಂಬಿದ್ದ ಸತ್ಯವನ್ನು ಹೇಳಲು ಹಿಂದೇಟು ಹಾಕಲಿಲ್ಲ' ಎಂದು ವಿದ್ಯಾಭೂಷಣರು ತಿಳಿಸಿದರು.

ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನವು ಆಯೋಜಿಸಿದ್ದ 'ಆಚಾರ್ಯ ಅಭಿಜ್ಞಾನ' ಕಾರ್ಯಕ್ರಮದಲ್ಲಿ ಬನ್ನಂಜೆ ಗೋವಿಂದಾಚಾರ್ಯ ಅವರ ಭಾವಚಿತ್ರಕ್ಕೆ ಕುಟುಂಬ ವರ್ಗದವರು ಆರತಿ ಬೆಳಗಿದರು. ಪ್ರಜಾವಾಣಿ ಚಿತ್ರ

ಮಲ್ಲೇಪುರಂ ಜಿ. ವೆಂಕಟೇಶ್, 'ಸಂಸ್ಕೃತ ವಿಶ್ವವಿದ್ಯಾಲಯವನ್ನು ಹೇಗೆ ಕಟ್ಟಬೇಕು ಎಂಬ ಬಗ್ಗೆ ಬನ್ನಂಜೆ ಅವರು ಸಾಂಸ್ಕೃತಿಕ ದಿಗ್ದರ್ಶನ ಮಾಡಿಸಿದರು. ಒಂದು ವಿಶ್ವವಿದ್ಯಾಲಯದ ಹತ್ತಾರು ವಿದ್ವಾಂಸರು ಮಾಡಬೇಕಾದ ಕೆಲಸವನ್ನು ಅವರೊಬ್ಬರೇ ಮಾಡಿದ್ದಾರೆ. 2008ರ ಬಳಿಕ ಅವರು ನನ್ನ ಬದುಕಿಗೆ ಹತ್ತಿರವಾಗಿ, ಮಾರ್ಗದರ್ಶನ ಮಾಡಿದರು. ಅವರ ನೆನಪಿನ ಶಕ್ತಿ ಅದ್ಭುತ. ಮಹಾಭಾರತ ಅವರಿಗೆ ಕಂಠಪಾಠವಾಗಿತ್ತು. ವಿವಿಧ ಪರ್ವಗಳಲ್ಲಿ ಬರುವ ಸ್ತೋತ್ರಗಳ ವ್ಯಾಖ್ಯಾನವನ್ನು ಹೇಳುವುದನ್ನು ಕೇಳಿದರೆ ರೋಮಾಂಚನವಾಗುತ್ತಿತ್ತು' ಎಂದರು.

ಕವಿ ಡುಂಡಿರಾಜ್, 'ಗೋವಿಂದಾಚಾರ್ಯರು ಹೊಸ ಕವಿಗಳನ್ನು ಗುರುತಿಸಿ, ಪ್ರೋತ್ಸಾಹಿಸುತ್ತಿದ್ದರು. ಅವರು ಬರೆದ ನಾಟಕದಲ್ಲಿ ಅಭಿನಯಿಸುವ ಅವಕಾಶವೂ ನನಗೊದಗಿತ್ತು. ಕವಿಗೋಷ್ಠಿಯೊಂದರಲ್ಲಿ ಅಧ್ಯಕ್ಷರಾಗಿದ್ದ ಅವರು, ನನ್ನ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದರು. ಅದನ್ನು ಸಾವಿರಾರು ಬಾರಿ ಟೇಪ್‌ರೆಕಾರ್ಡರ್ ಮೂಲಕ ಕೇಳಿದ್ದೆ. ನವ್ಯಕಾವ್ಯವನ್ನು ಸರಳವಾಗಿ ಪ್ರಾಸಬದ್ಧವಾಗಿ ಬರೆಯಲು ಸಾಧ್ಯ ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದರು' ಎಂದರು.

ಎಚ್.ವಿ. ನಾಗರಾಜ್ ರಾವ್, 'ಬನ್ನಂಜೆ ಅವರ ಸಂಸ್ಕೃತ ಪಾಂಡಿತ್ಯಕ್ಕೆ ವಿದೇಶಿ ವಿದ್ವಾಂಸರೂ ಬೆರಗಾಗಿದ್ದರು. ಅವರ ಪ್ರವಚನದಿಂದ ಹಲವರು ಪ್ರಭಾವಿತರಾಗಿದ್ದರು' ಎಂದು ಹೇಳಿದರು.

ಮುಳಗುಂದದ ಶಿಕ್ಷಕಿ ಭೋಪಾಲ್‌ನಲ್ಲಿ ಸಾವು

ಪ್ರಜಾವಾಣಿ ವಾರ್ತೆ

ಮುಳಗುಂದ (ಗದಗ): ಮಧ್ಯಪ್ರದೇಶದ ಭೋಪಾಲ್ ಬಳಿ ಪಂಚಮಡಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಡ್ವಾನ್ಸ್ ಸ್ಟಡಿ ತರಬೇತಿಗೆಂದು ಹೋಗಿದ್ದ ಪಟ್ಟಣದ ನಿವಾಸಿ, ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲ್ಲೂಕು ಬಾಲೆಹೊಸೂರಿನ ದಿಂಗಾಲೇಶ್ವರ ಸರ್ಕಾರಿ ಪ್ರೌಢಶಾಲೆ ಶಿಕ್ಷಕಿ ಫಾತಿಮಾ ಅಣ್ಣಿಗೇರಿ (54) ಪಂಚಮಡಿಯ ರೈಲ್ವೆ ನಿಲ್ದಾಣದಲ್ಲಿ ಹೃದಯಾಘಾತದಿಂದ ಶನಿವಾರ ನಿಧನರಾದರು.

ಫಾತಿಮಾ

ಪಾರ್ಥಿವ ಶರೀರ ವಿಮಾನದ ಮೂಲಕ ಬೆಂಗಳೂರಿಗೆ ಬಂದು ಸೋಮವಾರ ಬೆಳಿಗ್ಗೆ ಲಕ್ಷ್ಮೇಶ್ವರಕ್ಕೆ ತಲುಪುತ್ತದೆ. ನಂತರ ಮುಳಗುಂದದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಶ್ರದ್ಧಾಂಜಲಿ

ಶ್ರೀ ವೈ ಎಂ ಶ್ರೀನಿವಾಸ ಮೂರ್ತಿ
01/09/1950 – 21/02/2021
ಅಂತ್ಯಕ್ರಿಯೆ 22 ಫೆಬ್ರವರಿ, ಮಧ್ಯಾಹ್ನ 2 ಗಂಟೆಗೆ
ಎಂವಿಎಂ ಫಾರ್ಮ್ಸ್ ಯಲಹಂಕ
ದುಃಖತಪ್ತರು
ಎಂವಿಎಂ ಕುಟುಂಬದವರು, ಯಲಹಂಕ
ಮೊಬೈಲ್: 9845343333, 9880113333, 9886449999

‘ಮೀಸಲಾತಿ ಸಿಗದಿದ್ದರೆ ರಾಜೀನಾಮೆಗೆ ಸಿದ್ಧರಾಗಿ’

ಪಂಚಮಸಾಲಿ ಸಮಾವೇಶದಲ್ಲಿ ಸಮುದಾಯದ ಸಚಿವರು, ಶಾಸಕರಿಗೆ ಬಸನಗೌಡ ಪಾಟೀಲ ಯತ್ನಾಳ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಪಂಚಮಸಾಲಿ ಸಮುದಾಯದ ಮೀಸಲಾತಿ ಹೋರಾಟ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಈ ಬಾರಿ ಪಂಚಮಸಾಲಿ ಸಮುದಾಯಕ್ಕೆ ‘2ಎ’ ಮೀಸಲಾತಿ ದೊರೆಯಲೇಬೇಕು. ಇಲ್ಲವಾದರೆ ಸರ್ಕಾರದಲ್ಲಿರುವ ನಮ್ಮ ಸಮುದಾಯದ ಸಚಿವರು, ಶಾಸಕರು, ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರು ರಾಜೀನಾಮೆ ನೀಡಲು ಸಿದ್ಧರಾಗಿರಬೇಕು’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕರೆ ನೀಡಿದರು.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಪಂಚಮಸಾಲಿ ಸಮಾವೇಶದಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಚುನಾವಣೆಗೂ ಮೊದಲು ನಮ್ಮ ಸಮುದಾಯಕ್ಕೆ ಮೀಸಲಾತಿಯ ಭರವಸೆ ನೀಡಿದ್ದಾರೆ. ಈಗ ನಾಟಕ ಆಡುತ್ತಿದ್ದಾರೆ. ಮಾರ್ಚ್4ಕ್ಕೆ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇನೆ. ಅವರು ಸರಿಯಾದ ಉತ್ತರ ನೀಡದಿದ್ದರೆ ನೀವು ರಾಜೀನಾಮೆಗೆ ಸಿದ್ಧರಾಗಿ’ ಎಂದರು.

ಪಂಚಮಸಾಲಿ ಸಮುದಾಯದ ಜನರು ಮನವಿ ಕೊಟ್ಟು ಹೋಗುವ ಕಾಲ ಮುಗಿದಿದೆ. ಈಗ ಮೀಸಲಾತಿ ತೆಗೆದುಕೊಂಡು ಹೋಗಲು ಬಂದಿರುವುದು. ಮೀಸಲಾತಿ ಕೊಡುವುದು ಸಾಧ್ಯವೋ ಇಲ್ಲವೋ ಎಂಬುದನ್ನು ಅವರು (ಯಡಿಯೂರಪ್ಪ) ಸ್ಪಷ್ಟವಾಗಿ ಹೇಳಲಿ. ಕೊಡಲಾಗದು ಎಂದರೆ ಮುಂದಿನ ಹೋರಾಟಕ್ಕೆ ಸಿದ್ಧ ಎಂದು ಹೇಳಿದರು.

‘ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರೆ ದೆಹಲಿಗೆ ಹೋಗಲು ಹೇಳುತ್ತಾರೆ. ದೆಹಲಿಗೆ ಯಾಕೆ ಹೋಗಬೇಕು? ನಿಮ್ಮ ಕೈಯಲ್ಲಿ ಕೀಲಿ ಇಟ್ಟುಕೊಂಡು ದೆಹಲಿಗೆ ಏಕೆ ಹೋಗಬೇಕು? ‘2ಎ’ ಕೊಡ್ತೀವಿ ಎಂದು ಭರವಸೆ ನೀಡಿ ಈಗ ಏಕೆ ನಾಟಕ ಕಂಪನಿ ಶುರು ಮಾಡಿದ್ದೀರಿ’ ಎಂದು ಪ್ರಶ್ನಿಸಿದರು.

‘ಮಾತು ಮಾತಿಗೂ ಪಂಚಮ ಸಾಲಿಗಳಿಗೆ ‘3ಬಿ’ ಕೊಟ್ಟಿದ್ದೇವೆ ಎನ್ನುತ್ತಾರೆ. ನಮಗೊಬ್ಬರಿಗೇ ಕೊಟ್ಟಿಲ್ಲ, ಎಲ್ಲ ಲಿಂಗಾಯತರಿಗೂ ಕೊಟ್ಟಿದ್ದಾರೆ. ಮಡಿವಾಳರು, ಗಂಗಾಮತಸ್ಥರು, ಕುರುಬರು ಎಲ್ಲರಿಗೂ ಭರವಸೆ ನೀಡಿ ಮೋಸ ಮಾಡಿದ್ದಾರೆ. ಅವರ ಜಾತಿಯವರನ್ನು ಸೇರಿಸಿ ಉಳಿದವರಿಗೆ ಮೋಸ ಮಾಡಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಪಂಚಮಸಾಲಿಗಳಿಗೆ ಬೇಕಾದರೆ ಪ್ರಾಣ ಕೊಡ್ತೀನಿ ಅನ್ನುತ್ತಾರೆ. ಪ್ರಾಣ ಬೇಡ ನಮಗೆ ‘2ಎ’ ಕೊಡಿ. ನಿಮ್ಮ ಮಕ್ಕಳು, ಮೊಮ್ಮಕ್ಕಳ ಬೆಳಸಲಿಕ್ಕೆ ನಾವಿಲ್ಲ. ನಮ್ಮ ಸಮುದಾಯದ ಮಕ್ಕಳು, ಮೊಮ್ಮಕ್ಕಳ ಭವಿಷ್ಯಕ್ಕಾಗಿ ಮೀಸಲಾತಿ ಕೇಳುತ್ತಿದ್ದೇವೆ. ಮುಖ್ಯಮಂತ್ರಿ ಹುದ್ದೆಗೇರಿದ್ದ ನಮ್ಮ ಸಮುದಾಯದ ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ್, ಜೆ.ಎಚ್. ಪಟೇಲ್ ಅವರು ನಿಮ್ಮಂತೆ ಮಕ್ಕಳು, ಮೊಮ್ಮಕ್ಕಳನ್ನು ಬೆಳೆಸಲಿಲ್ಲ’ ಎಂದು ಟೀಕಿಸಿದರು.

‘ಕುರುಬರನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲಿ. ಪಂಚಮಸಾಲಿಗಳನ್ನು ಹಿಂದುಳಿದ ವರ್ಗಗಳ ‘2ಎ’ ಪಟ್ಟಿಗೆ ಸೇರಿಸಲಿ. ಇತರ ಎಲ್ಲ ಸಮುದಾಯಗಳೂ ಹೋರಾಟವನ್ನು ಬೆಂಬಲಿಸಿವೆ. ಯಾರ ವಿರುದ್ಧವೂ ಮಾತನಾಡುವುದು ಬೇಡ’ ಎಂದು ಹೇಳಿದರು.

‘ನೋಟಿಸ್‌ಗೆ ಹೆದರಿ ಬಾಯಿ ಮುಚ್ಚಲ್ಲ’

‘ನೋಟಿಸ್ ಕೊಟ್ಟ ಮಾತ್ರಕ್ಕೆ ನನ್ನ ಬಾಯಿ ಮುಚ್ಚಿಸಬಹುದು ಅಂದ್ಕೊಂಡಿದ್ದಾರೆ. ಅದಕ್ಕೆಲ್ಲ ಹೆದರುವ ಮಗ ನಾನಲ್ಲ’ ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ನಾನು ಬೋಗಸ್ ಮಾತನಾಡುವ ರಾಜಕಾರಣಿ ಅಲ್ಲ. ಯಾರಿಗೂ ಪಂಪ್ ಹೊಡೆಯುವವನೂ ಅಲ್ಲ. ನೋಟಿಸ್ ಕೊಟ್ಟು ಬಸನಗೌಡನ ಬಾಯಿ ಮುಚ್ಚಿಸ್ತೀನಿ ಅಂದುಕೊಂಡಿದ್ದರೆ ಕುರ್ಚಿ ಖಾಲಿ ಮಾಡೋಕೆ ಸಿದ್ಧ ಆಗಿರಬೇಕಾಗುತ್ತದೆ’ ಎಂದರು.

ವಿನಯ ಕುಲಕರ್ಣಿಗೆ ಬೆಂಬಲ

ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಯೋಗೇಶ್ ಗೌಡರ ಕೊಲೆ ಪ್ರಕರಣದಲ್ಲಿ ಬಂಧಿತರಾಗಿ, ಜೈಲಿನಲ್ಲಿರುವ ಮಾಜಿ ಸಚಿವ ವಿನಯ ಕುಲಕರ್ಣಿ ಅವರ ಹೆಸರು ಪಂಚಮಸಾಲಿ ಸಮಾವೇಶದಲ್ಲಿ ಹಲವು ಬಾರಿ ಪ್ರಸ್ತಾಪವಾಯಿತು.

ಕೂಡಲ ಸಂಗಮದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರದ ವಚನಾನಂದ ಸ್ವಾಮೀಜಿ, ಪಂಚಮಸಾಲಿ ಮಹಾಸಭಾ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಅವರು ವಿನಯ ಕುಲಕರ್ಣಿ ಅವರನ್ನು ನೆನಪಿಸಿಕೊಂಡರು. ಇಡೀ ಸಮುದಾಯ ಅವರ ಬೆನ್ನಿಗೆ ನಿಲ್ಲಬೇಕು ಎಂದು ಕರೆ ನೀಡಿದರು. ವಿನಯ ಕುಲಕರ್ಣಿ ಅವರ ಪತ್ನಿ ಶಿವಲೀಲಾ ಮಾತನಾಡಿದರು. ಮಗಳು ವೈಶಾಲಿ, ತಮ್ಮ ವಿಜಯ ಕುಲಕರ್ಣಿ ಕೂಡ ವೇದಿಕೆಯಲ್ಲಿದ್ದರು.

ಕಾನೂನು ಪಾಲನೆ ಅಗತ್ಯ: ಸಚಿವ ಪಾಟೀಲ

‘ಪಂಚಮಸಾಲಿ ಸಮುದಾಯಕ್ಕೆ ‘2ಎ’ ಮೀಸಲಾತಿ ನೀಡಬೇಕಾದರೆ ಕಾನೂನಿನ ಪ್ರಕಾರ ಕೆಲವು ಪ್ರಕ್ರಿಯೆಗಳು ಆಗಲೇಬೇಕು. ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಆಯೋಗದಿಂದ ಅಧ್ಯಯನಕ್ಕೆ ಆದೇಶ ನೀಡಿದೆ’ ಎಂದು ಸಚಿವ ಸಿ.ಸಿ. ಪಾಟೀಲ ಹೇಳಿದರು.

ಹಲವು ಸರ್ಕಾರಗಳು ಬಂದು, ಹೋಗಿವೆ. ಯಡಿಯೂರಪ್ಪ ಅವರು ಪಂಚಮಸಾಲಿ ಸಮುದಾಯವನ್ನು ಪ್ರವರ್ಗ ‘3ಬಿ’ಗೆ ಸೇರಿಸಿದರು. ಅದು ‘2ಎ’ ಮೀಸಲಾತಿ ಪಡೆಯಲು ಮೆಟ್ಟಿಲು ಇದ್ದಂತೆ ಎಂದ ಸಚಿವರು, ಸರ್ಕಾರ ಸಮುದಾಯದ ಪರವಾಗಿದೆ ಎಂದು ಮನವೊಲಿಸಲು ಯತ್ನಿಸಿದರು.

ಸಚಿವ ನಿರಾಣಿ ಮಾತನಾಡಿ, ‘ಹೋರಾಟಕ್ಕೆ ನಮ್ಮ ಸರ್ಕಾರ ಸಂಪೂರ್ಣ ಬೆಂಬಲ ನೀಡುತ್ತದೆ. 2008ರಲ್ಲೇ ಪಂಚಮಸಾಲಿ ಸಮುದಾಯವನ್ನು ‘2ಎ’ ಪಟ್ಟಿಗೆ ಸೇರಿಸಲು ಯಡಿಯೂರಪ್ಪ ಪ್ರಯತ್ನಿಸಿದ್ದರು. ಈಗ ಅವರು ನಿಶ್ಚಿತವಾಗಿಯೂ ನಮ್ಮ ಸಮುದಾಯಕ್ಕೆ ನ್ಯಾಯ ನೀಡುವ ಭರವಸೆ ಇದೆ’ ಎಂದರು.

ಇಬ್ಬರೂ ಸಚಿವರು ಮಾತನಾಡುವಾಗ ಭಾರಿ ಗದ್ದಲ ಎಬ್ಬಿಸಿದ ಜನರು, ಮಾತಿಗೆ ಅಡ್ಡಿಪಡಿಸಿದರು. ಒಂದು ಹಂತದಲ್ಲಿ ತಾಳ್ಮೆ ಕಳೆದುಕೊಂಡ ನಿರಾಣಿ ಜನರ ಮೇಲೆ ಹರಿಹಾಯ್ದರು.

ಪ್ರಜಾವಾಣಿ ಸಂವಾದ

facebook LIVE

ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ

2 ಎ ಪಟ್ಟಿಗೆ ಲಿಂಗಾಯತ ಪಂಚಮಸಾಲಿ ಸಮುದಾಯ ಸೇರ್ಪಡೆ ಬೇಡಿಕೆ

ವಿಷಯ ಕುರಿತ ಸಂವಾದ

ಪಾಲ್ಗೊಳ್ಳುವವರು

ಬಸನಗೌಡ ಪಾಟೀಲ ಯತ್ನಾಳ
ಬಿಜೆಪಿ ಶಾಸಕ ಹಾಗೂ ಪಂಚಮಸಾಲಿ ಮೀಸಲಾತಿ ಹೋರಾಟ ಸಮಿತಿಯ ಪ್ರಮುಖ

ನೀವೂ ಪಾಲ್ಗೊಳ್ಳಿ

ವಿಜಯಾನಂದ ಕಾಶಪ್ಪನವರ
ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ರಾಷ್ಟ್ರೀಯ ಘಟಕದ ಅಧ್ಯಕ್ಷ

ಇಂದು ಬೆಳಿಗ್ಗೆ 11.30 ರಿಂದ 12.30

fb.com/prajavani.net

ನಾಯಕರ ಒಗ್ಗಟ್ಟು ಪ್ರದರ್ಶನ

ಅರಮನೆ ಮೈದಾನದಲ್ಲಿ ನಡೆದ ಸಮಾವೇಶ ಪಂಚಮಸಾಲಿ ಸಮುದಾಯದ ಒಗ್ಗಟ್ಟು ಮತ್ತು ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾಯಿತು. ಎಲ್ಲ ಪಕ್ಷಗಳ ನಾಯಕರೂ ವೇದಿಕೆಯಲ್ಲಿ ಕುಳಿತು ಒಗ್ಗಟ್ಟು ಪ್ರದರ್ಶಿಸಿದರು.

ಸಚಿವರಾದ ಸಿ.ಸಿ. ಪಾಟೀಲ, ಮುರುಗೇಶ ನಿರಾಣಿ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಮಹೇಶ್ ಕುಮಠಳ್ಳಿ, ಬಿಜೆಪಿ ಸಂಸದ ಕರಡಿ ಸಂಗಣ್ಣ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ, ಕಳಕಪ್ಪ ಬಂಡಿ, ಸಿ.ಎಂ. ನಿಂಬಣ್ಣನವರ್, ಅರುಣ್ ಕುಮಾರ್, ರಾಜ್‌ಕುಮಾರ್ ತೇಲ್ಕೂರ, ಶಂಕರಪಾಟೀಲ ಮುನೇನಕೊಪ್ಪ, ಸಿದ್ದು ಸವದಿ, ಮಹಾಂತೇಶ್ ದೊಡ್ಡಗೌಡರ, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ಕಾಂಗ್ರೆಸ್ ಶಾಸಕರಾದ ಲಕ್ಷ್ಮಿ ಹೆಬ್ಬಾಳ್ಕರ್, ಶಿವಾನಂದ ಪಾಟೀಲ, ಹೋರಾಟ ಸಮಿತಿ ಅಧ್ಯಕ್ಷರೂ ಆಗಿರುವ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಸೇರಿದಂತೆ ಹಲವರು ವೇದಿಕೆಯಲ್ಲಿದ್ದರು.

ಮೀಸಲಾತಿ ಭಿಕ್ಷೆಯಲ್ಲ, ಹಕ್ಕು: ವಚನಾನಂದ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಚಮಸಾಲಿ ಸಮುದಾಯದ ಪಾಲಿಗೆ ಮೀಸಲಾತಿ ಭಿಕ್ಷೆಯಲ್ಲ, ಅದು ನಮ್ಮ ಹಕ್ಕು. ಸಂವಿಧಾನದ ಅಡಿಯಲ್ಲಿ ಇತರರಿಗೆ ಕೊಟ್ಟ ಹಕ್ಕನ್ನು ನಮಗೂ ಕೊಡಿ ಎಂಬುದೇ ನಮ್ಮ ಬೇಡಿಕೆ’ ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

ಸಮಾವೇಶದಲ್ಲಿ ಮಾತನಾಡಿದ ಅವರು, ‘ಸಮುದಾಯದ ಬಡ ಮಕ್ಕಳ ಶಿಕ್ಷಣ, ಉದ್ಯೋಗಕ್ಕಾಗಿ ಹೋರಾಟ ನಡೆಯುತ್ತಿದೆ. 26 ವರ್ಷಗಳಿಂದಲೂ ನಡೆಯುತ್ತಿದೆ. ನಾವು ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ಕೇಳುತ್ತಿದ್ದೇವೆ’ ಎಂದರು.

2007 ರವರೆಗೂ ಪಂಚಮಸಾಲಿ ಸಮುದಾಯ ಕರ್ನಾಟಕದ ಜಾತಿ ಪಟ್ಟಿಯಲ್ಲಿ ಇರಲೇ ಇಲ್ಲ. ಸಮುದಾಯದ ರಾಜ್ಯ ಸಂಘದಿಂದ ಹೋರಾಟ ನಡೆಸಿದ ಫಲವಾಗಿ 2007ರಲ್ಲಿ ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಮುದಾಯವನ್ನು ಜಾತಿ ಪಟ್ಟಿಗೆ ಸೇರಿಸಿದರು. ಆ ನಂತರ ಸಮುದಾಯಕ್ಕೆ ನ್ಯಾಯ ದೊರಕಿಲ್ಲ’ ಎಂದು ಹೇಳಿದರು.

ಈಗ ಅದೇ ಯಡಿಯೂರಪ್ಪ ಸಮುದಾಯದ ಬೇಡಿಕೆ ಈಡೇರಿಸುತ್ತಾರೆ ಎಂಬ ಭರವಸೆ ಇದೆ. ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಗೆ ಸೇರಿಸುವ ಅಧಿಕಾರ ಕೇಂದ್ರ ಸರ್ಕಾರದ್ದಲ್ಲ. ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿಯ ಅಧಿಕಾರ’ ಎಂದು ಹೇಳಿದರು.

ಈ ಹೋರಾಟ ಯಾವುದೇ ಪಕ್ಷ ಅಥವಾ ವ್ಯಕ್ತಿಯ ವಿರುದ್ಧದ ಪ್ರತಿಭಟನೆ ಅಲ್ಲ. ಯಾರನ್ನೂ ಮೆಚ್ಚಿಸುವ ಅಥವಾ ಬೇಸರ ಮೂಡಿಸುವ ಉದ್ದೇಶದ್ದೂ ಅಲ್ಲ ಎಂದು ಸ್ಪಷ್ಟಪಡಿಸಿದರು.

ಜನರಲ್ಲಿ ಸಂಶಯವಿತ್ತು: ‘ಪಾದಯಾತ್ರೆಗೆ ಹರಿಹರ ಪೀಠ ಬೆಂಬಲಿಸುವುದಿಲ್ಲ, ಎರಡೂ ಪೀಠಗಳ ನಡುವೆ ಸಹಮತ ಇಲ್ಲ ಎಂಬ ಭಾವನೆ ಅನೇಕರಲ್ಲಿತ್ತು. ಪಾದಯಾತ್ರೆ ಹರಿಹರಕ್ಕೆ ಬಂದಾಗ ಹೋರಾಟ ವಿಫಲವಾಗುತ್ತದೆ ಎಂದು ಊಹಿಸಿದ್ದರು. ಆದರೆ, ನಾವಿಬ್ಬರೂ ಒಂದೇ ಆಗಿದ್ದೀವಿ. ಬಹಿರಂಗವಾಗಿ ಒಂದಾಗಿದ್ದೇವೆ. ಅದಕ್ಕಾಗಿ ನಾಯಕರು, ಜನರು ಒಂದಾದರು’ ಎಂದು ಸ್ವಾಮೀಜಿ ಹೇಳಿದರು.

ವಿಧಾನಸೌಧ ಮುತ್ತಿಗೆಗೆ ಯತ್ನ: ಸ್ವಾತಂತ್ರ್ಯ ಉದ್ಯಾನದಲ್ಲಿ ಪಾದಯಾತ್ರೆ ಅಂತ್ಯ

ನಿಷೇಧಾಜ್ಞೆಗೂ ಜಗ್ಗದೆ ನುಗ್ಗಿ ಬಂದ ಸಮುದಾಯದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು ಅರಮನೆ ಮೈದಾನದಲ್ಲಿ ಭಾನುವಾರ 2ಎ ಮೀಸಲಾತಿಗಾಗಿ ಆಗ್ರಹಿಸಿ ಪಂಚಮಸಾಲಿ ಸಮುದಾಯದ ಹೋರಾಟ ಸಮಾವೇಶದ ನಂತರ ಸ್ವಾತಂತ್ರ ಉದ್ಯಾನವನಕ್ಕೆ ಸಮುದಾಯದ ಜನ ಸಾಗುವ ವೇಳೆ ಪೊಲೀಸ್ ಮತ್ತು ಜನರ ಮಧ್ಯೆ ನೂಕಾಟ ನಡೆಯಿತು ಪ್ರಜಾವಾಣಿ ಚಿತ್ರ

ಬೆಂಗಳೂರು: ಬೃಹತ್ ಸಮಾವೇಶ ನಡೆಸಿದ ಪಂಚಮಸಾಲಿ ಸಮುದಾಯದ ಜನ, ನಗರದಲ್ಲಿ ನಿಷೇಧಾಜ್ಞೆಗೂ ಜಗ್ಗದೇ ಏಕಾಏಕಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮುಂದಾದರು. ಅರಮನೆ ಮೈದಾನದಿಂದ ಹೊರಟ ಪಾದಯಾತ್ರೆಯನ್ನು ಕಾವೇರಿ ಜಂಕ್ಷನ್ ವೃತ್ತದಲ್ಲೇ ತಡೆದ ಪೊಲೀಸರು, ಜನರನ್ನು ಸ್ವಾತಂತ್ರ್ಯ ಉದ್ಯಾನದತ್ತ ಕಳುಹಿಸಿ ಮುತ್ತಿಗೆ ಯತ್ನ ವಿಫಲಗೊಳಿಸಿದರು.

‘ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಪಾದಯಾತ್ರೆ ಅಂತ್ಯ’ ಎಂಬ ಘೋಷಣೆಯೊಂದಿಗೆ ಆರಂಭವಾಗಿದ್ದ ಪಾದಯಾತ್ರೆಯನ್ನು ಸಮಾವೇಶ ಸ್ಥಳದಲ್ಲೇ ಅಂತ್ಯಗೊಳಿಸಲು, ಪೊಲೀಸರು ನಗರದಲ್ಲಿ ಸಿಆರ್‌ಪಿಸಿ ಸೆಕ್ಷನ್ 144 ಜಾರಿಗೊಳಿಸಿದ್ದರು. ಆದರೆ, ಸಮಾವೇಶ ಮುಗಿಯುತ್ತಿದ್ದಂತೆ ಸೇರಿದ್ದ ಜನರೆಲ್ಲ ಸ್ವಾಮೀಜಿಗಳು, ಮುಖಂಡರ ಜೊತೆ ವಿಧಾನಸೌಧದತ್ತ ಹೆಜ್ಜೆ ಹಾಕಿದರು.

ಮುನ್ಸೂಚನೆ ಇಲ್ಲದೇ ಪಾದಯಾತ್ರೆ ಹೊರಟ ಜನರನ್ನು ನಿಯಂತ್ರಿಸುವುದೇ ಪೊಲೀಸರಿಗೆ ದೊಡ್ಡ ಸವಾಲಾಯಿತು. ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಮುಖಂಡರು, 25 ಸಾವಿರಕ್ಕೂ ಹೆಚ್ಚು ಮಂದಿ ಪಾದಯಾತ್ರೆಯಲ್ಲಿ ಸಾಗಿದರು.

ಸ್ಥಳಕ್ಕೆ ಬಂದ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ‘ವಿಧಾನಸೌಧ ಸುತ್ತಮುತ್ತ ನಿಷೇಧಾಜ್ಞೆ ಜಾರಿಯಲ್ಲಿದೆ. ದಯವಿಟ್ಟು ಪಾದಯಾತ್ರೆ ಇಲ್ಲಿಯೇ ಅಂತ್ಯಗೊಳಿಸಿ’ ಎಂದು ಕೋರಿದರು. ಇದಕ್ಕೆ ಸ್ವಾಮೀಜಿ ಹಾಗೂ ಮುಖಂಡರು ಸ್ಪಂದನೆ ನೀಡಲಿಲ್ಲ.

ವಿಂಡ್ಸರ್ ಮ್ಯಾನರ್ ಸೇತುವೆ ಸಮೀಪದ ರಸ್ತೆಯಲ್ಲಿ ಬ್ಯಾರಿಕೇಡ್ ಹಾಕಿದ್ದ ಪೊಲೀಸರು, ಹೋರಾಟಗಾರರನ್ನು ತಡೆಯಲು ಮುಂದಾದರು. ಅದಕ್ಕೂ ಜಗ್ಗದ ಜನ, ಬ್ಯಾರಿಕೇಡ್‌ಗಳನ್ನು ತಳ್ಳಿ ಮುಂದಕ್ಕೆ ಸಾಗಿದರು. ಇದೇ ವೇಳೆ ಪೊಲೀಸರು ಹಾಗೂ ಹೋರಾಟಗಾರರು ಪರಸ್ಪರ ತಳ್ಳಾಡಿದರು. ನೂಕಾಟವೂ ನಡೆಯಿತು. ಬಸವೇಶ್ವರ ವೃತ್ತದ ಮೂಲಕ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಘೋಷಣೆಗಳನ್ನು ಹೋರಾಟಗಾರರು ಕೂಗಿದರು. ಮುಖ್ಯಮಂತ್ರಿಯವರ ವಿರುದ್ಧ ಧಿಕ್ಕಾರದ ಕೂಗು ಮೊಳಗಿಸಿದರು.

ಪರಿಸ್ಥಿತಿ ಕೈ ಮೀರುವ ಸೂಚನೆ ಅರಿತ ಪೊಲೀಸರು, ಗುಟ್ಟಹಳ್ಳಿ ಮುಖ್ಯರಸ್ತೆ ಕೆಳ ಸೇತುವೆಯಲ್ಲೇ ಪಾದಯಾತ್ರೆ ಮಾರ್ಗ ಬದಲಾವಣೆ ಮಾಡಿ ವಿಧಾನಸೌಧ ಮುತ್ತಿಗೆ ಯತ್ನವನ್ನು ವಿಫಲಗೊಳಿಸಿದರು. ರೈಲ್ವೆ ಪರ್ಯಾಯ ರಸ್ತೆ ಮೂಲಕ ಸಾಗಿದ ಪಾದಯಾತ್ರೆ, ಶಿವಾನಂದ ವೃತ್ತ, ಆನಂದರಾವ್ ವೃತ್ತದ ಮೂಲಕ ಸಾಗಿ ಸ್ವಾತಂತ್ರ್ಯ ಉದ್ಯಾನ ತಲುಪಿತು.

ಕೆಲವರು, ರಸ್ತೆಯಲ್ಲೇ ಮಲಗಿ ಹಾಗೂ ಉರುಳು ಸೇವೆ ಮಾಡಿ ಪ್ರತಿಭಟನೆ ನಡೆಸಿದರು. ಇದರಿಂದಾಗಿ, ಈ ರಸ್ತೆಯಲ್ಲಿ ವಾಹನಗಳ ಸಂಚಾರ ಬಂದ್ ಮಾಡಲಾಗಿತ್ತು. ಸಾರ್ವಜನಿಕರ ವಾಹನಗಳಿಗೆ ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಯಿತು.

ಪಾದಯಾತ್ರೆ ಅಂತ್ಯ, ಧರಣಿ ಆರಂಭ: ಉದ್ಯಾನದಲ್ಲಿ ಸೇರಿದ ಜನ, ಮತ್ತೊಂದು ಬಹಿರಂಗ ಸಭೆ ನಡೆಸಿದರು. ಬಸವಜಯ ಮೃತ್ಯುಂಜಯ ಸ್ವಾಮೀಜಿ, ಶಾಸಕ ಬಸವನಗೌಡ ಯತ್ನಾಳ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

‘ಸದ್ಯಕ್ಕೆ ಪಾದಯಾತ್ರೆ ಮುಗಿದಿದೆ. ಹೋರಾಟ ಮುಂದುವರಿಯಲಿದೆ. ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಎದುರು ಮಾರ್ಚ್ 4ರವರೆಗೆ ಧರಣಿ ಮಾಡುತ್ತೇವೆ. ಸರ್ಕಾರ ಬಗ್ಗದಿದ್ದರೆ ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು’ ಎಂದು ಸಭೆಯಲ್ಲಿ ಘೋಷಿಸಲಾಯಿತು.

ದಿಢೀರ್ ಪಾದಯಾತ್ರೆ; ಸಂಚಾರ ದಟ್ಟಣೆ

ಸಮಾವೇಶ ಅಂಗವಾಗಿ ಅರಮನೆ ಮೈದಾನ ಹಾಗೂ ಸುತ್ತಮುತ್ತ ವಾಹನಗಳ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿತ್ತು. ಆದರೆ, ದಿಢೀರ್ ಪಾದಯಾತ್ರೆ ಮಾಹಿತಿ ಪೊಲೀಸರಿಗೆ ಇರಲಿಲ್ಲ. ಇದೇ ಕಾರಣಕ್ಕೆ ಪಾದಯಾತ್ರೆಯಿಂದಾಗಿ, ನಗರದ ಹಲವೆಡೆ ಸಂಚಾರ ದಟ್ಟಣೆ ಉಂಟಾಯಿತು.

ಪಾದಯಾತ್ರೆ ಸಾಗಿದ ಮಾರ್ಗದಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಿದ ಪೊಲೀಸರು, ದಿಢೀರ್ ಮಾರ್ಗ ಬದಲಾವಣೆ ಮಾಡಿದರು. ಇದರಿಂದಾಗಿ ಸ್ಯಾಂಕಿ ರಸ್ತೆ, ಸದಾಶಿವನಗರ, ವಸಂತನಗರ, ಅರಮನೆ ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಶಿವಾನಂದ ವೃತ್ತ, ಆನಂದರಾವ್ ವೃತ್ತ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ದಟ್ಟಣೆ ಉಂಟಾಯಿತು.

‘ಹಲವರ ನಾಟಕ ಬಯಲಾಯ್ತು’

ಶಾಸಕ ಬಸವನಗೌಡ ಯತ್ನಾಳ ಮಾತನಾಡಿ, ‘ಪಾದಯಾತ್ರೆ ಸೇರುವ ಸೋಗಿನಲ್ಲಿ ಹಲವರು ನಾಟಕ ಮಾಡಿ ಹೋದರು. ಅವರು ಯಾರು ಎಂಬುದು ಎಲ್ಲರಿಗೂ ಈಗಾಗಲೇ ಗೊತ್ತಾಗಿದೆ. ಪಾದಯಾತ್ರೆಯನ್ನು ಹರಿಹರ, ದಾವಣಗೆರೆ, ಚಿತ್ರದುರ್ಗ ಹಾಗೂ ತುಮಕೂರಿನಲ್ಲೇ ತಡೆಯಬೇಕೆಂದು ಹಲವು ನಾಟಕ ಕಂಪನಿಯವರು ಪ್ರಯತ್ನಿಸಿದರು’ ಎಂದು ದೂರಿದರು.

’24 ಕ್ಯಾರೆಟ್ ಬಂಗಾರದಂಥ ಜನರೆಲ್ಲ ಇಂದು ನಮ್ಮೊಂದಿಗಿದ್ದಾರೆ. ಉಳಿದ 12 ಕ್ಯಾರೆಟ್‌ನ ನಾಟಕ ಕಂಪನಿ ಜನ ಹೊರಟು ಹೋಗಿದ್ದಾರೆ. ಅದು ಒಳ್ಳೆಯದು. ಸೂಪರ್ ಸಿಎಂ ಆಗಿರುವ ವಿಜಯೇಂದ್ರನಿಗೆ ಅವರೇ ನಿತ್ಯವೂ ಸುದ್ದಿ ಮುಟ್ಟಿಸುತ್ತಿದ್ದರು. ಇದೀಗ ಎಲ್ಲರ ಬಂಡವಾಳ ಬಯಲಾಗಿದೆ’ ಎಂದೂ ಹೇಳಿದರು.

‘ಜಿಲ್ಲಾವಾರು ಮುಖಂಡರ ನೇತೃತ್ವದಲ್ಲಿ ಧರಣಿ’

ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಬಳಿ ನಡೆಯಲಿರುವ ಧರಣಿ ನೇತೃತ್ವವನ್ನು ಜಿಲ್ಲಾವಾರು ಮುಖಂಡರು ವಹಿಸಿಕೊಂಡಿದ್ದಾರೆ. ಪ್ರತಿದಿನ ಒಂದೊಂದು ಜಿಲ್ಲೆಯ ಮುಖಂಡರು ಹಾಗೂ ಸಮಾಜದ ಜನ, ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

‘ಧರಣಿಯಲ್ಲಿ ಪಾಲ್ಗೊಂಡವರಿಗೆ ಪ್ರಸಾದ ವ್ಯವಸ್ಥೆಯನ್ನೂ ಮಾಡಲಾಗಿದೆ. ಉಳಿದುಕೊಳ್ಳಲು ಕಲ್ಯಾಣ ಮಂಟಪಗಳ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ. ಅನಿವಾರ್ಯವಿದ್ದವರು ವಾಪಸು ಊರಿಗೆ ಹೋಗಬಹುದು. ಉಳಿದುಕೊಳ್ಳಲು ವ್ಯವಸ್ಥೆ ಇದ್ದವರು ಬೆಂಗಳೂರಿನಲ್ಲಿ ಉಳಿದುಕೊಳ್ಳಿ’ ಎಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಬಸವನಗೌಡ ಯತ್ನಾಳ, ‘ವಿಧಾನಸೌಧಕ್ಕೆ ಬಂದು ಶಾಸಕರ ಕೊಠಡಿಯಿಂದ ಕೊಠಡಿಯಿಂದ ಅಲೆಯುವವರು ತಮ್ಮ ಕೆಲಸ ಮುಗಿದ ಮೇಲೆ ಧರಣಿ ಸ್ಥಳಕ್ಕೆ ಬಂದು ಕುಳಿತುಕೊಂಡು ಹೋಗಬೇಕು. ಸಮಾಜದ ಹೋರಾಟಕ್ಕೆ ಎಲ್ಲರೂ ಕೈ ಜೋಡಿಸಬೇಕು’ ಎಂದು ಹೇಳಿದರು.

‘ಹೋರಾಟ ಹತ್ತಿಕ್ಕಲು ಸೆಕ್ಷನ್ 144’

‘ನಮ್ಮ ಹೋರಾಟ ನೋಡಿ ರಾಜ್ಯ ಸರ್ಕಾರವೇ ನಡುಗಿ ಹೋಗಿದೆ. ಹೋರಾಟ ಹತ್ತಿಕ್ಕುವುದಕ್ಕಾಗಿಯೇ ಈ ರಾಜ್ಯ ಸರ್ಕಾರ, ನಗರದಲ್ಲಿ 144 ಸೆಕ್ಷನ್ ಜಾರಿ ಮಾಡಿದೆ. ಇದಕ್ಕೆಲ್ಲ ನಾವು ಬಗ್ಗುವುದಿಲ್ಲ. ಸರ್ಕಾರದ ಈ ಕ್ರಮವನ್ನು ಉಗ್ರವಾಗಿ ಖಂಡಿಸುತ್ತೇನೆ’ ಎಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

‘ವಿಧಾನಸೌಧಕ್ಕೆ ಹೊರಟಿದ್ದ ಪಾದಯಾತ್ರೆ ಮಾರ್ಗವನ್ನು ಒತ್ತಾಯದಿಂದಲೇ ಬದಲಿಸಿ, ನಮ್ಮ ದಿಕ್ಕು ತಪ್ಪಿಸಲಾಗಿದೆ. ಇದನ್ನೆಲ್ಲ ಮೆಟ್ಟಿನಿಂತ ಜನ, ಪಾದಯಾತ್ರೆ ಮೂಲಕ ಉದ್ಯಾನಕ್ಕೆ ಬಂದು ಸೇರಿದ್ದರಿಂದ ಸರ್ಕಾರಕ್ಕೆ ಕಠಿಣ ಸಂದೇಶ ರವಾನೆಯಾಗಿದೆ. ಮುಂಬರುವ ಅಧಿವೇಶನದಲ್ಲಿ ನಮ್ಮ ಬೇಡಿಕೆ ಈಡೇರಬೇಕು. ಇಲ್ಲದಿದ್ದರೆ, ಆಗುವ ಅನಾಹುತಗಳಿಗೆ ಸರ್ಕಾರವೇ ಹೊಣೆ’ ಎಂದೂ ಎಚ್ಚರಿಸಿದರು.

ಪಂಚಮಸಾಲಿ ಪಟ್ಟು ತಂದ ಇಕ್ಕಟ್ಟು

ಒಂದನೇ ಪುಟದಿಂದ

ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮತ್ತು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಸಮಾವೇಶದಲ್ಲಿ ಸಮುದಾಯವನ್ನು ಪ್ರತಿನಿಧಿಸುವ ಸಚಿವರಾದ ಸಿ.ಸಿ. ಪಾಟೀಲ, ಮುರುಗೇಶ ನಿರಾಣಿ, ಸಂಸದ ಸಂಗಣ್ಣ ಕರಡಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ, ಮಹೇಶ್ ಕುಮಠಳ್ಳಿ ಸೇರಿದಂತೆ 12 ಶಾಸಕರು, ಮೇಲ್ಮನೆ ಸದಸ್ಯರು ಪಾಲ್ಗೊಂಡಿದ್ದರು.

ಮನವೊಲಿಕೆಗೆ ಯತ್ನ ವಿಫಲ: ಬೆಳಿಗ್ಗೆ 11ಕ್ಕೆ ಆರಂಭವಾದ ಸಮಾವೇಶ ಮಧ್ಯಾಹ್ನ 2.30ರವರೆಗೂ ನಡೆಯಿತು. ‘ಪಂಚಮಸಾಲಿ ಸಮುದಾಯಕ್ಕೆ ‘2ಎ’ ಮೀಸಲಾತಿ ಪಡೆಯದೇ ಬೆಂಗಳೂರಿನಿಂದ ನಿರ್ಗಮಿಸುವುದಿಲ್ಲ’ ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿ ಮತ್ತು ಹೋರಾಟದ ಮುಂಚೂಣಿಯಲ್ಲಿರುವ ನಾಯಕರು ಘೋಷಿಸಿದರು.

ಈ ಮಧ್ಯೆ ಮುಖ್ಯಮಂತ್ರಿಯವರ ಕಾವೇರಿ ನಿವಾಸದಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸಚಿವರಾದ ಸಿ.ಸಿ.ಪಾಟೀಲ, ಮುರುಗೇಶ ನಿರಾಣಿ ಮುಂತಾದವರು ಸಭೆ ನಡೆಸಿ, ಹೋರಾಟ ಕೈಬಿಡುವಂತೆ ಸ್ವಾಮೀಜಿಯವರ ಮನವೊಲಿಸಲು ಚರ್ಚಿಸಿದರು.

ಆ ಬಳಿಕ ಸಚಿವ ಸಿ.ಸಿ.ಪಾಟೀಲ ಮತ್ತು ಮುರುಗೇಶ ನಿರಾಣಿ ಅವರು ವೇದಿಕೆಯಲ್ಲೇ ಸ್ವಾಮೀಜಿ ಅವರ ಮನವೊಲಿಸಲು ಪ್ರಯತ್ನಿಸಿದರು. ಹಿಂದುಳಿದ ವರ್ಗಗಳ ಆಯೋಗದ ಅಧ್ಯಯನ ವರದಿ ಬರುವವರೆಗೂ ಕಾಲಾವಕಾಶ ನೀಡಿ, ಹೋರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ಮನವಿ ಮಾಡಿದರು.

ಈ ವಿಷಯವನ್ನು ಬಸವಜಯ ಮೃತ್ಯುಂಜಯ ಸ್ವಾಮೀಜಿ ಸಮಾವೇಶದಲ್ಲಿ ಪ್ರಸ್ತಾಪಿಸಿದರು. ಆದರೆ, ಜನರು ಭಾರಿ ವಿರೋಧ ವ್ಯಕ್ತಪಡಿಸಿದರು. ಮಧ್ಯ ಪ್ರವೇಶಿಸಿದ ಬಸನಗೌಡ ಪಾಟೀಲ ಯತ್ನಾಳ ಅವರೂ ತೀವ್ರವಾಗಿ ವಿರೋಧಿಸಿದರು. ಹೋರಾಟ ಸಮಿತಿ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಕೂಡ ದನಿಗೂಡಿಸಿದರು.

ನಂತರ ಮಾತನಾಡಿದ ಸ್ವಾಮೀಜಿ, ‘ವಿಧಾನಸೌಧದವರೆಗೂ ಪಾದಯಾತ್ರೆಯಲ್ಲಿ ತೆರಳೋಣ. ಅಲ್ಲಿಯೇ ಮಾರ್ಚ್ 4ರವರೆಗೂ ಧರಣಿ ನಡೆಸೋಣ. ಅಂದೇ ವಿಧಾನಮಂಡಲ ಅಧಿವೇಶನ ಆರಂಭವಾಗಲಿದೆ. ಮೀಸಲಾತಿ ಘೋಷಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಕಾಲಾವಕಾಶ ನೀಡೋಣ. ಆಗಲೂ ಘೋಷಣೆ ಹೊರಬೀಳದಿದ್ದರೆ ಅಂದಿನಿಂದಲೇ ಆಮರಣ ಉಪವಾಸ ಆರಂಭಿಸುತ್ತೇನೆ’ ಎಂದು ಪ್ರಕಟಿಸಿದರು.

ಪಾದಯಾತ್ರೆಗೆ ತಡೆ: ವಿಧಾನಸೌಧದತ್ತ ಪಾದಯಾತ್ರೆ ತೆರಳಲು ಪೊಲೀಸರು ಅನುಮತಿ ನೀಡಲಿಲ್ಲ. ಆದರೂ, ಸ್ವಾಮೀಜಿ, ಹೋರಾಟ ಸಮಿತಿಯ ಮುಖಂಡರು ಮತ್ತು ಕೆಲವು ಶಾಸಕರು ಹೊರಟರು. ಅವರನ್ನು ಹಿಂಬಾಲಿಸಿ ಹತ್ತಾರು ಸಾವಿರ ಮಂದಿ ರಸ್ತೆಗಿಳಿದರು.

ಕಾವೇರಿ ಜಂಕ್ಷನ್ ಮೇಲ್ಸೇತುವೆ ಬಳಿ ಬ್ಯಾರಿಕೇಡ್ ಹಾಕಿ ಪಾದಯಾತ್ರೆಗೆ ತಡೆಯೊಡ್ಡಿದ ಪೊಲೀಸರು, ರೈಲ್ವೆ ಪರ್ಯಾಯ ರಸ್ತೆ ಮೂಲಕ ಸ್ವಾತಂತ್ರ್ಯ ಉದ್ಯಾನದತ್ತ ತೆರಳಲು ಅವಕಾಶ ಕಲ್ಪಿಸಿದರು. ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟಗಾರರನ್ನುದ್ದೇಶಿಸಿ ಮಾತನಾಡಿದ ಸ್ವಾಮೀಜಿ, ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಎದುರು ಸೋಮವಾರದಿಂದ ಮಾ.4 ರವರೆಗೆ ನಿತ್ಯ ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಧರಣಿ ನಡೆಸುವ ನಿರ್ಧಾರ ಪ್ರಕಟಿಸಿದರು.

‘ಪ್ರತಿದಿನ ಒಂದು ಜಿಲ್ಲೆಯ ಜನರು ಧರಣಿಯಲ್ಲಿ ಪಾಲ್ಗೊಳ್ಳುತ್ತಾರೆ. ಸರ್ಕಾರ ಸ್ಪಂದಿಸದಿದ್ದರೆ ಮಾ.4ರಿಂದ ಆಮರಣಾಂತ ಉಪವಾಸ ಆರಂಭಿಸುತ್ತೇನೆ’ ಎಂದು ಪುನರುಚ್ಚರಿಸಿದರು. ಬಳಿಕ ದಿನದ ಮಟ್ಟಿಗೆ ಹೋರಾಟವನ್ನು ಅಂತ್ಯಗೊಳಿಸಲಾಯಿತು. ಸೋಮವಾರ ಬೆಳಿಗ್ಗೆಯಿಂದ ಧರಣಿ ಆರಂಭಿಸಲು ಸಿದ್ಧತೆಗಳು ನಡೆದಿವೆ.

ಕಾಫಿನಾಡು, ಕರಾವಳಿಯಲ್ಲಿ ಮಳೆ

ಕಡೂರಿನ ಬಸವೇಶ್ವರ ವೃತ್ತದಲ್ಲಿ ನೆಲ ಅಂತಸ್ತಿನಲ್ಲಿದ್ದ ಬಟ್ಟೆ ಅಂಗಡಿಗೆ ನೀರು ನುಗ್ಗಿರುವುದು

ಬೆಂಗಳೂರು: ಚಿಕ್ಕಮಗಳೂರು, ಚಿತ್ರದುರ್ಗ, ಕೊಡಗು, ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಭಾನುವಾರವೂ ಮಳೆಯಾಗಿದೆ. ಬೀರೂರು ಬಳಿಕ ರಾಗಿ ಕಣಕ್ಕೆ ನೀರು ನುಗ್ಗಿದ್ದರೆ, ಹೊಸದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ಜಾನುವಾರು ಮೇವು ಬಣಗಳಿಗೆ ನೀವು ಆವರಿಸಿದೆ. ಮಳೆಯು ಹಣ್ಣು, ಹೂವು, ತರಕಾರಿ ಬೆಳೆಗಾರರಲ್ಲಿ ಆತಂಕ ಮೂಡಿಸಿದೆ.

ಕಾಫಿನಾಡಿನ ಕಡೂರು, ಅಜ್ಜಂಪುರ, ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಭಾನುವಾರ ಉತ್ತಮ ಮಳೆಯಾಗಿದೆ. ಕಡೂರು ಪಟ್ಟಣದಲ್ಲಿ ಹಲವಾರು ಮಳಿಗೆಗಳ ನೆಲ ಅಂತಸ್ತಿಗೆ ನೀರು ನುಗ್ಗಿದೆ.ಬೀರೂರಿನ ಗಾಳಿಹಳ್ಳಿಯಲ್ಲಿ ರಾಗಿ ಕಣಕ್ಕೆ ನೀರು ಬಂದಿದೆ. ಅಜ್ಜಂಪುರದ ಹೆಬ್ಬೂರು ಸಮೀಪದ ರೈಲ್ವೆ ಕೆಳ ಸೇತುವೆಯಲ್ಲಿ ನೀರು ನಿಂತು, ಸಂಚಾರಕ್ಕೆ ತೊಂದರೆಯಾಯಿತು.

ಉಡುಪಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ಕುಂದಾಪುರದ ಆನಗಳ್ಳಿ, ಬಸ್ರೂರು, ವಂಡ್ಸೆ, ಹೆಮ್ಮಾಡಿಯಲ್ಲಿ ಗಾಳಿಗೆ ಮರ- ಗಿಡಗಳು ನೆಲಕ್ಕುರುಳಿವೆ.

ಚಿತ್ರದುರ್ಗ ಜಿಲ್ಲೆಯ ಹಲವೆಡೆ ಗುಡುಗು ಸಹಿತ ಮಳೆ ಸುರಿದಿದ್ದು, ಮಾವಿನ ಹೂವು, ಹೀಚು ಉದುರುತ್ತಿವೆ. ಹೊಸದುರ್ಗ ತಾಲ್ಲೂಕಿನ ಹಲವೆಡೆ ಬಣವೆಗಳು ನೆಲಕ್ಕೆ ಉರುಳಿವೆ.

ಹೊಸದುರ್ಗ ತಾಲ್ಲೂಕಿನಲ್ಲಿ ಸುಗ್ಗಿ ಕಾರ್ಯ ಮುಗಿಸಿ ಜಾನುವಾರು ಮೇವಿಗಾಗಿ ಇಟ್ಟಿದ್ದ ರಾಗಿ, ಸಾಮೆ, ನವಣೆ ಹುಲ್ಲು ಹಾಗೂ ಶೇಂಗಾ, ಹುರುಳಿ ಹೊಟ್ಟು ಮಿಶ್ರಣದ ಬಣವೆ ನೆಲಕ್ಕುರುಳಿವೆ. ಚಿತ್ರದುರ್ಗ ನಗರದಲ್ಲಿ ಸಂಜೆ ಬಿರುಸಿನಿಂದ ಮಳೆಯಾಗಿದೆ. ಚಳ್ಳಕೆರೆ ಹಾಗೂ ಹಿರಿಯೂರು ತಾಲ್ಲೂಕಿನ ಐಮಂಗಲ ಹೋಬಳಿಯಲ್ಲಿ ಮಳೆಯಾಗಿದೆ. ಶಿವಮೊಗ್ಗ ಹಾಗೂ ಕೊಡಗು ಜಿಲ್ಲೆಯಲ್ಲಿ ಮಳೆಯಾಗಿದೆ.

‘ಮೀಸಲಾತಿ ದೊರಕದೇ ಪೀಠಕ್ಕೆ ಮರಳುವುದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಚಮಸಾಲಿ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ ‘2ಎ’ ಅಡಿಯಲ್ಲಿ ಮೀಸಲಾತಿ ಸೌಲಭ್ಯ ಸಿಗುವವರೆಗೂ ಪೀಠಕ್ಕೆ ಮರಳುವುದಿಲ್ಲ’ ಎಂದು ಕೂಡಲಸಂಗಮದ ಪಂಚಮಸಾಲಿ ಗುರುಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಘೋಷಿಸಿದರು.

ಮೀಸಲಾತಿಗಾಗಿ ಆಗ್ರಹಿಸಿ ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಪಂಚಮಸಾಲಿ ಸಮಾವೇಶದಲ್ಲಿ ಮಾತನಾಡಿದ ಅವರು, ‘ನಮಗೆ ನಿಗಮ, ಮಂಡಳಿ ಅಥವಾ ಅನುದಾನ ಬೇಡ. ‘2ಎ’ ಮೀಸಲಾತಿಯೇ ನಮ್ಮ ಬೇಡಿಕೆ. ಅದು ದೊರೆಯುವವರೆಗೂ ಹೋರಾಟ ಮುಂದುವರಿಯಲಿದೆ’ ಎಂದರು.

ಮೀಸಲಾತಿಗಾಗಿ 2012ರಿಂದಲೂ ನಡೆಯುತ್ತಿದ್ದ ಹೋರಾಟ ಈಗ ನಿರ್ಣಾಯಕ ಹಂತಕ್ಕೆ ಬಂದಿದೆ. ಸಮುದಾಯದ ಮಕ್ಕಳ ಭವಿಷ್ಯಕ್ಕಾಗಿ ನಡೆಯುತ್ತಿರುವ ಹೋರಾಟ ಇದು. ಪಾದಯಾತ್ರೆ ಮತ್ತು ಸಮಾವೇಶದಿಂದ ಹೋರಾಟ ಅಂತ್ಯಗೊಂಡಿದೆ ಎಂದು ಯಾರೂ ಭಾವಿಸಬಾರದು. ಇದು ಅಂತ್ಯವಲ್ಲ, ಆರಂಭ ಎಂದು ಹೇಳಿದರು.

‘ಎಚ್.ಡಿ. ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ಒಕ್ಕಲಿಗರಿಗೆ ಮೀಸಲಾತಿ ಸೌಲಭ್ಯ ನೀಡಿದರು. ಡಿ. ದೇವರಾಜ ಅರಸು ಅವರು ಹಿಂದುಳಿದ ವರ್ಗಗಳ ಅನೇಕ ಸಮುದಾಯಗಳಿಗೆ ಮೀಸಲಾತಿ ನೀಡಿದರು. ಈಗ ನಮ್ಮದೇ ಲಿಂಗಾಯತ ಸಮುದಾಯದ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾರೆ. ಅವರಲ್ಲದೇ ಇನ್ಯಾರು ಪಂಚಮಸಾಲಿ ಜನರಿಗೆ ಮೀಸಲಾತಿ ನೀಡಲು ಸಾಧ್ಯ’ ಎಂದು ಸ್ವಾಮೀಜಿ ಪ್ರಶ್ನಿಸಿದರು.

ಈಗ ಪಂಚಮಸಾಲಿ ಸಮುದಾಯಕ್ಕೆ ‘2ಎ’ ಮೀಸಲಾತಿಗಾಗಿ ಹೋರಾಟ ನಡೆದಿದೆ. ಮುಂದಿನ ದಿನಗಳಲ್ಲಿ ಲಿಂಗಾಯತ ಸಮುದಾಯದ ಎಲ್ಲ ಉಪ ಪಂಗಡಗಳನ್ನೂ ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಪಟ್ಟಿಗೆ ನೀಡುವಂತೆ ಆಗ್ರಹಿಸಿ ಹೋರಾಟ ನಡೆಸಲು ಸಿದ್ಧ ಎಂದರು.

ಸಮಾಜದ ಋಣ ತಮ್ಮ ಮೇಲಿದೆ. ಅದನ್ನು ಈಡೇರಿಸುವುದಕ್ಕಾಗಿ ಮೀಸಲಾತಿಗಾಗಿ ಹೋರಾಟ ಆರಂಭಿಸಲಾಗಿದೆ. ಪಾದಯಾತ್ರೆಯ ಆರಂಭದಲ್ಲಿ ಜನರು ಬೆಂಬಲಿಸದೇ ಇರಬಹುದು ಎಂಬ ಅಳುಕಿತ್ತು. ಆದರೆ, ನಿರೀಕ್ಷೆಗೂ ಮೀರಿ ಜನರು ಪಾದಯಾತ್ರೆಯಲ್ಲಿ ಜತೆಗೂಡಿದ್ದಾರೆ. ಮಠ ಕಟ್ಟುವುದರಿಂದ ಇತಿಹಾಸದಲ್ಲಿ ಉಳಿಯುವುದಿಲ್ಲ. ಜನರ ಜತೆ ಪ್ರೀತಿಯಿಂದ ಬೆರೆತರೆ ಇತಿಹಾಸದಲ್ಲಿ ಉಳಿಯಬಹುದು ಎಂದು ಹೇಳಿದರು.

ಜೋಳಿಗೆ ಹಿಡಿದು ಬರುವೆ: ‘ಈವರೆಗೂ ಮಠ ಕಟ್ಟಲು ಸಾಧ್ಯವಾಗಿಲ್ಲ. ಮೀಸಲಾತಿ ಹೋರಾಟ ಮುಗಿಸಿ ಜುಲೈ 23ರಿಂದ ಅಕ್ಟೋಬರ್ 23ರವರೆಗೆ ಪಂಚಮಸಾಲಿ ಸಮುದಾಯದ ಜನರಿರುವ 12,000 ಹಳ್ಳಿಗಳಿಗೂ ಜೋಳಿಗೆ ಹಿಡಿದು ಬರುವೆ. ನಿಮ್ಮ ನೆರವಿನಲ್ಲಿ ಮಠ ಕಟ್ಟುತ್ತೇನೆ’ ಎಂದು ಸ್ವಾಮೀಜಿ ಪ್ರಕಟಿಸಿದರು.

ಎಂಜಿನಿಯರಿಂಗ್: ಐಒಟಿಯಲ್ಲಿ ಅವಕಾಶ ಅಗಾಧ



ಪ್ರೊ. ಮಹೇಶ್ವರ ಚೈತನ್ಯ

ಕೃತಕ ಬುದ್ಧಿಮತ್ತೆ (ಎಐ), ಆಟೋಮೋಟಿವ್ ತಂತ್ರಜ್ಞಾನ, ಆಟೋಮೇಷನ್, ಐಒಟಿ, 5ಜಿ, ಏರೋಸ್ಪೇಸ್ ಮತ್ತು ಸೈಬರ್ ಸೆಕ್ಯೂರಿಟಿಯಂತಹ ನವೀನ ಕ್ಷೇತ್ರಗಳ ಏರುಗತಿಯಿಂದಾಗಿ ಎಂಜಿನಿಯರಿಂಗ್ ಕ್ಷೇತ್ರವು ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಎಂಜಿನಿಯರಿಂಗ್ ಕ್ಷೇತ್ರ ಅಗಾಧವಾಗಿದ್ದು, ಎಂಜಿನಿಯರಿಂಗ್ ಎಂದರೆ ಕೇವಲ ಕಂಪ್ಯೂಟರ್ ಸೈನ್ಸ್ ಮಾತ್ರವಲ್ಲ; ವಿವಿಧ ರೀತಿಯ ಎಂಜಿನಿಯರಿಂಗ್ ಪದವಿಗಳಿಂದಾಗಿ ವೃತ್ತಿ ಆಯ್ಕೆಗಳೂ ವಿಪುಲವಾಗಿವೆ.

ಹಲವಾರು ಆಯ್ಕೆಗಳಿರುವುದರಿಂದ ಸೂಕ್ತವಾದ ಕೋರ್ಸ್ ಅನ್ನು ಅಂತಿಮಗೊಳಿಸುವುದು ಸುಲಭವಲ್ಲ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ತಮ್ಮ ಆಯ್ಕೆಯನ್ನು ನಿರ್ಧರಿಸಲು ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಎಂಬುದನ್ನು ಗುರುತಿಸುವುದು ಅತ್ಯಗತ್ಯ. ಅದರಂತೆ ಯಾವ ಸಂಸ್ಥೆ ಮತ್ತು ಅದಕ್ಕೆ ಸಂಬಂಧಿಸಿದ ಸೌಲಭ್ಯಗಳು ಎಲ್ಲಿವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳುವುದು ಕೂಡ ಅಷ್ಟೇ ಮುಖ್ಯ. ಎಂಜಿನಿಯರಿಂಗ್ ಪದವಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಮತ್ತೊಂದು ಪ್ರಮುಖ ಮತ್ತು ನಿರ್ಣಾಯಕ ಅಂಶವೆಂದರೆ ಆಯ್ಕೆ ಮಾಡಿಕೊಂಡ ಕೋರ್ಸ್‌ಗೆ ಪ್ರಾದೇಶಿಕವಾಗಿ ಮತ್ತು ಅಂತರರಾಷ್ಟ್ರೀಯವಾಗಿ ವೃತ್ತಿ ಭವಿಷ್ಯ ಹೇಗಿದೆ ಎಂಬುದರ ಬಗ್ಗೆ ತಿಳಿದಿರಬೇಕಾಗುತ್ತದೆ.

5ಜಿ, ರೊಬೋಟಿಕ್ಸ್

ಜಗತ್ತು ಹೊಸ ಸ್ತರದತ್ತ ದಾಪುಗಾಲು ಇಡುತ್ತಿರುವ ಈ ಸಂದರ್ಭದಲ್ಲಿ ಮನುಷ್ಯ ಹೆಚ್ಚಿನ ಪ್ರಮಾಣದಲ್ಲಿ ತಂತ್ರಜ್ಞಾನವನ್ನು ಅವಲಂಬಿಸಿದ್ದಾನೆ. ಎಂಜಿನಿಯರಿಂಗ್‌ನ ಪ್ರತಿಯೊಂದು ಕ್ಷೇತ್ರವೂ ಭವಿಷ್ಯದಲ್ಲಿ ನಮ್ಮ ಬಳಕೆಗೆ ಹಾಗೂ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪರಿಣತಿಯನ್ನು ಒಳಗೊಂಡಿರುತ್ತದೆ. ಅಧಿಕ ವೇಗದಲ್ಲಿ ಡೇಟಾ ಪ್ರಸರಣ ಮಾಡುವ 5ಜಿ ಸಂವಹನದ ತಂತ್ರಜ್ಞಾನದಿಂದ ಹಿಡಿದು ಪುನರಾವರ್ತಿತವಾದ ಮಾನವ ಉದ್ಯೋಗಗಳನ್ನು ಬದಲಿಸುವ ಸುಧಾರಿತ ರೊಬೋಟಿಕ್ಸ್ ತಂತ್ರಜ್ಞಾನದವರೆಗೂ ಇದರ ಹರವು ವ್ಯಾಪಿಸಿದೆ. ಪ್ರತಿಯೊಂದು ಉದ್ಯಮವೂ ಇಂತಹ ಸುಧಾರಿತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವತ್ತ ಗಮನಹರಿಸಿದೆ.

ಪರಿಣತರ ಪ್ರಕಾರ ಡೇಟಾ ಮತ್ತು ಕೌಶಲಗಳು ಮುಂಬರುವ ವರ್ಷಗಳಲ್ಲಿ ಪ್ರಗತಿಗೆ ಕಾರಣವಾಗುವ ಪ್ರಮುಖ ಅಂಶಗಳು. ಈ ಹಿನ್ನೆಲೆಯಲ್ಲಿ ಡೇಟಾದಲ್ಲಿನ ಮೌಲ್ಯಗಳು ಮತ್ತು ಅದರ ಸುರಕ್ಷತೆಯು ಈ ಸಂದರ್ಭದಲ್ಲಿ ಹೆಚ್ಚು ಮಹತ್ವ ಪಡೆದುಕೊಂಡಿದೆ. ಪರಿಣಾಮಕಾರಿಯಾದ ಸಂವಹನಕ್ಕಾಗಿ ಹೆಚ್ಚಿನ ಬ್ಯಾಂಡ್‌ವಿಡ್ತ್ ಮತ್ತೊಂದು ಪ್ರಮುಖವಾದ ಸಂಶೋಧನಾ ಕ್ಷೇತ್ರ. ಕಡಿಮೆ ಬ್ಯಾಂಡ್‌ವಿಡ್ತ್ ಬಳಸಿ ಗರಿಷ್ಠ ಡೇಟಾವನ್ನು ಹೆಚ್ಚಿನ ಸುರಕ್ಷತೆಯೊಂದಿಗೆ ರವಾನಿಸುವುದು ಸಂಶೋಧನೆಯ ಹಿಂದಿರುವ ಉದ್ದೇಶ.

> ಎಂಜಿನಿಯರಿಂಗ್ ಕ್ಷೇತ್ರ ಅಗಾಧವಾಗಿದ್ದು, ಎಂಜಿನಿಯರಿಂಗ್ ಎಂದರೆ ಕೇವಲ ಕಂಪ್ಯೂಟರ್ ಸೈನ್ಸ್ ಮಾತ್ರವಲ್ಲ. ವಿವಿಧ ರೀತಿಯ ಎಂಜಿನಿಯರಿಂಗ್ ಪದವಿಗಳಿಂದಾಗಿ ವೃತ್ತಿ ಆಯ್ಕೆಗಳೂ ವಿಪುಲವಾಗಿವೆ.

ಐಒಟಿ ತಂತ್ರಜ್ಞಾನ

ಸಂಚಾರ ಮತ್ತು ಪೊಲೀಸರಿಗೆ ನೆರವಾಗುವ ಡ್ರೋನ್ ಮಾನಿಟರಿಂಗ್, ಐಒಟಿ ಮತ್ತು ಸ್ಮಾರ್ಟ್ ಸಾಧನಗಳನ್ನು ಬಳಸಿಕೊಂಡು ತಕ್ಷಣಕ್ಕೆ ನೀಡಲಾಗುವ ಆರೋಗ್ಯ ಅಪ್‌ಡೇಟ್‌ಗಳು, ಪರಿಣಾಮಕಾರಿಯಾದ ಶಿಕ್ಷಣಕ್ಕಾಗಿ ವರ್ಚುವಲ್ ರಿಯಾಲಿಟಿ.. ಇವೆಲ್ಲವೂ ಭವಿಷ್ಯದಲ್ಲಿ ಮಹತ್ವ ಎನಿಸುವಂತಹ ತಂತ್ರಜ್ಞಾನಗಳು. ಇವೆಲ್ಲವುಗಳಿಗೂ ಸುಧಾರಿತ ಮತ್ತು ಅಪ್‌ಡೇಟ್ ಮಾಡುವಂತಹ ಎಂಜಿನಿಯರಿಂಗ್ ಕೌಶಲಗಳ ಅಗತ್ಯವಿದೆ. ಇದು ಎಂಜಿನಿಯರ್‌ಗಳಿಗೆ ಹಿಂದೆಂದಿಗಿಂತಲೂ ವ್ಯಾಪಕವಾದ ವೃತ್ತಿ ಆಯ್ಕೆಗಳನ್ನು ಒದಗಿಸಿದೆ.

ವೈರ್‌ಲೆಸ್ ಕಮ್ಯೂನಿಕೇಷನ್, ರೊಬೋಟಿಕ್ಸ್, ಇಂಟರ್‌ನೆಟ್ ಆಫ್ ಥಿಂಗ್ಸ್, ಮೊಬೈಲ್ ಕಮ್ಯೂನಿಕೇಷನ್ ಮೊದಲಾದ ಉಪ ಕೋರ್ಸ್‌ಗಳನ್ನು ಕೂಡ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದು. ಏರೋಸ್ಪೇಸ್, ಕೆಮಿಕಲ್, ಮೆಕ್ಯಾನಿಕಲ್ ಮತ್ತು ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳಿಗೂ ಅವುಗಳದ್ದೇ ಆದ ಮಹತ್ವವಿದೆ. ಇದಲ್ಲದೇ, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಎಂಜಿನಿಯರಿಂಗ್‌ಗಳನ್ನು ಸಂಯೋಜಿಸುವ ಎಂಜಿನಿಯರಿಂಗ್ ಪದವಿ ಪಡೆಯಬಹುದು. ವಿಎಲ್‌ಎಸ್‌ಐ ವಿನ್ಯಾಸ, ಎಂಬೆಡೆಡ್ ಸಿಸ್ಟಮ್ಸ್, ಪವರ್ ಇಂಡಸ್ಟ್ರಿ ಅಪ್ಲಿಕೇಶನ್‌ಗಳು ಮತ್ತು ಐಒಟಿಯಂತಹ ಹಾರ್ಡ್‌ವೇರ್ ವಿನ್ಯಾಸ ಕ್ಷೇತ್ರಗಳು ಭವಿಷ್ಯದ ಎಂಜಿನಿಯರ್‌ಗಳಿಗೆ ಸಾಕಷ್ಟು ಅವಕಾಶಗಳ ಬಾಗಿಲನ್ನು ತೆರೆಯಬಹುದು.

ಸೈಬರ್ ಸೆಕ್ಯೂರಿಟಿ

ಭವಿಷ್ಯದ ತಂತ್ರಜ್ಞಾನಗಳಾದ 5ಜಿ ಕಮ್ಯೂನಿಕೇಷನ್, ರೊಬೋಟಿಕ್ಸ್, ಸೈಬರ್ ಸೆಕ್ಯೂರಿಟಿ, ಮಶಿನ್ ಲರ್ನಿಂಗ್, ವರ್ಚುವಲ್ ರಿಯಾಲಿಟಿ ಮತ್ತು ಕೃತಕ ಬುದ್ಧಿಮತ್ತೆಯಲ್ಲಿ ಪದವಿ ಪಡೆದವರು ಇ-ಕಾಮರ್ಸ್, ಆರೋಗ್ಯ, ಸರ್ಕಾರಿ ಕ್ಷೇತ್ರಗಳು, ರೊಬೋಟಿಕ್ ಉತ್ಪಾದನೆ, ಡಿಜಿಟಲ್ ಕಲಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ವೃತ್ತಿಯನ್ನು ಹುಡುಕಿಕೊಳ್ಳಬಹುದು.

ಆರೋಗ್ಯ ಕ್ಷೇತ್ರದಲ್ಲಿ ರೊಬೋಟಿಕ್ಸ್ ಯೋಜನೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ- ಮೆಕ್ಯಾನಿಕಲ್ ಎಂಜಿನಿಯರ್ ಯೋಜಿಸುವ ಭೌತಿಕ ವಿನ್ಯಾಸದೊಂದಿಗೆ, ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ರೂಪಿಸುವ ಸಂವಹನದ ಅಂಶವು ಕಂಪ್ಯೂಟರ್ ಎಂಜಿನಿಯರ್ ಅಭಿವೃದ್ಧಿಪಡಿಸಿದ ಕೋಡ್‌ನೊಂದಿಗೆ ನಡೆಯುತ್ತದೆ. ರಾಸಾಯನಿಕ ಮತ್ತು ಬಯೋಮೆಡಿಕಲ್ ಎಂಜಿನಿಯರ್ ಕಾರ್ಯನಿರ್ವಹಣೆಯು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಅದೇ ರೀತಿ ಎಂಜಿನಿಯರಿಂಗ್‌ನ ಪ್ರತಿಯೊಂದು ಕ್ಷೇತ್ರವೂ ಭವಿಷ್ಯದ ಯೋಜನೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

(ಲೇಖಕರು: ಉಪನ್ಯಾಸಕರು, ಕಂಪ್ಯೂಟರ್ ಸೈನ್ಸ್ ಮತ್ತು ಡೆಪ್ಯೂಟಿ ಕಂಟ್ರೋಲರ್ ಆಫ್ ಎಕ್ಸಾಮ್ಸ್ ಅಂಡ್ ಅಸೋಸಿಯೇಟ್ ಡೈರೆಕ್ಟರ್ (ಐಸಿಪಿಸಿ ಏಷ್ಯಾ ಸೈಟ್), ಅಮೃತಾ ವಿಶ್ವ ವಿದ್ಯಾಪೀಠಂ)

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಇಂದೋರ್‌ನ ಸಿವಿಲ್ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್

- **ವಿವರ:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಇಂದೋರ್ ಡಿಸಿಪ್ಲೀನ್ ಆಫ್ ಸಿವಿಲ್ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2021ಕ್ಕೆ ಅರ್ಜಿ ಆಹ್ವಾನಿಸಿದೆ.
- **ಅರ್ಹತೆ:** ಬಿಇ, ಎಂಟೆಕ್ ಪೂರ್ಣಗೊಳಿಸಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಜೊತೆಗೆ ನೆಟ್ ಅಥವಾ ಗೇಟ್ ಅರ್ಹತೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
- **ಆರ್ಥಿಕ ನೆರವು:** ತಿಂಗಳಿಗೆ ₹ 25,000 ಭತ್ಯೆ ನೀಡಲಾಗುವುದು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಫೆಬ್ರುವರಿ 28, 2021
- **ಅರ್ಜಿ ಸಲ್ಲಿಕೆ ವಿಧಾನ:** ಇ-ಮೇಲ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/ICE5

ಎಬಿವಿ-ಐಐಐಟಿಎಂ ಗ್ವಾಲಿಯರ್ ಡಿಎಸ್‌ಟಿ-ಎಸ್‌ಇಆರ್‌ಬಿ ಜೂನಿಯರ್ ರಿಸರ್ಚ್ ಫೆಲೋಶಿಪ್ 2021

- **ವಿವರ:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫಾರ್‌ಮೇಷನ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್ ಗ್ವಾಲಿಯರ್, ಇಂಡಿಯಾ ಫಾರ್ ಎಬಿವಿ-ಐಐಐಟಿಎಂ ಗ್ವಾಲಿಯರ್ ಅವರು ಡಿಎಸ್‌ಟಿ-ಎಸ್‌ಇಆರ್‌ಬಿ ಜೂನಿಯರ್ ರಿಸರ್ಚ್ ಫೆಲೋಶಿಪ್ 2021 ಕ್ಕೆ ಅರ್ಜಿ ಆಹ್ವಾನಿಸಿದೆ.
- **ಅರ್ಹತೆ:** ಇಸಿ (ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್), ಸಿಎಸ್‌ಇ (ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್/ ಎಲೆಕ್ಟ್ರಿಕಲ್ ಎಂಜಿನಿಯರಿಂಗ್), ಐಟಿ (ಇನ್‌ಫಾರ್‌ಮೇಷನ್ ಟೆಕ್ನಾಲಜಿ) ಯಲ್ಲಿ ಎಂಟೆಕ್, ಎಂಎಸ್, ಎಂಇ ಮುಗಿಸಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.
- **ಆರ್ಥಿಕ ಸಹಾಯ:** ವೈದ್ಯಕೀಯ ವೆಚ್ಚವನ್ನೂ ಸೇರಿಸಿ, ತಿಂಗಳಿಗೆ ₹ 28,000 ವರೆಗೂ ಭತ್ಯೆ ಸಿಗಲಿದೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಫೆಬ್ರುವರಿ 28, 2021
- **ಅರ್ಜಿ ಸಲ್ಲಿಕೆ ವಿಧಾನ:** ಇ-ಮೇಲ್ ಮೂಲಕ
- **ಹೆಚ್ಚಿನ ಮಾಹಿತಿ:** www.b4s.in/praja/AGM7

ಟೆಕ್ನಿಕಲ್ ಬರವಣಿಗೆ

ತಂತ್ರಜ್ಞಾನ ಮಾಹಿತಿ ಜೊತೆ ಕೌಶಲವೂ ಬೇಕು

ರಾಕೇಶ ವಿ. ತಾಳಿಕೋಟಿ

ಆನ್‌ಲೈನ್ ಯುಗದಲ್ಲಿ ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳಲು ಆದಾಯದ ಮೂಲಗಳನ್ನಾಗಿ ಪರಿವರ್ತಿಸಬಹುದಾದ ಅನೇಕ ಉದ್ಯೋಗಾವಕಾಶಗಳನ್ನು ನಮ್ಮದಾಗಿಸಿಕೊಳ್ಳಬಹುದು. ಇದಕ್ಕೆ ಉತ್ತಮ ಉದಾಹರಣೆ ಪತ್ರಿಕೋದ್ಯಮದಲ್ಲಿ ಜನಪ್ರಿಯವಾಗಿರುವ ತಾಂತ್ರಿಕ ಬರವಣಿಗೆ (ಟೆಕ್ನಿಕಲ್ ರೈಟಿಂಗ್).

ಸಾಮಾನ್ಯವಾಗಿ ವಿಜ್ಞಾನ- ತಂತ್ರಜ್ಞಾನ ಕ್ಷೇತ್ರದಲ್ಲಿರುವವರೇ ಈ ಬರವಣಿಗೆ ಮಾಡುತ್ತಾರೆ ಎಂಬ ನಂಬಿಕೆ ಇದೆ. ಆದರೆ ತಂತ್ರಜ್ಞಾನದ ಕುರಿತ ಮಾಹಿತಿಯ ಜೊತೆಯಲ್ಲಿ ಕೌಶಲಗಳನ್ನು ಮೈಗೂಡಿಸಿಕೊಂಡಿರುವ ಪ್ರತಿಯೊಬ್ಬರಿಗೂ ಈ ಕ್ಷೇತ್ರ ಕೆಂಪು ಹಾಸಿನ ಸ್ವಾಗತ ನೀಡುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ತಾಂತ್ರಿಕ ಬರವಣಿಗೆ ಎಂದರೇನು?

ನಿರ್ದಿಷ್ಟವಾದ ವಿಷಯವನ್ನು ಗಮನದಲ್ಲಿಟ್ಟುಕೊಂಡು ಆಯಾ ಉತ್ಪನ್ನ, ಗ್ರಾಹಕರು, ಕಂಪನಿಗಳ ನಿಯಮಾವಳಿಗಳಿಗೆ ತಕ್ಕಂತೆ, ಸಮಯಕ್ಕನುಸಾರವಾಗಿ ನಿಗದಿತ ಅವಧಿಯಲ್ಲಿ ಮತ್ತು ಸ್ಥಳಾವಕಾಶಗಳಿಗೆ ಸೂಕ್ತವಾಗಿ ಬರೆದು ಕೊಡುವ ಬರವಣಿಗೆಯ ಸ್ವರೂಪವನ್ನು ತಾಂತ್ರಿಕ ಬರವಣಿಗೆ ಅಥವಾ ಟೆಕ್ನಿಕಲ್ ರೈಟಿಂಗ್ ಎನ್ನಬಹುದು. ಇತರ ಬರವಣಿಗೆಗಳಿಗಿಂತ ತುಸು ಭಿನ್ನವಾದ ಹಾಗೂ ಸ್ಪಷ್ಟವಾದ ಬರವಣಿಗೆಯಿದು. ತಂತ್ರಜ್ಞಾನ ಆಧಾರಿತ ವಿಷಯಗಳನ್ನು ಸರಳ ಭಾಷೆಯಲ್ಲಿ ಬಳಕೆದಾರರಿಗೆ ಅರ್ಥೈಸುವ ವಿಧ ಎನ್ನಬಹುದು.

ಟೆಕ್ನಿಕಲ್ ರೈಟಿಂಗ್ ಆರಂಭಿಸುವುದು ಹೇಗೆ?

- ಮೊದಲು ನಿಮಗಿಷ್ಟವಾದ ಕಂಪನಿಯನ್ನು ಮತ್ತು ಅಲ್ಲಿರುವ ಕೆಲಸದ ವೈಖರಿಯನ್ನು ಗಮನಿಸಿ.
- ಅದಕ್ಕೆ ತಕ್ಕಂತೆ ಜ್ಞಾನ ಮತ್ತು ಕೌಶಲಗಳನ್ನು ಕರಗತ ಮಾಡಿಕೊಳ್ಳಿ.
- ಮುಖ್ಯವಾಗಿ ಭಾಷೆಯ ಮೇಲೆ ಪ್ರಭುತ್ವ ಸಾಧಿಸಬೇಕು.
- ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳನ್ನು ಕರಗತ ಮಾಡಿಕೊಳ್ಳಲು ಹೆಚ್ಚಾಗಿ ವೈಜ್ಞಾನಿಕ ಸಂಶೋಧನಾ ಪೇಪರ್‌ಗಳನ್ನು ಓದಬೇಕು.
- ವಿಷಯ ಸಂಗ್ರಹ ಮಾಡಿಕೊಳ್ಳಿ
- ಹೊಸ ಪದಗಳನ್ನು ಪಟ್ಟಿ ಮಾಡಿಕೊಳ್ಳಿ.
- ಟೆಕ್ನಿಕಲ್ ಕೈಪಿಡಿ (ಮ್ಯಾನುವಲ್)ಗಳನ್ನು ಅಭ್ಯಸಿಸಿ.
- ಆನ್‌ಲೈನ್‌ನಲ್ಲಿ ಸಿಗುವ ಗ್ರಾಹಕ ಸೇವಾ ಗೈಡ್‌ಗಳನ್ನು, ಟೆಕ್ನಿಕಲ್ ವರದಿಗಳನ್ನು ದಿನವೂ ಓದಿ.
- ತಾಂತ್ರಿಕ ಬರವಣಿಗೆ ಕಂಪನಿಗಳ ವೆಬ್‌ಸೈಟ್‌ಗಳಲ್ಲಿ ಪ್ರಕಟವಾಗುವ ವಿಷಯಗಳನ್ನು ಪರಿಶೀಲಿಸಿ.
- ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳ ಮೇಲಿರುವ ಸೂಚನೆಗಳನ್ನು ಗಮನಿಸಿ ಹಾಗೂ ಕೈಪಿಡಿಗಳನ್ನು ಓದಿ.

ಅವಕಾಶಗಳು

ತಾಂತ್ರಿಕ ಬರಹಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ. ಬಳಕೆದಾರರ ಕೈಪಿಡಿ ಬರವಣಿಗೆ, ಸಾಂಪ್ರದಾಯಿಕ ತಾಂತ್ರಿಕ ಬರವಣಿಗೆ ಮತ್ತು ತಂತ್ರಜ್ಞಾನ ಆಧಾರಿತ ಮಾರುಕಟ್ಟೆ ಬರವಣಿಗೆ.

ಇವುಗಳಲ್ಲಿ ನಿಮ್ಮ ಆಯ್ಕೆಯ ವಿಧವನ್ನು ಮೊದಲು ಗುರುತಿಸಿಕೊಳ್ಳಿ. ಕೈಪಿಡಿ ಬರವಣಿಗೆಯಲ್ಲಿ ಬಳಕೆದಾರರಿಗೆ ಉತ್ಪನ್ನವನ್ನು ಹೇಗೆ ಬಳಸಬೇಕೆಂಬ ಮಾಹಿತಿ ನೀಡಬೇಕಾಗುತ್ತದೆ (ಉದಾ: ಮೊಬೈಲ್ ಫೋನ್, ಲ್ಯಾಪ್‌ಟಾಪ್ ಮ್ಯಾನುವಲ್). ಸಾಂಪ್ರದಾಯಿಕ ತಾಂತ್ರಿಕ ಬರವಣಿಗೆಯಲ್ಲಿ ಕೈಗಾರಿಕೆಗಳ ವಾರ್ಷಿಕ ಸಾಧನೆ, ವೈದ್ಯಕೀಯ ಪ್ರಯೋಗಗಳ ಸರಣಿ ಸಾರಾಂಶಗಳನ್ನು ಬರೆಯಬೇಕಾಗುತ್ತದೆ. ಇನ್ನು ಮಾರುಕಟ್ಟೆ ಆಧಾರಿತ ಬರವಣಿಗೆಯಲ್ಲಿ ತಮ್ಮ ಉತ್ಪನ್ನಗಳಿಂದ ಜನಸಾಮಾನ್ಯರಿಗೆ, ದೇಶಕ್ಕೆ ಉಪಯುಕ್ತ ಕೊಡುಗೆ ನೀಡಿರುವುದು, ಕಂಪನಿಯ ಮಾರುಕಟ್ಟೆ ವಿಸ್ತರಣೆ ಕುರಿತು ಬರೆಯುವ ಟಾಸ್ಕ್ ನೀಡಲಾಗಿರುತ್ತದೆ. ಇವುಗಳಲ್ಲಿ ನಮ್ಮ ಕೌಶಲಗಳಿಗೆ ಪೂರಕವಾದ ಶೈಲಿಯನ್ನು ಆಯ್ದುಕೊಂಡು ಬರವಣಿಗೆ ಆರಂಭಿಸಬೇಕು.

ಟೆಕ್ನಿಕಲ್ ಕ್ರಿಯೇಟಿವ್ ರೈಟಿಂಗ್, ಫಿಕ್ಷನ್ ರೈಟಿಂಗ್, ಕಂಟೆಂಟ್ ರೈಟಿಂಗ್, ಮೀಡಿಯಾ ಸೋರ್ಸಿಂಗ್, ಸೋಶಿಯಲ್ ಮೀಡಿಯಾ ಡಾಕ್ಯುಮೆಂಟೇಷನ್, ಪ್ರಾಜೆಕ್ಟ್ ಪ್ರಪೋಸಲ್ ರೈಟಿಂಗ್, ಆನ್‌ಲೈನ್ ಟೆಕ್ನಿಕಲ್ ಡಾಕ್ಯುಮೆಂಟ್ ಎಡಿಟಿಂಗ್ ಹೀಗೆ ಇನ್ನೂ ಅನೇಕ ಮಾದರಿ ಅವಕಾಶಗಳು ಈ ಕ್ಷೇತ್ರದಲ್ಲಿವೆ.

ತಾಂತ್ರಿಕ ಬರಹಗಾರರಿಗೆ ಆರಂಭಿಕ ಹಂತದಲ್ಲಿ ಕನಿಷ್ಠ 5 ಅಂಕಿಗಳ ವೇತನ ಸಿಗುವುದು ಖಚಿತ. ಅಂದರೆ ₹ 50,000 ದಿಂದ ಆರಂಭಿಸಿ ಮುಂದೆ ಎರಡರಿಂದ-ಮೂರು ಲಕ್ಷ ಮಾಸಿಕ ವೇತನ ಪಡೆಯುವ ಅವಕಾಶಗಳಿವೆ.

ಶೈಕ್ಷಣಿಕ ಅರ್ಹತೆ

ತಾಂತ್ರಿಕ ಬರವಣಿಗೆ ಆರಂಭಿಸಲು ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ವಿಸ್ತ್ರತವಾದ ವಿಷಯ ನಿರೂಪಣೆ, ತಂತ್ರಾಂಶದ ಸೊಗಡು ನಮ್ಮಲ್ಲಿದ್ದರೆ ಅದರಿಂದ ಬರವಣಿಗೆಗೆ ಮೆರಗು ನೀಡುವ ಕೆಲಸವನ್ನು ಚೊಕ್ಕವಾಗಿ ಮಾಡಿದರೆ ಆಯಿತು. ಎರಡರಿಂದ ಮೂರು ಭಾಷೆಗಳ ಹಿಡಿತವಿರುವವರು, ಭಾಷಾಂತರ ಕಲೆಯನ್ನು ಕರಗತ ಮಾಡಿಕೊಂಡಿರುವವರು ಸರಳ ನಿರೂಪಣೆ ಮೂಲಕ ಓದುಗರನ್ನು ತಲುಪಲು ಸಾಧ್ಯವಾಗುತ್ತದೆ. ವಿವಿಧ ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ ತಿಳಿದುಕೊಂಡಿದ್ದರೆ ಪ್ರಭಾವಶಾಲಿಯಾಗಿ ಬರವಣಿಗೆಯನ್ನು ಪ್ರಸ್ತುತಪಡಿಸಬಹುದು. ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ವಿಭಾಗದ ಪಠ್ಯದಲ್ಲಿ ಟೆಕ್ನಿಕಲ್ ರೈಟಿಂಗ್ ಎಂಬ ವಿಷಯವನ್ನು ಪರಿಚಯಿಸಿ ಬೋಧಿಸಲಾಗುತ್ತಿದೆ.

(ಲೇಖಕರು: ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸೊಲೆನಾಯ್ಡ್‌ನಲ್ಲಿ ವಿದ್ಯುತ್ ಪ್ರವಾಹದಿಂದ ಉಂಟಾದ ಕಾಂತಕ್ಷೇತ್ರ



ಎಸ್ಸೆಸ್ಸೆಲ್ಸಿ

ಭೌತಶಾಸ್ತ್ರ

ಅವಾಹಕ ಹೊದಿಕೆ ಇರುವ ತಾಮ್ರದ ತಂತಿಯ ಅನೇಕ ಸುರುಳಿಗಳನ್ನು ಒತ್ತೊತ್ತಾಗಿ ಸುತ್ತಿರುವ ಸಿಲಿಂಡರ್ ಆಕಾರವನ್ನು ಸೊಲೆನಾಯ್ಡ್ ಎನ್ನುವರು.

ಸೊಲೆನಾಯ್ಡ್ ಸುತ್ತಲೂ ಉಂಟಾಗುವ ಕಾಂತೀಯ ಬಲರೇಖೆಗಳು ದಂಡಕಾಂತದ ಸುತ್ತಲೂ ಉಂಟಾದ ಕಾಂತಕ್ಷೇತ್ರದಂತೆ ಇದ್ದು, ಇದು ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಹೊಂದಿದೆ. ಸೊಲೆನಾಯ್ಡ್‌ನ ಒಳಭಾಗದಲ್ಲಿ ಕಾಂತೀಯ ಬಲರೇಖೆಗಳು ಪರಸ್ಪರ ಸಮಾನಾಂತರ ಸರಳ ರೇಖೆಗಳಂತಿದ್ದು, ಕಾಂತಕ್ಷೇತ್ರವು ಒಳಭಾಗದಲ್ಲಿ ಏಕರೂಪದಲ್ಲಿರುತ್ತದೆ.

ಹೆಚ್ಚು ಕಾಂತಕ್ಷೇತ್ರ ಹೊಂದಿರುವ ಸೊಲೆನಾಯ್ಡ್‌ನ ಒಳಭಾಗದಲ್ಲಿ ಕಾಂತಿಯ ವಸ್ತುವಾದ ಕಬ್ಬಿಣವನ್ನು ಇರಿಸಿದಾಗ ಅದು ಕಾಂತದಂತೆ ವರ್ತಿಸುತ್ತದೆ. ಈ ಪರಿಣಾಮವನ್ನು 'ವಿದ್ಯುತ್ಕಾಂತೀಯ' ಪರಿಣಾಮವೆಂದೂ ಉಂಟಾದ ಕಾಂತವನ್ನು 'ವಿದ್ಯುತ್ಕಾಂತ' ಎಂದೂ ಕರೆಯುತ್ತಾರೆ.

ಕಾಂತಕ್ಷೇತ್ರದಲ್ಲಿನ ವಿದ್ಯುತ್ ಪ್ರವಾಹವಿರುವ ವಾಹಕದ ಮೇಲಿನ ಬಲ

ಆಂಡ್ರೆ ಮೇರಿ ಆಂಪಿಯರ್ ಅವರು ಕಾಂತವು ವಿದ್ಯುತ್ ಪ್ರವಾಹವಿರುವ ವಾಹಕದ ಮೇಲೆ ಸಮ ಮತ್ತು ವಿರುದ್ಧವಾದ ಬಲವನ್ನು ಪ್ರಯೋಗಿಸುತ್ತದೆ ಎಂದು ಸೂಚಿಸಿದರು.

ವಾಹಕದ ಮೇಲೆ ವರ್ತಿಸುವ ಬಲವು ವಿದ್ಯುತ್ ಪ್ರವಾಹದ ದಿಕ್ಕು ಮತ್ತು ಕಾಂತಕ್ಷೇತ್ರದ ದಿಕ್ಕನ್ನು ಅವಲಂಬಿಸಿದ್ದು, ವಿದ್ಯುತ್ ಪ್ರವಾಹದ ದಿಕ್ಕು ಕಾಂತಕ್ಷೇತ್ರದ ದಿಕ್ಕನ್ನು ಅವಲಂಬಿಸಿದ್ದು, ವಿದ್ಯುತ್ ಪ್ರವಾಹದ ದಿಕ್ಕು ಕಾಂತಕ್ಷೇತ್ರದ ದಿಕ್ಕಿಗೆ ಲಂಬವಾಗಿದ್ದಾಗ ಬಲದ ಪರಿಣಾಮವು ಅಧಿಕವಾಗಿರುತ್ತದೆ.

ಕಾಂತಕ್ಷೇತ್ರದ ದಿಕ್ಕು ವಿದ್ಯುತ್ ಪ್ರವಾಹದ ದಿಕ್ಕಿಗೆ ಲಂಬವಾಗಿರುವುದಲ್ಲದೆ, ಉಂಟಾದ ಬಲವು ಇವೆರಡಕ್ಕೂ ಲಂಬವಾಗಿರುತ್ತದೆ.

ಫ್ಲೆಮಿಂಗ್‌ನ ಎಡಗೈ ನಿಯಮ

ಎಡಗೈ ಹೆಬ್ಬೆರಳುಗಳು, ತೋರು ಬೆರಳು ಮತ್ತು ಮಧ್ಯದ ಬೆರಳುಗಳನ್ನು ಪರಸ್ಪರ ಲಂಬವಾಗಿರುವಂತೆ ಹಿಡಿದುಕೊಂಡಾಗ ತೋರು ಬೆರಳು ಕಾಂತಕ್ಷೇತ್ರದ ದಿಕ್ಕನ್ನೂ, ಮಧ್ಯದ ಬೆರಳು ವಿದ್ಯುತ್ ಪ್ರವಾಹದ ದಿಕ್ಕನ್ನೂ ಹಾಗೂ ಹೆಬ್ಬೆರಳು ವಾಹಕದ ಮೇಲೆ ವರ್ತಿಸುವ ಬಲದ ದಿಕ್ಕನ್ನೂ ಸೂಚಿಸುತ್ತದೆ.



ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ರಸಾಯನಶಾಸ್ತ್ರ ವಿಭಾಗದ 'ಮೆಟಲ್ಸ್ ಅಂಡ್ ನಾನ್ ಮೆಟಲ್ಸ್ ಐಯೊನಿಕ್ ಬಾಂಡಿಂಗ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ನ್ಯೂಕ್ಲಿಯಸ್‌ಗಳು

(ಮುಂದುವರಿದ ಭಾಗ)

ಭೌತಶಾಸ್ತ್ರ

ದ್ವಿತೀಯ ಪಿಯುಸಿ

ವಿಕಿರಣಪಟು ಕ್ಷಯಿಕೆ ನಿಯಮ

ವಿಕಿರಣಪಟು ಪದಾರ್ಥದಲ್ಲಿ a, B ಅಥವಾ γ – ಕ್ಷಯಿಕೆ ಆದಾಗ ಕ್ಷಯಿಕೆ ಹೊಂದುವ ನ್ಯೂಕ್ಲಿಯಸ್‌ಗಳ ಸಂಖ್ಯೆಯ ದರವು γ ಪದಾರ್ಥದಲ್ಲಿರುವ ನ್ಯೂಕ್ಲಿಯಸ್‌ಗಳ ಸಂಖ್ಯೆಗೆ ನೇರ ಅನುಪಾತದಲ್ಲಿರುತ್ತದೆ.

ನ್ಯೂಕ್ಲಿಯಸ್‌ಗಳ ಸಂಖ್ಯೆ N ಆಗಿದೆ ಎಂದು ಪರಿಗಣಿಸಿ t = 0



Δt ಕಾಲದಲ್ಲಿ ΔN ರಷ್ಟು ನ್ಯೂಕ್ಲಿಯಸ್ ಕ್ಷಯಿಸಿದರೆ,

$$\Delta \frac{\Delta N}{\Delta t} \alpha N \quad \text{ಅಥವಾ} \quad \frac{\Delta N}{\Delta t} \lambda N$$

ಇಲ್ಲಿ $\lambda \rightarrow$ ವಿಕಿರಣ ಪಟುವು ಕ್ಷಯಿಕೆ ಸ್ಥಿರಾಂಕ ಅಥವಾ ವಿಘಟನೆ ಸ್ಥಿರಾಂಕ ಆದರೆ Δt ಪದಾರ್ಥದಲ್ಲಿ ಸಮಯದಲ್ಲಿ ನ್ಯೂಕ್ಲಿಯಸ್‌ಗಳ ಸಂಖ್ಯೆ ಕ್ಷೀಣಿಸುವುದರಿಂದ dN = -ΔN

ಆದ್ದರಿಂದ $\frac{dN}{dt} = -\lambda N \quad (1)$

ಅಥವಾ $\frac{dN}{N} = \lambda dt$

ಸಮೀಕರಣವನ್ನು ಎರಡೂ ಕಡೆ ಅನುಕಲಿಸಿದಾಗ

$$\int_{Y_0}^{N} \frac{dN}{N} = -\lambda \int_{t_0}^{t} dt$$

ಇಲ್ಲಿ N_0 ಮತ್ತು t_0 ಕ್ರಮವಾಗಿ ಆರಂಭಿಕ ನ್ಯೂಕ್ಲಿಯಸ್‌ಗಳ ಸಂಖ್ಯೆ ಮತ್ತು ಸಮಯ.

$$ln\,N \Big|_{N_0}^{N} = -\lambda t \Big|_{t_0}^{t}$$

$$ln\,N - ln\,N_0 = -\lambda\,[t - t_0]$$

ಪ್ರಾರಂಭಿಕ ಸಮಯ t = 0 ಎಂದುಕೊಂಡಾಗ

$$\frac{l\,n\,N}{N} = -\lambda t$$

$$\frac{N}{N_0} == -\lambda t$$

$$N = N_0\,e^{-\lambda t} \quad \text{---------(2)}$$

ಮೇಲಿನ ಸಮೀಕರಣವು ನ್ಯೂಕ್ಲಿಯಸ್ ಕ್ಷಯಿಕೆಯು ಘಾತಾಂಕೀಯ ಕ್ಷಯಿಕೆ ಎಂದು ಪ್ರತಿಪಾದಿಸುತ್ತದೆ. ಮಾದರಿ ಪದಾರ್ಥದ ಕ್ಷಯಿಕೆ ದರವನ್ನು ಪಟುತ್ವ ಎಂದು ಕರೆಯುತ್ತಾರೆ. ಇದರ ಏಕಮಾನ ಬೆಕ್ವೆರಲ್ ಅದನ್ನು ಇನ್ನೊಂದು ಏಕಮಾನ ಕ್ಯೂರಿಯಿಂದಲೂ ಅಳೆಯುತ್ತಾರೆ.

ಮಾದರಿ ಪದಾರ್ಥದ ಕ್ಷಯಿಕೆ ದರವನ್ನು ಪಟುತ್ವ ಎಂದು ಕರೆಯುತ್ತಾರೆ. ಇದರ SI ಏಕಮಾನ ಬೆಕ್ವೆರಲ್ ಅದನ್ನು ಇನ್ನೊಂದು SI ಏಕಮಾನ ಕ್ಯೂರಿಯಿಂದಲೂ ಅಳೆಯುತ್ತಾರೆ.

$$1 = 3.7 \times 10^{10}\,Bq$$

ಅರ್ಧಾಯು

ಇದು ಮಾದರಿ ಪದಾರ್ಥವು ತನ್ನಲ್ಲಿರುವ ಆರಂಭಿಕ ನ್ಯೂಕ್ಲಿಯಸ್‌ಗಳನ್ನು ಅರ್ಧಕ್ಕೆ $\left(\frac{N_0}{Q}\right)$ ಇಳಿಸಲು ಬೇಕಾಗುವ ಸಮಯವಾಗಿದೆ.

N_0 ನ್ನು ಆರಂಭಿಕ ಪದಾರ್ಥದ ಸಂಖ್ಯೆ ಎಂದು ತಿಳಿಯಿರಿ.

$^{T}1/_{2}$ ಕಾಲದಲ್ಲಿ ಪದಾರ್ಥದ ಸಂಖ್ಯೆಯು $\frac{N_0}{2}$ ಆಗುತ್ತದೆ.

ಆಗ $N = \frac{N_0}{2}$ ಮತ್ತು $t = {}^{T}1/_{2}$

ಇದನ್ನು ಸಮೀಕರಣ (2) ದಲ್ಲಿ ಹಾಕಿದಾಗ

$$\frac{N_0}{2} = N_0\,e^{-\lambda t_{y2}}$$

$$1/_2 = e^{-\lambda t_{y2}}$$

$$l\,T_{y2} = 10\ g\ (1/_2)$$

$$\lambda\,T_{y2} = 10\ g\ 2$$

$$T'_{1/2} = \frac{1}{\lambda}\,[10\ g\ 2]$$

$$T_{y2} = \frac{0.693}{\lambda}$$

ಸರಾಸರಿ ಆಯುಷ್ಯ

ಮಾದರಿ ಪದಾರ್ಥವು ತನ್ನಲ್ಲಿರುವ ಆರಂಭಿಕ ನ್ಯೂಕ್ಲಿಯಸ್‌ಗಳನ್ನು $\frac{1}{e}$ ರಷ್ಟು ಇಳಿಸಲು ಬೇಕಾಗುವ ಸಮಯವಾಗಿದೆ.

$$\text{ಸರಾಸರಿ ಆಯುಷ್ಯ} = \frac{\text{ಅರ್ಧಾಯು}}{0.693}$$

$$T_{mean}\ \frac{T_{y2}}{0.693}$$

ಬೈಜಿಕ ವಿದಳನ

ಒಂದು ಭಾರ ನ್ಯೂಕ್ಲಿಯಸ್ ಎರಡು ಅಥವಾ ಹೆಚ್ಚಿನ ಮಧ್ಯಾವದಿ ರಾಶಿ ತುಣುಕುಗಳಾಗಿ (ವಿದಳನ) ಕ್ಷಯಿಸಿದಾಗ ನಿವ್ವಳ ಶಕ್ತಿಯು ಬಿಡುಗಡೆಯಾಗುವುದನ್ನು ಬೈಜಿಕ ವಿದಳನ ಎನ್ನುವರು.

ಉದಾ:-ಯುರೇನಿಯಂ ಐಸೋಟೋಪು $^{235}_{92}U$ ನ್ನು

ನ್ಯೂಟ್ರಾನುಗಳಿಂದ ತಾಡಿಸಿದಾಗ ಬೇರಿಯಂ $^{144}_{56}B$ ಮತ್ತು ಕ್ರಿಪ್ಟಾನ್ $^{89}_{36}Kr$ ಮತ್ತು 3 ನ್ಯೂಟ್ರಾನ್‌ಗಳಿಗೆ ಒಡೆಯುತ್ತವ.

$$^{1}_{0}n + {}^{235}_{92}U \rightarrow {}^{236}_{92}U \rightarrow {}^{144}_{56}Ba + {}^{89}_{36}Kr + 3\,^{1}_{0}n + \text{ಶಕ್ತಿ}$$

ಈ ಪ್ರಕ್ರಿಯೆಯಲ್ಲಿ ಶಕ್ತಿ ನ್ಯೂನ್ಯತೆಯು 0.223u ಆಗಿದ್ದು ಅದು 200 Me U ನಷ್ಟು ನಿವ್ವಳ ಶಕ್ತಿಯಾಗಿ ಬಿಡುಗಡೆಯಾಗುತ್ತದೆ.



ಈ ಮೇಲಿನ ಉದಾಹರಣೆಯನ್ನು ಬೇರೆ ಮಧ್ಯಮ ರಾಶಿಯ ತುಣುಕುಗಳ ಜೋಡಿಯನ್ನು ಉತ್ಪಾದಿಸಬಹುದು.

$$^{1}_{0}n + {}^{235}_{92}U \rightarrow {}^{236}_{92}U \rightarrow {}^{133}_{51}Sb + {}^{99}_{41}Nb + 4\,^{1}_{0}n + \text{ಶಕ್ತಿ}$$

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರಿಕ್ ಪೊಟೆನ್ಷಿಯಲ್ ಹಾಗೂ ಕೆಪಾಸಿಟೆನ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ರಾಮಾಯಣ–ಮಹಾಭಾರತ ಪುರಾಣ: ಸಾಹಿತಿ ಎಸ್.ಎಲ್. ಭೈರಪ್ಪ ಹೇಳಿಕೆ

‘ರಾಮ–ಕೃಷ್ಣ ಇತಿಹಾಸ ಪುರುಷರಷ್ಟೇ’

ಪ್ರಜಾವಾಣಿ ವಾರ್ತೆ

ಮೈಸೂರಿನಲ್ಲಿ ‘ಪರ್ವ’ ಕಾದಂಬರಿಯ ರಷ್ಯನ್ ಮತ್ತು ಮ್ಯಾಂಡರಿನ್ ಭಾಷೆಯ ಆವೃತ್ತಿಯನ್ನು ಶತಾವಧಾನಿ ಆರ್.ಗಣೇಶ್ ಭಾನುವಾರ ಬಿಡುಗಡೆ ಮಾಡಿದರು. ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಸಾಹಿತಿ ಎಸ್.ಎಲ್.ಭೈರಪ್ಪ, ರಂಗ ನಿರ್ದೇಶಕ ಪ್ರಕಾಶ್ ಬೆಳವಾಡಿ ಇದ್ದಾರೆ

ಮೈಸೂರು: ‘ರಾಮಾಯಣ–ಮಹಾಭಾರತ ಮಿತ್ (ಪುರಾಣ). ದೇಶದಲ್ಲಿ ಮಿತ್‌ಗಳೇ ತುಂಬಿವೆ. ಇವು ಧರ್ಮಗಳನ್ನೂ ಆಕ್ರಮಿಸಿವೆ. ಶ್ರೀರಾಮ-ಕೃಷ್ಣ ಇತಿಹಾಸ ಪುರುಷರಷ್ಟೇ. ಇವರಿಬ್ಬ-ರನ್ನೂ ನನ್ನ ಕಾದಂಬರಿಗಳಲ್ಲಿ ಇತಿಹಾಸ ಪುರುಷರೆಂದೇ ಬಿಂಬಿಸಿದ್ದೇನೆ’ ಎಂದು ಸಾಹಿತಿ ಎಸ್.ಎಲ್.ಭೈರಪ್ಪ ಭಾನುವಾರ ಇಲ್ಲಿ ಹೇಳಿದರು.

ಮೈಸೂರು ರಂಗಾಯಣ, ಎಸ್.ಎಲ್.ಭೈರಪ್ಪ ಪ್ರತಿಷ್ಠಾನ ಆಯೋಜಿಸಿದ್ದ ‘ಪರ್ವ ವಿರಾಟ್ ದರ್ಶನ’ ಪರ್ವ ಕಾದಂಬರಿ ಮತ್ತು ರಂಗ ಪ್ರಸ್ತುತಿ ವಿಚಾರ ಸಂಕಿರಣದಲ್ಲಿ ‘ಪರ್ವ’ ನಾಲ್ಕು ದಶಕದ ನೆನಪು ಕುರಿತಂತೆ ಮಾತನಾಡಿದ ಅವರು, ‘ದೇವರೆಂದು ಬಿಂಬಿಸಿಕೊಂಡು ಬರೆದಿದ್ದರೆ ಅತ್ತಿತ್ತ ನೇತಾಡಿಕೊಂಡಿರ-ಬೇಕಿತ್ತು’ ಎಂದರು.

‘ರಾಮ ದೇವರಾಗಿದ್ದರೆ, ಸೀತೆಯ ಅಪಹರಣವಾದಾಗ ಆಕೆ ಎಲ್ಲಿದ್ದಾಳೆ ಎಂಬುದನ್ನು ತಕ್ಷಣಕ್ಕೆ ಏಕೆ ಕಂಡುಕೊ-ಳ್ಳಲಾಗಲಿಲ್ಲ ಎಂದು ನಾನು ವಿದ್ಯಾ-ರ್ಥಿಯಾಗಿದ್ದಾಗ ಮೇಷ್ಟ್ರನ್ನೇ ಪ್ರಶ್ನಿಸಿದ್ದೆ’ ಎಂದು ಹೇಳಿದರು.

‘ಪರ್ವದ ಕುರಿತಂತೆ ಹಲವರು ನನ್ನನ್ನು ಪ್ರಶ್ನಿಸುತ್ತಾರೆ. ‘ಪುರಾಣದ ಕಲ್ಪನೆಯನ್ನೇ ತೆಗೆದಿದ್ದೀರಿ. ಇದರಿಂದ ನಿಮ್ಮ ಸಾಧನೆ ಏನು?’ ಎಂದಿದ್ದಾರೆ. ಮಹಾಭಾರತದಲ್ಲಿನ ಲೋಪ–ದೋಷ ಸರಿಪಡಿಸುವ ಯತ್ನ ನಡೆಸಿರುವೆ. ಮನುಷ್ಯ ಸ್ವಭಾವವನ್ನು ಆಧಾರ-ವಾಗಿಟ್ಟುಕೊಂಡು ಬರೆದಿರುವೆ. ಮೂಲ ಮಹಾಭಾರತದ ಶೇ 20ರಷ್ಟೇ ನನ್ನ ಕಾದಂಬರಿಯ-ಲ್ಲಿರುವುದು. ಉಳಿದದ್ದೆಲ್ಲಾ ನನ್ನ ಸೃಷ್ಟಿಯಲ್ಲಿ ರಚನೆಯಾಗಿದ್ದು. ಇದೇ ‘ಪರ್ವ’ದ ಶಕ್ತಿಯಾಗಿದೆ’ ಎಂದು ವಿವರಿಸಿದರು.

ಪರ್ವ ರಚನೆಗಾಗಿಯೇ 50 ವರ್ಷದ ಹಿಂದೆ ದ್ವಾರಕೆಗೆ ಹೋಗಿದ್ದೆ. ವರ್ಷದ ಹಿಂದೆ ಮತ್ತೆ ಹೋಗಿದ್ದೆ. ಎಲ್ಲವೂ ಬದಲು. ಪಂಜಾಬಿಮಯ. ಪಂಜಾಬಿಯವ್ರು ಮಾಡುವಷ್ಟು ಸದ್ದು ಯಾರೂ ಮಾಡಲ್ಲ

ಎಸ್.ಎಲ್.ಭೈರಪ್ಪ, ಸಾಹಿತಿ

ಮೊದಲ ದಿನವೇ ₹ 2 ಲಕ್ಷ ಮೊತ್ತದ ಟಿಕೆಟ್ ಮಾರಾಟವಾಗಿವೆ. ಮೊದಲ ಪ್ರದರ್ಶನದ ₹ 1,000 ಮೌಲ್ಯದ ಎಲ್ಲ ಟಿಕೆಟ್ ಖಾಲಿ. ಭಾರಿ ಬೇಡಿಕೆ ವ್ಯಕ್ತವಾಗಿದೆ

ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಜಂಟಿ ನಿರ್ದೇಶಕ, ರಂಗಾಯಣ

‘ಸುತ್ತಮುತ್ತಲಿನ ವಿದ್ಯಮಾನ, ವಾಸ್ತವ ಬಿಂಬಿಸುವುದೇ ಕಾದಂಬರಿ. ವಾಸ್ತವ ಅತಿಯಾದರೆ ಬೋರ್ ಆಗಲಿದೆ. ರಸ, ಧ್ವನಿ, ಔಚಿತ್ಯ ಅಡಗಿರಬೇಕು. ಎಲ್ಲರೂ ಕಾದಂಬರಿ ರಚಿಸಲು ಇದೇ ಸೂತ್ರ ಬಳಸೋದು. ಮಾರ್ಕ್ಸಿಸ್ಟ್‌ಗಳು ಮಾತ್ರ ಇದನ್ನು ಬಿಟ್ಟಿದ್ದಾರೆ’ ಎಂದರು.

ಶತಾವಧಾನಿ ಆರ್.ಗಣೇಶ್ ಉಪನ್ಯಾಸ ನೀಡಿ, ‘ಪರ್ವ ಚಿರಂಜೀವಿ. ಮಹಾಭಾರತಕ್ಕಿಂತ ಭಿನ್ನವಾದುದು. ಒಳನೋಟ ಕೊಟ್ಟ ಮೊದಲನೆಯದ್ದು. ಮತ್ತೊಬ್ಬರ ದೌರ್ಬಲ್ಯದ ಲಾಭ ಪಡೆಯದ, ಭಾರತೀಯ ಕಲಾ–ಕಾವ್ಯ ಪರಂಪರೆ ಮುಂದುವರೆಸಿದ ಭೈರಪ್ಪ; ಸಾಮಾಜಿಕ, ಸಮಕಾಲೀನ, ಸಾರ್ವಕಾಲಿಕ ಕಾದಂಬರಿ ರಚಿಸಿದ್ದಾರೆ’ ಎಂದು ಹೇಳಿದರು.

ಚಿಗುರೊಡೆದ ‘ಪರ್ವ’ ರಂಗಪ್ರಸ್ತುತಿ ಕುರಿತಂತೆ ರಂಗ ನಿರ್ದೇಶಕ ಪ್ರಕಾಶ್ ಬೆಳವಾಡಿ ಮಾತನಾಡಿ, ‘ಏಳೆಂಟು ವರ್ಷದ ಹಿಂದೆಯೇ ಭೈರಪ್ಪ ಬಳಿ ಪ್ರಸ್ತಾಪಿಸಿದ್ದೆ. ಅದಕ್ಕವರು ಕುಂತಿಯನ್ನು ನಕ್ಸಲೈಟ್ ಆಗಿ ಬಿಂಬಿಸಬಾರದು ಎಂಬ ಷರತ್ತು ಹಾಕಿದ್ದರು. ಆಗ ಕಾರ್ಯಗತವಾಗಲಿಲ್ಲ. ಇದೀಗ ರಸಭಂಗವಾಗದಂತೆ ರಂಗಕ್ಕೆ ತರುವ ಯತ್ನ ನಮ್ಮದಾಗಿದೆ’ ಎಂದರು.

ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ‘ಇದೊಂದು ಹೊಸ ಪ್ರಯೋಗ. ಭಾರತೀಯ ರಂಗಭೂಮಿಯಲ್ಲಿ ಮೈಲುಗಲ್ಲಾಗಲಿದೆ. ಮಾರ್ಚ್ 12, 13, 14ರಂದು ವಿಶೇಷ ಪ್ರದರ್ಶನವಿರಲಿದೆ. 25ರಿಂದ ಮೂರು ತಿಂಗಳು ಪ್ರದರ್ಶನಗೊಳ್ಳಲಿದೆ’ ಎಂದು ಹೇಳಿದರು.

ಹೊತ್ತೊಯ್ಯುವ ತಾಳ್ಮೆಯಿತ್ತೇ..?

‘ದ್ರೌಪದಿ ಆಕರ್ಷಿತ ಹೆಣ್ಣು. ಆಕೆಯ ಮೇಲೆ ಹತ್ತಾರು ಜನರ ಕಣ್ಣಿತ್ತು. ವನವಾಸಿ-ಯಾಗಿದ್ದಾಗ ಜಯದ್ರಥ ಅಪಹರಿಸುತ್ತಾನೆ. ಭೀಮನು ಜಯದ್ರಥನನ್ನು ಬಂಧಿಸಿ ಧರ್ಮರಾಯನ ಮುಂದೆ ಎತ್ತಿ ನೆಲಕ್ಕೆ ಬಿಸಾಕುತ್ತಾನೆ.

ತಕ್ಷಣವೇ ಧರ್ಮರಾಯ, ಭೀಮ ಏಕೆ ಹೀಗೆ ಮಾಡುತ್ತೀಯಾ? ಆತ ನಿನ್ನ ತಂಗಿಯ ಗಂಡ. ಮಾತೆ ಗಾಂಧಾರಿ ನೊಂದುಕೊಳ್ಳುವುದಿಲ್ಲವೇ ಎನ್ನುತ್ತಾನೆ. ಏಕೆಂದರೆ ಆತ ಧರ್ಮರಾಯ.

‘ಆದರೆ, ಈ ಮಾತನ್ನು ಕೇಳಿದ ದ್ರೌಪದಿಗೆ ಏನನ್ನಿಸುತ್ತದೆ. ಹೆಂಡತಿಯನ್ನು ರೇಪ್ ಮಾಡಲು ಎತ್ತಿಕೊಂಡು ಹೋದವನ ಪರವೇ ಈ ರೀತಿ ಮಾತನಾಡುತ್ತಿ-ದ್ದಾನಲ್ಲ ರ್‍ಯಾಸ್ಕಲ್ ಎನ್ನಿಸಲ್ಲವೇ? ನಾನು ಬರೆದಿದ್ದು ಈ ದೃಷ್ಟಿಕೋನದಿಂದಲೇ’ ಎಂದು ಭೈರಪ್ಪ ಹೇಳಿದರು.

‘ದ್ರೌಪದಿಗೆ ಆಕರ್ಷಿತನಾದವನಿಗೆ ರಾಜಧಾನಿವರೆಗೆ ಎತ್ತಿಕೊಂಡು ಹೋಗುವಷ್ಟು ತಾಳ್ಮೆ ಎಲ್ಲಿರುತ್ತದೆ. ಯಾವುದೋ ಮರದ ಸಂದಿಯಲ್ಲೋ, ಕೆಳಗೋ ರೇಪ್ ಮಾಡಿ ಬಿಡುತ್ತಿದ್ದನಲ್ಲವೇ? ನಾವು ಈಗೆಲ್ಲಾ ಅತ್ಯಾಚಾರ, ಬಲಾತ್ಕಾರದಂತಹ ಘಟನೆಗಳನ್ನು ನೋಡುತ್ತಿಲ್ಲವೇ’ ಎಂದು ವಿಶ್ಲೇಷಿಸಿದರು.

‘ಟಿಕೆಟ್‌ಗೆ ₹ 1 ಸಾವಿರ ದೊಡ್ಡದಲ್ಲ’

‘ಪರ್ವ ನಾಟಕದ ಟಿಕೆಟ್ ದರ ₹ 1 ಸಾವಿರ ದೊಡ್ಡದಲ್ಲ. ಏಳೂವರೆ ಗಂಟೆಯ ನಾಟಕಕ್ಕೆ ಕಡಿಮೆ ಮೊತ್ತವಿದು’ ಎಂದು ಭೈರಪ್ಪ ಹೇಳಿದರು.

‘ಪರ್ವ’ ನಾಟಕದ ಟಿಕೆಟ್ ಬಿಡುಗಡೆಗೊಳಿಸಿದ ಅವರು, ‘ಎರಡೂವರೆ ಗಂಟೆಯ ಸಿನಿಮಾಗೆ ₹ 300 –₹ 400 ಕೊಡುತ್ತೇವೆ. ಸಿನಿಮಾಗೆ ಹೋಲಿಸಿದರೆ ಈ ನಾಟಕದ ಟಿಕೆಟ್ ದರ ದುಬಾರಿಯಲ್ಲ’ ಎಂದರು.

‘ದುಡ್ಡು ಮುಖ್ಯವಲ್ಲ. ಆಸಕ್ತಿ ಮುಖ್ಯ. ₹ 500, ₹ 250ರ ಟಿಕೆಟ್ ಸಹ ಲಭ್ಯವಿವೆ. ಇಚ್ಛೆಗೆ ತಕ್ಕಂತೆ ಟಿಕೆಟ್ ಖರೀದಿಸಬಹುದು. ನಾಟಕ ವೀಕ್ಷಣೆಗೆ ಟಿಕೆಟ್ ಇಲ್ಲದಿದ್ದರೆ ರಸಸ್ವಾದ ಸಿಗಲ್ಲ’ ಎಂದು ಹೇಳಿದರು.

ನೆರವಿನ ನಿರೀಕ್ಷೆ ಸಲ್ಲದು: ‘ಯಾವುದೇ ಪ್ರಕಾರದ ಕಲೆಯ ಉಳಿವು, ಬೆಳವಣಿಗೆಗಾಗಿ ಸರ್ಕಾರದಿಂದ ನೆರವಿನ ನಿರೀಕ್ಷೆಯಿಟ್ಟುಕೊಳ್ಳಬಾರದು. ಕೆಲವು ಸಂಗೀತ ಸಂಸ್ಥೆಗಳು ಬೆಳೆದಿರುವಂತೆ ಟಿಕೆಟ್ ದರ, ಸದಸ್ಯತ್ವದ ಶುಲ್ಕದಿಂದಲೇ ಉನ್ನತಿ ಹೊಂದಬೇಕು’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

‘ಕೋವಿಡ್ ಲಸಿಕೆ: ವೈದ್ಯರೇ ಅನುಮಾನಿಸುವುದು ಸರಿಯಲ್ಲ’

ಕಲಬುರ್ಗಿ: ‘ಭಾರತದ ಕೋವಿಡ್ ಲಸಿಕೆಗೆ 25 ದೇಶಗಳಿಂದ ಬೇಡಿಕೆಯಿದೆ. ಇದು, ಗುಣಮಟ್ಟದ ಲಸಿಕೆ. ಇದರ ಬಗ್ಗೆ ನಮ್ಮ ವೈದ್ಯರು ಮತ್ತು ಸಿಬ್ಬಂದಿ ಅನುಮಾನಿಸುವುದು ಸರಿಯಲ್ಲ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಕಲಬುರ್ಗಿಯಲ್ಲಿ ಭಾನುವಾರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲ-ಯದ ಪ್ರಾದೇಶಿಕ ಕೇಂದ್ರವನ್ನು ಉದ್ಘಾಟಿಸಿದ ಅವರು, ‘ವೈದ್ಯರು ಲಸಿಕೆ ಪಡೆಯುವ ಮೂಲಕ ತಮ್ಮ ಆರೋಗ್ಯ ಹಾಗೂ ತಮ್ಮನ್ನು ನಂಬಿದವರ ಆರೋಗ್ಯ ಕಾಪಾಡಬೇಕು. ಕೋವಿಡ್ ಬಂದರೂ ಸಾವು ಸಂಭವಿಸದಂತೆ ತಡೆಯುವ ಸಾಮರ್ಥ್ಯ ಈ ಲಸಿಕೆಗೆ ಇದೆ’ ಎಂದರು.

‘ನೆರೆ ರಾಜ್ಯಗಳಾದ ಮಹಾರಾಷ್ಟ್ರ ಹಾಗೂ ಕೇರಳದಲ್ಲಿ ಸೋಂಕಿನ ಪ್ರಕರಣ ಹೆಚ್ಚುತ್ತಿವೆ. ಆದ್ದರಿಂದ ಹೊಸ ಕೋವಿಡ್ ಮಾರ್ಗಸೂಚಿ ರಚಿಸಲಾಗಿದ್ದು, ರಾಜ್ಯದ ಗಡಿ ಪ್ರದೇಶಗಳ-ಲ್ಲಿ ಸೋಮವಾರ (ಫೆ. 22) ದಿಂದ ಕಟ್ಟುನಿಟ್ಟಾಗಿ ಜಾರಿ ಮಾಡಲಾಗುವುದು ಎಂದರು. ಸದ್ಯಕ್ಕೆ ರಾಜ್ಯದಲ್ಲಿ ಲಾಕ್‌ಡೌನ್ ಮಾಡುವ ಸ್ಥಿತಿ ಇಲ್ಲ’ ಎಂದರು.

ವೈದ್ಯರ ನೇಮಕ: ‘ಪ್ರಸಕ್ತ ವರ್ಷ 2,158 ವೈದ್ಯ ಹುದ್ದೆಗಳಿಗೆ ನೇಮಕ ನಡೆಯಲಿದೆ. ಅಲ್ಲದೆ, ಗ್ರಾಮೀಣ ಭಾಗದಲ್ಲಿ ಇನ್ನೂ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವಿದೆ’ ಎಂದರು.

‘ಬೆಳಗಾವಿ, ಮಂಗಳೂರು ಮತ್ತು ದಾವಣಗೆರೆಯಲ್ಲಿ ಕಿದ್ವಾಯಿ ಆಸ್ಪತ್ರೆಯ ಉಪ ಕೇಂದ್ರಗಳನ್ನು ಸ್ಥಾಪಿಸಲಾಗುವುದು’ ಎಂದರು.

ಅನೈತಿಕ ಸಂಬಂಧ: ಟ್ರ್ಯಾಕ್ಟರ್‌ಗೆ ಕಟ್ಟಿ ಮಹಿಳೆಗೆ ಥಳಿತ

ರಾಮದುರ್ಗ (ಬೆಳಗಾವಿ): ವಿವಾಹಿತೆಯೊಬ್ಬಳು ಅನೈತಿಕ ಸಂಬಂಧ ಹೊಂದಿರುವುದನ್ನು ಸಾಕ್ಷಿ ಸಮೇತ ಹಿಡಿದ ಆಕೆಯ ಪತಿ ಮತ್ತು ಸಾರ್ವಜನಿಕರು ಇಬ್ಬರನ್ನೂ ಟ್ರ್ಯಾಕ್ಟರ್‌ಗೆ ಕಟ್ಟಿ ಸಾರ್ವಜನಿಕವಾಗಿ ಥಳಿಸಿದ ಘಟನೆ ತಾಲ್ಲೂಕಿನ ಮುರಕಟ್ನಾಳ ಗ್ರಾಮದಲ್ಲಿ ಶುಕ್ರವಾರ ನಡೆದಿದೆ. ಕೆಲ ವರ್ಷಗಳ ಹಿಂದೆ ಮುರಕಟ್ನಾಳ ಗ್ರಾಮದ ಯುವಕನೊಂದಿಗೆ ಆಕೆಯ ವಿವಾಹವಾಗಿತ್ತು. ಪ್ರೇಮಿ-ಗಳಿಬ್ಬರೂ ಒಂದೇ ಕೊಠಡಿಯಲ್ಲಿ ಸಿಕ್ಕಿ ಹಾಕಿಕೊಂಡಾಗ ಅವರನ್ನು ಕಟ್ಟಿ ಹಾಕಿ ಥಳಿಸಲಾಗಿದೆ.

ನಂತರ ಗ್ರಾಮದಲ್ಲಿ ಕೆಲವರು ಪತಿಯ ಒಪ್ಪಿಗೆ ಪಡೆದು, ಆಕೆಯ ಪ್ರಿಯಕರ-ನೊಂದಿಗೆ ವಿವಾಹ ಮಾಡಿ ಕಳುಹಿಸಲಾಯಿತು ಎಂದು ಗ್ರಾಮಸ್ಥರು ತಿಳಿಸಿದರು. ಈ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರ ಎದುರು ಥಳಿಸುತ್ತಿರುವ ವಿಡಿಯೊ ವೈರಲ್ ಆಗಿದೆ.

6ರಿಂದ 8: ಇಂದಿನಿಂದ ಪೂರ್ಣ ತರಗತಿ ಆರಂಭ

ಬೆಂಗಳೂರು: ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ 6 ರಿಂದ 8 ನೇ ತರಗತಿಗಳು ಸೋಮವಾರದಿಂದ (ಫೆ. 22) ಪೂರ್ಣ ಪ್ರಮಾಣದಲ್ಲಿ ಪ್ರಾರಂಭಗೊಳ್ಳಲಿವೆ.

ಬೆಂಗಳೂರು ನಗರದ ಬಿಬಿಎಂಪಿ ವ್ಯಾಪ್ತಿ ಮತ್ತು ಕೇರಳ ರಾಜ್ಯದ ಗಡಿ ಭಾಗಗಳಿಗೆ ಹೊಂದಿಕೊಂಡಿರುವ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲ ಕಡೆಗಳಲ್ಲಿ ಪ್ರತಿ ದಿನ ಪೂರ್ಣಾವಧಿ ತರಗತಿಗಳು ನಡೆಯಲಿವೆ. ಈ ಎರಡೂ ಕಡೆ 8 ನೇ ತರಗತಿ ಪೂರ್ಣಾವಧಿ ನಡೆಯಲಿದೆ. ಆದರೆ, 6 ಮತ್ತು 7 ನೇ ತರಗತಿಗಳಿಗೆ ವಿದ್ಯಾಗಮ ಮುಂದುವರಿಯಲಿದೆ.

ಶಾಲಾ– ಕಾಲೇಜುಗಳಿಗೆ ಈಗಾಗಲೇ ಹೊರಡಿಸಿರುವ ಕೋವಿಡ್ ಮಾರ್ಗಸೂಚಿಯನ್ನು ಇಲ್ಲೂ ಪಾಲಿಸಬೇಕಾಗುತ್ತದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಹೇಳಿದೆ. ತರಗತಿಗಳ ವೇಳಾಪಟ್ಟಿಯನ್ನೂ ಈಗಾಗಲೇ ಹೊರಡಿಸಲಾಗಿದೆ.

ಊಟ ತರಬೇಕು: ವಿದ್ಯಾರ್ಥಿಗಳು ಮನೆಯಿಂದಲೇ ಊಟ, ಉಪಾಹಾರ ತರಲು ಸೂಚನೆ ನೀಡಬೇಕು ಎಂದೂ ಇಲಾಖೆಯು ಅಧಿಕಾರಿಗಳಿಗೆ ಹೇಳಿದೆ.

ಹಾಜರಾತಿ ಕಡ್ಡಾಯವಲ್ಲ: ತರಗತಿಗೆ ವಿದ್ಯಾರ್ಥಿಗಳು ಬರಲೇಬೇಕೆಂದು ಕಡ್ಡಾಯ ಮಾಡಿಲ್ಲ. ನೇರ ತರಗತಿಗೆ ಅಥವಾ ವಿದ್ಯಾಗಮ ಕಾರ್ಯಕ್ರಮಕ್ಕೆ ಹಾಜರಾಗಲು ಬಯಸುವ ವಿದ್ಯಾರ್ಥಿಗಳು ಪೋಷಕರಿಂದ ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ತರಬೇಕು. ತರಗತಿಗೆ ಬರಲು ಒಪ್ಪದ ವಿದ್ಯಾರ್ಥಿಗಳು ಈಗಿನಂತೆ ಆನ್‌ಲೈನ್ ತರಗತಿಗೂ ಹಾಜರಾಗಬಹುದು.

ಆಯ್ದ ಶಾಲೆಗಳು ಹಾಗೂ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ರ್‍ಯಾಂಡಮ್ ಆಗಿ ಕೋವಿಡ್ ಪರೀಕ್ಷೆ ನಡೆಸಲಾಗುತ್ತದೆ ಎಂದು ಇಲಾಖೆ ಹೇಳಿದೆ.

ನರಭಕ್ಷಕ ಹುಲಿ ಸೆರೆ?

ಪೊನ್ನಂಪೇಟೆ (ಕೊಡಗು): ಶ್ರೀಮಂಗಲ ಸಮೀಪದ ಮಂಚಳ್ಳಿಯಲ್ಲಿ ಅಂದಾಜು 10 ವರ್ಷ ಪ್ರಾಯದ ಹೆಣ್ಣು ಹುಲಿಯನ್ನು ಭಾನುವಾರ ಸಂಜೆ ಸೆರೆ ಹಿಡಿಯಲಾಗಿದ್ದು, ಮೈಸೂರಿನಲ್ಲಿರುವ ಪ್ರಾಣಿ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗಿದೆ. ಆದರೆ, ಇದೇ ನರಭಕ್ಷಕ ಹುಲಿಯೇ ಎಂಬುದು ಖಚಿತವಾಗಿಲ್ಲ.

ಕುಮಟೂರು ಹಾಗೂ ಟಿ.ಶೆಟ್ಟಿಗೇರಿ ಗ್ರಾಮಗಳಲ್ಲಿ ಹುಲಿಯೊಂದು ದಾಳಿ ನಡೆಸಿ, ಬಾಲಕ ಅಯ್ಯಪ್ಪ (14) ಹಾಗೂ ಕಾರ್ಮಿಕ ಮಹಿಳೆ ಚಿಣ್ಣಿ (60) ಎಂಬುವರನ್ನು ಬಲಿ ತೆಗೆದುಕೊಂಡಿತ್ತು. ಇದರ ಬೆನ್ನಲ್ಲೇ ಗ್ರಾಮಸ್ಥರು ಹುಲಿ ಸೆರೆಗೆ ಪಟ್ಟುಹಿಡಿದು ಪ್ರತಿಭಟನೆ ನಡೆಸಿದ್ದರು. ಕಾರ್ಯಾಚರಣೆ ನಡೆಸಿ ಹುಲಿ ಸೆರೆ ಹಿಡಿಯಲಾಗಿದೆ. ಇಬ್ಬರನ್ನು ಬಲಿ ಪಡೆದಿದ್ದು ಇದೇ ಹುಲಿಯೇ ಎಂಬುದನ್ನು ಖಚಿತಪಡಿಸುವಂತೆ ಅರಣ್ಯ ಇಲಾಖೆಯವರಿಗೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸೆರೆ ಸಿಕ್ಕ ಹುಲಿ

ಮಂಚಳ್ಳಿಯ ಕಾಫಿ ತೋಟದಲ್ಲಿ ಅವಿತಿದ್ದ ಹುಲಿಯನ್ನು ಸಿಬ್ಬಂದಿ ಸೆರೆ ಹಿಡಿದಿದ್ದಾರೆ. ವೈದ್ಯ ಮುಜೀಬ್ ಅವರು ಹುಲಿಗೆ ಅರಿವಳಿಕೆ ಚುಚ್ಚುಮದ್ದು ಹಾರಿಸಿ, ಪ್ರಜ್ಞೆ ತಪ್ಪಿಸಿದರು. ಬಳಿಕ ಬಲೆ ಹಾಕಿ ಸೆರೆ ಹಿಡಿಯಲಾಯಿತು.

ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ರಾಮಲಿಂಗಾರೆಡ್ಡಿ, ಧ್ರುವನಾರಾಯಣ ಪದಗ್ರಹಣ

‘ಕಾಂಗ್ರೆಸ್ ತೊರೆದವರು ಮರಳಿದರೆ ಸ್ವಾಗತ’

ಪ್ರಜಾವಾಣಿ ವಾರ್ತೆ

ಕೆಪಿಸಿಸಿ ನೂತನ ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ, ರಾಮಲಿಂಗಾರೆಡ್ಡಿ ಅವರಿಗೆ ಪಕ್ಷದ ಬಾವುಟ ನೀಡುವ ಮೂಲಕ ಅಭಿನಂದಿಸಲಾಯಿತು. ಪಕ್ಷದ ಮುಖಂಡರಾದ ಎಸ್.ಆರ್.ಪಾಟೀಲ, ಸಲೀಂ ಅಹ್ಮದ್, ಡಿ.ಕೆ. ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಇದ್ದಾರೆ ಪ್ರಜಾವಾಣಿ ಚಿತ್ರ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಾರ್ಯಾ-ಧ್ಯಕ್ಷರಾಗಿ ರಾಮಲಿಂಗಾರೆಡ್ಡಿ ಮತ್ತು ಧ್ರುವನಾರಾಯಣ ಭಾನುವಾರ ಪದಗ್ರಹಣ ಮಾಡಿದರು. ಕೇಂದ್ರ ಮತ್ತು ರಾಜ್ಯಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುವುದರ ಜೊತೆಗೆ, ಪಕ್ಷ ಸಂಘಟನೆಗೆ ಕಾರ್ಯಕರ್ತರಲ್ಲಿ ಹುರುಪು ಮೂಡಿಸಲು ಕಾಂಗ್ರೆಸ್ ನಾಯಕರು ವೇದಿಕೆಯನ್ನು ಬಳಸಿಕೊಂಡರು.

‘ಕಾಂಗ್ರೆಸ್ ತೊರೆದು ಬೇರೆ ಪಕ್ಷ ಸೇರಿದವರಿಗೂ ಮತ್ತೆ ಪಕ್ಷ ಸೇರ್ಪಡೆಗೆ ಅವಕಾಶ ನೀಡಲಾಗುವುದು. ಯಾವುದೇ ಷರತ್ತು ಇಲ್ಲದೆ ಬಂದರೆ, ಸಂತೋಷದಿಂದ ಅವರನ್ನು ಬರಮಾಡಿ-ಕೊಳ್ಳಲಾಗುವುದು. ಪಕ್ಷ ಸೇರಬಯಸುವ ಇತರರಿಗೂ ಸ್ವಾಗತ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮುಕ್ತ ಆಹ್ವಾನ ನೀಡಿದರು.

‘ನಾಯಕರ ಹಿಂದೆ–ಮುಂದೆ ಓಡಾಡುವವರಿಗಿಂತ ಜನರ ಮಧ್ಯೆ ಇದ್ದು ಹೋರಾಡುವವರಿಗೆ ಪಕ್ಷದಲ್ಲಿ ಆದ್ಯತೆ ನೀಡಲಾಗುವುದು. ಇಂತಹ ಅಭ್ಯರ್ಥಿಗಳನ್ನು ಗುರುತಿಸಲು ತಂಡ ರಚಿಸುತ್ತೇನೆ. ಹೋರಾಟದ ಸಾಮರ್ಥ್ಯ ಹೊಂದಿರುವವರಿಗೆ ಟಿಕೆಟ್ ನೀಡಲಾಗುವುದು’ ಎಂದರು.

‘ಕಾಂಗ್ರೆಸ್ ಕಚೇರಿ, ಪಕ್ಷದ ದೇವಸ್ಥಾನ ಇದ್ದಂತೆ. ಎಲ್ಲ ಸ್ಥಳೀಯ ನಾಯಕರು ಕಾಂಗ್ರೆಸ್ ಕಚೇರಿ ಒಳಗಡೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿಯೇ ಸಭೆ ನಡೆಸಬೇಕು. ಯಾವುದೇ ಕಾರಣಕ್ಕೂ ನಾಯಕರ ಮನೆಗಳಲ್ಲಿ ಸಭೆ ನಡೆಸಬಾರದು’ ಎಂದೂ ತಾಕೀತು ಮಾಡಿದರು.

‘ಕಾಂಗ್ರೆಸ್ ಪಾಲಿಗೆ ಇದು ಸಂಘಟನೆಯ, ಹೋರಾಟದ ವರ್ಷವಾಗಿದೆ. ಕಾಂಗ್ರೆಸ್ ಶಾಸಕರಿಲ್ಲದ 100 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರವಾಸ ಹಮ್ಮಿಕೊಳ್ಳಲಾಗುವುದು’ ಎಂದೂ ತಿಳಿಸಿದರು.

‘ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಮೂರು–ನಾಲ್ಕು ಶಾಸಕರು ರಾಜೀನಾಮೆ ನೀಡಿರುವುದರಿಂದ ಪಕ್ಷಕ್ಕೆ ಸ್ವಲ್ಪ ಹಿನ್ನಡೆಯಾಗಿದೆ. ನಗರ ಸೇರಿದಂತೆ ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಒತ್ತು ನೀಡಲಾಗುವುದು’ ಎಂದು ರಾಮಲಿಂಗಾರೆಡ್ಡಿ ಹೇಳಿದರು.

‘ರಾಜ್ಯದಲ್ಲಿ ಬಿಜೆಪಿಯ 25 ಸಂಸದರು ಇದ್ದರೂ ಕೇಂದ್ರದಿಂದ ರಾಜ್ಯಕ್ಕೆ ಅನುದಾನ ಬರುತ್ತಿಲ್ಲ. ಸರ್ಕಾರದ ಇಂತಹ ವೈಫಲ್ಯಗಳನ್ನು ಜನರ ಮುಂದಿಡಲಾಗುವುದು’ ಎಂದು ಧ್ರುವನಾರಾಯಣ ಹೇಳಿದರು.

ಈಶ್ವರ ಖಂಡ್ರೆ, ಸತೀಶ ಜಾರಕಿಹೊಳಿ ಹಾಗೂ ಸಲೀಂ ಅಹ್ಮದ್ ಸೇರಿದಂತೆ ಕೆಪಿಸಿಸಿ ಕಾರ್ಯಾಧ್ಯಕ್ಷರ ಸಂಖ್ಯೆ ಈಗ ಐದಕ್ಕೆ ಏರಿದೆ.

‘ಹೋದಲ್ಲಿ ಬಂದಲ್ಲಿ ನಿಮಗೇ ಟಿಕೆಟ್ ಎನ್ನಬೇಡಿ'

‘ಈ ಬಾರಿ ನಿನಗೇ ಟಿಕೆಟ್ ಎನ್ನುವ ಭರವಸೆಯನ್ನು ನಾಯಕರು ಹೋದಲ್ಲಿ ಬಂದಲ್ಲಿ ಕಾರ್ಯಕರ್ತರಿಗೆ ನೀಡಬಾರದು. ಅದಕ್ಕೆಂದೇ ಒಂದು ಸಮಿತಿ ಇದೆ. ಹೈಕಮಾಂಡ್ ಇದೆ. ಪಕ್ಷದ ವೇದಿಕೆಯಲ್ಲಿ ಚರ್ಚಿಸಿ, ಎಲ್ಲರ ಒಪ್ಪಿಗೆ ಪಡೆದು ಅಭ್ಯರ್ಥಿಗಳಿಗೆ ಟಿಕೆಟ್ ನೀಡಬೇಕು' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಐವರು ಕಾರ್ಯಾಧ್ಯ-ಕ್ಷರನ್ನು ಉದ್ದೇಶಿಸಿ ಈ ಮಾತು ಆಡಿದರು. ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಇತ್ತೀಚೆಗೆ ಕೆಲವು ಸಭೆಗಳಲ್ಲಿ ಟಿಕೆಟ್ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಎಲ್ಲ ನಾಯಕರಿಗೂ ಅನ್ವಯವಾಗುವಂತೆ ಸಭೆಯಲ್ಲಿ ಬಿಸಿ ಮುಟ್ಟಿಸಿದರು.

‘ರಾಜ್ಯಸಭೆಯಲ್ಲಿ ವಿರೋಧಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡುವ ಸುಳಿವು ಹೈಕಮಾಂಡ್ ನೀಡಿತ್ತು. ಈಗ ಆ ಮಾತನ್ನು ಉಳಿಸಿಕೊಂಡಿದೆ. ಪಕ್ಷದ ಹೈಕಮಾಂಡ್‌ಗೆ ನಿಮ್ಮ ಮೇಲೆ ನಂಬಿಕೆ ಮೂಡಿದರೆ, ಪಕ್ಷ ನಿಷ್ಠೆ ಇದ್ದರೆ ಖಂಡಿತ ಅವಕಾಶ ಕೊಟ್ಟೇ ಕೊಡುತ್ತಾರೆ’ ಎಂದೂ ಖರ್ಗೆ ಹೇಳಿದರು.

ಮೋದಿ ಗಡ್ಡ ಅಣಕ

‘ಅಗತ್ಯ ವಸ್ತುಗಳ ಬೆಲೆ ನಿರಂತರವಾಗಿ ಏರುತ್ತಿದ್ದು, ಜನಸಾಮಾನ್ಯರು ಸಂಕಷ್ಟ-ದಲ್ಲಿದ್ದಾರೆ. ಜನರಿಗೆ ಮುಖ ಗುರುತು ಸಿಗಬಾರದು ಎಂಬ ಕಾರಣದಿಂದ ಪ್ರಧಾನಿ ನರೇಂದ್ರ ಮೋದಿ ಗಡ್ಡ ಬೆಳೆಸಿಕೊಂಡಿದ್ದಾ-ರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವ್ಯಂಗ್ಯವಾ-ಡಿದರು.

‘ಕರ್ನಾಟಕದಲ್ಲಿ ಅನೈತಿಕ, ಅಸಮರ್ಥ, ಭ್ರಷ್ಟ ಸರ್ಕಾರವಿದೆ. ಏನು ಕೇಳಿದರೂ ದುಡ್ಡಿಲ್ಲ, ದುಡ್ಡಿಲ್ಲ ಎನ್ನುತ್ತಾರೆ. ದುಡ್ಡಿಲ್ಲ ಎಂದ ಮೇಲೆ ಅಧಿಕಾರದಲ್ಲಿ ಏಕೆ ಇದ್ದೀರಿ. ಕುರ್ಚಿಯಿಂದ ಇಳಿಯಿರಿ. ನಾವ್ಯಾರಾದರೂ ಬಂದು ಕೂರುತ್ತೇವೆ’ ಎಂದರು.

‘ಪೊಗರು’ ಚಲನಚಿತ್ರ

‘ಬ್ರಾಹ್ಮಣರ ಅವಹೇಳನ ದೃಶ್ಯಗಳನ್ನು ತೆಗೆಯಲು ಆಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧ್ರುವ ಸರ್ಜಾ ಹಾಗೂ ರಶ್ಮಿಕಾ ಮಂದಣ್ಣ ನಟನೆಯ ‘ಪೊಗರು’ ಚಿತ್ರದ ಕೆಲ ದೃಶ್ಯಗಳ ಕುರಿತು ಆಕ್ಷೇಪ ವ್ಯಕ್ತವಾಗಿದೆ. ‘ಚಿತ್ರದಲ್ಲಿ ಬ್ರಾಹ್ಮಣರನ್ನು ಅವಹೇಳನ ಮಾಡುವ ದೃಶ್ಯಗಳಿವೆ’ ಎಂದು ಆರೋಪಿಸಿರುವ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್.ಎಸ್.ಸಚ್ಚಿದಾನಂದ ಮೂರ್ತಿ, ‘ಆ ದೃಶ್ಯಗಳನ್ನು ತೆಗೆಯಬೇಕು’ ಎಂದು ಆಗ್ರಹಿಸಿದ್ದಾರೆ.

‘ಚಿತ್ರದಲ್ಲಿ ಬ್ರಾಹ್ಮಣ ಸಮುದಾಯವನ್ನು ಅವಹೇಳನ ಮಾಡಿರುವುದು ನಿಜಕ್ಕೂ ಖಂಡನೀಯ. ಬ್ರಾಹ್ಮಣರು ತಿರುಗಿ ಬೀಳುವುದಿಲ್ಲ ಅನ್ನುವ ಆಲೋಚನೆ ಇದ್ದರೆ ಅದು ತಪ್ಪು ಕಲ್ಪನೆ. ಕೂಡಲೇ ಅವಹೇಳನಕಾರಿ ದೃಶ್ಯವನ್ನು ಚಿತ್ರದಿಂದ ತೆಗೆದು ಹಾಕಬೇಕೆಂದು ನಾನು ಆಗ್ರಹಿಸುತ್ತೇ-ನೆ. ಫೆ.23ರಂದು ಚಲನಚಿತ್ರ ವಾಣಿಜ್ಯ ಮಂಡಳಿಗೆ ಮನವಿ ಸಲ್ಲಿಸುತ್ತೇವೆ. ಮತ್ತು ಫೆ.24ರಂದು ರಾಜ್ಯದಾದ್ಯಂತ ಉಗ್ರ ಹೋರಾಟ ಮಾಡುತ್ತೇವೆ’ ಎಂದು ಅವರು ತಿಳಿಸಿದರು.

ಸಚ್ಚಿದಾನಂದ ಮೂರ್ತಿ

‘ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬ್ರಾಹ್ಮಣರ ಬಗ್ಗೆ ಅವಹೇಳನ ಮಾಡಿ ನಂತರ ಕ್ಷಮೆಯಾಚಿಸಿದ್ದಾರೆ. ಉನ್ನತ ಸ್ಥಾನದಲ್ಲಿರುವ ನೀವು ಹೀಗೆ ಮಾತನಾಡುವುದು ನಿಮಗೆ ಶೋಭೆ ತರುವಂತಹುದಲ್ಲ. ಜವಾಬ್ದಾರಿಯುತವಾಗಿ ನಡೆದು-ಕೊಳ್ಳುವುದು ಒಳ್ಳೆಯದು’ ಎಂದು ಮಂಡಳಿಯ ಫೇಸ್‌ಬುಕ್ ಪೇಜ್‌ನಲ್ಲಿ ಸಚ್ಚಿದಾನಂದಮೂರ್ತಿ ಪೋಸ್ಟ್ ಮಾಡಿದ್ದಾರೆ.

ಚಿತ್ರದಲ್ಲೇನಿದೆ?: ಚಿತ್ರದ ಆರಂಭದಲ್ಲೇ ಯಜ್ಞ ಮಾಡುತ್ತಿದ್ದ ಪುರೋಹಿತರ ಮೇಲೆ ಖಳನಾಯಕನ ತಂಡದಲ್ಲಿದ್ದ ವ್ಯಕ್ತಿಯೊಬ್ಬ ಕಾಲಿಟ್ಟ ದೃಶ್ಯವಿದೆ. ಜೊತೆಗೆ ನಾಯಕನೇ ಬ್ರಾಹ್ಮಣರನ್ನು ಅವಹೇಳನ ಮಾಡುವ ಪದಗಳನ್ನು ಬಳಸಿದ್ದಾರೆ ಎನ್ನುವ ಆರೋಪಗಳು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯಾಗುತ್ತಿವೆ.

ಸಿದ್ದಾಪುರ: ಮಂಗನ ಕಾಯಿಲೆ ಪತ್ತೆ

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಉತ್ತರ ಕನ್ನಡ): ತಾಲ್ಲೂಕಿನಲ್ಲಿ ಈ ವರ್ಷದ ಮೊದಲ ಮಂಗನ ಕಾಯಿಲೆ (ಕೆಎಫ್‌ಡಿ) ಪ್ರಕರಣ ಶನಿವಾರ ಪತ್ತೆಯಾಗಿದೆ.

ಕುಳಿಬೀಡಿನ 51 ವರ್ಷದ ಮಹಿಳೆಯೊಬ್ಬರಲ್ಲಿ ಮಂಗನ ಕಾಯಿಲೆ ದೃಢ ಪಟ್ಟಿದ್ದೆ.

ಅವರು ಮಣಿಪಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಗ್ಯ ಸ್ಥಿರವಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಒಳನೋಟ

ಕಾರ್ಮಿಕರ ಅಳಲು

ಬೆಂಗಳೂರು: ‘ವಲಸೆ–ಮಧ್ಯವರ್ತಿಗೆ ಶುಕ್ರದೆಸೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಫೆ.21) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಶಿಕ್ಷಣದಿಂದ ವಂಚಿತರಾಗಬಾರದು

ವಲಸೆ ಜನರ ಮಕ್ಕಳು ಶಿಕ್ಷಣದಿಂದ ವಂಚಿತರಾ-ಗುತ್ತಿದ್ದಾರೆ. ವಲಸೆ ಹೋಗುವವರು ತಮ್ಮ ಮಕ್ಕಳನ್ನು ಜೊತೆಯಲ್ಲಿ ಕರೆ-ದೊಯ್ಯುತ್ತಾರೆ. ಇದರಿಂದ ಮಕ್ಕಳು ಶಾಲೆಗಳಿಂದ ದೂರವಾಗುತ್ತಾರೆ ಹಾಗೂ ಕೆಲಸಗಳಲ್ಲಿ ತೊಡಗಿ, ಶಿಕ್ಷಣವನ್ನೇ ಮರೆಯುತ್ತಾರೆ. ವಲಸೆ ಮಕ್ಕಳ ಭವಿಷ್ಯದ ದೃಷ್ಟಿಯಿಂದಾದರೂ ಸರ್ಕಾರ ಅವರಿಗೆ ಶಿಕ್ಷಣ ನೀಡುವ ವಿಶೇಷ ಕಾಳಜಿ ವಹಿಸಬೇಕು.

ಮಧುಕುಮಾರ್, ಮೈಸೂರು

ಅಭದ್ರತೆಯಲ್ಲೇ ಜೀವನ

ಬಹುಪಾಲು ಬಡವರು ಹೊಟ್ಟೆ ಹೊರೆಯಲು ತಮ್ಮ ಕುಟುಂಬ ಸಮೇತ ಕೂಲಿ ಅರಸುತ್ತಾ ವಲಸೆ ಹೋಗುತ್ತಾರೆ. ವಲಸೆ ಕೂಲಿ ಕಾರ್ಮಿಕರಿಗೆ ಅಭದ್ರತೆಯೇ ಹೆಚ್ಚು. ಇದರ ನಡುವೆ ಮಧ್ಯವರ್ತಿಗಳ ಬಲೆಯಲ್ಲಿ ಸಿಲುಕಿ ನರಳುತ್ತಾರೆ. ಕಡಿಮೆ ಕೂಲಿಗೆ ದಿನವಿಡೀ ದುಡಿಸಿಕೊಂಡರೂ ಕೇಳುವವರಿಲ್ಲ. ಅವರಿಗೂ ನೆಮ್ಮದಿಯ ಜೀವನ ಸಿಗುವಂತಾಗಲಿ. ಸರ್ಕಾರ ಮೂಲ ಸೌಕರ್ಯಗಳನ್ನು ಒಂದೆಡೆ ಕಲ್ಪಿಸಿದರೆ, ವಲಸೆ ಹೋಗುವುದು ತಪ್ಪಲಿದೆ.

ಶಿವಕುಮಾರ್, ದಾವಣಗೆರೆ

ಅನುಕಂಪದಿಂದ ಪ್ರಯೋಜನವಿಲ್ಲ

ವಲಸೆ ಕಾರ್ಮಿಕರು ವಸತಿ ವ್ಯವಸ್ಥೆ ಸೇರಿದಂತೆ ಮೂಲ ಸೌಕರ್ಯಗಳಿಂದ ವಂಚಿತರಾಗಿ ಜೀವನ ನಡೆಸುತ್ತಾರೆ. ಸಂಘಟಿತರಾಗಲು ಇವರು ಬಯಸುವುದಿಲ್ಲ. ಇವರನ್ನು ಸಂಘ-ಟಿತರನ್ನಾಗಿ ಮಾಡಿ, ವ್ಯವಸ್ಥೆಯ ಅನ್ಯಾಯಗಳ ವಿರುದ್ಧ ನಿಲ್ಲುವಂತೆ ಮಾಡಬೇಕು. ವಲಸೆ ಕಾರ್ಮಿಕರಿಗೆ ಕೇವಲ ಅನುಕಂಪ ತೋರುವುದರಿಂದ ಸಮಾಜಕ್ಕೆ ಏನೂ ಪ್ರಯೋಜನವಿಲ್ಲ.

ಅಮ್ಮಪ್ಪ, ಯಾದಗಿರಿ

ಅನುದಾನ ನೀಡದ ದುರಾಡಳಿತ

ಸಂಕಷ್ಟಗಳ ಸರಮಾಲೆಯಲ್ಲಿ ಜೀವನದ ಬಂಡಿ ಎಳೆಯುವ ವಲಸೆ ಕಾರ್ಮಿಕರಿಗೆ ದುಡಿಮೆಗೆ ತಕ್ಕ ದುಡ್ಡು ಸಿಗದು. ವಾಸಕ್ಕೆ ಸೂಕ್ತ ನೆಲೆ ಸಿಗುವುದಿಲ್ಲ. ಮಕ್ಕಳ ಶಿಕ್ಷಣಕ್ಕೆ ಅವಕಾಶ ಇರುವುದಿಲ್ಲ. ಇಂತಹ ಕುಟುಂಬಗಳಲ್ಲಿನ ಹೆಣ್ಣು ಮಕ್ಕಳ ನರಳಾಟ ಹೇಳತೀರದು. ಇವರ ಪರ ನಿಲ್ಲಬೇಕಾದ ಇಲಾಖೆಗಳು ಕೈಕಟ್ಟಿ ಕುಳಿತಿರುವುದು ದುರಂತ. ಮಧ್ಯವರ್ತಿಗಳಿಂದಾಗಿ ಸರ್ಕಾರದ ಯೋಜನೆಗಳು ಇವರ ಬಳಿಗೆ ಸಾಗುತ್ತಿಲ್ಲ. ಇವರ ಸಂಕಷ್ಟಕ್ಕೆ ಮಿಡಿಯಲು ಸರ್ಕಾರದಲ್ಲಿ ಅನುದಾನದ ಕೊರತೆ ಎಂದರೆ ಎಂತಹ ದುರಾಡಳಿತ?

ಪ್ರಭಾವತಿ, ಹುಬ್ಬಳ್ಳಿ

ವಲಸಿಗರನ್ನು ತಲುಪದ ಯೋಜನೆ

ವಲಸೆ ಎಂಬುದು ಮೇಲ್ನೋಟಕ್ಕೆ ಸುಲಭವಾಗಿ ಕಂಡರೂ, ಅದರ ಪರಿಣಾಮಗಳು ಹಲವಾರು. ಬದುಕೇ ಕಷ್ಟವಾಗುವ ಇವರು ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಮತ್ತಷ್ಟು ಕುಗ್ಗಿ ಹೋಗುತ್ತಾರೆ. ಒಂದು ದೇಶ–ಒಂದು ಪಡಿತರ ಕೇಳಲು ಚೆನ್ನಾಗಿದೆ. ಆದರೆ, ಜ್ಞಾನ ಇಲ್ಲದ ಇವರಿಗೆ ಈ ಯೋಜನೆಗಳ ಫಲ ಸಿಗದ ಸಾಧ್ಯತೆಗಳೇ ಹೆಚ್ಚು. ರೂಪಿಸಿದ ಯೋಜನೆಗಳನ್ನು ತಲುಪಿಸುವ ಕೆಲಸ ಸರಿಯಾಗಿ ನಡೆಯಲಿ.

ರಮೇಶ, ಧಾರವಾಡ

ಆಹಾರಕ್ಕಾಗಿ ಅಲೆದಾಟ

ವಲಸಿಗರು ಹೆಚ್ಚಾಗುತ್ತಿರಲು ಸರ್ಕಾರಗಳೇ ಪರೋಕ್ಷ ಕಾರಣ. ಬಡಜನರು ಮೂರು ಹೊತ್ತಿನ ಆಹಾರಕ್ಕೆ ಅಲೆದಾಡುತ್ತಾರೆ ಎಂದರೆ ಇನ್ನೂ ಎಂತಹ ಸ್ಥಿತಿಯಲ್ಲಿದ್ದೇವೆ? ಸರ್ಕಾರಗಳು ದೇಶದ ಅಭಿವೃದ್ಧಿ ಎನ್ನುತ್ತಲೇ ಯೋಜನೆಗಳನ್ನು ಘೋಷಿಸುತ್ತಿವೆ. ಆದರೂ, ಒಪ್ಪೊತ್ತಿನ ಊಟಕ್ಕಾಗಿ ಅಲೆಮಾರಿ ಜೀವನ ಅನಿವಾರ್ಯ. ಮಧ್ಯವರ್ತಿಕುಳಗಳಿಂದ ಗ್ರಾಮೀಣ ಭಾಗಗಳಲ್ಲಿ ಅಭಿವೃದ್ಧಿ ಕಾಣಲಾ-ಗುತ್ತಿಲ್ಲ.

ರೇಖಾ ಜಾವೂರ, ಬಾದಾಮಿ

ಬದುಕು ಬದಲಾಗಲಿ

ಸ್ವಾತಂತ್ರ್ಯ ನಂತರವೂ ದೇಶವನ್ನು ಅಭಿವೃದ್ಧಿಗೊಳಿಸಲು ಎಷ್ಟೋ ಯೋಜನೆಗಳು ಹೊರಬಂದವು. ಈ ಎಲ್ಲ ಯೋಜನೆಗಳಿಂದ ಬಡವರ, ವಲಸಿಗರ, ಶೋಷಿತರ ಬದುಕು ಬದಲಿಸಲು ಸಾಧ್ಯವಾಗಲಿಲ್ಲ. ಕೋಟಿಗಟ್ಟಲೆ ಬರುವ ಸಂಪತ್ತನ್ನು ನುಂಗುವಲ್ಲಿ ರಾಜಕೀಯ ವ್ಯಕ್ತಿಗಳು ಹಾಗೂ ಭ್ರಷ್ಟ ಅಧಿಕಾರಿಗಳು ಯಶಸ್ವಿಯಾದರು. ಬಡಜನರಿಗೆ ಕೆಲಸ ನೀಡುವಲ್ಲಿ ಸರ್ಕಾರಗಳು ಸೋತಿವೆ.

ಬಸವರಾಜ, ಚಿತ್ರದುರ್ಗ

ಸೂರು ಕಲ್ಪಿಸಿ, ಅಲೆದಾಟ ತಪ್ಪಿಸಿ

ಹಿಂದುಳಿದ ಗ್ರಾಮೀಣ ಭಾಗಗಳಲ್ಲಿ ಜೀವನ ನಡೆಸುವವರು ಕುಟುಂಬದ ನಿರ್ವಹಣೆಗಾಗಿ ವಲಸೆ ತೆರಳುವುದು ಅನಿವಾರ್ಯ. ಹಣಕ್ಕಾಗಿ ಅರಿವಿಲ್ಲದ ಊರುಗಳನ್ನು ಸುತ್ತುತ್ತಾ ಎಲ್ಲೂ ನೆಲೆ ಕಾಣಲು ಸಾಧ್ಯವಾಗುವುದಿಲ್ಲ. ಅವರ ದುಡಿಮೆಗೂ ಮತ್ತು ಕೈಸೇರುವ ಕಾಂಚಾಣಕ್ಕೂ ಅರ್ಥವೇ ಇರುವುದಿಲ್ಲ. ವಲಸಿಗರಿಗಾಗಿ ಸೂರು ಕಲ್ಪಿಸಿದರೆ, ನೆಮ್ಮದಿ-ಯಿಂದಾದರೂ ನಿದ್ರಿಸುತ್ತಾರೆ.

ಮಲ್ಲಿಕಾರ್ಜುನ, ವಿಜಯಪುರ

ಖಾಸಗಿ ಕೃಷಿ ಮಾರುಕಟ್ಟೆ ನಿರ್ಮಾಣಕ್ಕೆ ಸಿದ್ಧತೆ

ಒಂದನೇ ಪುಟದಿಂದ

‘ಪರ್ಯಾಯ ಕೃಷಿ ಮಾರುಕಟ್ಟೆ ಪರಿಕಲ್ಪನೆ ಕರ್ನಾಟಕಕ್ಕೆ ಹೊಸದು. ಉತ್ತರ ಭಾರತದ ಹಲವೆಡೆ ಇಂತಹ ಮಾರುಕಟ್ಟೆಗಳು ನಿರ್ಮಾಣವಾಗಿವೆ. ಹಲವು ದಿನಗಳಿಂದ ಇದಕ್ಕೆ ಸಿದ್ಧತೆ ನಡೆಯುತ್ತಿತ್ತು. ಪರವಾನಗಿ ದೊರೆತ ಬಳಿಕ ವಿಶ್ವಾಸ ಹೆಚ್ಚಾಗಿದೆ’ ಎನ್ನುತ್ತಾರೆ ‘ಅಕ್ಷಯ ಫುಡ್ ಪಾರ್ಕ್’ ವ್ಯವಸ್ಥಾಪಕ ನಿರ್ದೇಶಕ ಎಂ.ನಾರಾಯಣಸ್ವಾಮಿ.

ಖರೀದಿದಾರರನ್ನು ಆಹ್ವಾನಿಸುವ ಪ್ರಕ್ರಿಯೆ ಆರಂಭವಾಗಿದೆ. ಪರ್ಯಾಯ ಮಾರುಕಟ್ಟೆ ಬಗ್ಗೆ ರೈತರ ಗಮನ ಸೆಳೆಯುವ ಪ್ರಯತ್ನಗಳೂ ನಡೆಯುತ್ತಿದೆ. ಕೃಷಿ ಉತ್ಪನ್ನವನ್ನು ಗುಣಮಟ್ಟದ ಆಧಾರದಲ್ಲಿ ವಿಂಗಡಿಸಿ ಪ್ರಮಾಣೀಕರಿಸಲಾಗುತ್ತದೆ. ರಾಷ್ಟ್ರೀಯ ಕೃಷಿ ಮಾರುಕಟ್ಟೆ (ಇ–ನಾಮ್) ವ್ಯವಸ್ಥೆಯಲ್ಲಿ ಅಂತರ್ಜಾಲದ ಮೂಲಕವೇ ಉತ್ಪನ್ನವನ್ನು ಮಾರಾಟ ಮಾಡಲಾಗುತ್ತದೆ. ಫುಡ್ ಪಾರ್ಕ್‌ನಲ್ಲಿರುವ ಇತರ ಕೈಗಾರಿಕೆಗಳೂ ಈ ಉತ್ಪನ್ನವನ್ನು ಖರೀದಿಸಲಿವೆ.

‘ಮೊಟ್ಟೆ, ಮಾಂಸ ಬಿಟ್ಟು ಎಲ್ಲ ಕೃಷಿ ಉತ್ಪನ್ನಗಳನ್ನೂ ಮಾರುಕಟ್ಟೆಗೆ ತರಬಹುದು. ರೈತರು ತಮ್ಮ ಉತ್ಪನ್ನಗಳನ್ನು ಸಂಗ್ರಹಿಸಿಟ್ಟು ಬೆಲೆ ಹೆಚ್ಚಿದಾಗ ಮಾರಬಹುದು. ಆನ್‌ಲೈನ್‌ನಲ್ಲಿ ಯಾರು ಬೇಕಾದರೂ ಖರೀದಿಸಬಹುದು. ಜೇವರ್ಗಿಯ ಫುಡ್‌ಪಾರ್ಕಿನಲ್ಲೂ ಪರ್ಯಾಯ ಕೃಷಿ ಮಾರುಕಟ್ಟೆ ನಿರ್ಮಾಣಕ್ಕೆ ಚಿಂತನೆ ನಡೆಯುತ್ತಿದೆ’ ಎಂದು ಹೇಳುತ್ತಾರೆ ನಾರಾಯಣಸ್ವಾಮಿ.

ಫುಡ್ ಪಾರ್ಕ್ ಬಗ್ಗೆ ಅಸಮಾಧಾನ

ಸರ್ಕಾರದ ಸಹಯೋಗದೊಂದಿಗೆ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ನಾಲ್ಕು ಫುಡ್ ಪಾರ್ಕ್‌ಗಳಲ್ಲಿ ‘ಅಕ್ಷಯ ಫುಡ್ ಪಾರ್ಕ್’ ಕೂಡ ಒಂದು. 2010ರಲ್ಲಿ ನಿರ್ಮಾಣವಾದ ಈ ಪಾರ್ಕ್‌ನಿಂದ ರೈತರು ಹಾಗೂ ಕೈಗಾರಿಕೋದ್ಯ-ಮಿಗಳಿಗೆ ಅನುಕೂಲವಾಗಿಲ್ಲ ಎಂಬ ಆರೋಪಗಳು ಕೇಳಿಬಂದಿವೆ.

ಸರ್ಕಾರ ವಿಧಿಸಿದ ಷರತ್ತುಗಳನ್ನು ಫುಡ್ ಪಾರ್ಕ್ ಪಾಲಿಸಿಲ್ಲ ಎಂಬ ಬಗ್ಗೆ ಕೈಗಾರಿಕೆ ಹಾಗೂ ಕೃಷಿ ಸಚಿವರಿಗೆ ದೂರುಗಳು ಸಲ್ಲಿಕೆಯಾಗಿದ್ದವು. ಮೂಲಸೌಕರ್ಯ ಕೊರತೆಯಿಂದಾಗಿ ಉದ್ದಿಮೆದಾರರಿಗೆ ಬ್ಯಾಂಕುಗಳು ಸಾಲ ಕೊಡುತ್ತಿಲ್ಲ ಎಂಬ ಆರೋಪವೂ ಇದೆ.

ಸರ್ವಪಕ್ಷ ಸಭೆಯಲ್ಲಿ ಚರ್ಚೆ • ರಾಜ್ಯಕ್ಕೆ ಮಾರಕವಾಗದಂತೆ ಆದೇಶ ನೀಡಲು ಕೇಂದ್ರಕ್ಕೆ ಆಗ್ರಹ: ಜಾರಕಿಹೊಳಿ

ಕಾವೇರಿ: ಕೇಂದ್ರಕ್ಕೆ ಮನವಿ ಸಲ್ಲಿಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನದಿಯ 45 ಟಿಎಂಸಿ ಅಡಿ ಹೆಚ್ಚುವರಿ ನೀರನ್ನು ಬಳಸುವ ಉದ್ದೇಶದಿಂದ ತಮಿಳುನಾಡು ಸರ್ಕಾರ ರೂಪಿಸಿರುವ ನದಿ ಜೋಡಣೆ ಯೋಜನೆಯು ರಾಜ್ಯದ ರೈತರ ಹಿತಾಸಕ್ತಿಗೆ ಮಾರಕವಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ.

ಇಲ್ಲಿನ ಕರ್ನಾಟಕ ಭವನದಲ್ಲಿ ಜಲಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ನೇತೃತ್ವದಲ್ಲಿ ಭಾನುವಾರ ಅಧಿಕಾರಿಗಳು ಹಾಗೂ ಕಾನೂನು ತಂಡದ ಸದಸ್ಯರೊಂದಿಗೆ ನಡೆಸಲಾದ ಸಭೆಯಲ್ಲಿ ಈ ಕುರಿತ ನಿರ್ಣಯ ಕೈಗೊಳ್ಳಲಾಗಿದೆ.

ವೈಗೈ, ವೆಲ್ಲಾರು ಮತ್ತು ಗುಂಡಾರು ನದಿಗಳೊಂದಿಗೆ ಕಾವೇರಿಯನ್ನು ಜೋಡಿಸಲು ತಮಿಳುನಾಡು ಕೈಗೆತ್ತಿಕೊಂಡಿರುವ ಯೋಜನೆಯು ಕಾವೇರಿಯ ಹೆಚ್ಚುವರಿ ನೀರು ಬಳಸಿಕೊಳ್ಳಲು ರಾಜ್ಯ ರೂಪಿಸಿರುವ 'ಮೇಕೆದಾಟು' ಮತ್ತು 'ಮಾರ್ಕಂಡೇಯ' ಯೋಜನೆಗಳಿಗೆ ಮಾರಕವಾಗದಂತೆ ಆದೇಶ ನೀಡುವಂತೆ ಕೇಂದ್ರದ ಜಲಶಕ್ತಿ ಸಚಿವರನ್ನು ಆಗ್ರಹಿಸಲಾಗುವುದು ಎಂದು ಸಚಿವ ಜಾರಕಿಹೊಳಿ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಕಾವೇರಿಯ ಹೆಚ್ಚುವರಿ ನೀರಿನ ಬಳಕೆಗೆ ತಮಿಳುನಾಡಿಗೆ ಅನುಮತಿ ನೀಡಿದಲ್ಲಿ ರಾಜ್ಯ ಸರ್ಕಾರ ಕೈಗೆತ್ತಿಕೊಂಡಿರುವಯೋಜನೆಗಳಿಗೂಅನುಮತಿನೀಡುವಂತೆ ಕೇಂದ್ರವನ್ನು ಕೋರಲಾಗುವುದು.

ಒಂದೊಮ್ಮೆ ಕೇಂದ್ರ ಸರ್ಕಾರ ಸ್ಪಂದಿಸದಿದ್ದರೆ ಕಾನೂನು ಹೋರಾಟ ಅನಿವಾರ್ಯವಾಗಲಿದೆ ಎಂದು ಹೇಳಿದರು.

ರಾಜ್ಯದ ಯೋಜನೆಗಳಿಗೆ ಈಗಾಗಲೇ ಆಕ್ಷೇಪ ಸಲ್ಲಿಸಿರುವ ತಮಿಳುನಾಡು ವಿರುದ್ಧ ಸೂಕ್ತ ಕಾನೂನು ಹೋರಾಟ ನಡೆಸುವ ನಿಟ್ಟಿನಲ್ಲಿ ಸಭೆಯಲ್ಲಿ ಚರ್ಚಿಸಲಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗೂ ಚರ್ಚಿಸಲಾಗುವುದು ಎಂದು ಅವರು ಹೇಳಿದರು.

ಕಾವೇರಿಯ ಹೆಚ್ಚುವರಿ ನೀರನ್ನು ಬಳಸಿಕೊಳ್ಳುವ ರಾಜ್ಯದ ಯೋಜನೆಗಳು ಹಾಗೂ ತಮಿಳುನಾಡು ಕೈಗೆತ್ತಿಕೊಂಡಿರುವ ಯೋಜನೆಯನ್ನು ವಿರೋಧಿಸುವ ನಿಟ್ಟಿನಲ್ಲಿ ಸರ್ವಪಕ್ಷ ಮುಖಂಡರ ಅಭಿಪ್ರಾಯ ಸಂಗ್ರಹಿಸುವ ಸಂಬಂಧ ಸಭೆ ಕರೆದು ಚರ್ಚಿಸಲೂ ಸರ್ಕಾರ ಚಿಂತನೆ ನಡೆಸಿದೆ ಎಂದು ವಿವರಿಸಿದರು.

ಮಹದಾಯಿ: ಇಂದು 'ಸುಪ್ರೀಂ' ವಿಚಾರಣೆ

ನವದೆಹಲಿ: ಮಹದಾಯಿ ನದಿ ನೀರು ಹಂಚಿಕೆ ಮಾಡಿ ನ್ಯಾಯ ಮಂಡಳಿ ನೀಡಿರುವ ಐತೀರ್ಪನ್ನು ವಿರೋಧಿಸಿ ಕರ್ನಾಟಕ ಸೇರಿದಂತೆ ಕಣಿವೆ ವ್ಯಾಪ್ತಿಯ ರಾಜ್ಯಗಳು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ನಡೆಯಲಿದೆ.

'ನ್ಯಾಯಮೂರ್ತಿ ಜೆ.ಎಂ. ಪಾಂಚಾಲ್ ನೇತೃತ್ವದ ಮಹದಾಯಿ ಜಲವಿವಾದ ನ್ಯಾಯಮಂಡಳಿಯು ಕಡಿಮೆ ಪ್ರಮಾಣದ ನೀರನ್ನು ಹಂಚಿಕೆ ಮಾಡಿ ಐತೀರ್ಪು ನೀಡಿದೆ' ಎಂದು ಕರ್ನಾಟಕ ಸರ್ಕಾರ ಮೇಲ್ಮನವಿ ಸಲ್ಲಿಸಿದೆ. ಇದಕ್ಕೆ ಪ್ರತಿಯಾಗಿ, ಕರ್ನಾಟಕಕ್ಕೆ ಮಹದಾಯಿ ನೀರಿನಲ್ಲಿ ಪಾಲು ನೀಡಬಾರದು ಎಂದು ಗೋವಾ ಮನವಿ ಮಾಡಿದೆ. ಅಲ್ಲದೆ, ಖಾನಾಪುರ ತಾಲ್ಲೂಕಿನ ಕಣಕುಂಬಿ ಬಳಿ ಕಳಸಾ ನಾಲೆಯನ್ನು ತಿರುಗಿಸಿ ಮಲಪ್ರಭಾ ನದಿಗೆ ಅಕ್ರಮವಾಗಿ ನೀರು ಹರಿಸುವ ಮೂಲಕ ಕರ್ನಾಟಕವು ನ್ಯಾಯಾಂಗ ನಿಂದನೆ ಎಸಗಿದೆ ಎಂದೂ ಗೋವಾ ದೂರಿದೆ.

ಕಾವೇರಿ–ಗುಂಡಾರು ನದಿ ಜೋಡಣೆ ಯೋಜನೆಗೆ ಭೂಮಿಪೂಜೆ

ಕೆ.ಪಳನಿಸ್ವಾಮಿ

ಪುದುಕೋಟೆ, ತಮಿಳುನಾಡು (ಪಿಟಿಐ): ಕಾವೇರಿ, ವೈಗೈ ಹಾಗೂ ಗುಂಡಾರು ನದಿಗಳನ್ನು ಜೋಡಿಸುವ ₹ 14,400 ಕೋಟಿ ವೆಚ್ಚದ ಮಹತ್ವಾಕಾಂಕ್ಷೆ ಯೋಜನೆಯ ಮೊದಲ ಹಂತದ ಕಾಮಗಾರಿಗೆ ತಮಿಳುನಾಡು ಸರ್ಕಾರ ಭಾನುವಾರ ಭೂಮಿಪೂಜೆ ನೆರವೇರಿಸಿತು.

ಒಣಭೂಮಿಯೇ ಹೆಚ್ಚಾಗಿರುವ ರಾಜ್ಯದ ದಕ್ಷಿಣ ಭಾಗಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು 6,000 ಘನ ಅಡಿಗಳಷ್ಟು ಹೆಚ್ಚುವರಿ ನೀರನ್ನು ಈ ಯೋಜನೆಯಡಿ ತಿರುಗಿಸಲಾಗುತ್ತದೆ.

ಜಿಲ್ಲೆಯ ಕುಣತ್ತೂರು ಎಂಬಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಕೆ.ಪಳನಿಸ್ವಾಮಿ, ಉಪಮುಖ್ಯಮಂತ್ರಿ ಒ.ಪನ್ನೀರ್‌ಸೆಲ್ವಂ ಭೂಮಿಪೂಜೆ ನೆರವೇರಿಸಿದರು.

ಮೊದಲ ಹಂತದಲ್ಲಿ ₹ 6,941 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಈ ಯೋಜನೆಯಡಿ ಒಟ್ಟು 262 ಕಿ.ಮೀ. ಉದ್ದದ ಕಾಲುವೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.ಈ ಪೈಕಿ ಮೊದಲ ಹಂತದಲ್ಲಿ 118 ಕಿ.ಮೀ. ಉದ್ದದ ಕಾಲುವೆಯನ್ನು ನಿರ್ಮಿಸಲಾಗುತ್ತದೆ. ಕಾವೇರಿ ನದಿಯಲ್ಲಿನ ಹೆಚ್ಚುವರಿ ನೀರನ್ನು ಕಾಲುವೆ ಮೂಲಕ ಗುಂಡಾರು ನದಿಗೆ ಹರಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಪ್ರವಾಹ ಕಂಡು ಬಂದ ದಿನಗಳಲ್ಲಿ ಕಾವೇರಿ, ವೈಗೈ, ದಕ್ಷಿಣ ವೆಲ್ಲಾರ್ ನದಿಗಳಲ್ಲಿನ ಹೆಚ್ಚುವರಿ ನೀರನ್ನು ಈ ಕಾಲುವೆಗಳ ಮೂಲಕ ಗುಂಡಾರು ನದಿಗೆ ಹರಿಸಲಾಗುವುದು. ಇದರಿಂದ ದಕ್ಷಿಣ ತಮಿಳುನಾಡಿನ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಸಾಧ್ಯವಾಗುವುದು.

ತಿರುಚಿರಾಪಳ್ಳಿ, ಪುದುಕೊಟ್ಟೈ, ಶಿವಗಂಗಾ, ವಿರುಧುನಗರ, ರಾಮನಾಥಪುರಂ ಹಾಗೂ ಕರೂರು ಜಿಲ್ಲೆಗಳಿಗೆ ಈ ಯೋಜನೆಯಿಂದ ಅನುಕೂಲವಾಗುವುದು. ಈ ಜಿಲ್ಲೆಗಳಲ್ಲಿರುವ ಸಾವಿರಕ್ಕೂ ಅಧಿಕ ಕೆರೆಗಳ ಪುನಶ್ಚೇತನ ಸಾಧ್ಯವಾಗಲಿದೆ ಎಂದು ಇವೇ ಮೂಲಗಳು ಹೇಳಿವೆ.

ಸರ್ಕಾರದ ನಡೆಗೆ ದೇವೇಗೌಡ ಬೇಸರ



ಹಾಸನ: '45 ಟಿಎಂಸಿ ಅಡಿ ಹೆಚ್ಚುವರಿ ಕಾವೇರಿ ನದಿ ನೀರು ಬಳಕೆಗೆ ತಮಿಳುನಾಡು ಸರ್ಕಾರ ಕೈಗೊಂಡಿರುವ ಬೃಹತ್ ಯೋಜನೆಗೆ ರಾಜ್ಯ ಸರ್ಕಾರ ಚಕಾರವೆತ್ತದಿರುವುದು ಸರಿಯಲ್ಲ. ಇದು ಗಂಭೀರವಾದ ವಿಷಯ' ಎಂದು ರಾಜ್ಯಸಭಾ ಸದಸ್ಯ ಎಚ್‌. ಡಿ.ದೇವೇಗೌಡ ಭಾನುವಾರ ಇಲ್ಲಿ ಹೇಳಿದರು.

'ರಾಜ್ಯದ ಪಾಲಿನ ನೀರು ಕಬಳಿಸಲು ತಮಿಳುನಾಡು ಸರ್ಕಾರ ಪ್ರಧಾನಿ ಮೇಲೆ ಒತ್ತಡ ಹೇರುತ್ತಿದೆ. ರಾಜ್ಯದ ಹಿತರಕ್ಷಿಸುವಲ್ಲಿ ಕಾಂಗ್ರೆಸ್, ಬಿಜೆಪಿ ವಿಫಲವಾಗಿವೆ. ಎಐಎಡಿಎಂಕೆ ಜತೆ ಹೊಂದಾಣಿಕೆ ಮಾಡಿಕೊಂಡು ಬಿಜೆಪಿ ಹಲವು ಯೋಜನೆಗಳನ್ನು ಘೋಷಿಸಿದೆ. ರಾಜ್ಯದ ಜನರಿಗೆ ಅನ್ಯಾಯವಾಗಲು ಬಿಡುವುದಿಲ್ಲ, ಬೀದಿಗಿಳಿದು ಹೋರಾಟಮಾಡುತ್ತೇನೆ' ಎಂದು ಎಚ್ಚರಿಸಿದರು.

'ಹಲವು ಸಮಾಜಗಳು ಮೀಸಲಾತಿಗಾಗಿ ಹೋರಾಟ ಮಾಡುತ್ತಿವೆ. ಇದಕ್ಕೆ ವಿರೋಧ ವ್ಯಕ್ತಪಡಿಸುವುದಿಲ್ಲ. ಆದರೆ, ಮೀಸಲಾತಿ ಪ್ರಮಾಣ ಶೇ 50 ಮೀರುವಂತಿಲ್ಲ ಎಂದು ಸುಪ್ರೀಂಕೋರ್ಟ್ ಆದೇಶ ನೀಡಿದೆ. ಮುಖ್ಯಮಂತ್ರಿ ಯಡಿಯೂರಪ್ಪ ಇದನ್ನು ಹೇಗೆ ಬಗೆಹರಿಸುತ್ತಾರೋ ಗೊತ್ತಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ದೆಹಲಿಯಲ್ಲಿ ರೈತರ ಹೋರಾಟವನ್ನು ಸರ್ಕಾರದ ಶಕ್ತಿ ಬಳಸಿ, ಮಣಿಸಲು ಸಾಧ್ಯವಿಲ್ಲ. ಮಾತುಕತೆ ಮೂಲಕ ಬಗೆಹರಿಸುವಂತೆ ಪ್ರಧಾನಿಗೆ ಸಲಹೆ ನೀಡಿದ್ದೇನೆ. ನನ್ನನ್ನು ಆಹ್ವಾನಿಸಿದರೆ ಸಲಹೆ ನೀಡಲು ಸಿದ್ಧ. ರೈತರ ಮೇಲೆ ಪ್ರಕರಣ ದಾಖಲಿಸುತ್ತಾ ಹೋದರೆ ಅವರಿಗೂ ತೊಂದರೆ. ರೈತರನ್ನು ಕೆಣಕಿದರೆ ಹೋರಾಟ ತೀವ್ರಗೊಳ್ಳಬಹುದು' ಎಂದು ಕಿವಿಮಾತು ಹೇಳಿದರು.

ಕೇವಲ ಅನುಮಾನವೊಂದೇ ಸಾಕ್ಷ್ಯವಲ್ಲ: ಸುಪ್ರೀಂಕೋರ್ಟ್

ನವದೆಹಲಿ(ಪಿಟಿಐ): 'ಅನುಮಾನವು ಎಷ್ಟೇ ಬಲವಾಗಿದ್ದರೂ ಸಾಕ್ಷ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಆರೋಪಿಯೇ ಇಂತಹ ಕೃತ್ಯವೆಸಗಿದ್ದಾನೆ ಎನ್ನುವುದಕ್ಕೆ ಸಾಕ್ಷ್ಯಗಳ ಸಂಗ್ರಹ ಅಗತ್ಯ. ತಪ್ಪಿತಸ್ಥ ಎಂದು ಸಾಬೀತುಪಡಿಸುವವರೆಗೂ ಆರೋಪಿ ಅಮಾಯಕ' ಎಂದು ನ್ಯಾಯಾಲಯ ಹೇಳಿದೆ.

ಗೃಹರಕ್ಷಕ ದಳದ ಸಿಬ್ಬಂದಿಯೊಬ್ಬರನ್ನು ವಿದ್ಯುತ್ ಸ್ಪರ್ಶದ ಮೂಲಕ ಹತ್ಯೆ ಮಾಡಿದ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಇಬ್ಬರನ್ನು ದೋಷಮುಕ್ತಗೊಳಿಸಿದ್ದ ಒಡಿಶಾ ಹೈಕೋರ್ಟ್ ಆದೇಶವನ್ನು ಎತ್ತಿ ಹಿಡಿದ ನ್ಯಾಯಾಲಯ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಹೇಮಂತ ಗುಪ್ತಾ ಅವರನ್ನೊಳಗೊಂಡ ಪೀಠವು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

ವಿದ್ಯುತ್ ಆಘಾತದಿಂದ ಸಾವು ಸಂಭವಿಸಿದೆ ಎನ್ನುವುದು ಮರಣೋತ್ತರ ಪರೀಕ್ಷೆ ವರದಿ ತಿಳಿಸಿದೆ ಮತ್ತು ಇದು ಹತ್ಯೆ ಎನ್ನುವುದಕ್ಕೆ ಸಾಕ್ಷ್ಯಗಳಿಲ್ಲ ಎಂದು ಪೀಠವು ತಿಳಿಸಿದೆ.

ಪ್ರಕರಣದ ವಿವರ: 'ಆರೋಪಿಗಳಾದ ಬಾನಾಬಿಹಾರಿ ಮೊಹಾಪಾತ್ರಾ ಮತ್ತು ಅವರ ಮಗ ಲುಜಾ ಹಾಗೂ ಇತರರು ನನ್ನ ಪತಿಗೆ ವಿಷ ಕುಡಿಸಿ, ಬಳಿಕ ವಿದ್ಯುತ್ ಹರಿಸಿ ಹತ್ಯೆ ಮಾಡಿದ್ದಾರೆ' ಎಂದು ಗೀತಾಂಜಲಿ ತಾಡು ಎನ್ನುವವರು ದೂರು ದಾಖಲಿಸಿದ್ದರು.

ಈ ಪ್ರಕರಣದಲ್ಲಿ ಆರೋಪಿಗಳು ತಪ್ಪಿತಸ್ಥರಾಗಿದ್ದಾರೆ ಎನ್ನುವುದನ್ನು ಸಾಬೀತುಪಡಿಸಿಲ್ಲ. ಹೀಗಾಗಿಯೇ ವಿಚಾರಣಾ ನ್ಯಾಯಾಲಯ ಆರೋಪಿಗಳನ್ನು ದೋಷಮುಕ್ತಗೊಳಿಸಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಉತ್ತರಾಖಂಡದ ಚಮೋಲಿಯಲ್ಲಿ ನೀರ್ಗಲ್ಲು ಕುಸಿತ ಅವಘಡದಲ್ಲಿ ಸಿಲುಕಿರುವವರ ರಕ್ಷಣಾ ಕಾರ್ಯಾಚರಣೆಯಲ್ಲಿ ನಿರತರಾಗಿರುವ ಸಿಬ್ಬಂದಿ

ಉತ್ತರಾಖಂಡ ನೀರ್ಗಲ್ಲು ಕುಸಿತ ತಪೋವನದಲ್ಲಿ ಇನ್ನೂ ಎರಡು ಶವಗಳು ಪತ್ತೆ

ಗೋಪೇಶ್ವರ: ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ನೀರ್ಗಲ್ಲು ಕುಸಿತ ಅವಘಡಕ್ಕೆ ಸಂಬಂಧಿಸಿದಂತೆ ರಕ್ಷಣಾ ಕಾರ್ಯ 15ನೇ ದಿನವೂ ಮುಂದುವರಿದಿದ್ದು, ತಪೋವನ–ವಿಷ್ಣುಗಡ್ ಯೋಜನೆಯ ಸ್ಥಳದಲ್ಲಿ ಎರಡು ಶವಗಳನ್ನು ಹೊರತೆಗೆಯಲಾಗಿದೆ.

'ಶನಿವಾರ ಸಂಜೆ ಮೂರು ಶವಗಳು ಪತ್ತೆಯಾಗಿತ್ತು. ರಾತ್ರಿ ವೇಳೆಗೆ ಇನ್ನೂ ಎರಡು ಶವಗಳು ಸಿಕ್ಕಿವೆ. ಈ ಮೂಲಕ ಮೃತರ ಸಂಖ್ಯೆ 67ಕ್ಕೆ ಏರಿಕೆಯಾಗಿದೆ. 137 ಮಂದಿ ನಾಪತ್ತೆಯಾಗಿದ್ದಾರೆ' ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಫೆಬ್ರುವರಿ 7 ರಂದು ಚಮೋಲಿ ಜಿಲ್ಲೆಯ ರಿಷಿ ಗಂಗಾದ ಬಳಿ ನೀರ್ಗಲ್ಲು ಕುಸಿತ ಸಂಭವಿಸಿದೆ. ಇದರಿಂದಾಗಿ ಸಂಭವಿಸಿದ ಪ್ರವಾಹದಲ್ಲಿ 13.2 ಮೆಗಾವಾಟ್ ಸಾಮರ್ಥ್ಯದ ರಿಷಿ ಗಂಗಾ ಜಲವಿದ್ಯುತ್ ಯೋಜನೆಯು ಸಂಪೂರ್ಣ ನಾಶಗೊಂಡಿದೆ. ತಪೋವನ–ವಿಷ್ಣುಗಡ್ ಯೋಜನೆಗೂ ಭಾರಿ ಹಾನಿಯಾಗಿದೆ.

ಸಂಕ್ಷಿಪ್ತ ಸುದ್ದಿ

ಗಡಿ ಬಿಕ್ಕಟ್ಟು: ಚೀನಾ–ಭಾರತ 16 ತಾಸು ಮಾತುಕತೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್ ಗಡಿಯಿಂದ ಉಭಯ ದೇಶಗಳು ಸೇನೆಯನ್ನು ಹಿಂತೆಗೆಯುವ ಪ್ರಕ್ರಿಯೆಯನ್ನು ಚುರುಕುಗೊಳಿಸುವ ಸಂಬಂಧ ಭಾರತ–ಚೀನಾ ನಡುವೆ ಸುದೀರ್ಘ 16 ಗಂಟೆಗಳ ಕಾಲ ಮಾತುಕತೆ ನಡೆಯಿತು.

ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ, ಚೀನಾ ಭಾಗದಲ್ಲಿರುವ ಮಾಲ್ಡೊ ಗಡಿ ಠಾಣೆಯಲ್ಲಿ ಸೇನಾ ಕಮಾಂಡರ್‌ಗಳ ಮಟ್ಟದ 10ನೇ ಸುತ್ತಿನ ಮಾತುಕತೆ ನಡೆಯಿತು.

ಶನಿವಾರ ಬೆಳಿಗ್ಗೆ 10ಕ್ಕೆ ಆರಂಭಗೊಂಡ ಈ ಮಾತುಕತೆ, ಮಧ್ಯರಾತ್ರಿ 2 ಗಂಟೆಗೆ ಮುಕ್ತಾಯಗೊಂಡಿತು. ಹಾಟ್ ಸ್ಪ್ರಿಂಗ್ಸ್, ಗೋಗ್ರಾ ಹಾಗೂ ಡೆಪ್ಸಾಂಗ್‌ನಲ್ಲಿ ಸಂಘರ್ಷವನ್ನು ಶಮನಗೊಳಿಸುವ ಕುರಿತು ಚರ್ಚಿಸಲಾಯಿತು ಎಂದು ಮೂಲಗಳು ಹೇಳಿವೆ.

ಕರೀನಾ, ಸೈಫ್ ದಂಪತಿಗೆ ಗಂಡು ಮಗು

ಸೈಫ್ ಅಲಿ ಖಾನ್–ಕರೀನಾ ಕಪೂರ್

ಮುಂಬೈ: ಬಾಲಿವುಡ್ ನಟ ಸೈಫ್ ಅಲಿ ಖಾನ್ ಮತ್ತು ಕರೀನಾ ಕಪೂರ್ ದಂಪತಿಯು ಎರಡನೇ ಮಗುವಿಗೆ ಪೋಷಕರಾಗಿದ್ದಾರೆ.

ಕರೀನಾ ಕಪೂರ್ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ 9 ಗಂಟೆಗೆ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.

'ಕರೀನಾ ಮುದ್ದಾದ ಗಂಡುವಿಗೆ ಜನ್ಮ ನೀಡಿದ್ದಾಳೆ. ನಾನು ಆದಷ್ಟು ಬೇಗ ಆಸ್ಪತ್ರೆಗೆ ಭೇಟಿ ನೀಡುತ್ತೇನೆ' ಎಂದು ಕರೀನಾ ಅವರ ತಂದೆ ರಣಧೀರ್ ಕಪೂರ್ ಅವರು ತಿಳಿಸಿದರು. ನಮ್ಮ ಕುಟುಂಬಕ್ಕೆ ಹೊಸ ಸದಸ್ಯ ಬಂದಿದ್ದಾನೆ. ನಿಮ್ಮ ಪ್ರೀತಿ ಮತ್ತು ಸಹಕಾರಕ್ಕೆ ಧನ್ಯವಾದಗಳು ಎಂದು ದಂಪತಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ರಿಂಕು ಶರ್ಮಾ ಕೊಲೆ ಪ್ರಕರಣ: ನಾಲ್ವರ ಬಂಧನ

ನವದೆಹಲಿ (ಪಿಟಿಐ): ದೆಹಲಿಯ ಮಂಗಲಪುರಿ ಪ್ರದೇಶದಲ್ಲಿ ನಡೆದ ರಿಂಕು ಶರ್ಮಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಮತ್ತೆ ನಾಲ್ವರು ಆರೋಪಿಗಳನ್ನು ಬಂಧಿಸಿರುವುದಾಗಿ ದೆಹಲಿ ಪೊಲೀಸರು ಭಾನುವಾರ ಹೇಳಿದ್ದಾರೆ.

ದೀನ್ ಮೊಹ್ದ್, ದಿಲ್ಷನ್, ಫಯಾಜ್ ಹಾಗೂ ಫೈಜನ್ ಬಂಧಿತರು. ಬಂಧಿತರೆಲ್ಲರೂ ಮಂಗಲಪುರಿ ನಿವಾಸಿಗಳಾಗಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ವರೆಗೆ 9 ಜನ ಆರೋಪಿಗಳನ್ನು ಬಂಧಿಸಿದಂತಾಗಿದೆ.

'ರಿಂಕು ಮೇಲೆ ಹಲ್ಲೆ ನಡೆಸುತ್ತಿದ್ದ ದೃಶ್ಯಗಳು ಸಿ.ಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಇದರ ಆಧಾರದ ಮೇಲೆ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಪುದುಚೇರಿ: ಅಲ್ಪಮತಕ್ಕೆ ಕುಸಿದ ನಾರಾಯಣಸ್ವಾಮಿ ನೇತೃತ್ವದ ಸರ್ಕಾರ

ಮತ್ತೆ ಇಬ್ಬರು ಶಾಸಕರ ರಾಜೀನಾಮೆ

ಪುದುಚೇರಿ(ಪಿಟಿಐ): ಬಹುಮತ ಸಾಬೀತುಪಡಿಸುವ ಒಂದು ದಿನ ಮೊದಲು ವಿ. ನಾರಾಯಣಸ್ವಾಮಿ ನೇತೃತ್ವದ ಸರ್ಕಾರ ಮತ್ತೊಂದು ಆಘಾತಕ್ಕೆ ಸಿಲುಕಿದೆ.

ಕಾಂಗ್ರೆಸ್–ಡಿಎಂಕೆ ಮೈತ್ರಿಕೂಟದ ಇಬ್ಬರು ಶಾಸಕರು ಭಾನುವಾರ ರಾಜೀನಾಮೆ ನೀಡಿದ್ದಾರೆ. ಇದರಿಂದ, ಇದೇ 22ರಂದು ಬಹುಮತ ಸಾಬೀತುಪಡಿಸಲಿರುವ ವಿ. ನಾರಾಯಣಸ್ವಾಮಿ ಅವರಿಗೆ ಸರ್ಕಾರ ಉಳಿಸಿಕೊಳ್ಳುವ ಸವಾಲು ಮತ್ತಷ್ಟು ಪ್ರಯಾಸವಾಗಲಿದೆ.

ಕಾಂಗ್ರೆಸ್‌ನ ಕೆ. ಲಕ್ಷ್ಮೀನಾರಾಯಣನ್ ಮತ್ತು ಡಿಎಂಕೆಗೆ ಸೇರಿದ ವೆಂಕಟೇಶನ್ ರಾಜೀನಾಮೆ ನೀಡಿರುವ ಶಾಸಕರು.

ಇಬ್ಬರ ರಾಜೀನಾಮೆಯಿಂದಾಗಿ, 33 ಸದಸ್ಯರನ್ನೊಳಗೊಂಡ ಸದನದಲ್ಲಿ ಆಡಳಿತಾರೂಢ ಕಾಂಗ್ರೆಸ್–ಡಿಎಂಕೆ ಮೈತ್ರಿಕೂಟದ ಶಾಸಕರ ಸಂಖ್ಯೆ 11ಕ್ಕೆ ಕುಸಿದಿದೆ. ಆದರೆ, ವಿರೋಧ ಪಕ್ಷ 14 ಶಾಸಕರನ್ನು ಹೊಂದಿದೆ. ಏಳು ಸ್ಥಾನಗಳು ಖಾಲಿ ಉಳಿದಿವೆ.

ಮಾಜಿ ಸಚಿವರಾದ ಎ.ನಮಶಿವಾಯಂ ಮತ್ತು ಮಲ್ಲಾಡಿ ಕೃಷ್ಣರಾವ್ ಸೇರಿದಂತೆ ನಾಲ್ವರು ಕಾಂಗ್ರೆಸ್ ಶಾಸಕರು ಈಗಾಗಲೇ ರಾಜೀನಾಮೆ ನೀಡಿದ್ದಾರೆ. ನಮಶಿವಯಂ ಈಗಾಗಲೇ ಬಿಜೆಪಿ ಸೇರಿದ್ದಾರೆ. ಮತ್ತೊಬ್ಬ ಶಾಸಕರನ್ನು ಈ ಮೊದಲೇ ಅನರ್ಹಗೊಳಿಸಲಾಗಿತ್ತು.

ಕೆ. ಲಕ್ಷ್ಮೀನಾರಾಯಣನ್ ಮತ್ತು ವೆಂಕಟೇಶನ್ ಅವರು ಪ್ರತ್ಯೇಕವಾಗಿ ತಮ್ಮ ರಾಜೀನಾಮೆ ಪತ್ರಗಳನ್ನು ಸ್ಪೀಕರ್ ವಿ.ಪಿ. ಶಿವಕೊಲುಂಧು ಅವರಿಗೆ ಸಲ್ಲಿಸಿದ್ದಾರೆ. ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ಸಲ್ಲಿಸಿರುವುದಾಗಿ ಲಕ್ಷ್ಮೀನಾರಾಯಣನ್ ತಿಳಿಸಿದ್ದಾರೆ.

'ನಾರಾಯಣಸ್ವಾಮಿ ನೇತೃತ್ವದ ಸರ್ಕಾರ ಬಹುಮತ ಕಳೆದುಕೊಂಡಿದೆ' ಎಂದು ಲಕ್ಷ್ಮೀನಾರಾಯಣಸ್ವಾಮಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಶಾಸಕ ಸ್ಥಾನಕ್ಕೆ ಮಾತ್ರ ರಾಜೀನಾಮೆ ನೀಡಿದ್ದೇನೆ. ಡಿಎಂಕೆಯಲ್ಲೇ ಮುಂದುವರಿದಿದ್ದೇನೆ. ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಅಡಿಯಲ್ಲಿ ಅನುದಾನ ಹಂಚಿಕೆ ಮಾಡದ ಕಾರಣ ಕ್ಷೇತ್ರದ ಜನತೆಯ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ರಾಜೀನಾಮೆ ನೀಡಿದ್ದೇನೆ' ಎಂದು ವೆಂಕಟೇಶನ್ ತಿಳಿಸಿದ್ದಾರೆ.

ಫೆಬ್ರುವರಿ 22ರಂದು ಬಹುಮತ ಸಾಬೀತುಪಡಿಸುವಂತೆ ಮುಖ್ಯಮಂತ್ರಿ ನಾರಾಯಣಸ್ವಾಮಿ ಅವರಿಗೆ ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಆಗಿ ಹೆಚ್ಚುವರಿ ಉಸ್ತುವಾರಿ ವಹಿಸಿಕೊಂಡಿರುವ ತೆಲಂಗಾಣದ ರಾಜ್ಯಪಾಲರಾದ ತಮಿಳುಸಾಯಿ ಸೌಂದರರಾಜನ್ ಅವರು ಗುರುವಾರ ನಿರ್ದೇಶನ ನೀಡಿದ್ದರು.

ಪುದುಚೇರಿಯಲ್ಲಿ ಸುರಿದ ಭಾರಿ ಮಳೆಯಿಂದ ಪ್ರವಾಹಕ್ಕೆ ಸಿಲುಕಿದ ವಸತಿ ಪ್ರದೇಶಗಳಿಗೆ ಮುಖ್ಯಮಂತ್ರಿ ವಿ. ನಾರಾಯಣಸ್ವಾಮಿ ಅವರು ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು. ಪಿಟಿಐ ಚಿತ್ರ

'ವಿಶ್ವಾಸಮತದಲ್ಲಿ ಜಯಗಳಿಸುತ್ತೇನೆ'

ಚೆನ್ನೈ: 'ಸೋಮವಾರ ಬಹುಮತ ಸಾಬೀತುಪಡಿಸುವ ವಿಶ್ವಾಸ ನನಗೆ ಇದೆ' ಎಂದು ಪುದುಚೇರಿ ಮುಖ್ಯಮಂತ್ರಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

'ನಮಗೆ 14 ಶಾಸಕರ ಬೆಂಬಲವಿದೆ. ವಿರೋಧ ಪಕ್ಷದಲ್ಲಿ 11 ಶಾಸಕರಿದ್ದಾರೆ. ಉಳಿದ ಮೂವರು ಶಾಸಕರು ಆಯ್ಕೆಯಾಗಿಲ್ಲ. ಅವರನ್ನು ನಾಮನಿರ್ದೇಶನ ಮಾಡಲಾಗಿದೆ. ಈ ಮೂವರ ನಾಮನಿರ್ದೇಶನದ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪು ನೀಡಿಲ್ಲ. ಹೀಗಾಗಿ, ಇವರು ಮತಚಲಾಯಿಸುವ ವಿಷಯ ಪ್ರಶ್ನೆಯಾಗಿಯೇ ಉಳಿದಿದೆ. ಈ ಬಗ್ಗೆ ಸ್ಪೀಕರ್ ಅವರು ನಿರ್ಣಯ ಕೈಗೊಳ್ಳಲಿದ್ದಾರೆ. ಸದ್ಯದ ಸಂಖ್ಯೆಗಳನ್ನು ಹೋಲಿಸಿದರೆ ನಾವು ಉತ್ತಮ ಪರಿಸ್ಥಿತಿ ಇಲ್ಲಿದ್ದೇವೆ' ಎಂದು ತಿಳಿಸಿದ್ದಾರೆ.

'ಬಿಜೆಪಿ ಹಣ ಬಲದಿಂದ ಶಾಸಕರನ್ನು ಖರೀದಿಸಲು ಯತ್ನಿಸುತ್ತಿದೆ. ಜತೆಗೆ, ಇ.ಡಿ. ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಗಳನ್ನು ಬಳಸಿಕೊಂಡು ಶಾಸಕರು ಮತ್ತು ಸಚಿವರಿಗೆ ಬೆದರಿಕೆ ಹಾಕುತ್ತಿದೆ' ಎಂದು ಆರೋಪಿಸಿದ್ದಾರೆ.

ಐಇಡಿ ಪತ್ತೆ: ಜಮ್ಮುವಿನಲ್ಲಿ ಆರೋಪಿ ಸೆರೆ

ಜಮ್ಮು: 'ಸುಧಾರಿತ ಸ್ಫೋಟಕ ಸಾಧನ (ಐಇಡಿ) ಪತ್ತೆ ಪ್ರಕರಣದಡಿ ಅಲ್–ಬದರ್ ಸಂಘಟನೆಯ ಕಾರ್ಯಕರ್ತನೊಬ್ಬನನ್ನು ಬಂಧಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಫೆಬ್ರುವರಿ 13 ರಂದು ಜಮ್ಮು ಬಸ್ ನಿಲ್ದಾಣದಲ್ಲಿ ನರ್ಸಿಂಗ್ ವಿದ್ಯಾರ್ಥಿ ಬಳಿ 7 ಕೆ.ಜಿಯ ಐಇಡಿ ಸಿಕ್ಕಿತ್ತು. 2019ರಲ್ಲಿ ಫೆಬ್ರುವರಿ 14ರಂದು ನಡೆದ ಪುಲ್ವಾಮ ದಾಳಿಯ ಎರಡನೇ ವರ್ಷಾಚರಣೆ ಸಂದರ್ಭದಲ್ಲಿ ಶ್ರೀನಗರದಲ್ಲಿ ದಾಳಿ ನಡೆಸಲು ಸಂಚು ರೂಪಿಸಲಾಗಿತ್ತು.

'ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ಬಾತ್‌ಬಾಗ್–ಹನಿಪೊರ ಗ್ರಾಮದ ನಿವಾಸಿ ರಹ್ ಹುಸೈನ್ ಭಟ್‌ನನ್ನು ಬಂಧಿಸಲಾಗಿದೆ. ಈತ ಅಲ್–ಬದರ್ ಸಂಘಟನೆಯ ಕಾರ್ಯಕರ್ತ. ಈತ ಈ ಉಗ್ರ ಸಂಘಟನೆಯ ಸದಸ್ಯರಿಗೆ ಕಾರ್ಯಾಚರಣೆಗೆ ಬೇಕಾದ ಅಗತ್ಯ ವಸ್ತುಗಳನ್ನು ಒದಗಿಸುತ್ತಿದ್ದ. ಈತನಿಗೆ ರಘುನಾಥ್ ಮಂದಿರ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣದಲ್ಲಿ ದಾಳಿ ನಡೆಸಲು ಸೂಚನೆ ನೀಡಲಾಗಿತ್ತು' ಎಂದು ಜಮ್ಮುವಿನ ಹಿರಿಯ ಪೊಲೀಸ್ ಅಧಿಕಾರಿ ಮುಖೇಶ್ ಸಿಂಗ್ ಅವರು ತಿಳಿಸಿದರು.

ದ್ವಿಪದವಿ ಕೋರ್ಸ್: ಕರಡು ಅಂತಿಮ

ನವದೆಹಲಿ (ಪಿಟಿಐ): ಭಾರತೀಯ ಹಾಗೂ ವಿದೇಶ ಮೂಲದ ಉನ್ನತ ಶಿಕ್ಷಣ ಸಂಸ್ಥೆಗಳು ದ್ವಿಪದವಿ ಅಥವಾ ಜಂಟಿ ಪದವಿಕೋರ್ಸ್‌ಗಳನ್ನು ಆರಂಭಿಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಒಳಗೊಂಡ ಕರಡನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಅಂತಿಮಗೊಳಿಸಿದೆ. ಈ ಕರಡನ್ನು ಸಾರ್ವಜನಿಕರೂ ಪರಿಶೀಲಿಸಿ, ತಮ್ಮ ಅಭಿಪ್ರಾಯ, ಪ್ರತಿಕ್ರಿಯೆ ಸಲ್ಲಿಸಲು ಅನುಕೂಲವಾಗಲು ಯುಜಿಸಿ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

'ಬಿಜೆಪಿಗೆ ತಕ್ಕ ಪಾಠ ಕಲಿಸಿ'

ಪ್ರಜಾವಾಣಿ ವಾರ್ತೆ

ಲಖನೌ: ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಭಾನುವಾರ ಪ್ರಯಾಗರಾಜ್‌ನಲ್ಲಿ 'ನಿಷಾದ್' (ಅಂಬಿಗ) ಸಮುದಾಯದ ಜನರನ್ನು ಭೇಟಿಯಾಗಿ, 'ಬಿಜೆಪಿಗೆ ತಕ್ಕ ಪಾಠ ಕಲಿಸು'ವಂತೆ ಮನವಿ ಮಾಡಿಕೊಂಡರು.

ಮುಂದಿನ ವರ್ಷದ ಆರಂಭದಲ್ಲಿ ಉತ್ತರಪ್ರದೇಶದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಅವರು ಸಮುದಾಯದ ಓಲೈಕೆಗೆ ಮುಂದಾಗಿದ್ದಾರೆ. ಉತ್ತರ ಪ್ರದೇಶದ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ನಿಷಾದ್ ಸಮುದಾಯದ ಮತಗಳು ನಿರ್ಣಾಯಕ ಎನಿಸಿವೆ.

ಯಮುನಾ ನದಿಯಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಸಿದ ಆರೋಪದ ಮೇಲೆ ಇತ್ತೀಚೆಗೆ ಪೊಲೀಸರಿಂದ ಥಳಿತಕ್ಕೊಳಗಾದ ಅಂಬಿಗರ ಕುಟುಂಬದವರನ್ನು ಇದೇ ವೇಳೆ ಭೇಟಿಯಾದರು.

'ಪೊಲೀಸ್ ಕ್ರಮವು ನಾಚಿಕೆಗೇಡಿತನ ಸಂಗತಿ. ನೀವು ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ಸೂಚಿಸಿದ್ದೀರಿ. ಆದರೆ, ಅವರು ನಿಮಗಾಗಿ ಏನನ್ನೂ ಮಾಡಲಿಲ್ಲ. ನೀವು ಪಕ್ಷಕ್ಕೆ ತಕ್ಕ ಪಾಠ ಕಲಿಸಬೇಕು' ಎಂದು ಹೇಳಿದರು.

'ನಿಮಗೆ ನಮ್ಮ ಪಕ್ಷ ಸಂಪೂರ್ಣ ಬೆಂಬಲ ನೀಡುತ್ತದೆ. ನೀವು ನಮಗೆ ಬೆಂಬಲ ನೀಡಿ ಎಂದು ಕೋರಿದ ಅವರು, ಬಿಜೆಪಿ ಕೈಗಾರಿಕೋದ್ಯಮಿಗಳ ಬಗ್ಗೆ ಮಾತ್ರವೇ ಕಾಳಜಿ ಹೊಂದಿದೆ' ಎಂದರು.

ಪ್ರಿಯಾಂಕಾ ಗಾಂಧಿ ಭಾನುವಾರ ಪ್ರಯಾಗರಾಜ್‌ನಲ್ಲಿ 'ನಿಷಾದ್' (ಅಂಬಿಗ) ಸಮುದಾಯದ ಜನರನ್ನು ಭೇಟಿ ಮಾಡಿ ಚರ್ಚಿಸಿದರು.

ಕೇರಳ: ಟ್ರ್ಯಾಕ್ಟರ್ ರ‍್ಯಾಲಿಯಲ್ಲಿ ರಾಹುಲ್ ಭಾಗಿ

ತಿರುವನಂತಪುರ: ವಯನಾಡ್‌ನಲ್ಲಿ ಸೋಮವಾರ (ಫೆ. 22) ನಡೆಯಲಿರುವ ಟ್ರ್ಯಾಕ್ಟರ್ ರ‍್ಯಾಲಿಯಲ್ಲಿ ಕಾಂಗ್ರೆಸ್ ಮುಖಂಡ, ಸಂಸದ ರಾಹುಲ್ ಗಾಂಧಿ ಭಾಗವಹಿಸಲಿದ್ದಾರೆ. ರೈತರು ನಡೆಸುತ್ತಿರುವ ಪ್ರತಿಭಟನೆಗೆ ಒಗ್ಗಟ್ಟು ಪ್ರದರ್ಶಿಸಲು ರ‍್ಯಾಲಿಯಲ್ಲಿ ಭಾಗವಹಿಸುತ್ತಿದ್ದಾರೆ.

ಮೂರು ದಿನಗಳ ಭೇಟಿಗೆ ಕೇರಳಕ್ಕೆ ಆಗಮಿಸುತ್ತಿರುವ ರಾಹುಲ್ ಅವರು, ತಮ್ಮ ಕ್ಷೇತ್ರ ವಯನಾಡ್‌ನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಪ್ರತಿಪಕ್ಷದ ನಾಯಕ ರಮೇಶ್ ಚೆನ್ನಿತ್ತಲ ಅವರು ರಾಜ್ಯದಾದ್ಯಂತ ಹಮ್ಮಿಕೊಂಡಿರುವ ಮೆರವಣಿಗೆ ಮಂಗಳವಾರ ಮುಕ್ತಾಯವಾಗಲಿದ್ದು, ಅಂದು ನಡೆಯುವ ಸಾರ್ವಜನಿಕ ಸಭೆಯಲ್ಲಿ ರಾಹುಲ್ ಭಾಗವಹಿಸುವರು. ಅಮೆರಿಕ ಮೂಲದ ಸಂಸ್ಥೆಯೊಂದು ಸಮುದ್ರದಲ್ಲಿ ಆಳದಲ್ಲಿ ಎಳೆಬಲೆ ನಿರ್ಮಿಸುವ ಕುರಿತು ಎಡಪಂಥೀಯ ಸರ್ಕಾರದ ಜೊತೆಗೆ ಮಾಡಿಕೊಂಡಿರುವ ಒಪ್ಪಂದದ ಬಗ್ಗೆ ಹೊಸ ಆರೋಪಗಳು ಕೇಳಿಬಂದಿವೆ. ಈ ಹಿನ್ನೆಲೆಯಲ್ಲಿ ಕೊಲ್ಲಂ ಜಿಲ್ಲೆಯ ಮೀನುಗಾರರೊಂದಿಗೆ ಅವರು ಸಂವಾದ ನಡೆಸಲಿದ್ದಾರೆ.

ಸೋಮವಾರ ವಯನಾಡ್‌ನ ಕಲ್ಪೆಟ್ಟ ಬಳಿಯ ಮಂದಾಡ್‌ನಿಂದ ಮಟ್ಟಿಲ್ ವರೆಗೆ ರೈತರು ನಡೆಸಲಿರುವ ಮೂರು ಕಿಲೋಮೀಟರ್ ರ‍್ಯಾಲಿಯಲ್ಲಿ 100 ಟ್ರ್ಯಾಕ್ಟರ್‌ಗಳನ್ನು ಸೇರಿಸಲಾಗುವುದು ಎಂದು ಕಾಂಗ್ರೆಸ್ ಸ್ಥಳೀಯ ಮುಖಂಡರು ತಿಳಿಸಿದ್ದಾರೆ. ರೈತರ ಸಭೆಯಲ್ಲೂ ರಾಹುಲ್ ಭಾಷಣ ಮಾಡಲಿದ್ದಾರೆ.

ಇಂಧನ ದರ ಏರಿಕೆ ವಾಪಸ್ ಪಡೆಯಲು ಆಗ್ರಹ

ನವದೆಹಲಿ: ಇಂಧನ ದರ ಏರಿಕೆ ಮೂಲಕ ಸರ್ಕಾರ ಜನರ ಕಷ್ಟದಿಂದಲೂ ಲಾಭ ಮಾಡಿಕೊಳ್ಳಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ ಟೀಕಿಸಿದ್ದು, ದರ ಏರಿಕೆ ವಾಪಸು ಪಡೆಯಬೇಕು ಎಂದು ಆಗ್ರಹಪಡಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈ ಕುರಿತು ಪತ್ರ ಬರೆದಿದ್ದು, ಜಿಡಿಪಿ ಅಂದರೆ ಎಂದರೆ ಗ್ಯಾಸ್, ಡೀಸೆಲ್ ಮತ್ತು ಪೆಟ್ರೋಲ್ ದರ ಹೆಚ್ಚುತ್ತಿದ್ದು, ನಿಯಂತ್ರಣಕ್ಕೆ ಕ್ರಮವಹಿಸಬೇಕಾಗಿದೆ ಎಂದು ಒತ್ತಾಯಿಸಿದ್ದಾರೆ.

ಇಂಧನ, ಅಡುಗೆ ಅನಿಲದ ತೀವ್ರ ಏರಿಕೆ ಕುರಿತು ಜನರ ಆಕ್ರೋಶವನ್ನು ನಿಮ್ಮ ಗಮನಕ್ಕೆ ತರಲು ಈ ಪತ್ರ ಬರೆಯಲಾಗುತ್ತಿದೆ. ಒಂದು ಕಡೆ ಉದ್ಯೋಗ ನಷ್ಟ, ಆದಾಯ ಕೊರತೆಯಿಂದ ಮಧ್ಯಮವರ್ಗ ತತ್ತರಿಸುತ್ತಿದೆ. ಮಧ್ಯಮ ಮತ್ತು ಕೆಳವರ್ಗದ ಜನರು ಪರಿತಪಿಸುತ್ತಿದ್ದಾರೆ. ಹಣದುಬ್ಬರದಿಂದಾಗಿ ಎಲ್ಲ ಅಗತ್ಯ ವಸ್ತುಗಳ ದರ ಏರಿದೆ ಎಂದು ತಿಳಿಸಿದ್ದಾರೆ.

ಪುರಸಭೆ ಕಾರ್ಯಾಲಯ ಇಂಡಿ
ಫೋನ್/ಫ್ಯಾಕ್ಸ್:08359–225025
ವೆಬ್‌ಸೈಟ್: www.inditown.mrc.gov.in,
ಇ–ಮೇಲ್:itstaff_ulb_indi@yahoo.co.in,
ಕ್ರ.ಸಂ:ಪು.ಸ.ಇಂ/ಮೇ.ಮಾ.ನಿ/ಟೆ.ಪ್ರ/2020–21/403 ದಿನಾಂಕ:19.02.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಇಂಡಿ ಪುರಸಭೆಯ ವ್ಯಾಪ್ತಿಯ ಸ್ಟೇಶನ ರಸ್ತೆಯ ಪುರಸಭೆ ಮಾಲೀಕತ್ವದ ಸರ್ವೆ ನಂ.626/ಪಿ–01ರಲ್ಲಿಯ 01ಎಕರೆ 06ಗುಂಟೆ ಜಮೀನಿನಲ್ಲಿ ಮೇಘಾ ಮಾರುಕಟ್ಟೆ ಹಂತ–01 ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿಗೆ ಟೆಂಡರ ಕರೆಯಲಾಗಿದ್ದು, DMA/2020-21/BD/WORK_INDENT112994, ಮುಖ್ಯಾಧಿಕಾರಿಗಳು ಪುರಸಭೆ ಇಂಡಿ ಕೆ.ಪಿ.ಡಬ್ಲ್ಯೂ.ಡಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯುರಮೆಂಟ್ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ ಮುಖಾಂತರ ಐಟಂವಾರು ಟೆಂಡರನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್ ಲೈನ್ ಮೂಲಕ ವೆಬ್‌ಸೈಟ್ www.https//eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರನಲ್ಲಿ ಭಾಗವಹಿಸಬಹುದು.

1. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 10.03.2021 ರಂದು ಸಂಜೆ 5.00 ಘಂಟೆಯವರೆಗೆ.
2. ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.03.2021 ರಂದು ಬೆಳಿಗ್ಗೆ 11.30 ಘಂಟೆಯವರೆಗೆ.
3. ಟೆಂಡರ ಆರ್ಥಿಕ (ಹಣಕಾಸು) ಬಿಡ್ ತೆರೆಯುವ ದಿನಾಂಕ: 16.03.2021 ರಂದು ಬೆಳಿಗ್ಗೆ 11.30 ಘಂಟೆಯವರೆಗೆ.

ಷರತ್ತುಗಳನ್ನು ವೆಬ್‌ಸೈಟ್ www.https//eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/–ಮುಖ್ಯಾಧಿಕಾರಿ, ಪುರಸಭೆ ಇಂಡಿ

ವಾಸಾಸಂಇ/ವಿಜಯಪುರ/560/ಎಂಸಿಎ/2020–21

ನಿವಾಸಿ ಆಯುಕ್ತರ ಕಾರ್ಯಾಲಯ, ಕರ್ನಾಟಕ ಭವನ,
ನಂ.10, ಕೌಟಿಲ್ಯ ಮಾರ್ಗ್, ಚಾಣಕ್ಯಪುರಿ, ನವದೆಹಲಿ–110021. ದೂ: 011–24103701–06
ಸಂಖ್ಯೆ.: ಕೆಬಿ/01/ಕೆ.ಇ.ಎಸ್./2021 ದಿನಾಂಕ : 20.02.2021

ಅಧಿಸೂಚನೆ

ನವದೆಹಲಿಯ ಕರ್ನಾಟಕ ಭವನದಲ್ಲಿನ ಈ ಕೆಳಕಂಡ ''ಗ್ರೂಪ್–ಸಿ'' ಮತ್ತು ''ಗ್ರೂಪ್–ಡಿ'' ವೃಂದದ ಹುದ್ದೆಗಳನ್ನು (ಉಳಿಕೆ ಮೂಲ ವೃಂದದ – 25 ಮತ್ತು ಹೈದ್ರಾಬಾದ್ ಕರ್ನಾಟಕ ವೃಂದದ – 07) ಕರ್ನಾಟಕ ಭವನ (ಆತಿಥ್ಯ ಸಂಸ್ಥೆಯಲ್ಲಿನ ಕೆಲವು ಹುದ್ದೆಗಳಿಗೆ ನೇಮಕಾತಿ – ಕರ್ನಾಟಕ ಭವನ (ವಿಶೇಷ) ನಿಯಮಗಳು, 2020 ರನ್ವಯ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್: www.karnatakabhavan.karnataka.gov.in (1) ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡುವ ಪ್ರಾರಂಭದ ದಿನಾಂಕ: 22.02.2021. (2) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.03.2021. (3) ಶುಲ್ಕ ಪಾವತಿಸಲು ಕೊನೆಯ ದಿನಾಂಕ: 07.04.2021.

ಹುದ್ದೆಗಳ ವಿವರ

ಕ್ರ. ಸಂ.	ಹುದ್ದೆ ಮತ್ತು ವೇತನ ಶ್ರೇಣಿ	ವೃಂದ	ಭರ್ತಿ ಮಾಡುವ ಹುದ್ದೆಗಳ ಸಂಖ್ಯೆ		ಒಟ್ಟು ಹುದ್ದೆಗಳು
			ಉಳಿಕೆ ಮೂಲ ವೃಂದ	ಹೈದ್ರಾಬಾದ್-ಕರ್ನಾಟಕ ವೃಂದ	
1	ಸಹಾಯಕ ವ್ಯವಸ್ಥಾಪಕರು (ರೂ.27650–52650)	ಗ್ರೂಪ್–ಸಿ	01	01	02
2	ಸ್ವಾಗತಕಾರರು/ದೂರವಾಣಿ ಪ್ರವರ್ಧಕರು (ರೂ.21400–42000)	ಗ್ರೂಪ್–ಸಿ	02	01	03
3	ಕಿಚನ್ ಮೇಟ್ (ರೂ.17000–28950)	ಗ್ರೂಪ್–ಡಿ	07	02	09
4	ಪ್ಯೂನ್–ಕಂ–ವಾಚ್‌ಮೆನ್ (ರೂ.17000–28950)	ಗ್ರೂಪ್–ಡಿ	05	01	06
5	ಗಾರ್ಡನರ್–ಕಂ–ಸ್ವೀವರ್ (ರೂ.17000–28950)	ಗ್ರೂಪ್–ಡಿ	02	–	02
6	ರೂಂ ಬಾಯ್/ಬೇರರ್ (ರೂ.17000–28950)	ಗ್ರೂಪ್–ಡಿ	08	02	10
		ಒಟ್ಟು	25	07	32

(1) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ನೇಮಕಾತಿ ಮಾರ್ಗಸೂಚಿ/ನಿಬಂಧನೆಗಳನ್ನು (ಅಧಿಸೂಚನೆ) ಓದಿಕೊಂಡು ನಂತರ ಅಗತ್ಯ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು. (2) ಶೈಕ್ಷಣಿಕ ವಿದ್ಯಾರ್ಹತೆ ಕುರಿತು ಅಧಿಸೂಚನೆಯಲ್ಲಿ ವಿವರವಾದ ಮಾಹಿತಿಯನ್ನು ನೀಡಲಾಗಿದೆ. (3) ಆಯ್ಕೆಯಾದ ಅಭ್ಯರ್ಥಿಗಳು ನವದೆಹಲಿಯಲ್ಲಿನ ಕರ್ನಾಟಕ ಭವನದಲ್ಲಿಯೇ ಕಾರ್ಯನಿರ್ವಹಿಸುವುದು ಕಡ್ಡಾಯವಾಗಿದೆ. (4) ಅಧಿಸೂಚನೆ ಹಾಗೂ ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಕರ್ನಾಟಕ ಭವನದ ವೆಬ್‌ಸೈಟ್ www.karnatakabhavan.karnataka.gov.inನ್ನು ವೀಕ್ಷಿಸುವುದು.

ವಾಸಾಸಂಇ/ಉನಿ.ನ/2877/ಎಂಸಿಎ/2020–21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಬದುಕಿನಲ್ಲಿ ಅದೃಷ್ಟ ಅಥವಾ ದುರದೃಷ್ಟ ಯಾವುದೇ ಬರಲಿ, ನಾವು ಅದಕ್ಕೊಂದು ಅರ್ಥ ಕೊಟ್ಟು, ಅದನ್ನು ಮೌಲ್ಯಯುತವಾದ ರೀತಿಯಲ್ಲಿ ಪರಿವರ್ತಿಸಿಕೊಳ್ಳಬೇಕು.

–ಹರ್ಮನ್ ಹೆಸ್

ಕೋವಿಡ್ ಮಾರ್ಗಸೂಚಿ ಪಾಲನೆ ಮೈಮರೆವು, ನಿರ್ಲಕ್ಷ್ಯ ಸಲ್ಲದು

ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರುವ ಪ್ರಯಾಣಿಕರ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಲು ರಾಜ್ಯ ಆರೋಗ್ಯ ಇಲಾಖೆ ಮುಂದಾಗಿರುವುದು ಕೊರೊನಾ ನಿಯಂತ್ರಣದ ಪ್ರಯತ್ನದಲ್ಲಿ ಅಗತ್ಯವಾಗಿದ್ದ ಕ್ರಮ. ಕೊರೊನಾ ಸೋಂಕಿನ ಪ್ರಕರಣಗಳು ಮಹಾರಾಷ್ಟ್ರದಲ್ಲಿ ಹೆಚ್ಚುತ್ತಲೇ ಇವೆ. ಆ ಕಾರಣದಿಂದಾಗಿ ಅಲ್ಲಿಂದ ರಾಜ್ಯಕ್ಕೆ ಬರುವವರು, ಪ್ರಯಾಣಕ್ಕೂ ಮೊದಲಿನ 72 ಗಂಟೆಗಳ ಅವಧಿಯಲ್ಲಿ ನಡೆಸಲಾದ ಕೋವಿಡ್ ಆರ್‌ಟಿಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಹೊಂದಿರಬೇಕೆಂದು ಇಲಾಖೆ ಸುತ್ತೋಲೆ ಹೊರಡಿಸಿದೆ. ಮಹಾರಾಷ್ಟ್ರದಿಂದ ಬಂದಿರುವವರಿಗೆ ಪ್ರವೇಶ ನೀಡುವ ಮುನ್ನ 'ಕೋವಿಡ್ ನೆಗೆಟಿವ್' ವರದಿಯನ್ನು ಖಾತರಿಪಡಿಸಿಕೊಳ್ಳುವಂತೆ ಹೋಟೆಲ್, ರೆಸಾರ್ಟ್, ಹೋಂ ಸ್ಟೇ ಮತ್ತು ಹಾಸ್ಟೆಲ್‌ಗಳಿಗೆ ಸೂಚಿಸಲಾಗಿದೆ. ಪ್ರಸ್ತುತ ದೇಶದಲ್ಲಿನ ಸುಮಾರು ಶೇ 75ರಷ್ಟು ಕೊರೊನಾ ಪ್ರಕರಣಗಳು ಮಹಾರಾಷ್ಟ್ರ ಮತ್ತು ಕೇರಳದಿಂದ ವರದಿಯಾಗುತ್ತಿವೆ. ಸಕ್ರಿಯವಾಗಿರುವ ಪ್ರಕರಣಗಳೂ ಈ ರಾಜ್ಯಗಳಲ್ಲೇ ಹೆಚ್ಚು. ಹಾಗಾಗಿ, ಆ ಎರಡು ರಾಜ್ಯಗಳಿಂದ ಬರುವ ಪ್ರಯಾಣಿಕರನ್ನು ನಿರ್ಬಂಧಗಳಿಗೆ ಒಳಪಡಿಸುವ ಕಟ್ಟುನಿಟ್ಟಿನ ಕ್ರಮಗಳು ಅನಿವಾರ್ಯ. ಆದರೆ, ಹೊರ ರಾಜ್ಯಗಳಿಂದ ಬರಬಹುದಾದ ಕೊರೊನಾ ಸೋಂಕನ್ನು ತಡೆಗಟ್ಟುವ ಬಗ್ಗೆ ಜಾಗರೂಕವಾಗಿರುವ ಸರ್ಕಾರವು ರಾಜ್ಯದೊಳಗೆ ಮಾತ್ರ ಕೊರೊನಾ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಜಾರಿಗೊಳಿಸುವ ಬಗ್ಗೆ ಹೆಚ್ಚಿನ ಉತ್ಸಾಹ ವ್ಯಕ್ತಪಡಿಸಿಲ್ಲ. ವಿವಿಧ ಸಮುದಾಯಗಳು ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಭಾಗವಹಿಸುತ್ತಿದ್ದಾರೆ. ಜಾತಿ ಸಂಘಟನೆಯ ಸಮಾವೇಶಗಳಲ್ಲಿ ಸಾವಿರಾರು ಜನ ಸೇರುತ್ತಿದ್ದಾರೆ. ಇಂಥ ಕಾರ್ಯಕ್ರಮಗಳಲ್ಲಿ ಕೋವಿಡ್ ಮಾರ್ಗಸೂಚಿ ಪರಿಣಾಮಕಾರಿಯಾಗಿ ಪಾಲನೆಯಾಗುತ್ತದೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ.

ಹೊರ ರಾಜ್ಯಗಳಿಂದ ಬರುವವರು ಸೋಂಕುಮುಕ್ತರಾಗಿದ್ದರಷ್ಟೇ ಸಾಲದು, ರಾಜ್ಯದ ಒಳಗೂ ಸೋಂಕು ತಡೆಯುವ ಪ್ರಯತ್ನಗಳು ಚುರುಕುಗೊಳ್ಳಬೇಕಾಗಿದೆ

ಮಹಾರಾಷ್ಟ್ರದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಜನರ ನಿರ್ಲಕ್ಷ್ಯವೇ ಕಾರಣ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ರಾಜ್ಯದಲ್ಲಿ ಕೂಡ ಕೋವಿಡ್ ಮಾರ್ಗಸೂಚಿಗಳ ಪಾಲನೆ ತೃಪ್ತಿಕರವಾಗಿಲ್ಲ. ಸಾರ್ವಜನಿಕ ಸಾರಿಗೆಗಳಾದ ಬಸ್, ಮೆಟ್ರೊದಲ್ಲಿ ಸಾಮಾಜಿಕ ಅಂತರ ಕಂಡುಬರುತ್ತಿಲ್ಲ. ಚಿತ್ರಮಂದಿರಗಳಲ್ಲಿ ಹೌಸ್‌ಫುಲ್ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮದುವೆ, ಮೋಜುಕೂಟಗಳ ಹೆಸರಲ್ಲಿ ಜನ ಒಟ್ಟುಗೂಡುತ್ತಿದ್ದಾರೆ. ಬೆಂಗಳೂರಿನ ಬೊಮ್ಮನಹಳ್ಳಿ ವಲಯದ ಅಪಾರ್ಟ್‌ಮೆಂಟ್ ಒಂದರಲ್ಲಿ ನಡೆಸಿದ ಪಾರ್ಟಿಯ ಫಲಶ್ರುತಿಯಾಗಿ, ನೂರಕ್ಕೂ ಹೆಚ್ಚು ಮಂದಿ ಕೊರೊನಾ ಸೋಂಕಿಗೆ ಒಳಗಾಗಿದ್ದಾರೆ. ಕೋವಿಡ್ ಮಾರ್ಗಸೂಚಿಯನ್ನು ಪಾಲಿಸುತ್ತಿದ್ದೇವೆ ಎಂದು ಎಲ್ಲರೂ ಹೇಳುತ್ತಿದ್ದರೂ ವಾಸ್ತವ ಬೇರೆಯದೇ ಇದೆ. ಸಾರ್ವಜನಿಕವಾಗಿ ಮಾರ್ಗಸೂಚಿ ಪಾಲನೆಯ ಬಗ್ಗೆ ಜನ ನಿರ್ಲಕ್ಷ್ಯ ತೋರಿಸುತ್ತಿರುವುದರಲ್ಲಿ ಸರ್ಕಾರದ ಪಾತ್ರವೂ ಇದೆ. ಉಪ ಚುನಾವಣೆಗಳ ಸಂದರ್ಭದಲ್ಲಿ ಸಾವಿರಾರು ಜನರ ಸಮಾವೇಶಗಳನ್ನು ಆಡಳಿತ ಪಕ್ಷವೇ ನಡೆಸಿದೆ. ಮೀಸಲಾತಿಗಾಗಿ ಒತ್ತಾಯಿಸಿ ವಿವಿಧ ಸಮುದಾಯಗಳು ನಡೆಸುತ್ತಿರುವ ಬೀದಿ ಹೋರಾಟದಲ್ಲಿ ಸಚಿವರು ಹಾಗೂ ಶಾಸಕರು ಪಾಲ್ಗೊಂಡಿದ್ದಾರೆ. ಸಂಸದರೊಬ್ಬರು ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದ್ದರ ಹಿನ್ನೆಲೆಯಲ್ಲಿ, ಮಾರ್ಗಸೂಚಿ ಉಲ್ಲಂಘಿಸುವ ರಾಜಕಾರಣಿಗಳು ಮತ್ತು ಅವರ ಬೆಂಬಲಿಗರ ವಿರುದ್ಧ ಪ್ರಕರಣವನ್ನು ದಾಖಲಿಸಬಾರದೇಕೆ ಎಂದು ಸರ್ಕಾರವನ್ನು ಹೈಕೋರ್ಟ್ ಪ್ರಶ್ನಿಸಿತ್ತು. ಆದರೂ, ಕೊರೊನಾ ಮಾರ್ಗಸೂಚಿಗೆ ತಾವು ಅತೀತರೆನ್ನುವಂತೆ ರಾಜಕಾರಣಿಗಳು ನಡೆದುಕೊಳ್ಳುತ್ತಲೇ ಇದ್ದಾರೆ. ಜನಜಾಗೃತಿ ಮೂಡಿಸಬೇಕಾದ ರಾಜಕೀಯ ನಾಯಕರೇ ವಿವೇಕ ಮರೆತು ವರ್ತಿಸುವುದು ಸರಿಯಲ್ಲ. ಮಹಾರಾಷ್ಟ್ರದಿಂದ ಬರುವ ಪ್ರಯಾಣಿಕರ ಮೇಲೆ ನಿಗಾ ವಹಿಸುವ ಸರ್ಕಾರದ ಕ್ರಮ ಕೊರೊನಾ ನಿಯಂತ್ರಣದಲ್ಲಿ ಒಂದು ಸಣ್ಣ ಹೆಜ್ಜೆಯಷ್ಟೇ ಆಗಿದೆ. ಹೊರಗಿನಿಂದ ಬರುವವರು ಸೋಂಕುಮುಕ್ತರಾಗಿದ್ದರಷ್ಟೇ ಸಾಲದು, ಒಳಗಿನಿಂದಲೂ ಸೋಂಕು ತಡೆಯುವ ಪ್ರಯತ್ನಗಳು ಚುರುಕುಗೊಳ್ಳಬೇಕಾಗಿದೆ. ಜನಜೀವನ ನಿಧಾನವಾಗಿ ಹಳಿಗೆ ಮರಳುತ್ತಿರುವ ಸಂದರ್ಭದಲ್ಲಿ ಯಾವುದೇ ಬಗೆಯ ನಿರ್ಲಕ್ಷ್ಯಕ್ಕೆ ಸರ್ಕಾರ ಅವಕಾಶ ಕಲ್ಪಿಸಬಾರದು. ವಿವೇಚನಾರಹಿತವಾದ ಸಣ್ಣಪುಟ್ಟ ಎಡವಟ್ಟುಗಳೂ ದೊಡ್ಡ ಬಿಕ್ಕಟ್ಟನ್ನೇ ಸೃಷ್ಟಿಸಬಹುದು ಎನ್ನುವುದನ್ನು ಸರ್ಕಾರ ಅರಿಯಬೇಕು; ಕೊರೊನಾ ನಿಯಂತ್ರಣ ಸಾಮೂಹಿಕ ಜವಾಬ್ದಾರಿ ಎನ್ನುವುದನ್ನು ಜನರೂ ಅರ್ಥ ಮಾಡಿಕೊಳ್ಳಬೇಕು.

ದಿನದ ಟ್ವೀಟ್

ನಿಯಂತ್ರಣ ಸಾಧ್ಯ

ಸರ್ಕಾರಗಳನ್ನು ಉರುಳಿಸಿ, ಆ ಮೂಲಕ ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಹಾಗೂ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಸಾಮರ್ಥ್ಯ ಹೊಂದಿರುವ ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸಲು ಈಗಿರುವ ಕಾನೂನುಗಳು ಸಾಲುವುದಿಲ್ಲವಾದ್ದರಿಂದ, ಅವುಗಳನ್ನು ನಿಯಂತ್ರಿಸುವ ಕಾನೂನು ರಚಿಸಲು ಕೇಂದ್ರ ಸರ್ಕಾರ ಕಾರ್ಯಪ್ರವೃತ್ತವಾಗಿದೆ ಎಂದು ಬಿಜೆಪಿ ಮುಖಂಡ ರಾಮ್ ಮಾಧವ್ ಹೇಳಿದ್ದಾರೆ. ಒಪ್ಪಿಕೊಳ್ಳೋಣ. ಅಷ್ಟಾದರೂ ಸರ್ಕಾರ ನಿಜಕ್ಕೂ ಬಯಸಿದರೆ ಈಗಿರುವ ವ್ಯವಸ್ಥೆಯಲ್ಲೇ ನಿಯಂತ್ರಣ ತರಲು ಸಾಧ್ಯವಿದೆ.

ಗೀತಿಕಾ, ಯುವತಿ

25 ವರ್ಷಗಳ ಹಿಂದೆ

ಗುರುವಾರ, 22-2-1996

• ರಂಗಭೂಮಿ ಇತಿಹಾಸ ದಾಖಲೆಗೆ ಕಾರಂತ ಕರೆ

ಬೆಂಗಳೂರು, ಫೆ. 21– ರಂಗಭೂಮಿ ಹಾಗೂ ರಂಗ ಪರಂಪರೆಯ ಉಳಿವಿಗೆ ಅವುಗಳು ನಡೆದು ಬಂದ ದಾರಿಯನ್ನು ದಾಖಲಿಸುವುದು ಇಂದಿನ ಸಾಂಸ್ಕೃತಿಕ ಅಗತ್ಯಗಳಲ್ಲಿ ಒಂದು ಎಂದು ಖ್ಯಾತ ರಂಗತಜ್ಞ ಬಿ.ವಿ.ಕಾರಂತರು ಇಂದು ಇಲ್ಲಿ ಅಭಿಪ್ರಾಯಪಟ್ಟರು.

ಎಡಿಎ ರಂಗಮಂದಿರದಲ್ಲಿ 'ರಂಗ ಸಂಪದ' ಏರ್ಪಡಿಸಿದ್ದ 'ರಂಗವಿಹಂಗಮ ಪುರಸ್ಕಾರ' ಸಮಾರಂಭದಲ್ಲಿ ರಂಗಭೂಮಿಯ ದಿಗ್ಗಜರುಗಳಾದ ಜಿ.ವಿ. ಅಯ್ಯರ್, ಏಣಗಿ ಬಾಳಪ್ಪ ಹಾಗೂ ಮುದೇನೂರು ಸಂಗಣ್ಣ ಅವರನ್ನು ಗೌರವಿಸಿ ಮಾತನಾಡಿದ ಅವರು, ರಂಗಭೂಮಿ ಒಂದು ನಿರಂತರ ಪಯಣ. ಈ ಪ್ರಯಾಣದ ಹಂತಗಳನ್ನು ದಾಖಲಿಸದಿದ್ದರೆ ಅದರ ಬೆಳಕಿನಲ್ಲಿ ಹೊಸತಿನ ಸೃಷ್ಟಿ ಅಸಾಧ್ಯ ಎಂದು ಹೇಳಿದರು.

• ಹವಾಲಾ: ಕೋರ್ಟ್‌ಗೆ ಇಂದು ಸಿಬಿಐ ವರದಿ

ನವದೆಹಲಿ, ಫೆ. 21 (ಯುಎನ್‌ಐ)– ಹವಾಲಾ ಹಗರಣದ ಸಂಬಂಧ ಜೈನ್ ಡೈರಿಯಲ್ಲಿ ಉಲ್ಲೇಖಿತ ರಾಜಕಾರಣಿಗಳು, ಹಿರಿಯ ಅಧಿಕಾರಿಗಳು ಮತ್ತು ಇತರ ಅಧಿಕಾರಿಗಳ ಪಾತ್ರದ ಕುರಿತಾಗಿ ತನಿಖೆ ನಡೆಸಿದ ಸಿಬಿಐ, ನಾಳೆ ತನಿಖೆಯ ಫಲಿತಾಂಶವನ್ನು ಸುಪ್ರೀಂ ಕೋರ್ಟ್‌ಗೆ ತಿಳಿಸಲಿದೆ. ಈ ಮಧ್ಯೆ ನಗರಾಭಿವೃದ್ಧಿ ರಾಜ್ಯ ಸಚಿವ ಆರ್.ಕೆ.ಧವನ್, ಕೇಂದ್ರ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದ್ದಾರೆ.

ಇದರಿಂದ, ರಾಜೀನಾಮೆ ನೀಡಿದ ಕೇಂದ್ರ ಸಚಿವರ ಸಂಖ್ಯೆ ಏಳಕ್ಕೆ ಏರಿದೆ. ಧವನ್ ವಿರುದ್ಧ ಸಿಬಿಐ ನಾಳೆ ಆರೋಪಪಟ್ಟಿ ಸಲ್ಲಿಸುವ ಸಾಧ್ಯತೆ ಇದೆ.

50 ವರ್ಷಗಳ ಹಿಂದೆ

ಸೋಮವಾರ, 22-2-1971

• ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಮುಂದಕ್ಕೆ ಹಾಕುವುದಿಲ್ಲ: ಇಂದಿರಾ

ಬಿಹಾರ್ ಷರೀಫ್, ಫೆ. 21– ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ ನಡೆಯುತ್ತಿದೆ ಎಂಬ ಕಾರಣಕ್ಕಾಗಿ ಅಲ್ಲಿ ಲೋಕಸಭಾ ಚುನಾವಣೆಯನ್ನು ಮುಂದಕ್ಕೆ ಹಾಕುವುದಿಲ್ಲ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಸ್ಪಷ್ಟಪಡಿಸಿದರು.

• ಮುಯ್ಯಿಗೆ ಮುಯ್ಯಿ

ಮದ್ರಾಸ್, ಫೆ. 21– ಮದ್ರಾಸಿನಲ್ಲಿ ಮಾಜಿ ಅರಸರ ರಾಜಧನ ಕುರಿತು ಡಿ.ಎಂ.ಕೆ ಮತ್ತು ಸಂಸ್ಥಾ ಕಾಂಗ್ರೆಸ್ಸಿನ ನಡುವೆ ಭಿತ್ತಿಪತ್ರ ಸಮರ ನಡೆದಿದೆ.

ಸಂಸ್ಥಾ ಕಾಂಗ್ರೆಸ್ ನಾಯಕ ಕಾಮರಾಜ್ ಅವರು ಮಹಾರಾಜ ಕೂತಿರುವ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗುತ್ತಿರುವ ಭಿತ್ತಿಪತ್ರವೊಂದನ್ನು ಡಿ.ಎಂ.ಕೆ ಮೊದಲು ಬಿಡುಗಡೆ ಮಾಡಿತ್ತು.

ಡಿ.ಎಂ.ಕೆ ಸಂಸತ್ ಸದಸ್ಯನೊಬ್ಬ ರಾಜನ ಮುಂದೆ ಕೈಕಟ್ಟಿ ನಿಂತಿರುವುದನ್ನು ಸಂಸ್ಥಾ ಕಾಂಗ್ರೆಸ್ಸಿನ ಭಿತ್ತಿಪತ್ರಗಳಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದ ಕೆಳಗೆ 'ಓ ರಾಜ, ನಾನು ನಿನ್ನ ಆಜ್ಞಾಪಾಲಕ' ಎಂದು ಬರೆಯಲಾಗಿದೆ.

ದೆಹಲಿಗೆ ಹತ್ತಿರವಿದ್ದಾರೆ ಎಂದಮಾತ್ರಕ್ಕೆ, ಅವರ ಮಾತೇ ಅಂತಿಮ ಎನ್ನಲಾಗದು

ಕೃಷಿ ಕಾಯ್ದೆ: ಏಕೆ ಈ ವಿರೋಧ?

ಸೂರ್ಯ- ನಮಸ್ಕಾರ

ಎ.ಸೂರ್ಯ ಪ್ರಕಾಶ್

ಸಂಸತ್ತಿನ ಅನುಮೋದನೆ ಪಡೆದಿರುವ, ರಾಷ್ಟ್ರಪತಿಯ ಅಂಕಿತ ಪಡೆದಿರುವ ಮೂರು ಕೃಷಿ ಕಾಯ್ದೆಗಳು ರೈತರನ್ನು ಸಶಕ್ತರನ್ನಾಗಿಸುವ ಗುರಿ ಹೊಂದಿವೆ, ಇವು ರೈತರಿಗೆ ಮಾರುಕಟ್ಟೆಯನ್ನು ಮುಕ್ತಗೊಳಿಸಲಿವೆ, ಈಗಿರುವ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹಾಗೂ ಎಪಿಎಂಸಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲಿವೆ. ಈ ಕಾಯ್ದೆಗಳಿಗೆ ಎದುರಾಗಿರುವ ವಿರೋಧದ ಹಿಂದೆ ತರ್ಕಕ್ಕಿಂತಲೂ ಹೆಚ್ಚಾಗಿ ರಾಜಕೀಯ ಇದೆ ಎಂಬುದು ಕಾಯ್ದೆಗಳನ್ನು ಸಮಾಧಾನದಿಂದ, ನಿರ್ಲಿಪ್ತವಾಗಿ ಅವಲೋಕಿಸಿದಾಗ ಗೊತ್ತಾಗುತ್ತದೆ.

ಈ ಮೂರು ಕಾಯ್ದೆಗಳಲ್ಲಿ ಮೊದಲನೆಯದಾದ 'ರೈತರ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ನೆರವು) ಕಾಯ್ದೆ – 2020' ಅಡಿಯಲ್ಲಿ ರೈತರಿಗೆ ಎಪಿಎಂಸಿ ಮಾರುಕಟ್ಟೆಗಳ ಹೊರಗಡೆಯೂ ತಮ್ಮ ಉತ್ಪನ್ನ ಮಾರಾಟ ಮಾಡಲು ಸಾಧ್ಯವಾಗುತ್ತದೆ. ಈ ಕಾಯ್ದೆಯ ಸೆಕ್ಷನ್ 3ರ ಪ್ರಕಾರ, ರೈತರು ತಮ್ಮ ಉತ್ಪನ್ನಗಳ ಅಂತರರಾಜ್ಯ ಹಾಗೂ ರಾಜ್ಯದೊಳಗಿನ ವ್ಯಾಪಾರದಲ್ಲಿ ತೊಡಗಬಹುದು. ಕಾಯ್ದೆಯ ಸೆಕ್ಷನ್ 4(3)ರ ಅನ್ವಯ, ರೈತರ ಜೊತೆ ವಹಿವಾಟು ನಡೆಸುವ ವ್ಯಾಪಾರಸ್ಥರು ರೈತನಿಗೆ ಆತನ ಉತ್ಪನ್ನಕ್ಕೆ ಕೊಡಬೇಕಿರುವ ಹಣವನ್ನು ಅದೇ ದಿನ ಅಥವಾ ಗರಿಷ್ಠ ಮೂರು ಕೆಲಸದ ದಿನಗಳಲ್ಲಿ ಪಾವತಿಸಬೇಕು.

ಈ ಕಾನೂನು ರೈತರಿಗೆ ಎಪಿಎಂಸಿ ವ್ಯವಸ್ಥೆಯನ್ನೇ ನೆಚ್ಚಿಕೊಳ್ಳುವ ಅಥವಾ ಸ್ಥಳೀಯ ಎಪಿಎಂಸಿ ಹೊರತಾಗಿಯೂ ಮಾರುಕಟ್ಟೆಯನ್ನು ಅರಸುವ ಆಯ್ಕೆಯನ್ನು ನೀಡುತ್ತದೆ. ರೈತರಿಗೆ ಹಣ ಪಾವತಿ ವಿಚಾರದಲ್ಲಿ ವ್ಯಾಪಾರಸ್ಥರಿಗೆ ಕಟ್ಟುನಿಟ್ಟಿನ ಗಡುವನ್ನು ಕೂಡ ನಿಗದಿ ಮಾಡುತ್ತದೆ. ತಕರಾರುಗಳನ್ನು ಕಾಲಮಿತಿಯಲ್ಲಿ ಇತ್ಯರ್ಥಪಡಿಸುವ ವ್ಯವಸ್ಥೆ ಕೂಡ ಇದರಲ್ಲಿದೆ.

'ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ಬೆಲೆ ಖಾತರಿ ಮತ್ತು ಕೃಷಿ ಜಮೀನು ಸೇವೆಗಳ ಒಪ್ಪಂದ ಕಾಯ್ದೆ – 2020' ಈ ಕಾಯ್ದೆಗಳ ಪೈಕಿ ಎರಡನೆಯದು. ಚಿಲ್ಲರೆ ಅಥವಾ ಸಗಟು ಮಾರಾಟಗಾರರ ಜೊತೆ, ಕೃಷಿ ಉದ್ಯಮ ಸಂಸ್ಥೆಗಳ ಜೊತೆ, ಸಂಸ್ಕರಣಾ ಘಟಕಗಳ ಜೊತೆ, ರಫ್ತುದಾರರ ಜೊತೆ ಅಥವಾ ಚಿಲ್ಲರೆ ವಹಿವಾಟನ್ನು ದೊಡ್ಡ ಮಟ್ಟದಲ್ಲಿ ನಡೆಸುವವರ ಜೊತೆ ಮುಂದೆ ಬರುವ ಕೃಷಿ ಬೆಳೆಯನ್ನು ಪೂರ್ವನಿಗದಿತ ಬೆಲೆಗೆ ಮಾರಾಟ ಮಾಡುವ ಒಪ್ಪಂದ ಮಾಡಿಕೊಳ್ಳಲು ಅವಕಾಶ ಕಲ್ಪಿಸುತ್ತದೆ ಈ ಕಾಯ್ದೆ. ಕನಿಷ್ಠ ಒಂದು ಬೆಳೆ, ಗರಿಷ್ಠ ಐದು ವರ್ಷಗಳವರೆಗೆ ಒಪ್ಪಂದ ಮಾಡಿಕೊಳ್ಳಬಹುದು.

ಕೃಷಿ ಜಮೀನನ್ನು ರೈತನಿಂದ ಬೇರೆ ಮಾಡಲಾಗದು ಎಂಬುದು ಅತ್ಯಂತ ಪ್ರಮುಖ ಅಂಶ. ಕೃಷಿ ಜಮೀನು ಅಥವಾ ರೈತನ ಆವರಣವನ್ನು ವರ್ಗಾವಣೆ ಮಾಡಲು, ಮಾರಲು, ಅಡ ಇರಿಸಲು ಯಾವುದೇ ಕೃಷಿ ಒಪ್ಪಂದ ಮಾಡಿಕೊಳ್ಳುವಂತೆ ಇಲ್ಲ ಎಂದು ಇದು ಹೇಳುತ್ತದೆ. ಇಲ್ಲಿ ಕೂಡ ವ್ಯಾಜ್ಯಗಳ ಇತ್ಯರ್ಥಕ್ಕೆ ವ್ಯವಸ್ಥೆಯೊಂದನ್ನು ರೂಪಿಸಲಾಗಿದೆ.

ಮೂರನೆಯದು, ಅಗತ್ಯ ವಸ್ತುಗಳ ಕಾಯ್ದೆ –1955ಕ್ಕೆ ತಂದಿರುವ ತಿದ್ದುಪಡಿ. ದ್ವಿದಳ ಹಾಗೂ ಏಕದಳ ಧಾನ್ಯಗಳು, ಆಲೂಗಡ್ಡೆ, ಈರುಳ್ಳಿ, ಎಣ್ಣೆಕಾಳುಗಳು ಮತ್ತು ಖಾದ್ಯ ತೈಲಗಳು, ಆಹಾರ ವಸ್ತುಗಳ ಪೂರೈಕೆಯನ್ನು ಅಸಾಮಾನ್ಯ ಪರಿಸ್ಥಿತಿಗಳಲ್ಲಿ ನಿಯಂತ್ರಣಕ್ಕೆ ಒಳಪಡಿಸಬಹುದು. ಯುದ್ಧ, ಕ್ಷಾಮ, ಅಸಾಮಾನ್ಯ ಅನ್ನಿಸುವಂತಹ ಬೆಲೆ ಹೆಚ್ಚಳ, ತೀವ್ರ ಪ್ರಮಾಣದ ಪ್ರಾಕೃತಿಕ ವಿಕೋಪಗಳು ಇಂತಹ ಅಸಾಮಾನ್ಯ ಪರಿಸ್ಥಿತಿಗಳು ಎಂದು ಈ ತಿದ್ದುಪಡಿ ಕಾಯ್ದೆಯಲ್ಲಿ ಹೇಳಲಾಗಿದೆ. ಆಹಾರ ಧಾನ್ಯಗಳ ಸಾಗಣೆ ವಿಚಾರದಲ್ಲಿ ದಶಕಗಳಿಂದ ಇದ್ದ ನಿರ್ಬಂಧವನ್ನು ತೆಗೆದುಹಾಕುವ ಇಂತಹ ಪ್ರಮುಖ ಕ್ರಮಗಳಿಗೆ ಯಾವುದೇ ರೈತ ಯಾವ ಕಾರಣಕ್ಕಾಗಿ ವಿರೋಧ ವ್ಯಕ್ತಪಡಿಸಬಹುದು?

ಹೊಸ ಕಾನೂನುಗಳು ರೈತರನ್ನು ಹಾಗೂ ವರ್ತಕರನ್ನು ಪುರಾತನ ಕಾನೂನುಗಳಿಂದ ಮುಕ್ತಗೊಳಿಸುತ್ತವೆ. ಹೊರ ಜಗತ್ತಿನ ಸಂಪರ್ಕ ಇಲ್ಲದ, ತಾಲ್ಲೂಕು ಮಟ್ಟದ ಮಾರುಕಟ್ಟೆಗಳ ಹಿಡಿತದಿಂದ ರೈತರನ್ನು ಪಾರು ಮಾಡುತ್ತವೆ. ಬೇರೆ ಬೇರೆ ರಾಜ್ಯಗಳಲ್ಲಿ ಸಿಗುತ್ತಿರುವ ಬೆಲೆ ರೈತರಿಗೆ ಸಿಗುವಂತೆ ಮಾಡುತ್ತವೆ. ಮಾರುಕಟ್ಟೆ ಶಕ್ತಿಗಳು ವಹಿವಾಟಿನ ನಿಯಂತ್ರಣ ತೆಗೆದುಕೊಳ್ಳುತ್ತವೆ, ಮಂಡಿಗಳು ಹೆಚ್ಚು ಸ್ಪರ್ಧಾತ್ಮಕ ಆಗುತ್ತವೆ, ಎಂಎಸ್‌ಪಿ ವ್ಯವಸ್ಥೆ ಮುಂದುವರಿಯುತ್ತದೆ. ಎಪಿಎಂಸಿಗಳ ಬಿಗಿಹಿಡಿತದಿಂದ, ಕಮಿಷನ್ ಏಜೆಂಟ್‌ಗಳ ನಿಯಂತ್ರಣದಿಂದ ರೈತರನ್ನು ಬಿಡುಗಡೆ ಮಾಡುತ್ತವೆ ಇವು.

ಕೃಷಿ ಕಾಯ್ದೆಗಳ ವಿಚಾರದಲ್ಲಿ ಯುಪಿಎ ತೋರಿದ ಡೋಂಗಿತನದ ಬಗ್ಗೆ ಒಂದು ಮಾತು ಹೇಳಬೇಕು. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಸೇರಿದಂತೆ ಹಲವು ಸರ್ಕಾರಗಳು ಕೃಷಿ ಕಾಯ್ದೆಗಳಲ್ಲಿ ಸುಧಾರಣೆ ತರಬೇಕು ಎಂದು 20 ವರ್ಷಗಳಿಗೂ ಹೆಚ್ಚು ಕಾಲ ಹೆಣಗಿವೆ. ಅವರು ಇಂದು ನಡೆಸುತ್ತಿರುವ ಪ್ರತಿಭಟನೆ ಟೊಳ್ಳಾಗಿ ಕಾಣುತ್ತಿದೆ. ಇಲ್ಲಿ ಬಹುದೊಡ್ಡ ಯೂಟರ್ನ್ ಹೊಡೆದಿರುವ ರಾಜಕಾರಣಿ ನ್ಯಾಷನಲಿಸ್ಟ್ ಕಾಂಗ್ರೆಸ್‌ನ ನಾಯಕ ಶರದ್ ಪವಾರ್. ಅವರು 2010ರಲ್ಲಿ ಕೇಂದ್ರ ಕೃಷಿ ಸಚಿವ ಆಗಿದ್ದಾಗ, ಎಪಿಎಂಸಿ ಕಾಯ್ದೆಗಳಿಗೆ ತಿದ್ದುಪಡಿ ತರುವ ಪರವಾಗಿದ್ದರು. ರೈತರು, ಗ್ರಾಹಕರ ಹಿತದ ದೃಷ್ಟಿಯಿಂದ ಖಾಸಗಿ ವಲಯವು ಪರ್ಯಾಯ ಸ್ಪರ್ಧಾತ್ಮಕ ಮಾರುಕಟ್ಟೆ ಮಾರ್ಗವನ್ನು ತೋರಿಸಲು ಉತ್ತೇಜಿಸುವಂತೆ ಕಾಯ್ದೆಗಳಿಗೆ ರಾಜ್ಯಗಳು ತಿದ್ದುಪಡಿ ತರಬೇಕು ಎಂದಿದ್ದರು. ಖಾಸಗಿ ವಲಯದ ತೊಡಗಿಕೊಳ್ಳುವಿಕೆ ಅಗತ್ಯವೆಂದು ಅವರು ಹೇಳಿದ್ದರು.

2011ರ ನವೆಂಬರ್‌ನಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಅವರಿಗೆ ಬರೆದ ಪತ್ರದಲ್ಲಿ ಪವಾರ್ ಅವರು, 'ಕೃಷಿ ಕ್ಷೇತ್ರಕ್ಕೆ ಚೆನ್ನಾಗಿ ಕೆಲಸ ಮಾಡುತ್ತಿರುವ ಮಾರುಕಟ್ಟೆಗಳ ಅಗತ್ಯವಿದೆ. ಇಲ್ಲಿ ಖಾಸಗಿ ವಲಯವು ಮುಖ್ಯ ಪಾತ್ರವನ್ನು ವಹಿಸಬೇಕು. ಇದು ಕೊಯ್ಲಿನ ನಂತರದ ವೆಚ್ಚಗಳನ್ನು ಕಡಿಮೆ ಮಾಡುತ್ತದೆ. ಗ್ರಾಹಕರು ಪಾವತಿಸುವ ಹಣದಲ್ಲಿ ರೈತರಿಗೆ ಹೆಚ್ಚಿನ ಪಾಲು ಸಿಗುವಂತೆ ಮಾಡುತ್ತದೆ' ಎಂದಿದ್ದರು. ಹಾಗಾಗಿ, ಎಪಿಎಂಸಿ ಕಾಯ್ದೆಯನ್ನು ಸೂಕ್ತವಾಗಿ ಬದಲಿಸುವಂತೆ ಮುಖ್ಯಮಂತ್ರಿಯನ್ನು ಒತ್ತಾಯಿಸಿದ್ದರು. ಈಗ ಪವಾರ್ ಅವರು ಬೇರೆಯ ರಾಗ ನುಡಿಸುತ್ತಿದ್ದಾರೆ. ಮಂಡಿಗಳಿಗೆ ತೊಂದರೆ ಆಗುತ್ತದೆ, ಕಾರ್ಪೊರೇಟ್ ಸಂಸ್ಥೆಗಳಿಗೆ ಉತ್ಪನ್ನಗಳನ್ನು ಮಾರಾಟ ಮಾಡುವ ರೈತರಿಗೆ ಎಂಎಸ್‌ಪಿ ಖಾತರಿ ಇಲ್ಲ ಎಂದು ಪವಾರ್ ಹೇಳುತ್ತಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ಏಕೆಂದರೆ, ಎಂಎಸ್‌ಪಿ ಅಡಿಯಲ್ಲಿ ಸರ್ಕಾರಕ್ಕೆ ಉತ್ಪನ್ನಗಳನ್ನು ಮಾರುವ ಅವಕಾಶವನ್ನು ರೈತರು ಕಳೆದುಕೊಳ್ಳುವುದೇ ಇಲ್ಲ.

ಈ ಕಾಯ್ದೆಗಳನ್ನು ರೈತರ ಮೇಲೆ ಇದ್ದಕ್ಕಿದ್ದಂತೆ ಹೇರಲಾಗಿದೆ ಎಂಬ ವಾದದಲ್ಲಿಯೂ ಹುರುಳಿಲ್ಲ. ಕೃಷಿ ಮಾರುಕಟ್ಟೆಯನ್ನು ಮುಕ್ತವಾಗಿಸಬೇಕು ಎಂಬ ಮಾತು 20 ವರ್ಷಗಳಿಂದಲೂ ಇದೆ. ಹಲವು ಸರ್ಕಾರಗಳು ಕೆಲವು ಯತ್ನಗಳನ್ನು ನಡೆಸಿವೆ. 2017ರಲ್ಲಿ ಮಾದರಿ ಮಸೂದೆಯೊಂದನ್ನು ಕೇಂದ್ರವು ರಾಜ್ಯಗಳಿಗೆ ರವಾನಿಸಿತ್ತು. ಹನ್ನೊಂದು ರಾಜ್ಯಗಳು ಅದನ್ನು ಪೂರ್ತಿಯಾಗಿ ಒಪ್ಪಿಕೊಂಡಿವೆ. ಆರು ರಾಜ್ಯಗಳು ಆಂಶಿಕವಾಗಿ ಒಪ್ಪಿವೆ. ಕೃಷಿ ಗುತ್ತಿಗೆಗೆ ಸಂಬಂಧಿಸಿದ ಮಾದರಿ ಕಾಯ್ದೆಯನ್ನು ಕೇಂದ್ರವು 2018ರಲ್ಲಿ ರಾಜ್ಯಗಳಿಗೆ ರವಾನಿಸಿತ್ತು. ಎರಡು ರಾಜ್ಯಗಳು ಇದನ್ನು ಒಪ್ಪಿವೆ. ಪಂಜಾಬ್‌ನಲ್ಲಿ ಗುತ್ತಿಗೆ ಕೃಷಿಗೆ ಸಂಬಂಧಿಸಿದಂತೆ 2013ರಿಂದಲೇ ಕಾಯ್ದೆಯೊಂದು ಇದೆ.

ಭಾರತದಲ್ಲಿ 28 ರಾಜ್ಯಗಳು, ಎಂಟು ಕೇಂದ್ರಾಡಳಿತ ಪ್ರದೇಶಗಳು ಇವೆ ಎಂಬುದನ್ನು ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗದ ರೈತರು ಅರ್ಥ ಮಾಡಿಕೊಳ್ಳಬೇಕು. ಹೊಸ ಕಾಯ್ದೆಗಳ ಬಗ್ಗೆ ಹಲವು ರಾಜ್ಯಗಳ ರೈತರು ಸಂತಸ ವ್ಯಕ್ತಪಡಿಸಿದ್ದಾರೆ. ದೆಹಲಿಗೆ ಹತ್ತಿರವಿದ್ದಾರೆ ಎಂಬ ಮಾತ್ರಕ್ಕೆ, ಅವರ ಮಾತೇ ಅಂತಿಮ ಎನ್ನಲಾಗದು.

ಚುರುಮುರಿ

ಅಂತರಗೆಲಾಕ್ಸಿ ಷಡ್ಯಂತ್ರ

• ಸುಮಂಗಲಾ

ಹಿರಿಯ ಪೊಲೀಸ್ ಅಧಿಕಾರಿಗಳ ಆಫೀಸಿನಲ್ಲಿ ಎಲೆಕ್ಟ್ರಿಕ್ ಶಾರ್ಟ್ ಸರ್ಕಿಟ್ ಆಗಿ ಕಂಪ್ಯೂಟರ್, ಪ್ರಿಂಟರ್, ಎ.ಸಿಗಳು ಹೀಗೆ ಲಕ್ಷಾಂತರ ಬೆಲೆಯ ಸಲಕರಣೆಗಳು ಸುಟ್ಟು, ಕೆಟ್ಟುಹೋದವು. 'ಸರಿ ಮಾಡಿಸ್ರೀ' ಎಂದು ಕಿರಿಯ ಅಧಿಕಾರಿಗೆ ಸಾಹೇಬರು ಆಜ್ಞೆ ಮಾಡಿದರು.

ಆತ ಆನ್‌ಲೈನಿನಲ್ಲಿ ಹುಡುಕಿ, ಎಲೆಕ್ಟ್ರಿಷಿಯನ್‌ಗಳ ಫೋನ್ ನಂಬರ್ ಬರೆದುಕೊಂಡರು. ಮೊದಲು ಒಬ್ಬರಿಗೆ ಫೋನ್ ಮಾಡಿದರು. ವಿವರ ಕೇಳಿದ ಎಲೆಕ್ಟ್ರಿಷಿಯನ್ 'ಆಯ್ತು ಸಾ, ಪೆಟ್ರೋಲು ಸೆಂಚುರಿ ಬಾರಿಸ್ತಾ ಐತೆ, ಅದ್ಕೇ ಟೂಲ್‌ಕಿಟ್ ತಗಂಡು ನಡ್ಕಂಡೇ ಬರ್ತೀನಿ' ಎಂದ. ಟೂಲ್‌ಕಿಟ್ ಹೆಸರು ಕೇಳಿ ದಿಗಿಲುಗೊಂಡ ಕಿರಿಯ ಅಧಿಕಾರಿ ಫೋನಿಟ್ಟು ಬೆವರೊರೆಸಿಕೊಂಡರು.

ನಾಲ್ಕಾರು ಎಲೆಕ್ಟ್ರಿಷಿಯನ್‌ಗಳಿಗೆ ಫೋನ್ ಮಾಡಿದರು. ಎಲ್ಲರೂ 'ಟೂಲ್‌ಕಿಟ್ ತಗಂಡು ಬರ್ತೀನಿ' ಎನ್ನುವವರೇ. ಎಂದೂ ಇಲ್ಲದೆ ಹೀಗೆ ಶಾರ್ಟ್ ಸರ್ಕಿಟ್ ಆಗಿದ್ದು, ಸಲಕರಣೆಗಳೆಲ್ಲ ಹಾಳಾಗಿದ್ದು ಮತ್ತು ಎಲೆಕ್ಟ್ರಿಷಿಯನ್‌ಗಳು ಟೂಲ್‌ಕಿಟ್ ಹಿಡಿದು ಬರುವುದು... ಓಹೋ... ಇದೊಂದು ಅಂತರರಾಷ್ಟ್ರೀಯ ಷಡ್ಯಂತ್ರ ಇರಬಹುದೆಂದು ಕಿರಿಯ ಅಧಿಕಾರಿ ಸಾಹೇಬರ ಬಳಿ ಅನುಮಾನ ತೋಡಿಕೊಂಡರು. ಸಾಹೇಬರೂ ಹೌಹಾರಿಬಿಟ್ಟರು.

ಇಬ್ಬರೂ ಸೇರಿ ವಿಚಾರಿಸಲೆಂದು ಮೊಬೈಲಿನ ಸ್ಪೀಕರ್ ಆನ್ ಮಾಡಿ, ಮೊದಲಿನ ಎಲೆಕ್ಟ್ರಿಷಿಯನ್‌ಗೆ ಕರೆ ಮಾಡಿದರು. 'ಏನೇನಿರುತ್ತಯ್ಯಾ ನಿನ್ನ ಟೂಲ್‌ಕಿಟ್ಟನಲ್ಲಿ?' ಕಿರಿಯ ಅಧಿಕಾರಿ ಗತ್ತಿನಿಂದ ಕೇಳಿದರು.

'ಸ್ಕ್ರೂ ಡ್ರೈವರ್ರು, ಕಟಿಂಗ್ ಪ್ಲೈಯರ್ರು ಹಿಂಗೇ ಎಲ್ಲಾ ಟೂಲ್‌ಗಳಿರ್ತವೆ ಸಾ. ವೈರಿಂಗು ಚೆಕ್ ಮಾಡ್ಬೇಕು... ವೈರಿಂಗು ಹೆಂಗಿರುತ್ತೆ ಅಂದ್ರೆ... ಅದೇ ಸಾ, ನಮ್ಮ ಮಿದುಳಿನಾಗೆ ನರಮಂಡಲ ಇದ್ದಂಗೆ ಇರ್ತದೆ. ನರಗಳು ಒಂದಕ್ಕೊಂದು ಸಿಕ್ಕಾಕಿಕೊಂಡು ಗಂಟಾದಂಗೆ ಇರ್ತವೆ. ಅವನ್ನ ಚೆಕ್ ಮಾಡಿ, ಸರಿಮಾಡಬೇಕು' ಎಲೆಕ್ಟ್ರಿಷಿಯನ್ ಇವರಿಗೆ ಸರಳವಾಗಿ ವಿವರಿಸಲು ಪ್ರಯತ್ನಿಸಿದ.

ಮಿದುಳಿಗೇ ಕೈಹಾಕುವ ಈ ಟೂಲ್‌ಕಿಟ್ ಅಂತರರಾಷ್ಟ್ರೀಯ ಮಾತ್ರವಲ್ಲ, ಅಂತರಗೆಲಾಕ್ಸಿ ಷಡ್ಯಂತ್ರವೇ ಸರಿ ಎಂದು ಅಧಿಕಾರಿಗಳು ಗಾಬರಿಗೊಂಡು, ಎದ್ದೂಬಿದ್ದೂ ಮೇಲಿನವರಿಗೆ ವರದಿ ಮಾಡಿದರು!

ಸಂಗತ

ತಾಯಿನುಡಿ ಮತ್ತು ಸಾಂಸ್ಕೃತಿಕ ಅಸ್ಮಿತೆ

ಮಾತೃಭಾಷೆಯನ್ನು ಅಲಕ್ಷಿಸುವ ಯಾವುದೇ ಬಗೆಯ ಶಿಕ್ಷಣ ಮಾದರಿಗಳು ಮಕ್ಕಳ ಕಲಿಕೆಗೆ ಪ್ರತಿಕೂಲವಾಗುತ್ತವೆ

• ಯೋಗಾನಂದ

ಮಾತೃಭಾಷೆ ಅಥವಾ ತಾಯಿನುಡಿ ನಾವು ಸ್ವಾಭಾವಿಕವಾಗಿ ಅರ್ಜಿಸುವ ಮೊದಲ ಭಾಷೆ. ಮಗು ಜನಿಸಿದ ನಂತರ ಅದು ಆಲಿಸಲಾರಂಭಿಸುವ ಭಾಷೆ. ತನ್ನ ಸುತ್ತಮುತ್ತಲಿನ ವಸ್ತು ವೈವಿಧ್ಯಗಳನ್ನು ತಾಯಿ ಉಚ್ಚರಿಸುವ ಶಬ್ದಗಳಿಂದ, ಆಡುವ ಮಾತಿನಿಂದ ಮಗು ಪರಿಚಯಿಸಿಕೊಳ್ಳುತ್ತದೆ. ಅದಕ್ಕೆ ಅನ್ಯಭಾಷೆಗಳನ್ನು ಕಲಿಯಲು ಮಾತೃಭಾಷೆಯೇ ವೇದಿಕೆ.

ಮಗುವಿಗೆ ತಾಯಿನುಡಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಕಟ್ಟಿಕೊಡುತ್ತದೆ. ಒಂದು ಸಂಸ್ಕೃತಿಯ ಸಮರ್ಥ ಅವಲೋಕನ, ಅಧ್ಯಯನಕ್ಕೆ ಭಾಷಾಜ್ಞಾನವೇ ಸಾಧನ. ಮಾತೃಭಾಷೆ ನಮ್ಮ ಸಂಸ್ಕೃತಿ ಮತ್ತು ಅದರ ಬೇರುಗಳೊಂದಿಗೆ ನಮಗೆ ಸಂಪರ್ಕ ಕಲ್ಪಿಸುತ್ತದೆ. ಬಾಲ್ಯದಿಂದಲೇ ಮಾತೃಭಾಷೆಯಲ್ಲಿ ಹಿಡಿತವಿದ್ದರೆ ಮುಂದೆ ನಾಲ್ಕಾರು ಭಾಷೆಗಳಲ್ಲಿ ಪರಿಣತಿಯ ಜೊತೆಗೆ ಪ್ರಯೋಗ ಕೌಶಲವೂ ಮಕ್ಕಳಿಗೆ ಸುಲಭವಾಗಿ ಪ್ರಾಪ್ತವಾಗುತ್ತದೆ.

ತಾಯಿನುಡಿಯ ವ್ಯಾಕರಣ ತಿಳಿದರೆ ವಿವಿಧ ಭಾಷೆಗಳ ಶಬ್ದಗಳ ಅರ್ಥ ಕಠಿಣವೆನ್ನಿಸದು. ಮನೆಯೆಂಬ ಮೊದಲ ಪಾಠಶಾಲೆಯಲ್ಲಿ ಮಗು ಕಲಿಕೆ ಆರಂಭಿಸುತ್ತದೆ ಸರಿಯೆ. ಆದರೆ ಅದು ಶಾಲೆಗೆ ಬಂದಾಗ ಪರಕೀಯ ಭಾಷೆಯಲ್ಲಿ ಕಲಿಯತೊಡಗಿದಾಗ ಕಲಿಕೆಯ ವೇಗ ತಗ್ಗುತ್ತದೆ. ಅದೇ ಶಾಲೆಯಲ್ಲೂ ಮಾತೃಭಾಷೆಯಲ್ಲೇ ಕಲಿಯಲಾರಂಭಿಸಿದರೆ ಕಲಿಕೆ ತ್ವರಿತವಷ್ಟೇ ಅಲ್ಲ, ಅಧಿಕ ಧಾರಣಾಶಕ್ತಿ ಕೂಡ ದೊರೆಯುತ್ತದೆ.

ಹೊಸ ವಿಚಾರಗಳನ್ನು ಅನುಸಂಧಾನಿಸುವಾಗ ಪರಾಮರ್ಶನಕ್ಕೆ ಮಿದುಳಿಗೊಂದು ಅಡಿಪಾಯ ಅಗತ್ಯ. ಆ ಮೊದಲ ಹಾಗೂ ಅತಿ ಬಲಿಷ್ಠ ಅಡಿಪಾಯವೇ ಮಾತೃಭಾಷೆ. ಅಂದಹಾಗೆ ಅತ್ತ ಅಧ್ಯಾಪಕರಿಗೂ ಮಗುವಿಗೆ ಅದರ ಮಾತೃಭಾಷೆಯಲ್ಲೇ ಬೋಧಿಸುವುದು ಸುಲಭ.

ಭಾಷಿಕ ಮತ್ತು ಸಾಂಸ್ಕೃತಿಕ ವೈವಿಧ್ಯದ ಜೊತೆಗೆ ಬಹುಭಾಷಾ ಸಿದ್ಧಾಂತದ ಜಾಗೃತಿಗಾಗಿ 1999ರಲ್ಲಿ ಯುನೆಸ್ಕೊ ಪ್ರತಿವರ್ಷವೂ ಜಾಗತಿಕ ಮಟ್ಟದಲ್ಲಿ ಫೆಬ್ರುವರಿ 21ರಂದು 'ಅಂತರರಾಷ್ಟ್ರೀಯ ಮಾತೃಭಾಷಾ ದಿನ' ಆಚರಿಸುವ ಅಭಿಯಾನಕ್ಕೆ ನಿರ್ಣಯಿಸಿತು. 2002ರಲ್ಲಿ ವಿಶ್ವಸಂಸ್ಥೆ ಅದನ್ನು ಅನುಮೋದಿಸಿತು.

ಕೆಲ ವರ್ಷಗಳ ಹಿಂದಿನ ಸಂಗತಿ. ಕನ್ನಡದ ಪ್ರಸಿದ್ಧ ಸಾಹಿತಿಯೊಬ್ಬರು ಒಂದು ಸಮಾರಂಭದಲ್ಲಿ ಭಾಗವಹಿಸಿದ್ದರು. ಅವರ ಮಾತಿನ ಸರದಿ ಬಂದಾಗ ಸಭಿಕರನ್ನು 'ಕನ್ನಡದಲ್ಲಿ ಮಾತಾಡಲೋ ಅಥವಾ ಇಂಗ್ಲಿಷಿನಲ್ಲೋ' ಎಂದು ಕೇಳಿದರು. ಅದಕ್ಕೆ ಒಂದಷ್ಟು ಜನ ಮಾತ್ರವೆ 'ಕನ್ನಡ ಸಾರ್' ಎಂದರು. ಸಭೆಯ ಇಂಗಿತ ಸಾಹಿತಿಗೆ ಅರ್ಥವಾಯಿತು. 'ನೋಡಿ, ಇಂಗ್ಲಿಷ್ ನನ್ನ ಭಾಷೆಯೂ ಅಲ್ಲ, ನಿಮ್ಮ ಭಾಷೆಯೂ ಅಲ್ಲ. ಆದ್ದರಿಂದ ಕನ್ನಡದಲ್ಲೇ ನನ್ನ ಭಾಷಣ' ಅಂತ ಅವರು ಹೇಳಿದಾಗ ಪ್ರಚಂಡ ಕರತಾಡನವಾಯಿತು.

ಮಾತೃಭಾಷೆಯಿಂದ ಮಾತ್ರವೇ ಆಂಗಿಕ ಭಾಷೆಗೆ ಲಯಬದ್ಧತೆ ಸಾಧ್ಯವಾಗುತ್ತದೆ. ನಮ್ಮ ಬದುಕಿನ ಗ್ರಹಿಕೆಗಳಿಗೆ ನಿರ್ದಿಷ್ಟ ಸ್ವರೂಪ ನೀಡುವ ಮಾತೃಭಾಷೆ ತಿಳಿದೂ ತಿಳಿಯದಂತೆ ನಟಿಸುವುದು ಆತ್ಮವಂಚನೆ.

ಕನ್ನಡದ ಸಂದರ್ಭಕ್ಕೆ ಬರೋಣ. ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸುವುದೆಂದರೆ ಬಹುತೇಕ ಪೋಷಕರಿಗೆ ಎಣೆಯಿಲ್ಲದ ಸಂತಸ. ಇನ್ನು ಮಕ್ಕಳು ವಿದ್ಯಾವಂತರಾಗಲು ಯಾವ ಅಡೆತಡೆಯೂ ಇಲ್ಲವೆಂಬ ಹುಸಿ ನಿರಾಳತೆ. ಆದರೆ ವಾಸ್ತವ ಭಿನ್ನವೇ ಇದೆ. ಶಾಲಾ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಓದದೆಯೂ ವಿಜ್ಞಾನಿಗಳಾಗಬಹುದು, ವೈದ್ಯರಾಗಬಹುದು, ಪರಿಸರ ತಜ್ಞರಾಗಬಹುದು. ಹಾಗಾಗಲು ಅಗತ್ಯ ಆತ್ಮವಿಶ್ವಾಸ ಕಟ್ಟಿಕೊಡುವುದು ಕರಗತವಾಗಿಸಿಕೊಂಡ ಕನ್ನಡವೇ.

'ಅಂವ ಇಂಗ್ಲಿಷ್‌ನಾಗೆ ಕಲಿಯಾಕ್ಕೋಗಿ ನಮ್ಮ ಜೋಡಿ ಮಾತಾಡೋದೆ ಬಿಟ್ಟ' ಎನ್ನುವ ಕೆಲ ನೆಂಟರಿಷ್ಟರ ದೂರಿಗೆ ಆಸ್ಪದವಾಗುವುದು ಸಾಮಾನ್ಯ ಸಂಗತಿಯಲ್ಲ. ತಾಯಿನುಡಿಗೆ ಹೊರತಾದ ಭಾಷೆ ನಮ್ಮ ನಮ್ಮವರೊಡನೆಯ ಆಪ್ತತೆ ಕಸಿದುಕೊಳ್ಳುವುದು. ಗಾಂಧೀಜಿ 'ಇಂಗ್ಲಿಷ್ ಅಥವಾ ಯಾವುದೇ ವಿದೇಶಿ ಭಾಷೆ ಶಿಕ್ಷಣ ಮಾಧ್ಯಮವಾದರೆ ನಮ್ಮ ಮಕ್ಕಳ ಮಿದುಳು, ನರಗಳು ಬಳಲುತ್ತವೆ. ಅವರು ಬಾಯಿಪಾಠ, ಅಣಕಿಗೆ ಶರಣಾಗುತ್ತಾರೆ. ಸ್ವದೇಶದಲ್ಲೇ ಪರದೇಶಿಗಳಾದಾರು' ಎಂದು ಒದಗುವ ವಿಪರ್ಯಾಸವನ್ನು ಬಿಡಿಸಿಟ್ಟಿದ್ದಾರೆ.

ದುರ್ದೈವ ಗೊತ್ತೇ? ನಗರಗಳಲ್ಲಿ ಬಹುತೇಕ ಪೋಷಕರು ತಮ್ಮ ಮಕ್ಕಳು ಜಾಗತಿಕ ಮಟ್ಟದ ನಾಗರಿಕರಾಗಲು ಬಯಸುತ್ತಾರೆ. ಹಾಗಾಗಿ ಇಂಗ್ಲಿಷ್, ಜರ್ಮನ್, ಫ್ರೆಂಚ್ ಮುಂತಾದ ಭಾಷೆಗಳು ಅರಳು ಹುರಿದಂತೆ. ಇನ್ನು ಮಾತೃಭಾಷೆಯಲ್ಲಿ ಓದು ಬರಹವಿರಲಿ, ಮಾತನಾಡಲೂ ಬಾರದಂತಹ ಪರಿಸ್ಥಿತಿ.

ಗುಣಮಟ್ಟದ ಇಂಗ್ಲಿಷ್‌ನಲ್ಲಿಲ್ಲ ಎಂಬ ಕಾರಣಕ್ಕೆ ಅದೆಷ್ಟೋ ಸಂಶೋಧನಾ ಪ್ರಬಂಧಗಳು ತಿರಸ್ಕೃತವಾಗುವುದಿದೆ. ಆಯಾ ಸಂಶೋಧಕರ ಪೈಕಿ ಕೆಲವರಾದರೂ ತಮ್ಮ ಮಾತೃಭಾಷೆಯಲ್ಲಿ ಯೋಚಿಸಿದ ನಂತರವೇ ಇಂಗ್ಲಿಷಿನಲ್ಲಿ ಪ್ರಬಂಧ ರಚಿಸಿದ್ದರೆ ಪ್ರಶಸ್ತಿ ಲಭಿಸುತ್ತಿತ್ತು ಎಂದು ಪರಿತಪಿಸಿದ್ದೂ ಉಂಟು.

ಶಿಕ್ಷಣದ ಗುಣಮಟ್ಟ ಸುಧಾರಿಸುವ ದಿಸೆಯಲ್ಲಿ ಭಾಷಾ ನೀತಿಗಳು ಮಾತೃಭಾಷೆಯಲ್ಲಿನ ಪರಿಣತಿಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ತಾಯಿನುಡಿಯನ್ನು ಅಲಕ್ಷಿಸುವ ಶಿಕ್ಷಣ ಮಾದರಿಗಳು ಮಕ್ಕಳಿಗೆ ಪ್ರತಿಕೂಲವಾಗುತ್ತವೆ. ಮಕ್ಕಳ ಪಾಲಿಗೆ ನಿಜಕ್ಕೂ ನೀಡಬಹುದಾದ ಅಕ್ಷರಶಃ ಮೌಲಿಕ ಉಡುಗೊರೆಯೆಂದರೆ ಮಾತೃಭಾಷೆಯ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ.

ವಾಚಕರ ವಾಣಿ

ಕೇಂದ್ರ ಸರ್ಕಾರವೋ ಒಕ್ಕೂಟ ಸರ್ಕಾರವೋ?

ಮಾಧ್ಯಮಗಳಲ್ಲಿ, ಅಕಾಡೆಮಿಕ್ ಚರ್ಚೆಗಳಲ್ಲಿ, ಅಧ್ಯಯನ ಪ್ರಬಂಧಗಳಲ್ಲಿ ಹಾಗೂ ಸಾಮಾನ್ಯ ಮಾತುಕತೆಗಳಲ್ಲಿ ಭಾರತ ಸರ್ಕಾರವನ್ನು ಕೇಂದ್ರ ಸರ್ಕಾರ ಎಂದು ಕರೆಯುವುದು ರೂಢಿಯಲ್ಲಿದೆ. ಆದರೆ ಇದು ಸಂವಿಧಾನಾತ್ಮಕ ನುಡಿಯಲ್ಲ. ನಮ್ಮ ಸಂವಿಧಾನದಲ್ಲಿ ಭಾರತ ಸರ್ಕಾರವನ್ನು ಒಕ್ಕೂಟ (ಯೂನಿಯನ್) ಸರ್ಕಾರ ಎಂದು ಕರೆಯಲಾಗಿದೆ. ಉದಾಹರಣೆಗೆ: ಸಂವಿಧಾನದ ಪರಿಚ್ಛೇದ 1ರಲ್ಲಿ ಭಾರತವನ್ನು 'ಯೂನಿಯನ್ ಆಫ್ ಸ್ಟೇಟ್ಸ್' ಎಂದರೆ, 7ನೆಯ ಶೆಡ್ಯೂಲಿನಲ್ಲಿನ ಪರಿಚ್ಛೇದ 245ರಲ್ಲಿ 'ಒಕ್ಕೂಟ ಪಟ್ಟಿ' ಎಂದು ಕರೆಯಲಾಗಿದೆ. ನಿಜ, ಸಂವಿಧಾನದಲ್ಲಿ ಸಂಯುಕ್ತ (ಫೆಡರಲ್) ಎಂಬ ನುಡಿ ಬಳಸಿಲ್ಲ. ವಿಸ್ತೃತ ನೆಲೆಯಲ್ಲಿ ಯೂನಿಯನ್ ಎಂಬುದು ಫೆಡರಲ್ ಎಂಬುದನ್ನು ಸೂಚಿಸುತ್ತದೆ. ನಮ್ಮ ಸಂವಿಧಾನಾತ್ಮಕ ಒಕ್ಕೂಟ ತತ್ವವು ಇಂದು ಅಳ್ಳಕಗೊಂಡಿರುವಾಗ ಮತ್ತು ಆಕ್ರಮಣಕ್ಕೆ ಒಳಗಾಗಿರುವ ಸಂದರ್ಭದಲ್ಲಿ ಇದಕ್ಕೆ ಒಂದು ಗೌರವ ನೀಡುವ 'ಒಕ್ಕೂಟ ಸರ್ಕಾರ' ಎಂಬ ನುಡಿಯನ್ನು ಬಳಸುವುದು ಅಗತ್ಯ.

ಒಕ್ಕೂಟ ವ್ಯವಸ್ಥೆಯಲ್ಲಿನ ಎರಡೂ ಪಕ್ಷಗಳಿಗೆ (ರಾಜ್ಯ ಸರ್ಕಾರಗಳು ಮತ್ತು ಭಾರತ ಸರ್ಕಾರ) ಸಮಾನ ಹಕ್ಕು- ಅಧಿಕಾರಗಳನ್ನು ಸಂವಿಧಾನ ನೀಡಿದೆ. ಇಂದು ಒಕ್ಕೂಟ ರಾಜಕಾರಣವು ಬಿಕ್ಕಟ್ಟಿಗೆ ಸಿಲುಕಿದೆ. ಅಖಂಡತೆ ತತ್ವಕ್ಕೆ ಬದ್ಧವಾದ ಆಳುವ ಪಕ್ಷವು ದೇಶವನ್ನು ಏಕೀಕೃತ (ಯೂನಿಟರಿ) ವ್ಯವಸ್ಥೆಯನ್ನಾಗಿ ಮಾಡುವ ಕ್ರಮಗಳನ್ನು ತೆರೆದ ಹಾಗೂ ಪ್ರಚ್ಛನ್ನ ರೀತಿಯಲ್ಲಿ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಒಕ್ಕೂಟ ತತ್ವವನ್ನು ಸದಾ ನೆನಪಿಸುವ ಒಕ್ಕೂಟ ಸರ್ಕಾರ, ಒಕ್ಕೂಟ ಬಜೆಟ್, ಒಕ್ಕೂಟ ಸಚಿವ ಸಂಪುಟ ಇತ್ಯಾದಿ ಸಂವಿಧಾನಾತ್ಮಕ ನುಡಿಗಳನ್ನು ಬಳಸುವುದು ಅಗತ್ಯ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ತೈಲದ ಬೆಲೆ ಮತ್ತು ತೋಳದ ಕಥೆ!

ಮೇಲಿನಿಂದ ಕೆಳಗೆ ನೀರು ಹರಿಯುವಾಗ, ಮೇಲೆ ನೀರು ಕುಡಿಯುತ್ತಿದ್ದ ತೋಳವು ಕೆಳಗೆ ನೀರು ಕುಡಿಯುತ್ತಿದ್ದ ಕುರಿಯೊಂದಿಗೆ 'ನೀನೇ ನೀರು ಎಂಜಲು ಮಾಡಿದ್ದು' ಎನ್ನುತ್ತಾ ಕಾಲು ಕೆರೆದು ಜಗಳ ಮಾಡಿತು. 'ನಾನು ಕೆಳಗೆ ನೀರು ಕುಡಿಯುತ್ತಿದ್ದೇನೆ, ನಿನಗೆ ಹೇಗೆ ಎಂಜಲಾದೀತು?' ಎಂದಾಗ 'ಅದೆಲ್ಲಾ ನನಗೆ ಗೊತ್ತಿಲ್ಲ, ನೀನಲ್ಲವಾದರೆ ನಿನ್ನ ಅಪ್ಪ, ಅಜ್ಜ ಇರಬಹುದು' ಎಂದು ತೋಳ ತನ್ನ ವಾದವನ್ನು ಸಮರ್ಥಿಸಲು ನೋಡಿತು. ನಿರಂತರವಾಗಿ ಏರುತ್ತಿರುವ ತೈಲ ಬೆಲೆ ಏರಿಕೆಯ ಕಾರಣದ ಹೊಣೆಯನ್ನು ಸರ್ಕಾರ ಇನ್ನೊಬ್ಬರಿಗೆ ಹೊರಿಸುವಾಗ, ಈ ಕಥೆ ಏನಾದರೂ ನೆನಪಿಗೆ ಬಂತೇ?

ಭರತ್ ಬಿ.ಎನ್., ಮೈಸೂರು

ನಡಿಗೆ

ವಿಪರೀತ ಖರ್ಚು
ಎಷ್ಟು ಅಂತ ಕುಡಿಸೋದು
ಪೆಟ್ರೋಲು ಈ ಗಾಡಿಗೆ,
ಕೊಡಬೇಕು ಸ್ವಲ್ಪ ಕೆಲಸ ಬರೀ
ತಿಂದು ಕೂರುವ ನಮ್ಮ ಬಾಡಿಗೆ,
ಹೆಚ್ಚಾಗಲಿ ಇನ್ಮುಂದೆ ಕಾಲ್ನಡಿಗೆ!

ಮಹಾಂತೇಶ ಮಾಗನೂರ
ಬೆಂಗಳೂರು

ನಂದಿನಿ ಉತ್ಪನ್ನ: ಮಾದರಿ ಸ್ಪಂದನೆ

'ನಂದಿನಿ' ಉತ್ಪನ್ನಗಳ ಬಗ್ಗೆ ಪತ್ರಿಕೆಗಳಲ್ಲಿ ಬರುವ ಜಾಹೀರಾತಿಗೆ ಪೂರಕವಾಗಿ ಹೊರಗೆ ಅಂಗಡಿಗಳಲ್ಲಿ ಆ ಉತ್ಪನ್ನಗಳು ಸಿಗುತ್ತಿಲ್ಲ ಎಂಬ ನನ್ನ ಅನುಭವವನ್ನು ಹಂಚಿಕೊಂಡಿದ್ದೆ (ವಾ.ವಾ., ಫೆ. 17). ನನ್ನ ಆ ಪತ್ರಕ್ಕೆ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿಯವರು ಸ್ಪಂದಿಸುವ ನಿರೀಕ್ಷೆಯೇ ಇರಲಿಲ್ಲ. ಆದರೆ ಪತ್ರ ಪ್ರಕಟವಾದ ದಿನವೇ ನಂದಿನಿ ಉತ್ಪನ್ನಗಳ ಕ್ಷೇತ್ರ ನಿರ್ವಾಹಕರು, ಗ್ರಾಹಕ ಸೇವಾ ಕೇಂದ್ರದ ಪ್ರತಿನಿಧಿ, ನಂತರ ಮಾರುಕಟ್ಟೆ ವ್ಯವಸ್ಥಾಪಕರು, ವ್ಯವಸ್ಥಾಪಕ ನಿರ್ದೇಶಕರು ಹೀಗೆ ಸಾಲು ಸಾಲಾಗಿ ಉನ್ನತ ಅಧಿಕಾರಿಗಳೇ ಕರೆ ಮಾಡಿ, ಅನನುಕೂಲಕ್ಕೆ ವಿಷಾದ ವ್ಯಕ್ತಪಡಿಸಿ, ಕ್ಷಮೆಯನ್ನೂ ಕೋರಿದರು. ಅತ್ಯಂತ ಸೌಜನ್ಯಯುತವಾಗಿ, ಬಹಳ ಕಳಕಳಿಯಿಂದ ಸ್ಪಂದಿಸಿದರು. ಮುಂದಿನ ದಿನಗಳಲ್ಲಿ ಯಾವ ಗ್ರಾಹಕರಿಗೂ ಇಂತಹ ಅನನುಕೂಲ ಮರುಕಳಿಸದೆಂಬ ಭರವಸೆಯನ್ನೂ ನೀಡಿದರು.

ಪ್ರಸ್ತುತ ಕಾಲಘಟ್ಟದಲ್ಲಿ, ಇಂತಹ ವ್ಯವಸ್ಥೆಯ ಮಧ್ಯೆಯೂ ಇಷ್ಟೊಂದು ಜವಾಬ್ದಾರಿ, ವಿವೇಕಯುತ ನಡವಳಿಕೆಯನ್ನು ಕಂಡು ಅಚ್ಚರಿಯಾಯಿತು. ಇಂತಹ ಮನಃಸ್ಥಿತಿಯನ್ನು ಎಲ್ಲ ಅಧಿಕಾರಿ-ಸಿಬ್ಬಂದಿ ವರ್ಗದವರೂ ರೂಢಿಸಿಕೊಂಡರೆ ಯಾವ ಸಹಕಾರಿ ಸಂಸ್ಥೆಯೂ ಸಾರ್ವಜನಿಕ ಉದ್ದಿಮೆಯೂ ನಷ್ಟ ಹೊಂದುವುದಿಲ್ಲ, ಮುಚ್ಚಬೇಕಾದಂತಹ ಸ್ಥಿತಿ ಒದಗುವುದಿಲ್ಲ ಮತ್ತು ಸಹಾಯಾನುದಾನ ಕೋರಿ ಸರ್ಕಾರದತ್ತ ಕೈಚಾಚುವ ಪ್ರಮೇಯವೂ ಬರುವುದಿಲ್ಲ. 'ನಂದಿನಿ' ಸಂಸ್ಥೆಯ ಅಧಿಕಾರಿ-ಸಿಬ್ಬಂದಿಗೆ ಹೃದಯಪೂರ್ವಕ ಅಭಿನಂದನೆ.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ನ್ಯಾಯದ ಬೆಳಕು ಪಸರಿಸಲಿ

ಮೀ ಟೂ ಅಭಿಯಾನದ ಪರವಾಗಿ ದನಿಯೆತ್ತಿದ ಪತ್ರಕರ್ತೆ ಪ್ರಿಯಾ ರಮಣಿ ಅವರ ವಿರುದ್ಧ ಎಂ.ಜೆ.ಅಕ್ಬರ್ ಅವರು ಹೂಡಿದ್ದ ಮಾನನಷ್ಟ ಮೊಕದ್ದಮೆಯಲ್ಲಿ ಪ್ರಿಯಾ ಅವರನ್ನು ಖುಲಾಸೆಗೊಳಿಸಿರುವ ನ್ಯಾಯಾಲಯದ ತೀರ್ಪು ಸಮಂಜಸವಾಗಿದೆ. ಆದರೆ ಇದೊಂದು ಬಿಡಿ ಪ್ರಕರಣ. ಎಷ್ಟೋ ಮಹಿಳೆಯರ ಪಾಲಿಗೆ ನ್ಯಾಯಾಲಯ ಇನ್ನೂ ನಿಲುಕದ ಗಗನ ಕುಸುಮವಾಗಿದೆ. ಪಿತೃಪ್ರಧಾನ ಮೆಟ್ಟಿಲುಗಳು ಅವಳನ್ನು ಮೇಲೇರಲು ಬಿಡುವುದಿಲ್ಲ. ಮಹಿಳೆ ಸುಶಿಕ್ಷಿತಳಾಗಿರಲಿ ಅಥವಾ ಅನಕ್ಷರಸ್ಥೆಯಾಗಿರಲಿ ಆಕೆಗೆ ತಾರತಮ್ಯ, ಭೇದ ಭಾವ ಇದ್ದದ್ದೇ.

ಹಣ, ಜಾತಿ, ಅಧಿಕಾರದ ಬಲವಿಲ್ಲದೆ ಮಹಿಳೆಗೆ ನ್ಯಾಯ ದೊರಕಿದಾಗ ಮಾತ್ರ ಆಕೆಯ ಶೋಷಣೆ ತಗ್ಗುತ್ತದೆ, ಬದುಕು ಹಸನಾಗುತ್ತದೆ. ಹೆಣ್ಣು ತಾಯಿಯಾಗಿ ಬೇಕು, ಮಗಳಾಗಿ ಬೇಡ ಎನ್ನುವ ಮನೋಭಾವ ಬೇರು ಬಿಟ್ಟಿರುವಾಗ ಮಹಿಳೆಗೆ ಸಾಮಾಜಿಕ ನ್ಯಾಯ ಸಿಗುವುದಾದರೂ ಹೇಗೆ? ಪ್ರಕೃತಿಯ ಕಣ್ಣಲ್ಲಿ ಗಂಡು ಮತ್ತು ಹೆಣ್ಣು ಸಮಾನರು. ಹೆಣ್ಣಿನ ವಿಚಾರದಲ್ಲಿ ನಮ್ಮ ಕಾನೂನು ಬಹಳ ಸುಂದರವಾಗಿದೆ. ಪಾಲನೆಯಲ್ಲೂ ಅದು ಜಾರಿಯಾದಾಗ ಎಷ್ಟೋ ನೊಂದ ಮಹಿಳೆಯರ ಬಾಳಿನಲ್ಲಿ ನ್ಯಾಯದ ಬೆಳಕು ಪಸರಿಸಲು ಸಾಧ್ಯ.

ರೇಷ್ಮಾ ಜಿ.ಎಂ., ಕೊಟ್ಟೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಲಿಷ್ಠರು ಇನ್ನೂ ಬಲಗೊಳ್ಳಲು ಬೇಕಾಗಿದೆ ಮೀಸಲು

• ಮಂಗ್ಳೂರ ವಿಜಯ



ಕರ್ನಾಟಕದಲ್ಲಿ ಕುರ್ಚಿಗಾಗಿ ಕಾದಾಟವನ್ನು ನಿರಂತರವಾಗಿ ನೋಡಿಕೊಂಡು ಬಂದಿದ್ದೇವೆ. 'ಆಪರೇಷನ್ ಕಮಲ' ಎಂಬುದನ್ನು ದೇಶಕ್ಕೆ ಪರಿಚಯಿಸಿದ್ದಕ್ಕೂ ಕನ್ನಡಿಗರು ಸಾಕ್ಷಿಗಳಾದರು.

ಈಗ ನಾವು ಹೊಸದೊಂದು ಹುಚ್ಚಾಟಕ್ಕೆ ಪ್ರೇಕ್ಷಕರಾಗುತ್ತಿದ್ದೇವೆ. ಮೀಸಲಾತಿಗಾಗಿ ನಡೆದಿರುವ ವಿವೇಚನಾರಹಿತ ಹಾರಾಟವೇ ಹೊಸ ಹುಚ್ಚಾಟ. ಬಲಿಷ್ಠರು ಅಶಕ್ತರೊಂದಿಗೆ ಊಟ ಹಂಚಿಕೊಳ್ಳಲು ನಡೆಸಿರುವ ಹವಣಿಕೆ ಇದು. ನ್ಯಾಯದ ಬಗ್ಗೆ ಕಿಂಚಿತ್ತೂ ಚಿಂತನೆ ಇಲ್ಲದೆ, ಕೇವಲ ಲಾಭಕ್ಕಾಗಿ ಹಾತೊರೆಯುವ ಹುನ್ನಾರ ಈಗ ನಡೆದಿರುವುದು. ತಮ್ಮ ವರ್ಗ/ಸಮುದಾಯದಲ್ಲೇ ಅಶಕ್ತರು, ಅವಕಾಶವಂಚಿತರು ಅನೇಕರು ಇರುವಾಗ, ಅವರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದವರು, ಈಗ ಹೋರಾಟದ ಹಾದಿ ಹಿಡಿದಿದ್ದಾರೆ; ತಮ್ಮಲ್ಲೇ ಬಲಿಷ್ಠವಾಗಿರುವ ಒಂದು ವರ್ಗವನ್ನು ಇನ್ನಷ್ಟು ಬಲಗೊಳಿಸಿಕೊಳ್ಳುವ ದಾರಿ ತುಳಿದಿದ್ದಾರೆ. ಏಕೆಂದರೆ, ಪ್ರವರ್ಗ ಬದಲಾದರೂ, ಮೀಸಲಾತಿ ಪ್ರಮಾಣ ಹೆಚ್ಚಾದರೂ, ಅದರ ಪ್ರಯೋಜನ ಆಯಾ ವರ್ಗ/ಸಮುದಾಯದಲ್ಲೇ ಇರುವ ಬಲಿಷ್ಠರ ಪಾಲಾಗುವುದು ನಿಶ್ಚಿತ. ಈ ಬಲಿಷ್ಠರು ತಮ್ಮಲ್ಲೇ ಇರುವ ಮಹಿಳೆಯರ ಬಗ್ಗೆ ಎಳ್ಳಷ್ಟೂ ಜವಾಬ್ದಾರಿಯಿಂದ ನಡೆದುಕೊಂಡಿಲ್ಲ ಎಂಬುದೂ ಸ್ಪಷ್ಟ.

ಈಗ ಮಂಡಿಸುತ್ತಿರುವ ಮೀಸಲಾತಿ ಬೇಡಿಕೆ ಸರ್ಕಾರಿ ಹುದ್ದೆ/ಸೀಟುಗಳಲ್ಲಿ ಪಾಲು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದ್ದು. ಇಲ್ಲಿ ಪಾಲು ಸಿಕ್ಕುವುದು ನಿಜಕ್ಕೂ ಸಾಧ್ಯವಾಗುವುದು ಪ್ರತಿಯೊಂದು ವರ್ಗ/ಸಮುದಾಯಗಳಲ್ಲಿ ಸಮಾನ, ಉಚಿತ ಮತ್ತು ಕಡ್ಡಾಯ ಶಿಕ್ಷಣ ಪ್ರಸಾರ ಆದಾಗ. ಆದರೆ, ಈಗಾಗಲೇ ಪ್ರತಿಯೊಂದು ವರ್ಗ/ಸಮುದಾಯದಲ್ಲಿ ಬಲಿಷ್ಠರು ಇನ್ನಷ್ಟು ಬಲಿಷ್ಠರಾಗುತ್ತಿದ್ದಾರೆ. ಹಾಗಾಗಿ, ಈಗಿನ ಬಹುತೇಕ ಹೋರಾಟಗಳು ಬಲಿಷ್ಠರನ್ನು ಇನ್ನಷ್ಟು ಬಲಿಷ್ಠರನ್ನಾಗಿಸುವುದಕ್ಕಾಗಿ ಎನ್ನಬೇಕಾಗುತ್ತದೆ.

ಸಾಮಾಜಿಕ ನ್ಯಾಯದ ಆಶಯವು ಈ ಹೋರಾಟದಲ್ಲಿ ಪ್ರತಿಫಲಿಸುತ್ತಿಲ್ಲ. ಇದನ್ನು ಮೂಲೆಗೆ ತಳ್ಳಿ, ಕೇವಲ ದುರ್ಬಲರ ಜೊತೆ ಸೇರಿ, ಅಲ್ಲಿ ಸಿಗುವ ಹುದ್ದೆ/ಸೀಟುಗಳಲ್ಲಿ ಹೆಚ್ಚಿನವುಗಳನ್ನು ತಮ್ಮ ಪಾಲಾಗಿಸಿಕೊಳ್ಳಲು ನಡೆಸಿರುವ ಪ್ರಯತ್ನವಾಗಿ ಕಾಣುತ್ತಿರುವುದು ವಿಪರ್ಯಾಸ.

2ಎ ಪ್ರವರ್ಗದಲ್ಲಿರುವ ಕುರುಬ ಸಮುದಾಯವು ಪ.ಪಂಗಡ ಪಟ್ಟಿ ಸೇರಲು ಹಾತೊರೆಯುತ್ತಿದೆ; ಪ.ಪಂಗಡದಲ್ಲಿ ಇರುವ ವಾಲ್ಮೀಕಿ ಸಮುದಾಯದವರು ತಮ್ಮ ಪಂಗಡಕ್ಕೆ ಹೆಚ್ಚು ಪ್ರಮಾಣದ ಮೀಸಲಾತಿ ಬೇಕು ಎಂದು ಕೂಗುತ್ತಿದ್ದಾರೆ; ಪಂಚಮಸಾಲಿ ಸಮುದಾಯದವರು ತಮ್ಮನ್ನು 2ಎ ಪ್ರವರ್ಗಕ್ಕೆ ಸೇರಿಸಬೇಕು ಎಂದು ಹೂಂಕಾರ ಹಾಕುತ್ತಿದ್ದಾರೆ. ಒಟ್ಟಾರೆ ಮೀಸಲಾತಿಗಾಗಿ ಪೈಪೋಟಿ ನಡೆದಿದೆ.

ವಿವೇಚನೆಯಿಂದ ಪೈಪೋಟಿ ನಡೆಸುವುದು ಅಸಮರ್ಥನೀಯವೇನೂ ಅಲ್ಲ; ಆದರೆ, ಈಗಿನ ಯಾವ ವಿದ್ಯಮಾನದಲ್ಲೂ ವಿವೇಚನೆ ಕಾಣುತ್ತಿಲ್ಲ. ತಮ್ಮ ಸಮುದಾಯದ ಜನಸಂಖ್ಯೆಯನ್ನು ಮತ್ತು ಎಂಎಲ್ಎ ಸಂಖ್ಯೆಯನ್ನು ಬೆದರಿಕೆ ರೂಪದಲ್ಲಿ ಮುಂದಿಟ್ಟು ಸರ್ಕಾರದ ಕೈ ತಿರುಗಿಸಿ, ಬಗ್ಗಿಸಿ ತಮ್ಮ ಒತ್ತಾಯವನ್ನು ಈಡೇರಿಸಿಕೊಳ್ಳುವ ವರಸೆ ಇದು. ಹಾಗಾಗಿ, ಇಲ್ಲಿ ವಿವೇಚನೆಯ ಪೂರ್ಣ ಗೈರುಹಾಜರಿ ಎದ್ದು ಕಾಣುತ್ತಿದೆ.

ಸಂವಿಧಾನವು ಪ.ಜಾತಿ ಮತ್ತು ಪ.ಪಂಗಡಗಳಿಗೆ ಸೇರಿದವರಿಗೆ ಮಾತ್ರ ಮೀಸಲಾತಿಯನ್ನು ಒದಗಿಸಿದೆ. ಇದು, ಅನುಚ್ಛೇದ 15(4) ಮತ್ತು 16(4)ರ ಮೂಲಕ. ರಾಜ್ಯದ ಜನಸಂಖ್ಯೆಯಲ್ಲಿ ಈ ಜಾತಿ ಮತ್ತು ಪಂಗಡಗಳವರ ಜನಸಂಖ್ಯೆ ಯಾವ ಪ್ರಮಾಣದಲ್ಲಿ ಇದೆಯೊ, ಆ ಪ್ರಮಾಣದಷ್ಟು ಮೀಸಲಾತಿ ಒದಗಿಸಲು ಈ ಅನುಚ್ಛೇದಗಳು ಅವಕಾಶ ನೀಡುತ್ತವೆ. ಸಂವಿಧಾನ ಜಾರಿಗೊಂಡ ನಂತರದ ದಿನಗಳಲ್ಲಿ ಅನೇಕ ರಾಜಕೀಯ ಪಕ್ಷಗಳು ದೇಶದ ಇತರ ಹಿಂದುಳಿದ ವರ್ಗಗಳಿಗೆ (ಮತ್ತು ಮಹಿಳೆಯರಿಗೆ) ಮೀಸಲಾತಿ ಅಗತ್ಯ ಎಂದು ಆಗ್ರಹಪಡಿಸಿದವು. 1979ರಲ್ಲಿ ಜನತಾ ಸರ್ಕಾರ ಬಿ.ಪಿ.ಮಂಡಲ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಿತು. ಇದರ ವರದಿ ಆಧಾರದಲ್ಲಿ 1989ರಲ್ಲಿ ವಿ.ಪಿ.ಸಿಂಗ್ ಸರ್ಕಾರ ಇತರ ಹಿಂದುಳಿದವರಿಗೆ ಕೇಂದ್ರ ಸರ್ಕಾರದ ಸೇವೆಗಳಲ್ಲಿ ಶೇ 27 ಮೀಸಲಾತಿ ಒದಗಿಸಲು ಆದೇಶಿಸಿತು.

ಇದನ್ನು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಿದ್ದೇ ಇಂದ್ರಾ ಸಾಹ್ನಿ ಮೊಕದ್ದಮೆ. ಇದಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟಿನ ತೀರ್ಪನ್ನು ನ್ಯಾ. ಬಿ.ಪಿ.ಜೀವನರೆಡ್ಡಿ ಅವರು ಬರೆದದ್ದು. ತೀರ್ಪಿನ ಪ್ಯಾರಾ 697(4) 'ಅತಿ ಜರೂರು ಸಂದರ್ಭದಲ್ಲಿ ರಕ್ಷಣಾತ್ಮಕ ಕ್ರಮ ಮೀಸಲಾತಿ. ಇದನ್ನು ಯಾವಾಗಲೂ ಕನಿಷ್ಠ ಸಂಖ್ಯೆಯ ಅವಕಾಶಗಳಿಗೆ (ಹುದ್ದೆ/ಸೀಟು) ಅನ್ವಯಿಸಬೇಕು. ಸಂವಿಧಾನವು ಮೀಸಲಾತಿ ಪ್ರಮಾಣ ಕುರಿತು ಸ್ಪಷ್ಟವಾಗಿ ಏನನ್ನೂ ಹೇಳಿಲ್ಲದಿದ್ದರೂ, ಸಮಾನತೆಗೆ ಧಕ್ಕೆ ಬಾರದಂತೆ ಮೀಸಲಾತಿಯನ್ನು ಅಳವಡಿಸುವುದು ಸಾಂವಿಧಾನಿಕ ತತ್ವವಾಗಿದೆ' ಎನ್ನುತ್ತದೆ. ಈ ಕಾರಣಕ್ಕಾಗಿ, ಒಟ್ಟು ಮೀಸಲಾತಿ ಪ್ರಮಾಣವು ಶೇ 50ಕ್ಕಿಂತ ಕಡಿಮೆ ಇರಬೇಕು ಎಂದು ನಿರ್ದೇಶಿಸಲಾಯಿತು.

ದೇಶದಲ್ಲಿ ಪ.ಜಾತಿಯವರಿಗೆ ಶೇ 15 ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ 7.5ರಷ್ಟು ಮೀಸಲಾತಿ ಇದ್ದ ಹಿನ್ನೆಲೆಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಶೇ 27ರಷ್ಟು ಮೀಸಲಾತಿ ಒದಗಿಸುವುದನ್ನು ಸುಪ್ರೀಂ ಕೋರ್ಟು ಸಮ್ಮತಿಸಿತು.

ಮೀಸಲಾತಿ ವಿಷಯವನ್ನು ರಾಜಕೀಯ ಲಾಭ ಮತ್ತು ನಷ್ಟದ ಲೆಕ್ಕಾಚಾರದ ವಿಷಯವನ್ನಾಗಿಸುವುದು ಬೇಜವಾಬ್ದಾರಿ ನಿಲುವು. ಸಮಾಜದಲ್ಲಿನ ಅತಿ ದುರ್ಬಲರಿಗೆ ಮೀಸಲಾತಿಯ ಪ್ರಯೋಜನ ಲಭ್ಯವಾಗುವಂತೆ ನೀತಿಯನ್ನು ರೂಪಿಸಬೇಕು. ಮೀಸಲಾತಿಯ ಅವಶ್ಯಕತೆ ಕಡಿಮೆ ಆಗುತ್ತಾ ಹೋಗುವಂತೆ ಸಮಾಜವನ್ನು ನಿರ್ಮಿಸುವುದು ಯಾವುದೇ ಜನಹಿತನಿಷ್ಠ ಸರ್ಕಾರದ ಗುರಿ. ಈ ದಿಸೆಯಲ್ಲಿ ಒಟ್ಟಾರೆ ಜನರಿಗೆ ಶಿಕ್ಷಣ, ವಸತಿ, ಉದ್ಯೋಗ ಅವಕಾಶಗಳನ್ನು ಮುಕ್ತವಾಗಿ ಒದಗಿಸುವ ಹೊಣೆಯನ್ನು ಸರ್ಕಾರಗಳು ಹೊತ್ತುಕೊಳ್ಳಲೇಬೇಕು.

ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ವಿಷಯ ಈಗ ಭಾರಿ ಮಹತ್ವ ಪಡೆದುಕೊಂಡಿದೆ. ಆದರೆ, ಇದು ತಾತ್ವಿಕವಾಗಿ ಸಮರ್ಥನೀಯವಲ್ಲ. ಅಲ್ಲದೆ, ಇದು ಬಹುದೂರ ಸಾಗಬೇಕಾದ ದಾರಿ. ಇಲ್ಲಿ ಹಲವು ಹತ್ತು ಬಿಕ್ಕಟ್ಟುಗಳು ಎದುರಾಗುವುದು, ಹಿತಾಸಕ್ತಿ ಘರ್ಷಣೆಗಳು ನಡೆಯುವುದು ಮತ್ತು ಸಮಾಜದಲ್ಲಿ ಅಶಾಂತಿ, ಅಪನಂಬಿಕೆ ಮೂಡುವುದು, ಸಂಬಂಧಗಳಲ್ಲಿ ಬಿರುಕು ಮೂಡುವುದು ನಿಶ್ಚಿತ.

ಮೀಸಲು ಹೆಚ್ಚಳ ಸವಾಲು

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ 15 ಮತ್ತು ಪಂಗಡದವರಿಗೆ ಶೇ 3ರಷ್ಟು ಮೀಸಲಾತಿ ಈಗ ಇದೆ. ಪರಿಶಿಷ್ಟ ಪಂಗಡದವರು (ಪರಿಶಿಷ್ಟ ಜಾತಿಯವರು ಕೂಡ) ತಮ್ಮ ಈಗಿನ ಜನಸಂಖ್ಯಾ ಪ್ರಮಾಣಕ್ಕೆ ತಕ್ಕಂತೆ ಮೀಸಲಾತಿಯನ್ನು ಹೆಚ್ಚಿಸಬೇಕೆಂದು ಆಗ್ರಹಪಡಿಸುತ್ತಿದ್ದಾರೆ. ಇದನ್ನು ಸಾಧ್ಯವಾಗಿಸಬೇಕು ಎಂದರೆ ರಾಜ್ಯದಲ್ಲಿ ಇತರ ಹಿಂದುಳಿದ ವರ್ಗಗಳಿಗೆ ನೀಡುತ್ತಿರುವ ಒಟ್ಟು ಮೀಸಲಾತಿಯಲ್ಲಿ ಕಡಿತ ಮಾಡಬೇಕಾಗುತ್ತದೆ. ಇದು ರಾಜಕೀಯವಾಗಿ ಸೂಕ್ಷ್ಮ ವಿಷಯವಾಗಿರುವುದರಿಂದ ಯಾವ ಸರ್ಕಾರವೂ ಈ ಕುರಿತು ಕ್ರಮ ಕೈಗೊಳ್ಳುವುದು ದುಃಸಾಧ್ಯ.

(ಲೇಖಕ: ಸಾಮಾಜಿಕ ಅಧ್ಯಯನಕಾರ)

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ಕನಕ ಗುರುಪೀಠದಿಂದ ಹೊರಟ 20 ದಿನಗಳ ಪಾದಯಾತ್ರೆಯ ಸಮಾರೋಪ ಸಮಾರಂಭ ಬೆಂಗಳೂರಿನ ಬಿಐಇಸಿಯಲ್ಲಿ ಇದೇ 7ರಂದು ನಡೆಯಿತು. ಭಾರಿ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಮೀಸಲೇತರ ವರ್ಗಗಳಿಗೆ ಮೀಸಲಾತಿ

ಎರಡು ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು, ಮೀಸಲೇತರ ವರ್ಗ/ಸಮುದಾಯಗಳಿಗೆ ಸೇರಿದ್ದು ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ಒದಗಿಸಿದೆ. ಇದರಿಂದ ಸುಪ್ರೀಂ ಕೋರ್ಟು ವಿಧಿಸಿದ್ದ ಮಿತಿಗೆ ವ್ಯತ್ಯಯ ಉಂಟಾಗಿದೆ. ಈ ಕುರಿತು ತನ್ನ ಮುಂದಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟು ಇತ್ಯರ್ಥಪಡಿಸುವುದು ಬಾಕಿ ಇದೆ.

ಪ್ರಭಾವ, ಸಂಖ್ಯಾಬಲದ ಒತ್ತಡ ನಿವಾರಣೆ ಮೀಸಲಾತಿ ಗುರಿ ಅಲ್ಲ

• ಮಲ್ಲಿಗೆ ಸಿರಿಮನೆ

ಭಾರತದಲ್ಲಿರುವಂತೆಯೇ, ಪ್ರಪಂಚದ ಅನೇಕ ದೇಶಗಳು ಮತ್ತು ಪ್ರದೇಶಗಳಲ್ಲಿ ಜಾತಿ, ವರ್ಣ, ಧರ್ಮ, ಸಾಂಸ್ಕೃತಿಕ ಹಿನ್ನೆಲೆ, ಸಾಮಾಜಿಕ ಸ್ತರ ಅಥವಾ ರಾಷ್ಟ್ರೀಯತೆಯನ್ನಾಧರಿಸಿದ ತಾರತಮ್ಯವು ಅಸ್ತಿತ್ವದಲ್ಲಿದೆ. ಅಸಮಾನತೆಯ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಇವು ಸೃಷ್ಟಿಸಿವೆ. ಎಲ್ಲ ಕ್ಷೇತ್ರಗಳಲ್ಲಿ ಉಂಟಾಗಿದ್ದ ಇಂತಹ ಅಂತರಗಳನ್ನು ನಿವಾರಿಸುವ ಅಗತ್ಯಬಿದ್ದದ್ದು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ದೇಶಗಳು ಒಪ್ಪಿಕೊಂಡ ನಂತರ. ಆ ಸಂದರ್ಭದಲ್ಲಿ ಮೀಸಲಾತಿ, ಸಕ್ರಿಯ ರಚನಾತ್ಮಕ ಬೆಂಬಲ, ಸಕಾರಾತ್ಮಕ ಕ್ರಿಯೆ, ಸಮಾನಾವಕಾಶಗಳ ನೀತಿಗಳು ಮುಂತಾದ ಬೇರೆ ಬೇರೆ ರೂಪಗಳಲ್ಲಿ, ಹೆಸರುಗಳಲ್ಲಿ ಅದುವರೆಗೆ ವಂಚಿತವಾಗಿದ್ದ ಸಮುದಾಯಗಳಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿ ಅವರ ನ್ಯಾಯಬದ್ಧ ಹಕ್ಕನ್ನು ದೊರಕಿಸಿಕೊಡುವ ಬಾಧ್ಯತೆಯನ್ನು ಸರ್ಕಾರಗಳು ವಹಿಸಿಕೊಳ್ಳಬೇಕಾಯಿತು; ವಹಿಸಿಕೊಂಡವು.

ಭಾರತದಲ್ಲಿ ಡಾ.ಅಂಬೇಡ್ಕರ್ ಮತ್ತು ಇತರ ಸಂವಿಧಾನ ಕರ್ತೃಗಳ ದೂರದೃಷ್ಟಿತ್ವ ಮತ್ತು ಸ್ವಾತಂತ್ರ್ಯ ಚಳವಳಿಯು ಸೃಷ್ಟಿಸಿದ್ದ ಸಮಾನತೆಯ ಆಶಯದ ಬಲದ ಮೇಲೆ ನಮ್ಮ ದೇಶದ ಆಳುವವರೂ ಕೂಡಾ ಪರಿಶಿಷ್ಟ ಜಾತಿ/ ಪಂಗಡಗಳಿಗೆ ಮೀಸಲಾತಿಯ ನೀತಿಯನ್ನು ಸಂವಿಧಾನದ ಭಾಗವಾಗಿ ಒಪ್ಪಿಕೊಂಡು ಪಾಲಿಸಲಾರಂಭಿಸಿದರು. ನಂತರದ ದಿನಗಳಲ್ಲಿ ಮಂಡಲ್ ವರದಿಯ ಶಿಫಾರಸು ಜಾರಿ ಮೂಲಕ ಇನ್ನೂ ಅನೇಕ ಸಮುದಾಯಗಳಿಗೆ ಮೀಸಲಾತಿ ಜಾರಿಯಾದದ್ದು ಈಗ ಇತಿಹಾಸ.

ಹೀಗೆ, ಮೀಸಲಾತಿಯೆಂಬ ಪರಿಕಲ್ಪನೆಗೂ, ಸಾಮಾಜಿಕ ಪ್ರತ್ಯೇಕತೆ ಮತ್ತು ತಾರತಮ್ಯಗಳ ಮೂಲಕ ಹೇರಲ್ಪಟ್ಟ ಸಾಮಾಜಿಕ ಅಂತರದ ವ್ಯವಸ್ಥೆಗೂ ನೇರ ಸಂಬಂಧವಿದೆ. 2000ನೇ ಇಸವಿಯಲ್ಲಿ ಆ್ಯಕ್ಷನ್ ಏಡ್ ಸಂಸ್ಥೆಯು ಭಾರತದ 11 ರಾಜ್ಯಗಳ 555 ಗ್ರಾಮಗಳಲ್ಲಿ ನಡೆಸಿದ ಅಧ್ಯಯನವೊಂದನ್ನು ಆಧರಿಸಿ ಸುಖದೇವ್ ಥೋರಟ್‌ರವರು ಕೆಲವು ಅಂಶಗಳನ್ನು ಮುಂದಿಡುತ್ತಾರೆ: 'ಶೇ 36ರಷ್ಟು ಹಳ್ಳಿಗಳಲ್ಲಿ ದಲಿತರಿಗೆ ಕೃಷಿ ಕ್ಷೇತ್ರದ ಸಾಮಾನ್ಯ ಉದ್ಯೋಗವನ್ನು ನಿರಾಕರಿಸಲಾಗಿದೆ ಅಥವಾ ಕೂಲಿಯಲ್ಲಿ ತಾರತಮ್ಯ ಅನುಸರಿಸಲಾಗುತ್ತಿದೆ. ಗುತ್ತಿಗೆ ಕೂಲಿ ಮಾರುಕಟ್ಟೆಯಲ್ಲಿ ಪ್ರತ್ಯೇಕತೆಯನ್ನು ಜಾರಿಗೊಳಿಸುವುದರ ಮೂಲಕ ಕಡಿಮೆ ಮೊತ್ತದ ಕೂಲಿಯನ್ನು ಪಾವತಿಸಲಾಗುತ್ತಿದೆ ಅಥವಾ ಹೆಚ್ಚು ಹೊರೆಯ ಮತ್ತು 'ಕೆಳದರ್ಜೆಯ' ಕೆಲಸಗಳನ್ನು ಮಾಡಿಸಲಾಗುತ್ತಿದೆ. ಶೇ 35ರಷ್ಟು ಹಳ್ಳಿಗಳಲ್ಲಿ ದಲಿತರು ದಿನಬಳಕೆಯ ವಸ್ತುಗಳನ್ನು ಅಥವಾ ಆಹಾರ ವಸ್ತುಗಳನ್ನು ಇತರ ಸಮುದಾಯಗಳಿಗೆ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಶೇ 47ರಷ್ಟು ಹಳ್ಳಿಗಳಲ್ಲಿ ದಲಿತರು ಸಹಕಾರಿ ಸಂಘಗಳಿಗೆ ಅಥವಾ ಇತರರಿಗೆ ಹಾಲು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಮಧ್ಯಾಹ್ನದ ಬಿಸಿಯೂಟದ ಯೋಜನೆಯ ಜಾರಿಯಲ್ಲಿ ಅವಿಭಜಿತ ಆಂಧ್ರಪ್ರದೇಶದಲ್ಲಿ ಶೇ 24ರಷ್ಟು ತಾರತಮ್ಯವನ್ನು ಅನುಸರಿಸಲಾಗಿದೆ ಎಂದು ಅಧ್ಯಯನ ತಿಳಿಸಿದರೆ, ತಮಿಳುನಾಡಿನಲ್ಲಿ ಇದು ಶೇ 31, ರಾಜಸ್ಥಾನದಲ್ಲಿ ಶೇ 52ರಷ್ಟು ತಾರತಮ್ಯ ನೀತಿಯು ಅನುಸರಣೆಯಲ್ಲಿದೆ'.

ಜಾತಿಯ ಕಾರಣಕ್ಕೆ ಶಿಕ್ಷಣ ಮತ್ತು ಉದ್ಯೋಗಾವಕಾಶ ನಿರಾಕರಣೆ, ಜಾತಿ ದೌರ್ಜನ್ಯ ಭಾರತದಲ್ಲಿ ವಿಶೇಷವಲ್ಲವೇ ಅಲ್ಲ. ಹೀಗಾಗಿ ಇಂತಹ ಸನ್ನಿವೇಶದಲ್ಲಿ ಸಮಾನತೆಯ ಹಾದಿಯ ಹುಡುಕಾಟದಲ್ಲಿ ಮೀಸಲಾತಿಯೆಂಬುದು ಕತ್ತಲಲ್ಲಿ ತಡಕಾಡುತ್ತಿರುವವರಿಗೆ ಬೇಕಿರುವ ಲೈಟುಕಂಬವಿದ್ದಂತೆಯೇ ಹೊರತು, 'ಒಬ್ಬ ವ್ಯಕ್ತಿ, ಒಂದು ಓಟು' ಎಂಬ ಘೋಷಣೆಯ ಹಾಗಲ್ಲ.

ಜಾತಿ-ಧರ್ಮಗಳನ್ನು ಕಾರಣವಾಗಿಟ್ಟುಕೊಂಡು, ಮನುಷ್ಯರನ್ನು ಮನುಷ್ಯರನ್ನಾಗಿಯೂ ನೋಡಲು ಸಾಧ್ಯವಾಗದಂತೆ ಪ್ರತಿಯೊಬ್ಬ ಪ್ರಜೆಯನ್ನೂ ಪರಿವರ್ತಿಸಿರುವ ಸಮಾಜದಲ್ಲಿ ಪ್ರಜಾತಂತ್ರವು ಯಶಸ್ವಿಯಾಗುವುದಿಲ್ಲ ಎಂಬುದು ಅಂಬೇಡ್ಕರ್ ಅವರ ಅನಿಸಿಕೆಯಾಗಿತ್ತು. ಅವರ ಪ್ರಕಾರ, 'ಪ್ರಜಾತಾಂತ್ರಿಕ ಸರ್ಕಾರವು ಪ್ರಜಾತಾಂತ್ರಿಕ ಸ್ವರೂಪದ ಸಮಾಜವನ್ನು ಅಪೇಕ್ಷಿಸುತ್ತದೆ. ಸಾಮಾಜಿಕ ಪ್ರಜಾತಂತ್ರವಿಲ್ಲದಿದ್ದಲ್ಲಿ ಔಪಚಾರಿಕ ನೆಲೆಗಟ್ಟಿನ ಪ್ರಜಾತಂತ್ರಕ್ಕೆ ಬೆಲೆಯೇ ಇಲ್ಲ. ಒಂದು ಪ್ರಜಾತಾಂತ್ರಿಕ ಸಮಾಜದೊಳಗಡೆ ಐಕ್ಯತೆ, ಒಂದು ಉದ್ದೇಶಕ್ಕಾಗಿ ಒಂದಾದ ಸಮುದಾಯ, ಸಾರ್ವಜನಿಕ ಗುರಿಗಳ ಬಗ್ಗೆ ಬದ್ಧತೆ ಮತ್ತು ಪರಸ್ಪರ ಸೌಹಾರ್ದತೆಯ ಅವಶ್ಯಕತೆ ಇಲ್ಲದೆಯೂ ಇರಬಹುದು. ಆದರೆ, ಅದರಲ್ಲಿ ಎರಡು ಅಂಶಗಳು ಇರಲೇಬೇಕು. ಮೊದಲನೆಯದು ಸಹವಾಸಿಗಳ ಕುರಿತು ಗೌರವ, ಸಮಾನತೆಯ ಭಾವ; ಎರಡನೆಯದು, ಜಡ ಸಾಮಾಜಿಕ ಅಡ್ಡಗೋಡೆಗಳಿಂದ ಮುಕ್ತವಾದ ಸಾಮಾಜಿಕ ಸಂರಚನೆ. ಉಳ್ಳವರು ಮತ್ತು ಇಲ್ಲದವರೆಂಬ ವ್ಯತ್ಯಾಸಗಳನ್ನು ನಿರ್ಮಿಸುವುದರಲ್ಲಿ ಪರ್ಯವಸಾನಗೊಳ್ಳುವ ಪ್ರತ್ಯೇಕತೆ ಮತ್ತು ಹೊರದಬ್ಬುವಿಕೆಗಳಿರುವಲ್ಲಿಗೆ ಪ್ರಜಾತಂತ್ರ ಒಗ್ಗುವುದಿಲ್ಲ'.

ದನಿಯಿಲ್ಲದವರು ಮೂಲೆಗೆ...

ಈಚಿನ ಕೆಲವು ಸಂಗತಿಗಳು ಇನ್ನೂ ಮುಖ್ಯವಾದ ಒಂದಷ್ಟು ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳುವಂತೆ ನಮ್ಮನ್ನು ಒತ್ತಾಯಿಸುತ್ತವೆ. ಸಾಚಾರ್ ವರದಿಯು ಭಾರತದ ಮುಸ್ಲಿಂ ಸಮುದಾಯ ಎದುರಿಸುತ್ತಿರುವ ಅತಿಕಟುವಾದ ಅಸಮಾನತೆಯನ್ನು ಮುಂದೆ ತಂದಿತು. ಶೇ 14ರಷ್ಟು ಜನಸಂಖ್ಯೆ ಹೊಂದಿದ್ದರೂ ಅಧಿಕಾರದ ಸ್ಥಾನದಲ್ಲಿ (ಹೆಚ್ಚಾಗಿ ಕೆಳಹಂತಗಳಲ್ಲಿ) ಕೇವಲ ಶೇ 2.5ರಷ್ಟು ಮಾತ್ರವೇ ಇರುವ ಶೋಚನೀಯ ಪರಿಸ್ಥಿತಿಯನ್ನೂ ಶೈಕ್ಷಣಿಕವಾಗಿ ಕೂಡಾ ಅಪಾರ ಹಿಂದುಳಿದಿರುವಿಕೆಯನ್ನೂ ದಾಖಲಿಸಿತು. ಇದಕ್ಕಾಗಿ 'ಸಮಾನಾವಕಾಶ ಕಮಿಷನ್' ಒಂದನ್ನು ಸ್ಥಾಪಿಸಿ ಮೀಸಲಾತಿಯನ್ನೂ ಒಳಗೊಂಡಂತೆ ಮುಸ್ಲಿಂ ಸಮುದಾಯದ ಸಬಲೀಕರಣದ ಎಲ್ಲ ಮಾರ್ಗಗಳನ್ನೂ ತೆರೆಯಲು ಸಮಿತಿ ಶಿಫಾರಸು ಮಾಡಿತ್ತು. ಆ ಆಶಯಗಳ ಕಡೆ ಕಡೆಗಣ್ಣಿನ ನೋಟವನ್ನೂ ಆಳುವವರು ಹರಿಸಿಲ್ಲ.

ಅದರಂತೆಯೇ ಮಹಿಳಾ ಮೀಸಲಾತಿ ಕೂಡಾ. ಅಧಿಕಾರದ ಮೇಲುಹಂತಗಳಲ್ಲಿ ರಾಜಕೀಯ ಮೀಸಲಾತಿಯ ಕೂಗು ಇನ್ನೂ ಕಾಯ್ದೆಬದ್ಧಗೊಳ್ಳುವ ಯಾವ ಸೂಚನೆಯೂ ಸದ್ಯಕ್ಕೆ ಕಾಣುತ್ತಿಲ್ಲ. ಇಂತಹ ಎಲ್ಲ ಶೋಷಿತ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸ್ಥಿತಿ-ಗತಿ ಕಳೆದ ಕೆಲವು ವರ್ಷಗಳಲ್ಲಿ ಪ್ರತಿಗಾಮಿ ಚಿಂತನೆಗಳ ಮೇಲಬ್ಬರದ ಕಾಲದಲ್ಲಿ ಇನ್ನಷ್ಟು ಅಧೋಗತಿಗಿಳಿದಿದೆಯೆಂಬುದಕ್ಕೆ ಆಧಾರಗಳೂ, ಕಾರಣಗಳೂ ನಮಗೆ ಗೊತ್ತಿಲ್ಲದಿರುವುದೇನಲ್ಲ. ಆದರೆ, ಅವರು ಈ ಬಗ್ಗೆ ದನಿಯೆತ್ತಲಾಗುತ್ತಿಲ್ಲ. ದಲಿತ-ದಮನಿತ ಸಮುದಾಯ ಈಗಾಗಲೇ ಸಿಕ್ಕಿರುವ ಅರೆಬರೆ ಮೀಸಲಾತಿಯ ಸವಲತ್ತುಗಳ ಕಾರಣಕ್ಕೆ ಖಳರಂತೆ ಬಿಂಬಿಸಲ್ಪಟ್ಟರೆ, ಮುಸ್ಲಿಂ ಸಮುದಾಯ ಧಾರ್ಮಿಕ ಕಾರಣಗಳಿಗಾಗಿ ಸಂಪೂರ್ಣವಾಗಿ ಮೂಲೆಗೆ ತಳ್ಳಲ್ಪಟ್ಟು ಎತ್ತಲಾರದಂತಾಗಿದೆ. ಮಹಿಳೆಯರಂತೂ ಜಾತಿ-ಧರ್ಮ-ಸಾಂಸ್ಕೃತಿಕತೆಗಳ ಅನನ್ಯತೆಯಲ್ಲಿ ಛಿದ್ರಗೊಂಡು ಮಹಿಳೆಯರಾಗಿ ತಮಗೆ ದೊರಕಬೇಕಿದ್ದ ಯಾವುದೇ ಹಕ್ಕುಗಳನ್ನೂ ದಕ್ಕಿಸಿಕೊಳ್ಳಲಾರದವರಾಗಿದ್ದಾರೆ.

ಹೀಗೆ, ಸಮಾನಾವಕಾಶಗಳ ಕಡೆಗೆ ಇನ್ನೂ ವೇಗವಾಗಿ ಹೋಗಬೇಕಿದ್ದ, ನ್ಯಾಯಬದ್ಧವಾಗಿ ಮೀಸಲಾತಿಗೆ ಹಕ್ಕುದಾರರಾಗಿದ್ದ ಸಮುದಾಯಗಳಿಗೆ ದನಿಯಿಲ್ಲದಂತಾಗಿರುವ ಸಂದರ್ಭದಲ್ಲಿ, ಈಗಾಗಲೇ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಬಲಾಢ್ಯರಾಗಿರುವ, ಸಂಖ್ಯಾಬಲದಲ್ಲೂ ಗಟ್ಟಿಯಾಗಿರುವ ಸಮುದಾಯಗಳು ಮೀಸಲಾತಿಯ ಕೂಗೆಬ್ಬಿಸುವುದು, ಅವಕ್ಕೆ ಸರ್ಕಾರ ಮಣೆಹಾಕುವ ಮನಸ್ಥಿತಿ ತೋರುವುದು, ಒಟ್ಟಾರೆ ಸಾಮಾಜಿಕವಾಗಿ ಅಸಮಾನ ಪರಿಸ್ಥಿತಿಯಲ್ಲಿರುವವರಿಗೆ ಮಾಡುವ ದುಪ್ಪಟ್ಟು ಅನ್ಯಾಯವಾಗುತ್ತದೆ.

ಮೇಲ್ಜಾತಿಗಳಿಗೂ ಶೇ 10ರಷ್ಟು ಮೀಸಲಾತಿ ಘೋಷಿಸುವ ಮೂಲಕ ಅದರ ಮೂಲ ಆಶಯಕ್ಕೇ ಗುದ್ದು ನೀಡಲಾಗಿದೆ. ಈಗ ಅದರದ್ದೇ ಬೇರೆ ಬೇರೆ ರೆಂಬೆ ಟೊಂಗೆಗಳು ಬಲಾಢ್ಯ ಸಮುದಾಯಗಳಿಗೆ ಮೀಸಲಾತಿಯ ಕೂಗಿನ ರೂಪದಲ್ಲಿ ಹುಟ್ಟಿಕೊಳ್ಳುತ್ತಿವೆ.

ಈ ವಿಚಾರ ಬಂದಾಗೆಲ್ಲ 'ಎಲ್ಲ ಸಮುದಾಯಗಳಲ್ಲಿ ಬಡವರಿಲ್ಲವೇ' ಎಂಬ ಸರಳೀಕೃತ ಪ್ರಶ್ನೆ ಮುಂದೆ ಬರುತ್ತದೆ. ಬಡತನ ಮತ್ತು ಒಟ್ಟಾರೆ ಅಸಮಾನತೆಯ ನಿವಾರಣೆಗೆ ಬೇಕಿರುವುದು ಸಂಪತ್ತು ಮತ್ತು ಸಂಪನ್ಮೂಲಗಳ ಸಮಾನ ವಿತರಣೆಯ ತತ್ವದ ಮೇಲೆ ನಂಬಿಕೆಯಿಟ್ಟ ಆಡಳಿತ ವ್ಯವಸ್ಥೆ. ಅದು ದೂರದ ಗುರಿಯೆಂದು ಕಂಡರೆ, ಎಲ್ಲ ಬಡವರೂ ಘನತೆಯ ಬದುಕು ನಡೆಸಲು ಬೇಕಿರುವುದು ಈಗಾಗಲೇ ಪ್ರಪಂಚದ ಹಲವು ದೇಶಗಳು ರೂಪಿಸಿಕೊಂಡಿರುವ 'ಸರ್ವರಿಗೂ ಸಾಮಾಜಿಕ ಭದ್ರತೆ ಮತ್ತು ಮೂಲಭೂತ ಸವಲತ್ತುಗಳು' ಎಂಬ ನೀತಿ. ಎಲ್ಲ ಜಾತಿಗಳಲ್ಲಿರುವ ಬಡವರ ಬಗೆಗಿನ ಕಾಳಜಿಯಿಂದ ಶಿಕ್ಷಣ, ಆರೋಗ್ಯ, ಉದ್ಯೋಗ ಮುಂತಾದವುಗಳ ಸಾರ್ವತ್ರೀಕರಣಕ್ಕೆ ಆಗ್ರಹಿಸುವ ಆಂದೋಲನ ಮಾತ್ರವೇ ಸಮಾಜದ ಆರೋಗ್ಯಕ್ಕೆ ಪೂರಕವಾದುದಾಗಿರುತ್ತದೆ. ಪ್ರತ್ಯೇಕತೆ ಮತ್ತು ತಾರತಮ್ಯಗಳ ಕಾರಣದಿಂದ ಉಂಟಾಗುವ ಅಂತರದ ನಿವಾರಣೆಗೆ ರಚನೆಯಾಗಿರುವ ವ್ಯವಸ್ಥೆಯೊಂದನ್ನು ಸಂಖ್ಯೆ ಮತ್ತು ಪ್ರಾಬಲ್ಯದಿಂದ ಅನುಕೂಲಕ್ಕೆ ತಕ್ಕಂತೆ ಬಗ್ಗಿಸುವ ಆಂದೋಲನ ಖಂಡಿತವಾಗಿಯೂ ಅಲ್ಲ. ಇಂತಹ ಬೆಳವಣಿಗೆಗಳು ಅನಪೇಕ್ಷಿತ.

(ಲೇಖಕಿ: ಸಾಮಾಜಿಕ ಕಾರ್ಯಕರ್ತೆ)

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಪೆಟ್ರೋಲ್ ಮತ್ತು ಡೀಸೆಲ್‌ನ ಮೇಲೆ ವಿಧಿಸಲಾಗುವ ತೆರಿಗೆಯಲ್ಲಿ ಹೆಚ್ಚು ಲಾಭವಾಗುವುದು ರಾಜ್ಯ ಸರ್ಕಾರಗಳಿಗೆ. ಕೇಂದ್ರ ಸರ್ಕಾರವು ಅತ್ಯಂತ ಕಡಿಮೆ ತೆರಿಗೆ ವಿಧಿಸುತ್ತಿದೆ. ಇದು ಜನರಿಗೆ ಅರ್ಥವಾಗಬೇಕು. ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ಬೆಲೆಯನ್ನು ಈ ರೀತಿ ಪ್ರದರ್ಶಿಸಬೇಕು. 'ಪೆಟ್ರೋಲ್ ಮೂಲ ಬೆಲೆ ₹30.91, ಕೇಂದ್ರ ತೆರಿಗೆ ₹16.50, ರಾಜ್ಯ ತೆರಿಗೆ ₹ 38.55, ಡೀಲರ್ ಕಮಿಷನ್ ₹6.50, ಒಟ್ಟು ₹ 92.05' ಎಂದು ಇಂಧನದ ಬೆಲೆಯನ್ನು ಪ್ರದರ್ಶಿಸಬೇಕು. ಆಗ ಬೆಲೆ ಏರಿಕೆಗೆ ಹೊಣೆ ಯಾರು ಎಂಬುದು ಜನರಿಗೆ ಗೊತ್ತಾಗುತ್ತದೆ ಎಂಬ ಒಕ್ಕಣೆ ಇರುವ ಪೋಸ್ಟ್‌ಗಳು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ವೈರಲ್ ಆಗಿದೆ. ಬಿಜೆಪಿಯ ಹಲವು ಕಾರ್ಯಕರ್ತರು ಈ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ.

ಈ ಪೋಸ್ಟ್ ಸಂಪೂರ್ಣ ತಪ್ಪು ಮಾಹಿತಿಯಿಂದ ಕೂಡಿದೆ. ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್‌ನ ಮೂಲ ಬೆಲೆ ₹24-30ರ ವರೆಗೆ ಇದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಆಗುವ ಏರಿಳಿತದ ಆಧಾರದ ಮೇಲೆ ಈ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೆ. ಈ ಬೆಲೆಯ ಮೇಲೆ ತೈಲ ಕಂಪನಿಗಳು ಸಂಸ್ಕರಣ ಶುಲ್ಕವನ್ನು ವಿಧಿಸುತ್ತಿವೆ. ಈ ಬೆಲೆಯ ಮೇಲೆ ಕೇಂದ್ರ ಸರ್ಕಾರವು ವಿಧಿಸುತ್ತಿರುವ ತೆರಿಗೆಯ ಮೊತ್ತ ₹31.98ರಷ್ಟು ಇದೆ. ದೇಶದ ಯಾವ ರಾಜ್ಯವೂ ಕೇಂದ್ರ ಸರ್ಕಾರ ವಿಧಿಸುತ್ತಿರುವುದಕ್ಕಿಂತಲೂ ಹೆಚ್ಚಿನ ಮೊತ್ತದ ತೆರಿಗೆ ವಿಧಿಸುತ್ತಿಲ್ಲ. ಕರ್ನಾಟಕದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ರಾಜ್ಯ ಸರ್ಕಾರವು ವಿಧಿಸುವ ತೆರಿಗೆಯ ಮೊತ್ತವು ಕ್ರಮವಾಗಿ ₹23.50 ಮತ್ತು ₹16.03ರ ಆಸುಪಾಸಿನಲ್ಲಿ ಇದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದೇಹಕ್ಕೆ ಕೊಡಬೇಕಾದ ನ್ಯಾಯ

ಕಾಯವನು ಮೃದ್ಭಾಂಡ ಮಾಂಸಪಿಂಡವೆನುತ್ತೆ |
ಹೇಯವೆಂದೆಂದೊಡಾತ್ಮಂಗಪ್ಪುದೇನು? ||
ಆಯುಧವನದನು ತೊರೆದಾತ್ಮನೇಂಗೈದಪನು ? |
ನ್ಯಾಯ ತನುವಿಗಮಿರಲಿ - ಮಂಕುತಿಮ್ಮ || 382 ||

ಪದ-ಅರ್ಥ: ಮೃದ್ಭಾಂಡ = ಮಣ್ಣಿನ ಮಡಕೆ, ಹೇಯವೆಂದೆಂ ದೊಡಾತ್ಮಂಗಪ್ಪುದೇನು = ಹೇಯವೆಂದು (ಅಸಹ್ಯವಾದದ್ದೆಂದು) + ಎಂದೊಡೆ (ಹೇಳಿದರೆ) + ಆತ್ಮಂಗೆ (ಆತ್ಮನಿಗೆ) + ಅಪ್ಪುದೇನು (ಆಗುವುದೇನು), ಆಯುಧವನದನು = ಆಯುಧವನು + ಅದನು, ತೊರೆದಾತ್ಮನೇಂಗೈದಪನು = ತೊರೆದು + ಆತ್ಮನು + ಏಂಗೈದಪನು (ಏನು ಮಾಡಿಯಾನು), ತನುವಿಗಮಿರಲಿ = ತನುವಿಗಂ (ದೇಹಕ್ಕೆ) + ಇರಲಿ.

ವಾಚ್ಯಾರ್ಥ: ಈ ದೇಹವನ್ನು ಮಣ್ಣಿನ ಮಡಕೆ, ಮಾಂಸದ ಮುದ್ದೆ ಎಂದು ಹೀಯಾಳಿಸುವುದರಿಂದ ಆತ್ಮನಿಗಾಗುವುದೇನು? ಅದರಂತೆ ತನ್ನ ಆಯುಧವಾದ ದೇಹವನ್ನು ತೊರೆದ ಆತ್ಮನಾದರೂ ಏನು ಮಾಡಲು ಸಾಧ್ಯ? ಆದ್ದರಿಂದ ದೇಹಕ್ಕೆ ನ್ಯಾಯ ಸಲ್ಲಬೇಕು.

ವಿವರಣೆ: ಮನುಷ್ಯನ ಬದುಕು ದೇಹವನ್ನು ಬೆಳೆಸುವಲ್ಲಿ, ರಕ್ಷಿಸುವಲ್ಲಿಯೇ ಕಳೆದು ಹೋಗುತ್ತದೆ. ಅದರ ಅವಶ್ಯಕತೆಗಳ ಪಟ್ಟಿ ಮುಗಿಯುವುದೇ ಇಲ್ಲ. ಕೆಲವೊಂದು ಬಾರಿ ಅದರ ಉಪದ್ರವವನ್ನು ತಡೆಯುವುದು ಬಲುಕಷ್ಟ. ಆದರೆ ಅದೊಂದು ಅದ್ಭುತ, ಅಸಾಮಾನ್ಯವಾದ ಉಪಕರಣ. ಇಡೀ ಪ್ರಪಂಚದ ಎಲ್ಲ ಅಂಶಗಳೂ ಸೂಕ್ಷ್ಮಾತಿಸೂಕ್ಷ್ಮ ರೂಪದಲ್ಲಿ ಸೇರಿ ದೇಹವನ್ನುಂಟು ಮಾಡಿವೆ. ಅದ್ದರಿಂದ ದೇಹವೊಂದು ಸೂಕ್ಷ್ಮ ಪ್ರಪಂಚ. ನಿಜ, ಅದರಲ್ಲಿ ಕೊಳಕಿದೆ, ರೋಗವಿದೆ, ಮುಪ್ಪಿದೆ, ಸಾವಿದೆ. ಹಾಗೆಂದರೆ ಅದು ಹೀನವಾದದ್ದೇ? ಅಲ್ಲ. ಆತ್ಮ ಮುಖ್ಯವೆಂದು ಬಗೆಯುವುದಾದರೆ ಅದನ್ನು ಅರಿಯುವುದು ದೇಹದ ಮೂಲಕವೇ ಅಲ್ಲವೇ? ಆತ್ಮದ ಆಯುಧ ದೇಹ. ಆಯುಧವೇ ಇಲ್ಲದೆ ಆತ್ಮ ಏನು ಮಾಡೀತು?

ಅಲ್ಲಮ ಪ್ರಭುವಿನ ಒಂದು ವಚನದ ಮಾತು ಬೆರಗು ಹುಟ್ಟಿಸುತ್ತದೆ. ನೂರು ಪುಟಗಳ ಬರಹ ಮಾಡದ ಪರಿಣಾಮವನ್ನು ವಚನದ ಒಂದು ಸಾಲು ಹೃದಯಕ್ಕೆ ಮುಟ್ಟಿಸುತ್ತದೆ. 'ಅರಗಿನ ದೇವಾಲಯದಲ್ಲಿ ಒಂದು ಉರಿಯ ಲಿಂಗವ ಕಂಡೆ' ಎಂಬುದು ಆ ಮಾತು. ದೇಹವೆಂಬುದು ಅರಗಿನ ದೇವಾಲಯ. ಇದೊಂದು ಅದ್ಭುತ ರೂಪಕ. ಅರಗಿನಿಂದ ಕಟ್ಟಡವನ್ನು ತುಂಬ ಆಕರ್ಷಕವಾಗಿ ಮಾಡಬಹುದು. ಅದನ್ನು ಹೇಗಾದರೂ ಮಣಿಸಿ, ಕರಗಿಸಿ ಅಲಂಕಾರವನ್ನಾಗಿ ಮಾಡಿಕೊಳ್ಳಬಹುದು. ಆದರೆ ಅದು ಅರಗಿನದಾದ್ದರಿಂದ ತುಂಬ ನಾಜೂಕು, ಉರಿಗೆ ಸುಟ್ಟು ಹೋಗುವಂಥದ್ದು. ಆದರೆ ಈ ಅರಗಿನ ದೇವಾಲಯದಲ್ಲಿ ಉರಿಯ ಲಿಂಗವಿದೆ. ಉರಿಯ ಲಿಂಗ ಆತ್ಮ. ಅದ್ಭುತವೆಂದರೆ ಎರಡೂ ಜೊತೆ ಜೊತೆಯಾಗಿವೆ. ಅರಗಿಗೆ ಉರಿಯನ್ನು ಎದುರಿಸುವ, ತಡೆಯುವ ಶಕ್ತಿ ಇಲ್ಲ. ಕ್ಷಣದಲ್ಲೇ ಉರಿದು ಭಸ್ಮವಾಗುವುದು ಅದರ ಗತಿ. ಆದರೆ ಅರಗಿನ ದೇವಾಲಯವೆಂಬ ದೇಹ, ಆತ್ಮವೆಂಬ ಉರಿಯನ್ನು ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡಿದೆ. ಇದು ಪರಮಾಶ್ಚರ್ಯವಲ್ಲವೇ? ಇದು ದೇಹದ ಶಕ್ತಿಯೂ ಹೌದು, ಆತ್ಮದ ಉರಿಯ ಉದಾರತೆಯೂ ಹೌದು.

ಕಗ್ಗದ ಮಾತೂ ಅದೇ. ದೇಹ ನಿಷ್ಪ್ರಯೋಜಕ ಎನ್ನುವುದಾದರೆ, ಆತ್ಮಕ್ಕೆ ಸ್ಥಾನವೆಲ್ಲಿ? ಮತ್ತು ದೇಹವಿಲ್ಲದೆ ಆತ್ಮ ಏನು ಮಾಡಲು ಸಾಧ್ಯ? ಆದ್ದರಿಂದ ದೇಹಕ್ಕೆ ನೀಡಬೇಕಾದ ಮಹತ್ತನ್ನು, ಗೌರವವನ್ನು, ನ್ಯಾಯವನ್ನು ನೀಡಲೇಬೇಕು. ಅದನ್ನು ಜತನದಿಂದ ಕಾಪಾಡಿಕೊಳ್ಳಬೇಕು. ❖

ದಿನ ಭವಿಷ್ಯ

ಸೋಮವಾರ 22 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಬಿಷ ದಶಮೀ ಗಂ. 18-10 (ಹ. 2-02) ಸೋಮವಾರ ನಿತ್ಯ ನಕ್ಷತ್ರ ಮೃಗಶಿರ ಗಂ 3-46 (ಬೆ. 8-17) ಪ್ರೀತಿ ನಾಮ ಯೋಗ ಗಂ 50-43 ಗರಜ ಕರಣ ಗಂ 18-10 ವಿಷ. ಗಂ. 26-9 ಅಮೃತ ಗಂ. 51-45, ರಾಹುಕಾಲ: ಬೆ. ಗಂ. 7-30 ರಿಂದ 9-00, ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ: ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-44 ಸೂರ್ಯಾಸ್ತ: 6-23 ಅದೃಷ್ಟ ಸಂಖ್ಯೆ 1 9

ಮೇಷ: ಹಿತೈಷಿಗಳ ಭೇಟಿ ಸಾಧ್ಯತೆ. ವ್ಯಾಪಾರದಲ್ಲಿ ಲಾಭ. ಸ್ನೇಹಿತರು ಮತ್ತು ಕುಟುಂಬ ಸದಸ್ಯರಿಂದ ಉತ್ತಮ ನೆರವು. ದಿನದ ಮಟ್ಟಿಗೆ ಪ್ರಯಾಣ ಸುಖನೀಡಲಾರದು. ಸ್ತ್ರೀಯರ ಇಷ್ಟಾರ್ಥಗಳು ನೆರವೇರಲಿವೆ.

ವೃಷಭ: ಉದ್ಯೋಗದಲ್ಲಿ ಸ್ಥಾನ ಅಥವಾ ಹುದ್ದೆಯಲ್ಲಿ ಬದಲಾವಣೆ ಕುರಿತು ಹಿರಿಯರೊಂದಿಗೆ ಚರ್ಚಿಸಲಿದ್ದೀರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶದ ಸುದ್ದಿ ಕೇಳಿಬರಲಿದೆ. ಅವಕಾಶಗಳ ಸದುಪಯೋಗ ಪಡಿಸಿಕೊಳ್ಳಿ.

ಮಿಥುನ: ದೂರದೂರಿಗೆ ಪ್ರಯಾಣ. ಸಾಮಾಜಿಕ ಗೌರವಕ್ಕೆ ಪಾತ್ರರಾಗಲಿದ್ದೀರಿ. ವ್ಯಾಪಾರದಲ್ಲಿ ಲಾಭದ ನಿರೀಕ್ಷೆ. ಮನಸ್ಸಿಗೆ ನೆಮ್ಮದಿ.

ಕರ್ಕಾಟಕ: ಕುಟುಂಬದ ಜಟಿಲ ಸಮಸ್ಯೆಗಳನ್ನು ಜಾಣ್ಮೆಯಿಂದ ಬಗೆಹರಿಸಿ ಪ್ರಶಂಸೆಗೆ ಪಾತ್ರರಾಗುವಿರಿ. ಅಧಿಕ ಧನಾಗಮನ. ಬಂಧುಗಳ ಸತ್ಕಾರಕ್ಕಾಗಿ ಅಪಾರ ವೆಚ್ಚ ಭರಿಸಬೇಕಾದೀತು.

ಸಿಂಹ: ಉತ್ತಮ ದುಡಿಮೆ ಮಾಡಿದ್ದೀರಿ. ನಿತ್ಯದ ಕೆಲಸಗಳಿಂದ ತುಸು ವಿಶ್ರಾಂತಿ ಅಗತ್ಯ. ಪ್ರೀತಿಪಾತ್ರರು ಹಾಗೂ ಗೆಳೆಯರ ಜೊತೆ ಸಂತಸದ ಸಮಯ ಕಳೆಯಲಿದ್ದೀರಿ. ಹಿತೈಶಿಗಳ ಆಗಮನ ಸಂತಸ.

ಕನ್ಯಾ: ದಾರ್ಶನಿಕ ಸಂತರ ಸಮಾಗಮದಿಂದ ಆಧ್ಯಾತ್ಮ ಜೀವನಕ್ಕೆ ಹೊಸ ಆಯಾಮ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶ. ವೈಕ್ತಿಕ ಸಮಸ್ಯೆ ಬಗೆಹರಿದು ಮನೋಲ್ಲಾಸ ಮೂಡಲಿದೆ.

ತುಲಾ: ಸಾಮಾಜಿಕ ಕಾರ್ಯ ಚಟುವಟಿಕೆ, ಮನರಂಜನೆ, ಸಪತ್ನಿಕರಾಗಿ ಭೋಜನ ಕೂಟಗಳಲ್ಲಿ ಭಾಗವಹಿಸಲಿದ್ದೀರಿ. ದೈವರಕ್ಷೆ ಇರುವುದರಿಂದ ಯಶಸ್ಸು. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯ.

ವೃಶ್ಚಿಕ: ಸನ್ಮಾರ್ಗದಲ್ಲಿ ಸಾಗುವುದರಿಂದ ಕುಟುಂಬ ಬಾಧ್ಯತೆಗಳ ನಿರ್ವಹಣೆ ಸರಾಗ. ಅವಿವಾಹಿತರಿಗೆ ಸಂಬಂಧಗಳು ಕೂಡಿಬರಲಿದೆ. ಮನೆಯವರೊಂದಿಗೆ ಸಂಬಂಧ ಉತ್ತಮಗೊಳ್ಳಲಿದೆ.

ಧನು: ಕಲಾವಿದರಿಗೆ ಹೆಚ್ಚಿನ ಸ್ಥಾನಮಾನ ಲಭ್ಯ. ಕೃಷಿ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಆದಾಯ. ಆಸ್ತಿ ಖರೀದಿಯ ಸಾಧ್ಯತೆ. ಕೆಲಸ ಕಾರ್ಯಗಳನ್ನು ವಿಶ್ವಾಸದಿಂದ ಮಾಡಿ.

ಮಕರ: ಬಾಧ್ಯತೆಗಳ ನಿರ್ವಹಣೆಯಲ್ಲಿ ಸ್ಪಷ್ಟ ನಿಲುವು. ಸಂಶೋಧನೆಗೆ ಪ್ರೋತ್ಸಾಹ ದೊರಕುವ ಸಾಧ್ಯತೆ. ಬರವಣಿಗೆಯಲ್ಲಿ ನಿರತರಾದವರಿಗೆ ದ್ರವ್ಯಾನುಕೂಲ. ವೈವಾಹಿಕ ವ್ಯವಹಾರಗಳಿಗೆ ಚಾಲನೆ ದೊರಕಲಿದೆ.

ಕುಂಭ: ಕಾರ್ಯಕ್ಷೇತ್ರದಲ್ಲಿ ಅನೇಕ ರೀತಿಯ ಸಂಪರ್ಕ ಸ್ನೇಹ ವಿಶ್ವಾಸಗಳು ಮೂಡಿ ಮುನ್ನಡೆಗೆ ನಾಂದಿಯಾಗಲಿದೆ. ವೃತ್ತಿರಂಗದಲ್ಲಿ ಗುರಿ ಸಾಧನೆಗೆ ಹೊಸ ಹಾದಿಯನ್ನು ಕ್ರಮಿಸಬೇಕಾದೀತು. ನಿರಾಶರಾಗದೆ ಮುನ್ನುಗ್ಗಿ.

ಮೀನ: ವಾಹನ ವಹಿವಾಟುಗಳಲ್ಲಿ ನಿರೀಕ್ಷೆಯಂತೆ ಲಾಭ. ಔದ್ಯೋಗಿಕ ವಿಷಯಗಳಲ್ಲಿ ಅನುಕೂಲ. ವಿವಾಹ ಸಂಬಂಧಿ ಮಾತುಕತೆಗಳು ಅನುಕೂಲಕರವಾಗಿ ಪರಿಣಮಿಸಲಿವೆ.

ನಿಮ್ಮ ಜನ್ಮದಿನ 22-ಫೆಬ್ರುವರಿ ಈ ದಿನವು ಅತ್ಯಂತ ಶುಭಕರವಾಗಿದ್ದು, ವಾಣಿಜ್ಯ ಬೆಳೆಗಳಿಂದಾಗಿ ರೈತಾಪಿ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭದ ನಿರೀಕ್ಷೆ ಕಂಡುಬರುವುದು. ಧಾರ್ಮಿಕ ವೃತ್ತಿಯಲ್ಲಿರುವವರಿಗೆ ಉನ್ನತ ಸ್ಥಾನಮಾನ ಲಭ್ಯವಾಗಲಿದೆ. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದಲ್ಲಿ ಯಶಸ್ಸು.

ಪದಬಂಧ 4516 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಇಹಲೋಕಕ್ಕೆ ಸಂಬಂಧಿಸಿದ್ದು (3)
3. ಪುಸ್ತಕದ ಬಳಿಯಿರಿಸಿರುವ ತಲೆ (3)
5. ಇದು ಸೂರ್ಯನ ರಶ್ಮಿ (5)
6. ಕಡತ ತರುವಿಕೆಯಲ್ಲಿನ ನಿಧಾನ! (2)
8. ಶುನಕ ಇಲ್ಲಿದೆ (2)
9. ನಾಗರಿಕನ ಹತ್ತಿರವಿರುವ ಸ್ತ್ರೀ (2)
10. ಆಕಳಿನ ಮರಿ ಇಲ್ಲಿದೆ (2)
14. ಮನುಷ್ಯನನ್ನು ತಿನ್ನುವ ಪ್ರಾಣಿ (5)
15. ಸಮುದ್ರ ಇಲ್ಲಿ ಕಾಣುತ್ತಿದೆ (3)
16. ತೊಂದರೆ ಹೀಗೆ ಬಂದಿದೆ (3)

ಮೇಲಿಂದ ಕೆಳಕ್ಕೆ
1. ಇಂದ್ರನ ಆನೆಯಿದು (4)
2. ಕೈ ಮುಂದಿರಿಸಿದಾಗ ಭಲ್ಲೂಕ ಬಂದುಬಿಟ್ಟಿತಲ್ಲಾ? (3)
3. ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
4. ಇನ್ನೂ ಬಲಿಯದಿರುವ ಕಾಯಿ (4)
7. ಅಗಲ ಬಾಯುಳ್ಳ ಲೋಹದ ಪಾತ್ರೆ (3)
8. ಈತ ದೇವರನ್ನು ನಂಬದವನು (3)
9. ನಡುವೆ ಗರಿ ಹಿಡಿದಿರುವ ಸುಸಂಸ್ಕೃತ (4)
11. ಲಂಚದೊಡನೆ ಬರುವ ಜೋಡು ನುಡಿ (4)
12. ಪ್ರವಾಹ ಇಲ್ಲಿ ಕಾಣುತ್ತಿದೆ (3)
13. ಈತ ಕೆಟ್ಟ ಕವಿ (3)



4515ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಉಪ್ಪಲಿಗ 5.ರಾಯಸ 6.ವಾತಾಯನ 8.ರಸಾಭಾಸ 12.ಜನಹಿತ 14.ಪರಧನ 15.ಬಲ್ಲಿದ 16.ರಸಾಯನ

ಮೇಲಿಂದ ಕೆಳಕ್ಕೆ: 1.ಪರಾವಲಂಬಿ 2.ಕಸವರ 3.ಉಪವಾಸ 4.ಗಹನ 7.ಯತ್ವ 9.ಭಾಜನ 10.ಒಡಕುದನಿ 11.ತೀರ 12.ಜನಮನ 13.ತರ್ಕಬದ್ಧ 14.ಪಗಾರ

ಸುಡೊಕು 4902

				5			2	1
			2		1	7	9	
	1			9				5
5		7			9	1		
	6			2	5		8	
9		8	6			5		2
1		2		8			6	
			5		6	2		3
6		3		4			5	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4901 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

21ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಜೆ. ಎಮ್. ಕರಿಯಣ್ಣ
24-12-1936 – 22-02-2000
ಸೈಂಟ್ ಸೋಫಿಯಾಸ್ ಕಾನ್ವೆಂಟ್ ಹೈಸ್ಕೂಲ್, ನಾಗರಬಾವಿ ಮತ್ತು ಎಸ್.ಎಮ್.ಕೆ ಗ್ರಾನೈಟ್ಸ್ ಇದರ ಸಂಸ್ಥಾಪಕರು
ನಿಮ್ಮ ಸಹನೆ, ಧೈರ್ಯ, ಛಲ, ವಾತ್ಸಲ್ಯ ಮತ್ತು ತ್ಯಾಗ ಭಾವನೆಗಳೇ ನಮ್ಮ ದಾರಿದೀಪಗಳಾಗಲಿ.
ಸದಾ ನಿಮ್ಮನ್ನು ಸ್ಮರಿಸುವ ಕುಟುಂಬವರ್ಗದವರು ಮತ್ತು ಸಿಬ್ಬಂಧಿ ವರ್ಗ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಚಿರಸ್ಮರಣೆ

ಕೆ. ಶೇಖರ್
ಜನನ: 27-1-1982 ಮರಣ: 22-2-2010
ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಶ್ರೀ ಬಿ.ಹೆಚ್. ಕೆಂಪಣ್ಣನವರ ಪುತ್ರ
ಜಿಂಕೆಬಚ್ಚಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂ.ಗ್ರಾ. ಜಿಲ್ಲೆ.
ನೀನು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷವಾದರೂ ನಿನ್ನ ನೆನಪು ಹಚ್ಚಹಸಿರಾಗಿ ಉಳಿದಿದೆ. ನಿನ್ನ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ನಿನ್ನ ತಂದೆ, ತಾಯಿ ಮತ್ತು ಕುಟುಂಬ
Mob: 8722503858

ದುಃಖದ ವಾರ್ತೆ

ಶ್ರೀಮತಿ ವೆಂಕಟರಾಜಮ್ಮ ನವರು
ಕೊಡ್ಲು ಗ್ರಾಮದ ದಿವಂಗತ ಪಿ. ನರಸಿಂಗರೆಡ್ಡಿರವರ ಧರ್ಮಪತ್ನಿ ಇವರು ದಿ. 21.02.2021 ಭಾನುವಾರ ಮದ್ಯಾಹ್ನ 2.18ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಅಂತಿಮ ಸಂಸ್ಕಾರವನ್ನು ದಿ. 22.02.2021ರಂದು ಸೋಮವಾರ ಮದ್ಯಾಹ್ನ 12 ಗಂಟೆಗೆ ಕೊಡ್ಲು ಗ್ರಾಮದ ಟ್ರೊಪಿಕಲ್ ಪ್ಯಾರಡೈಸ್ ಬಡಾವಣೆಯಲ್ಲಿ ನೆಡೆಯಲಿದೆ.
ದುಃಖತಪ್ತರು:– ಕುಟುಂಬ ವರ್ಗ

ಸಿಎನ್‌ಜಿ ವಾಹನ ಮಾರುಕಟ್ಟೆ ವಿಸ್ತರಣೆ: ಮಾರುತಿ

ನವದೆಹಲಿ (ಪಿಟಿಐ): 'ಪೆಟ್ರೋಲ್, ಡೀಸೆಲ್ ದರ ಏರಿಕೆ ಆಗುತ್ತಿರುವ ನಡುವೆಯೇ ಮಾರುತಿ ಸುಜುಕಿ ಇಂಡಿಯಾದ ಸಿಎನ್‌ಜಿ ವಾಹನಗಳ ಬೇಡಿಕೆ ಹೆಚ್ಚುತ್ತಿದ್ದು ಇದರ ಪ್ರಯೋಜನ ಪಡೆದುಕೊಳ್ಳಲು ಕಂಪನಿಯು ಮುಂದಾಗಿದೆ' ಎಂದು ಕಂಪನಿಯ ಮಾರುಕಟ್ಟೆ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಅವರು ತಿಳಿಸಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಿಎನ್‌ಜಿ ವಾಹನಗಳಲ್ಲಿ ಶೇಕಡ 50ರಷ್ಟು ಬೆಳವಣಿಗೆಯನ್ನು ಕಂಪನಿ ನಿರೀಕ್ಷಿಸುತ್ತಿದೆ.

'ಏಪ್ರಿಲ್–ಜನವರಿ ಅವಧಿಯಲ್ಲಿ ಸಿಎನ್‌ಜಿ ವಾಹನಗಳ ಉದ್ಯಮವು ಶೇ 37ರಷ್ಟು ಬೆಳವಣಿಗೆ ಕಂಡಿದೆ. ಸಿಎನ್‌ಜಿ ಉತ್ತಮ ಬೆಳವಣಿಗೆ ಕಾಣುತ್ತಿದೆ ಎನ್ನುವುದು ಇದರ ಅರ್ಥ' ಎಂದು ಶ್ರೀವಾಸ್ತವ ತಿಳಿಸಿದ್ದಾರೆ.

ಇದು ತೆರಿಗೆ ಉಳಿಸುವ ಕಾಲ

ಹಣಕಾಸು ಸಾಕ್ಷರತೆ
ಪ್ರಮೋದ್ ಬಿ.ಪಿ.

'ತೆರಿಗೆ ಉಳಿತಾಯದ ಹೂಡಿಕೆಗಳಿಗೆ ಮಾರ್ಚ್ 31ರತನಕ ಸಮಯ ಇರೋವಾಗ, ಈಗಲೇ ಅದರ ಬಗ್ಗೆ ಚಿಂತೆ ಯಾಕೆ...' ಈ ಬಗೆಯ ಯೋಚನೆಯಲ್ಲಿ ನೀವು ಇದ್ದರೆ, ಕೊನೆ ಗಳಿಗೆಯಲ್ಲಿ ಉಳಿತಾಯದ ಗುರಿ ಮುಟ್ಟಲು ಸಾಧ್ಯವಿಲ್ಲ. ಇನ್ನಿರುವ ಒಂದು ತಿಂಗಳ ಅವಧಿಯನ್ನಾದರೂ ಹೂಡಿಕೆಗೆ ವ್ಯವಸ್ಥಿತವಾಗಿ ಬಳಸಿಕೊಂಡರೆ, ತೆರಿಗೆ ಉಳಿಸುವ ಹಾದಿ ಸುಗಮವಾಗುತ್ತದೆ. ಕಾನೂನಿನ ಅನ್ವಯ ತೆರಿಗೆ ಉಳಿಸಲು ಇರುವ ಮಾರ್ಗಗಳ ಕುರಿತ ಮಾಹಿತಿ ಇಲ್ಲಿದೆ.

ಸೆಕ್ಷನ್ 80ಸಿ: ಆದಾಯ ತೆರಿಗೆಯ ಕಾಯ್ದೆಯ ಸೆಕ್ಷನ್ 80ಸಿ ಅಡಿಯಲ್ಲಿ ₹ 1.50 ಲಕ್ಷದವರೆಗೆ ತೆರಿಗೆ ವಿನಾಯಿತಿಯ ಸೌಲಭ್ಯ ಪಡೆಯಬಹುದು. ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್), ಸುಕನ್ಯಾ ಸಮೃದ್ಧಿ ಯೋಜನೆ (ಎಸ್‌ಎಸ್‌ವೈ), ಜೀವ ವಿಮೆ ಪ್ರೀಮಿಯಂ, ಯುಲಿಪ್ ಯೋಜನೆ, ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ) , ಐದು ವರ್ಷಗಳ ಅವಧಿ ಠೇವಣಿ (ಎಫ್.ಡಿ.), ಹಿರಿಯ ನಾಗರಿಕರ ಉಳಿತಾಯ ಯೋಜನೆ, ಮಕ್ಕಳ ಶಾಲೆಯ ಬೋಧನಾ ಶುಲ್ಕ, ಮನೆ ಸಾಲದ ಮೇಲಿನ ಅಸಲು ಪಾವತಿಗೆ ಈ ವಿನಾಯಿತಿ ಪಡೆಯಬಹುದು.

ಸೆಕ್ಷನ್ 80ಡಿ: ಈ ಸೆಕ್ಷನ್ ಅಡಿಯಲ್ಲಿ ಕುಟುಂಬಕ್ಕೆ (ಸ್ವಂತಕ್ಕೆ, ಪತ್ನಿ, ಮಕ್ಕಳಿಗೆ) ಪಡೆಯುವ ಆರೋಗ್ಯ ವಿಮೆಗೆ ₹ 25 ಸಾವಿರದ ವರೆಗೆ ವಿನಾಯಿತಿ ಇದೆ. 60 ವರ್ಷ ಮೇಲ್ಪಟ್ಟ ಪೋಷಕರಿಗೆ ವಿಮೆ ಮಾಡಿಸಿದ್ದರೆ ₹ 50 ಸಾವಿರದವರೆಗೆ ತೆರಿಗೆ ಅನುಕೂಲವಿದೆ.

ಸೆಕ್ಷನ್ 80ಇ: ಸ್ವಂತಕ್ಕೆ, ಪತ್ನಿ, ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಸಾಲ ಪಡೆದಿದ್ದರೆ ನಿಗದಿತ ಆರ್ಥಿಕ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೇಲೆ ವಿನಾಯಿತಿ ಸಿಗುತ್ತದೆ.

ಸೆಕ್ಷನ್ 80ಜಿಜಿ: ಬಾಡಿಗೆಗೆ ಪಡೆದಿರುವ ಮನೆಗೆ ವಾರ್ಷಿಕ ₹ 60 ಸಾವಿರದವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಈ ವಿನಾಯಿತಿ ಪಡೆಯಬೇಕಾದಲ್ಲಿ ವೇತನದಲ್ಲಿ ಬಾಡಿಗೆ ಭತ್ಯೆ (ಎಚ್‌ಆರ್‌ಎ) ಪಡೆಯುತ್ತಿರಬಾರದು ಮತ್ತು ವಾಸದ ಸ್ಥಳದಲ್ಲಿ ಸ್ವಂತ ಮನೆ ಹೊಂದಿರಬಾರದು.

ಸೆಕ್ಷನ್ 80ಟಿಟಿಎ, 80ಟಿಟಿಬಿ: ವ್ಯಕ್ತಿ ಗಳಿಸಿರುವ ₹ 10 ಸಾವಿರದ ವರೆಗಿನ ಬಡ್ಡಿ ಆದಾಯಕ್ಕೆ ವಿನಾಯಿತಿ ಲಭ್ಯ. ಅಂಚೆ ಕಚೇರಿ, ಉಳಿತಾಯ ಖಾತೆ ಹೂಡಿಕೆಗಳ ಮೇಲೆ ಬರುವ ಬಡ್ಡಿಗೆ ಇದು ಅನ್ವಯ. ಸೆಕ್ಷನ್ 80 ಟಿಟಿಬಿ ಅಡಿಯಲ್ಲಿ ಹಿರಿಯ ನಾಗರಿಕರಿಗೆ ಉಳಿತಾಯ ಖಾತೆ ಮತ್ತು ಅವಧಿ ಠೇವಣಿ ಮೇಲೆ ಸಿಗುವ ಬಡ್ಡಿಗೆ ₹ 50 ಸಾವಿರದ ತನಕ ವಿನಾಯಿತಿ ಇದೆ.

ಸೆಕ್ಷನ್ 80 ಸಿಸಿಡಿ (1) ಮತ್ತು ಸೆಕ್ಷನ್ 80 ಸಿಸಿಡಿ (1ಬಿ): ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಿ ಈ ಅನುಕೂಲ ಪಡೆಯಬಹುದು. ನಿಮ್ಮ ವೇತನದ ಶೇ 10ರಷ್ಟು ವಿನಾಯಿತಿ ಪಡೆಯಲು ಅವಕಾಶವಿದೆ. ಸ್ವಂತ ಉದ್ಯೋಗಿಗಳಿಗೆ ಶೇ 20ರಷ್ಟು ವಿನಾಯಿತಿ ಸಿಗುತ್ತದೆ. 80 ಸಿಸಿಡಿ (1ಬಿ) ಅಡಿಯಲ್ಲಿ ಹೆಚ್ಚುವರಿ ₹ 50 ಸಾವಿರದವರೆಗಿನ ಎನ್‌ಪಿಎಸ್ ಹೂಡಿಕೆಗೆ ವಿನಾಯಿತಿ ಇದೆ.

ಸೆಕ್ಷನ್ 24(ಬಿ), ಸೆಕ್ಷನ್ 80 ಇಇ, ಸೆಕ್ಷನ್ 80 ಇಇಎ: 1999ರ ನಂತರ ಪಡೆದಿರುವ ಗೃಹ ಸಾಲಗಳ ಮೇಲಿನ ಬಡ್ಡಿ ಪಾವತಿಗೆ ಆದಾಯ ತೆರಿಗೆಯ ಸೆಕ್ಷನ್ 24(ಬಿ) ಅಡಿಯಲ್ಲಿ ₹ 2 ಲಕ್ಷದವರೆಗೆ ತೆರಿಗೆ ವಿನಾಯಿತಿ ಇದೆ. ಮೊದಲ ಬಾರಿಗೆ ಮನೆ ಖರೀದಿಸುವವರು ಸೆಕ್ಷನ್ 80ಇಇ ಅಡಿಯಲ್ಲಿ ಹೆಚ್ಚುವರಿ ₹ 50 ಸಾವಿರದವರೆಗೆ ವಿನಾಯಿತಿ ಪಡೆಯಬಹುದು. ₹ 35 ಲಕ್ಷಕ್ಕಿಂತ ಕಡಿಮೆ ಸಾಲ ಪಡೆದಿದ್ದು ನಿಮ್ಮ ಆಸ್ತಿಯ ಮೌಲ್ಯ ರೂ. 50 ಲಕ್ಷ ಇದ್ದಲ್ಲಿ ಮಾತ್ರ ಈ ವಿನಾಯಿತಿ ಲಭ್ಯ. ಜತೆಗೆ 2017ನೇ ವರ್ಷದಲ್ಲಿ ಅಥವಾ ನಂತರದಲ್ಲಿ ಪಡೆದಿರುವ ಸಾಲಗಳಿಗೆ ಮಾತ್ರ ಇದು ಮಾನ್ಯ.

ಸೆಕ್ಷನ್ 24(ಬಿ)ನಲ್ಲಿ ಸಾಲದ ಮೇಲಿನ ಬಡ್ಡಿ ಪಾವತಿಗೆ ₹ 2 ಲಕ್ಷದ ವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಇದಕ್ಕಿಂತ ಹೆಚ್ಚಿಗೆ ಬಡ್ಡಿ ಕಟ್ಟಿದ್ದರೆ ಸೆಕ್ಷನ್ 80 ಇಇಎ ಅಡಿಯಲ್ಲಿ ವಿನಾಯಿತಿ ಲಭ್ಯ. 2019ರಲ್ಲಿ ಜಾರಿಗೆ ಬಂದಿರುವ ಈ ಸೆಕ್ಷನ್ ಅಡಿಯಲ್ಲಿ ನೀವು ₹ 1.5 ಲಕ್ಷದವರೆಗೆ ಹೆಚ್ಚುವರಿಯಾಗಿ ಗೃಹ ಸಾಲದ ಮೇಲಿನ ಬಡ್ಡಿ ಪಾವತಿಗೆ ವಿನಾಯಿತಿ ಪಡೆಯಬಹುದು. ಹಣಕಾಸು ವರ್ಷ 2020ರಲ್ಲಿ ಸಾಲ ಪಡೆದಿದ್ದು, ಮನೆಯ ನೋಂದಣಿ ಮೊತ್ತ ₹ 45 ಲಕ್ಷದ ಒಳಗಿದ್ದರೆ ಮಾತ್ರ ಈ ಅನುಕೂಲ ಸಿಗುತ್ತದೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಲಾಭ ಗಳಿಕೆಯತ್ತ ಚಿತ್ತ, ಸೂಚ್ಯಂಕ ಕುಸಿತ

ಷೇರುಪೇಟೆಯಲ್ಲಿ ಲಾಭ ಗಳಿಕೆಯತ್ತ ಹೂಡಿಕೆದಾರರು ಗಮನ ಹರಿಸಿರುವುದರಿಂದ ಸೂಚ್ಯಂಕಗಳು ಸತತ ಎರಡನೆಯ ವಾರವೂ ಕುಸಿತ ಕಂಡಿವೆ. 50,889 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಶೇ 1.2ರಷ್ಟು ಕುಸಿತ ದಾಖಲಿಸಿದ್ದರೆ 14,981 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.2ರಷ್ಟು ತಗ್ಗಿದೆ. ಸೆನ್ಸೆಕ್ಸ್ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 0.63ರಷ್ಟು ಮತ್ತು ಶೇ 1.23ರಷ್ಟು ಹೆಚ್ಚಳವಾಗಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,408.26 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಹೂಡಿಕೆದಾರರು ₹ 6,283.73 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ವಲಯವಾರು ಪ್ರಗತಿ ನೋಡಿದಾಗ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 10.7ರಷ್ಟು ಜಿಗಿದಿದ್ದರೆ ನಿಫ್ಟಿ ಎನರ್ಜಿ ಸೂಚ್ಯಂತ ಶೇ 5ರಷ್ಟು ಹೆಚ್ಚಳ ದಾಖಲಿಸಿದೆ. ಆದರೆ ಫಾರ್ಮಾ ಮತ್ತು ವಾಹನ ವಲಯ ತಲಾ ಶೇ 3ರಷ್ಟು ಇಳಿಕೆ ದಾಖಲಿಸಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಗೇಲ್ ಶೇ 9.4ರಷ್ಟು, ಪವರ್ ಗ್ರಿಡ್ ಶೇ 9.2ರಷ್ಟು, ಎನ್‌ಟಿಪಿಸಿ ಶೇ 8.6ರಷ್ಟು, ಒಎನ್‌ಜಿಸಿ ಶೇ 8.4ರಷ್ಟು, ಅದಾನಿ ಪೋರ್ಟ್ಸ್ ಶೇ 6ರಷ್ಟು ಏರಿಕೆ ದಾಖಲಿಸಿವೆ. ಐಷರ್ ಮೋಟರ್ಸ್ ಶೇ 7ರಷ್ಟು, ನೆಸ್ಲೆ ಇಂಡಿಯಾ ಶೇ 5.3ರಷ್ಟು ಡಿವೀಸ್ ಲ್ಯಾಬ್ ಶೇ 5.3ರಷ್ಟು, ಸಿಪ್ಲಾ ಶೇ 4.9ರಷ್ಟು ಮತ್ತು ಟೈಟನ್ ಶೇ 4.6ರಷ್ಟು ಕುಸಿತ ಕಂಡಿವೆ.

ಐಪಿಒ: ಹೆರನ್ ಬಾ ಕಂಪನಿಯ ಐಪಿಒ ಫೆಬ್ರವರಿ 23ರಿಂದ 25ರವರೆಗೆ ನಡೆಯಲಿದೆ.

ಮುನ್ನೋಟ: ಬಜೆಟ್ ಕಾರಣದಿಂದ ಫೆಬ್ರವರಿ ತಿಂಗಳ ಮೊದಲ ಎರಡು ವಾರಗಳಲ್ಲಿ ಏರಿಕೆ ಹಾದಿಯಲ್ಲಿದ್ದ ಷೇರುಪೇಟೆಯಲ್ಲೀಗ ನಿಧಾನಗತಿ ಕಂಡುಬಂದಿದೆ. ಸೂಚ್ಯಂಕಗಳಲ್ಲಿ ಏರಿಳಿತದ ಹಾದಿ ಸದ್ಯಕ್ಕೆ ಮುಂದುವರಿಯಲಿದೆ. ಜಾಗತಿಕವಾಗಿ ಅಥವಾ ಸ್ಥಳೀಯವಾಗಿ ಮಾರುಕಟ್ಟೆಗೆ ಶಕ್ತಿ ತುಂಬುವಂತಹ ಮಹತ್ತರ ಬೆಳವಣಿಗೆಗಳು ಆಗದಿದ್ದಲ್ಲಿ ಸೂಚ್ಯಂಕಗಳಲ್ಲಿ ಮಂದಗತಿ ಕಂಡುಬರಲಿದೆ. ಲಾಭ ನೀಡದ, ಕಳಪೆ ಸಾಧನೆ ತೋರಿರುವ ಷೇರುಗಳನ್ನು ಮಾರಾಟ ಮಾಡಿ, ಸೂಚ್ಯಂಕ ಕುಸಿದಂತೆ ಗುಣಮಟ್ಟದ ಕಂಪನಿಗಳ ಷೇರುಗಳನ್ನು ಖರೀದಿಸಲು ಹೂಡಿಕೆದಾರರು ಗಮನಹರಿಸುವುದು ಸೂಕ್ತ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು/ ಎನ್.ಪಿ.ಎ/ ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 96257-68775.

ಭವಿಷ್ಯ

Astrology

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರಿಪುರುಷ ಪ್ರೇಮ,ಸಂತಾನ,ವಿವಾಹ, ಶತ್ರದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

★॥(ಉಚಿತ ಭವಿಷ್ಯ)॥★ ಶ್ರೀಬನಶಂಕರಿದೇವಿ ಜ್ಯೋತಿಷ್ಯಾಲಯ ರಾಘವೇಂದ್ರಭಟ್ ವ್ಯಾಪಾರ, ಹಣಕಾಸು,ಪ್ರೇಮ ವಿಚಾರ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಕ್ಷಣಮಾತ್ರದಲ್ಲಿ ಪರಿಹಾರ. 8105852273

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷೀತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

ನಿಮ್ಮಾ ವುದೇ ಘೋರ ನಿಗೂಢ ಗುಪ್ತ ಸಮಸ್ಯೆಗಳಿಗೆ ಕೇವಲ 30ನಿಮಿಷಗಳಲ್ಲಿ ಪರಿಹಾರ ಸೂಚಿಸುತ್ತಾರೆ. ಉಚಿತವಾಗಿ ಸ್ತ್ರೀಪುರುಷ ವಶೀಕರಣವನ್ನು ಮಾಡಿಕೊಡುತ್ತಾರೆ. ಅಯ್ಯಪ್ಪ ಟೆಂಪಲ್ ಪಕ್ಕದಲ್ಲಿ ಮೆಟ್ರೋ ಸ್ಟೇಶನ್ ಹತ್ತಿರ, ಶ್ರೀರಾಂಪುರ ಬೆಂಗಳೂರು. 9845702800

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ, ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ನಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 9ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

TATA MOTORS, ಟಯೋಟಾ, ಬ್ರಿಟಾನಿಯಾ, TVS ಗಳಿಗೆ 7th,SSLC, PUC ಡಿಗ್ರಿಯವರುಗಳು, ITI ನವರುಗಳು,ನೇರನೇಮಕಾತಿಯಿದೆ. 16,500-52,000/- ವಸತಿಯೂಟವಿದೆ. 7795048129, 7795049766

ಸುವರ್ಣಾವಕಾಶ ಪ್ರತಿಷ್ಠಿತ ಕಂಪನಿಗಳಿಗೆ ಹಾಗೂ ಖಾಸಗಿ ಆಫೀಸ್‌ಗಳ ಹುದ್ದೆಗಳಿಗೆ 7th, SSLC, PUC,ITI, Diploma Any Degree Pass/Fail ಆದ ಯುವಕಯುವತಿಯರು ಬೇಕಾಗಿದ್ದಾರೆ.ವಸತಿಯೂಟದೊಂದಿಗೆ ESI/PF +[OT-150/Hour] ಸಂಬಳ 15,600/- ರೂರಿಂದ 34,200/- ರೂವರೆಗೆ.7406000347, 7406000369

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME: ಮನೆಯಿಂದಲೇ ಕುಳಿತು ಫಾರಂ ತುಂಬುವ ಕೆಲಸ, ಗಳಿಸಿ ತಿಂಗಳಿಗೆ 15000-22000/- ಕೊರಿಯರ್ ಸೌಲಭ್ಯವಿದೆ. 7338376317, 8749014431

Wanted

ತಕ್ಷಣ ಬೇಕಾಗಿದ್ದಾರೆ ಕಂಪನಿ ಹಾಗು ಆಫೀಸ್ ಕೆಲಸಗಳಿಗೆ SSLC PUC Any degree ಯುವಕ ಯುವತಿಯರಿಗೆ ವಸತಿಯೂಟದೊಂದಿಗೆ Rs.16600 -Rs.60000 7259261011, 9902839010

೨೪ ಗಂಟೆ ಮನೆಕೆಲಸಗೋಸ್ಕರ ಮಹಿಳಾ ಅಭ್ಯರ್ಥಿ ಅಗತ್ಯವಿದೆ ಸಂಬಳ 20000/-ಊಟ +ಇರಲಿಕ್ಕೆ ಸ್ಥಳ ಸಭ್ಯ ಪರಿವಾರದಲ್ಲಿ ಬೆಂಗಳೂರಿನಲ್ಲಿ ಸಂಪರ್ಕಿಸಿ:8879178843, 7045875963

ADMISSION CORNER

ಆರ್.ಎಲ್. ಜಾಲಪ್ಪ ಅಕಾಡೆಮಿ, ಸೋಲೂರು
ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ–562127 (ನೆಲಮಂಗಲ ದಿಂದ 15 ಕಿ.ಮೀ. (ಕುಣಿಗಲ್ ರಸ್ತೆ ಕಡೆಗೆ)
KAS | PSI | FDA | SDA
ನಾಲ್ಕು ತಿಂಗಳ ಉಚಿತ ತರಬೇತಿ ಮಾರ್ಚ್ 5 ರಿಂದ ತರಗತಿಗಳು ಪ್ರಾರಂಭವಾಗಲಿದೆ
■ ಪ್ರಖ್ಯಾತ ಮಾರ್ಗದರ್ಶಕರಿಂದ ಬೋಧನೆ ■ ಗ್ರಂಥಾಲಯ ವ್ಯವಸ್ಥೆ 24x7, ವಿಶಾಲವಾದ ಆಟದ ಮೈದಾನ ■ ನಿಶಬ್ಧ ಮತ್ತು ಸ್ವಚ್ಛ ಪರಿಸರದಲ್ಲಿ ಅಕಾಡೆಮಿ ■ 4 ತಿಂಗಳಲ್ಲಿ OMR ಸಮೇತ 30 ಮಾದರಿ ಪರೀಕ್ಷೆ ನಡೆಸಲಾಗುವುದು ■ PSI ಪರೀಕ್ಷೆಗೆ ದೈಹಿಕ ಪರೀಕ್ಷೆ ಕುರಿತಂತೆ ಸೂಕ್ತ ಮಾರ್ಗದರ್ಶನ ನೀಡಲಾಗುವುದು ■ ಸ್ನಾನಕ್ಕೆ ಬಿಸಿನೀರಿನ ವ್ಯವಸ್ಥೆ ಇರುತ್ತದೆ ■ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ಹಾಗೂ ಸುರಕ್ಷತೆ ಇರುತ್ತದೆ ■ 450ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಸರ್ಕಾರಿ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ
www.rljacademy.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಫೆಬ್ರವರಿ 28.02.2021
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 99006 06042, 86604 95498 99020 04438
ವಸತಿ ಹಾಗೂ ಭೋಜನ ವ್ಯವಸ್ಥೆ ಮತ್ತು ನಿರ್ವಹಣೆಗಾಗಿ ಕನಿಷ್ಠ ಶುಲ್ಕವಿರುತ್ತದೆ

ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಕೆಲಸಕ್ಕೆ ಬೇಕಾಗಿದ್ದಾರೆ.ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ +OT 15,800 -86,000 8884054160, 9739544856

ಸಮಾಜಸೇವೆ

Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

ದೆಹಲಿ, ಅಮೃತಸರ್, ವೈಷ್ಣೋದೇವಿ, ಕುಲು,ಮನಾಲಿ 15.04.2021 ರಿಂದ 16 ದಿನಗಳು. ಅಷ್ಟ ಜ್ಯೋತಿರ್ಲಿಂಗಗಳು ಮಾತೃಗಯಾ, ಸೋಮನಾಥ್, ದ್ವಾರಕಾ 17.04.2021 ರಿಂದ 18 ದಿನಗಳು. ದೆಹಲಿ, ಕಾಶಿ,ಗಯಾ, ಆಗ್ರಾ,ಮಥುರ, ಹರಿದ್ವಾರ್ 22.04.2021 ರಿಂದ 16 ದಿನಗಳು. ದೆಹಲಿ, ಯುಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್, ಕಾಶಿ,ಗಯಾ 07.05.2021, 13.05.2021 ರಿಂದ 20/24 ದಿನಗಳು. ಸಂಪರ್ಕಿಸಿ: 26508925, 26674860 ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ, ಬೆಂಗಳೂರು-18

29-05-2021, 13 ದಿನಗಳ ಚಾರ್‌ಧಮ್‌ಯಾತ್ರ. 18-03-2021, 9 ದಿನಗಳ ಸಂಪೂರ್ಣ ಗುಜರಾತ್ ಪ್ರವಾಸ. 12-07-2021, 11 ದಿನಗಳ ಅಮರನಾಥಯಾತ್ರ. 18-04-2021, 13 ದಿನಗಳ ಕಾಶಿ,,ನೇಪಾಳ, ಮುಕ್ತಿನಾಥ ಪ್ರವಾಸ. 21-04-2021,12 ದಿನಗಳ ಮನಾಲಿ,ವೈಷ್ಣೋದೇವಿ ಪ್ರವಾಸ. 24-04-2021,10 ದಿನಗಳ ಲೇಹ್‌ಲಡಾಕ್ ಪ್ರವಾಸ. 27-03-2021,5 ದಿನಗಳ ಅಂಡಮಾನ್ ಪ್ರವಾಸ. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40. 9880847001, 9342848791

ರಿಯಾಯಿತಿ ದರದಲ್ಲಿ 12 ದಿನಗಳ ಕಾಶಿ,ದೆಹಲಿ ಪ್ರವಾಸ. 17 ದಿನಗಳ ಚಾರ್‌ಧಾಮ್, 6 ದಿನಗಳ ಅಂಡಮಾನ್ ಮತ್ತು 6 ದಿನಗಳ ದಕ್ಷಿಣಭಾರತ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರಿ ಸೇವಸಂಘ, ಗಿರಿನಗರ,ಬೆಂಗಳೂರು. 9916473906, 8861111568

ಮಾರ್ಚ್, ಏಪ್ರಿಲ್,ಮೇನಲ್ಲಿ 5 ದಿನಗಳು ಅಂಡಮಾನ್ ಹವಳದ್ವೀಪ. 26/03/2021 15ದಿನಗಳು ರೈಲು/ಬಸ್ಸುನಲ್ಲಿ ದೆಹಲಿ, ಅಗ್ರ,ಅಲಹಾಬದ್, ಕಶಿ,ಗಯ, ಹರಿದ್ವರ್, ಇತ್ಯಾದಿ 15000/=(ಕೆಲವೇ ಸೀಟುಗಳಿವೆ). ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

ವಾಹನ

Four Wheelers Selling

Others

TATA Yodha ಟೆಸ್ಟ್ ಡ್ರೈವ್ ಮಾಡಿದ ನಂತರವು ಬೇರೆ ಪಿಕ್‌ಅಪ್ ವಾಹನ ಖರೀದಿಸಿದಲ್ಲಿ ನಮ್ಮಿಂದ ₹5,000/-* ಪಡೆಯಿರಿ
TATA YODHA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ಕೊಡುಗೆಗಳು
₹45,000/-* ದವರೆಗೆ
ಆಕರ್ಷಕ ಬೈ ಬ್ಯಾಕ್ ಯೋಜನೆ ಲಭ್ಯವಿದೆ!*
₹450000–4 ವರ್ಷದ ನಂತರ*
₹400000–5 ವರ್ಷದ ನಂತರ*
₹350000–6 ವರ್ಷದ ನಂತರ*
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95384 14448
Bangalore -72597 84441 96208 63338
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 9880142353
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಾಲ್ಕು ತಿಂಗಳಿನಿಂದ ತೆರಿಗೆ ಸಂಗ್ರಹದಲ್ಲಿ ಸುಧಾರಣೆ ಪರಿಣಾಮ

ತಗ್ಗಲಿದೆ ಜಿಎಸ್‌ಟಿ ಆದಾಯ ಕೊರತೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವು ಕಳೆದ ನಾಲ್ಕು ತಿಂಗಳುಗಳಿಂದ ಸುಧಾರಿಸುತ್ತಿರುವ ಪರಿಣಾಮವಾಗಿ, ರಾಜ್ಯಗಳ ಪಾಲಿನ ಜಿಎಸ್‌ಟಿ ಆದಾಯದಲ್ಲಿನ ಕೊರತೆಯ ಪ್ರಮಾಣವು ತಗ್ಗುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯಗಳ ಜಿಎಸ್‌ಟಿ ಆದಾಯದಲ್ಲಿ ₹ 1.80 ಲಕ್ಷ ಕೋಟಿ ಕೊರತೆ ಆಗಲಿದೆ ಎಂದು ಅಂದಾಜಿಸಲಾಗಿತ್ತು. ಇದರಲ್ಲಿ ₹ 1.10 ಲಕ್ಷ ಕೋಟಿ ಕೊರತೆಯು ಜಿಎಸ್‌ಟಿ ವ್ಯವಸ್ಥೆಯ ಅನುಷ್ಠಾನದಿಂದ, ₹ 70 ಸಾವಿರ ಕೋಟಿ ನಷ್ಟವು ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದಾಗಿ ಆಗುವಂಥದ್ದು ಎಂದು ಹೇಳಲಾಗಿತ್ತು. ಈಗ, ಈ ಕೊರತೆಯು ₹ 40 ಸಾವಿರ ಕೋಟಿಯಷ್ಟು ತಗ್ಗುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಜಿಎಸ್‌ಟಿ ವ್ಯವಸ್ಥೆಯ ಅನುಷ್ಠಾನದ ಕಾರಣದಿಂದಾಗಿ ಆಗಿರುವ ₹ 1.10 ಲಕ್ಷ ಕೋಟಿ ಆದಾಯ ಕೊರತೆಯನ್ನು ಭರ್ತಿ ಮಾಡಿಕೊಡುವ ಉದ್ದೇಶಕ್ಕೆ ಸಾಲ ಮಾಡಲು ಕೇಂದ್ರ ಸರ್ಕಾರವು ವಿಶೇಷ ವ್ಯವಸ್ಥೆಯೊಂದನ್ನು ರೂಪಿಸಿತ್ತು. ಈಗ ಜಿಎಸ್‌ಟಿ ಸಂಗ್ರಹ ಸುಧಾರಿಸುತ್ತಿರುವ ಕಾರಣ, ರಾಜ್ಯಗಳ ಜಿಎಸ್‌ಟಿ ಆದಾಯ ಕೊರತೆಯು ₹ 1.40 ಲಕ್ಷ ಕೋಟಿಗೆ ತಗ್ಗಬಹುದು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಈ ಮೊದಲೇ ಯೋಜಿಸಿದಂತೆ ಒಟ್ಟು ₹ 1.10 ಲಕ್ಷ ಕೋಟಿಯನ್ನು ಸಾಲವಾಗಿ ಪಡೆಯಲಾಗುವುದು. ಹೆಚ್ಚುವರಿ ಮೊತ್ತವನ್ನು ಕೋವಿಡ್–19ರಿಂದ ಆಗಿರುವ ನಷ್ಟ ಭರ್ತಿ ಮಾಡಿಕೊಡಲು ಬಳಸಲಾಗುವುದು' ಎಂದು ಅಧಿಕಾರಿ ವಿವರಿಸಿದರು. ಕೇಂದ್ರವು ಈಗಾಗಲೇ ₹ 1 ಲಕ್ಷ ಕೋಟಿ ಮೊತ್ತವನ್ನು ಸಾಲವಾಗಿ ತಂದು ರಾಜ್ಯಗಳಿಗೆ ಹಂಚಿಕೆ ಮಾಡಿದೆ.

ಕೇಂದ್ರದ ಷೇರು ವಿಕ್ರಯ: ಭದ್ರತಾ ಒಪ್ಪಿಗೆ ಕಡ್ಡಾಯ

ನವದೆಹಲಿ (ಪಿಟಿಐ): ಷೇರು ವಿಕ್ರಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮಾರ್ಗಸೂಚಿಗಳಲ್ಲಿ ಬದಲಾವಣೆ ತಂದಿದ್ದು, ಕೇಂದ್ರೋದ್ಯಮಗಳ ಷೇರು ಖರೀದಿಗೆ ಬಿಡ್ ಸಲ್ಲಿಸುವವರು ಭದ್ರತಾ ಸಂಸ್ಥೆಗಳಿಂದ ಒಪ್ಪಿಗೆ ಪಡೆಯುವುದನ್ನು ಕಡ್ಡಾಯಗೊಳಿಸಿದೆ.

ಅರ್ಹ ಬಿಡ್‌ದಾರರು ಭದ್ರತಾ ಸಂಸ್ಥೆಗಳ ಒಪ್ಪಿಗೆ ಪಡೆದ ನಂತರವೇ ಮೌಲ್ಯಮಾಪನ ಸಮಿತಿಯು ಹಣಕಾಸು ಬಿಡ್ ಅನ್ನು ಮುಕ್ತಗೊಳಿಸಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗರಿಷ್ಠ ದರದ ಬಿಡ್ ಸಲ್ಲಿಸಿರುವವರು ಭದ್ರತಾ ಒಪ್ಪಿಗೆ ಪಡೆಯದೇ ಇದ್ದರೆ, ನಂತರದ ಬಿಡ್‌ದಾರರಿಗೆ ಆ ಗರಿಷ್ಠ ದರದೊಂದಿಗೆ ಹೊಂದಿಸುವ ಅವಕಾಶ ನೀಡಲಾಗುತ್ತದೆ.

ಷೇರುವಿಕ್ರಯ ಕುರಿತು ಕೈಗಾರಿಕಾ ಉತ್ತೇಜನ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಇಲಾಖೆಯು (ಡಿಐಪಿಎಎಂ) 2018ರಲ್ಲಿ ಮಾರ್ಗಸೂಚಿ ಟಿಪ್ಪಣಿ ರೂಪಿಸಿತ್ತು. ಆದರೆ, ನಿಯಮದಲ್ಲಿ ಅಸ್ಪಷ್ಟತೆ ಇದ್ದ ಕಾರಣದಿಂದ ಅದರಲ್ಲಿ ಬದಲಾವಣೆ ತರಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

'ಭದ್ರತಾ ಒಪ್ಪಿಗೆ ಪಡೆಯಲು, ಬಿಡ್ ಸಲ್ಲಿಸುವ ಸಂಸ್ಥೆಯು ಶೇ 10ಕ್ಕಿಂತಲೂ ಹೆಚ್ಚಿನ ಪಾಲು ಖರೀದಿಸಲು ಆಸಕ್ತಿ ಹೊಂದಿದ್ದರೆ ಆಗ ಅದು ತನ್ನ ಮಾತೃ ಸಂಸ್ಥೆ ಮತ್ತು ಮಾಲೀಕತ್ವದ ವಿವರಗಳನ್ನು ಬಹಿರಂಗಪಡಿಸಬೇಕು' ಎಂದು ಕಳೆದ ವಾರ ಇಲಾಖೆಯು ಹೊರಡಿಸಿರುವ ಸೂಚನೆಯಲ್ಲಿ ಉಲ್ಲೇಖಿಸಲಾಗಿದೆ.

ಬಿಡ್ ಸಲ್ಲಿಸಿರುವ ಸಂಸ್ಥೆಯು ಚೀನಾ ಮತ್ತು ಪಾಕಿಸ್ತಾನದಲ್ಲಿ ಕಚೇರಿ ಹೊಂದಿದ್ದರೆ ಆ ಕುರಿತ ಮಾಹಿತಿ ಮತ್ತು ಕಾರ್ಯವ್ಯಾಪ್ತಿಯ ಮಾಹಿತಿಗಳನ್ನು ಸ್ವಯಂ–ಘೋಷಣೆಯಲ್ಲಿ ತಿಳಿಸಬೇಕು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹450
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹453

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹213-408
ದ್ವಿತಳಿ (ಬಿ.ವಿ) ₹305-525

ಆರ್ಥಿಕ ಬೆಳವಣಿಗೆಗೆ ಖಾಸಗಿ ವಲಯ ಚಾಲಕ ಶಕ್ತಿ: ನಿರ್ಮಲಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಆರ್ಥಿಕ ಬೆಳವಣಿಯಲ್ಲಿ ಖಾಸಗಿ ವಲಯವು ಪ್ರಮುಖ ಚಾಲಕ ಶಕ್ತಿಯಾಗಿದೆ. ಕೇಂದ್ರ ಸರ್ಕಾರವು ಅದಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸುವ ಪಾತ್ರವನ್ನು ವಹಿಸಿದೆ ಎನ್ನುವುದನ್ನು ಬಜೆಟ್ ಮೂಲಕ ತಿಳಿಸಲಾಗಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಆ್ಯಂಡ್ ಕಾಮರ್ಸ್ (ಬಿಸಿಐಸಿ) ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಅವರು, 'ಆರ್ಥಿಕ ಬೆಳವಣಿಗೆಯಲ್ಲಿ ಖಾಸಗಿ ವಲಯದ ಪಾಲುದಾರಿಕೆ ಬಹಳ ಮುಖ್ಯ. ಈ ವಲಯವನ್ನು ಸಮರ್ಥವಾಗಿಸದೇ ಹೋದರೆ ಹಾಗೂ ಅದಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸದೇ ಇದ್ದರೆ ಭಾರತವು ದೊಡ್ಡ ಅವಕಾಶ ಕಳೆದುಕೊಳ್ಳುತ್ತದೆ' ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಮನ್ವಯ ಮಾತ್ರದಿಂದಲೇ ದೇಶದ ಬೆಳವಣಿಗೆ ಮತ್ತು ವಿವಿಧ ವಲಯಗಳ ಬೇಡಿಕೆ ಈಡೇರಿಸಲು ಸಾಧ್ಯವಿಲ್ಲ. ಸರ್ಕಾರಿ–ಖಾಸಗಿ ಸಹಭಾಗಿತ್ವದಿಂದ ಕೊರೊನಾ ಲಸಿಕೆ ಲಭ್ಯವಾಗುವಂತೆ ಮಾಡಿರುವುದು ಇದಕ್ಕೆ ಅತಿದೊಡ್ಡ ಉದಾಹರಣೆ ಆಗಿದೆ ಎಂದರು.

'ಕಂಪನಿಗಳು ಡಿಜಿಟಲ್ ವಸಾಹತು ಆಗುವ ಬದಲು ದೇಶದಲ್ಲಿಯೇ ಕೈಗಾರಿಕೆಗಳನ್ನು ಸ್ಥಾಪಿಸಬೇಕು ಎನ್ನುವುದನ್ನು ದೇಶ ಬಯಸುತ್ತದೆ' ಎಂದು ಮಣಿಪಾಲ್ ಗ್ಲೋಬಲ್ ಎಜುಕೇಷನ್ ಸರ್ವೀಸ್‌ನ ಅಧ್ಯಕ್ಷ ಟಿ.ವಿ. ಮೋಹನ್‌ದಾಸ್ ಪೈ ಹೇಳಿದರು.

ಬಿಸಿಐಸಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿ ಮತ್ತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ —ಪಿಟಿಐ ಚಿತ್ರ

'ಈಗಲೂ ಶೇ 90ಕ್ಕೂ ಹೆಚ್ಚು ಐ.ಟಿ. ಸಿಬ್ಬಂದಿ ಮನೆಯಿಂದಲೇ ಕೆಲಸ'

ಲಾಕ್‌ಡೌನ್ ಜಾರಿಯಲ್ಲಿದ್ದಾಗ ತಂತ್ರಜ್ಞಾನ ಉದ್ಯಮದ ಶೇ 90ಕ್ಕೂ ಅಧಿಕ ಸಿಬ್ಬಂದಿ ಮನೆಯಿಂದಲೇ ಕೆಲಸ ಮಾಡುತ್ತಿದ್ದರು. ಲಾಕ್‌ಡೌನ್ ನಿರ್ಬಂಧ ತೆರವಾದ ಬಳಿಕ ಈಗಲೂ ಅಷ್ಟೇ ಪ್ರಮಾಣದ ನೌಕರರು ಮನೆಯಿಂದಲೇ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿ ತಿಳಿಸಿದರು.

'ಕಚೇರಿ ಮತ್ತು ಮನೆಯಿಂದ ಕೆಲಸ ಮಾಡುವ ಹೈಬ್ರಿಡ್ ಮಾದರಿಯ ಮಹತ್ವವನ್ನು ಐ.ಟಿ ಉದ್ಯಮ ಮತ್ತು ಸರ್ಕಾರ ಗ್ರಹಿಸಿವೆ. ಹೈಬ್ರಿಡ್ ಮಾದರಿಯಲ್ಲಿ ಸಾಂಕ್ರಾಮಿಕದ ಅಂತ್ಯವಾದ ಬಳಿಕವೂ ಜನರು ಭಾಗಶಃ ಕಚೇರಿಯಿಂದ ಮತ್ತು ಮನೆಯಿಂದ ಕೆಲಸ ಮಾಡುವ ಅವಕಾಶ ಇದೆ. ಇದು ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಯಾಗಿದೆ. ದೇಶದ ಎಲ್ಲಾ ಭಾಗಗಳಿಂದ ಉತ್ತಮ ಭಾಗವಹಿಸುವಿಕೆಗೆ ಅವಕಾಶ ದೊರೆತಿದೆ. ಮನೆಯಿಂದ ಕೆಲಸ ಮಾಡುವ ಅವಕಾಶವು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ಕೆಲಸ ಮಾಡುವಂತೆ ಪ್ರೇರೇಪಿಸುತ್ತಿದೆ' ಎಂದರು.

ಖಾಸಗಿಯವರಿಗೆ ಓರಿಯಂಟಲ್ ಇನ್ಶೂರೆನ್ಸ್ ಅಥವಾ ಯುನೈಟೆಡ್ ಇಂಡಿಯಾ ಮಾರಾಟ

ನವದೆಹಲಿ (ಪಿಟಿಐ): ಓರಿಯಂಟಲ್ ಇನ್ಶೂರೆನ್ಸ್ ಅಥವಾ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಕೇಂದ್ರ ಸರ್ಕಾರ ಪರಿಗಣಿಸುವ ಸಾಧ್ಯತೆ ಇದೆ. ಬಂಡವಾಳ ನೆರವು ನೀಡಿದ ಬಳಿಕ ಈ ಎರಡು ಕಂಪನಿಗಳ ಹಣಕಾಸಿನ ಸ್ಥಿತಿ ಉತ್ತಮ ಆಗಿರುವುದು ಇದಕ್ಕೆ ಕಾರಣ ಎಂದು ಮೂಲಗಳು ತಿಳಿಸಿವೆ.

ಈ ಕಂಪನಿಗಳ ಆರ್ಥಿಕ ಪರಿಸ್ಥಿತಿಯನ್ನು ಇನ್ನಷ್ಟು ಉತ್ತಮಪಡಿಸಲು ಕೇಂದ್ರವು ಹಾಲಿ ತ್ರೈಮಾಸಿಕದಲ್ಲಿ ₹ 3 ಸಾವಿರ ಕೋಟಿ ಬಂಡವಾಳ ಒದಗಿಸುವ ಸಾಧ್ಯತೆ ಇದೆ. ಆರ್ಥಿಕ ಆರೋಗ್ಯ ಉತ್ತಮಗೊಳ್ಳುವ ಕಾರಣ ಎರಡೂ ಕಂಪನಿಗಳು ಖಾಸಗಿ ಕಂಪನಿಗಳಲ್ಲಿ ಆಸಕ್ತಿ ಮೂಡಿಸಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಖಾಸಗಿಯವರಿಗೆ ಮಾರಾಟ ಮಾಡಲು ಸೂಕ್ತ ಕಂಪನಿ ಯಾವುದು ಎಂಬುದನ್ನು ಆಯ್ಕೆ ಮಾಡುವ ಪ್ರಕ್ರಿಯೆಯು ಈಗಷ್ಟೇ ಶುರುವಾಗಿದೆ. ತೀರ್ಮಾನ ತೆಗೆದುಕೊಳ್ಳಲು ತುಸು ಸಮಯ ಬೇಕಾಗಬಹುದು. ಷೇರು ಮಾರುಕಟ್ಟೆಯಲ್ಲಿ ನೋಂದಾಯಿತ ಆಗಿರುವ ನ್ಯೂ ಇಂಡಿಯಾ ಅಶ್ಶೂರೆನ್ಸ್ ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ಸಾಧ್ಯತೆ ಇಲ್ಲ ಎಂದು ಅವರು ಹೇಳಿದ್ದಾರೆ.

ಖಾಸಗೀಕರಣದ ವಿಚಾರದಲ್ಲಿ ನೀತಿ ಆಯೋಗವು ಸರ್ಕಾರಕ್ಕೆ ಶಿಫಾರಸು ಸಲ್ಲಿಸಲಿದೆ. ಹಣಕಾಸು ಸಚಿವಾಲಯದ ಅಡಿಯಲ್ಲಿ ಕೆಲಸ ನಿರ್ವಹಿಸುವ ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು ಈ ಶಿಫಾರಸನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯಲಿದೆ. ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳು ಹಾಗೂ ಒಂದು ವಿಮಾ ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗುತ್ತದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ.

ಬಂಡವಾಳ ಹಿಂತೆಗೆತದ ಭಾಗವಾಗಿ ಭಾರತೀಯ ಜೀವವಿಮಾ ಕಂಪನಿಯ (ಎಲ್‌ಐಸಿ) ಷೇರುಗಳನ್ನು ಸಾರ್ವಜನಿಕರ ಖರೀದಿಗೆ ಮುಕ್ತವಾಗಿಸುವ (ಐಪಿಒ) ಪ್ರಕ್ರಿಯೆ ಕೂಡ ನಡೆಯಲಿದೆ.

ಹೆಚ್ಚುತ್ತಿರುವ ಕೋವಿಡ್; ಪುಣೆಯಲ್ಲಿ ರಾತ್ರಿ ಕರ್ಫ್ಯೂ ಜಾರಿ; ಶಾಲಾ–ಕಾಲೇಜು ಬಂದ್

ಮಹಾರಾಷ್ಟ್ರದಲ್ಲಿ ಸಮಾರಂಭಗಳಿಗೆ ನಿಷೇಧ

ಪ್ರಜಾವಾಣಿ ವಾರ್ತೆ

ಮುಂಬೈ/ಪುಣೆ: ಮುಂಬೈ, ಪುಣೆ, ಅಮರಾವತಿ ಸೇರಿದಂತೆ ಮಹಾರಾಷ್ಟ್ರದಾದ್ಯಂತ ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೆಲವು ನಿರ್ಬಂಧಗಳನ್ನು ಭಾನುವಾರ ಪ್ರಕಟಿಸಿದೆ. ರಾಜ್ಯದಲ್ಲಿ ಸೋಮವಾರದಿಂದ ಯಾವುದೇ ರಾಜಕೀಯ, ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸುವಂತಿಲ್ಲ ಎಂದು ತಿಳಿಸಿದೆ.

ಜನರು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ 8–10 ದಿನಗಳಲ್ಲಿ ಎರಡನೇ ಲಾಕ್‌ಡೌನ್ ಹೇರುವ ಬಗ್ಗೆ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿದ್ದಾರೆ.

ವಿದರ್ಭ ವಲಯದ ಅಮರಾವತಿ ಜಿಲ್ಲೆಯಲ್ಲಿ ಒಂದು ವಾರ ಲಾಕ್‌ಡೌನ್ ಹೇರಲಾಗಿದೆ. ಫೆಬ್ರುವರಿ 22ರ ರಾತ್ರಿ 8ರಿಂದ ಮಾರ್ಚ್ 1ರ ಬೆಳಿಗ್ಗೆ 8 ಗಂಟೆವರೆಗೆ ಲಾಕ್‌ಡೌನ್ ಜಾರಿಯಲ್ಲಿರಲಿದೆ. ವೈರಸ್ ಹರಡುವುದನ್ನು ತಡೆಯುವ ಉದ್ದೇಶದಿಂದ ಅಮರಾವತಿ ವಿಭಾಗದ ಇತರ ನಾಲ್ಕು ಜಿಲ್ಲೆಗಳಾದ ಅಕೋಲಾ, ವಾಶಿಮ್, ಬುಲ್ಡಾನ ಮತ್ತು ಯವತ್ಮಾಲ್‌ನಲ್ಲಿ ಕೆಲವು ನಿರ್ಬಂಧಗಳನ್ನು ಜಾರಿಗೊಳಿಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪುಣೆಯಲ್ಲಿ ಅಗತ್ಯ ಸೇವೆಗಳನ್ನು ಹೊರತುಪಡಿಸಿ, ರಾತ್ರಿ 11ರಿಂದ ಬೆಳಿಗ್ಗೆ 6ರವರೆಗೆ ಜನರ ಸಂಚಾರಕ್ಕೆ ನಿರ್ಬಂಧ ಹೇರಲು ನಿರ್ಧರಿಸಲಾಗಿದೆ. ಶಾಲೆ, ಕಾಲೇಜು ಹಾಗೂ ಖಾಸಗಿ ಕೋಚಿಂಗ್ ಕೇಂದ್ರಗಳನ್ನು ಫೆ.28ರವರೆಗೆ ಮುಚ್ಚುವಂತೆ ಸೂಚಿಸಲಾಗಿದೆ. ಹಾಸ್ಟೆಲ್ ಹಾಗೂ ರೆಸ್ಟೋರೆಂಟ್‌ಗಳನ್ನು ಪ್ರತಿನಿತ್ಯ 11 ಗಂಟೆಗೆ ಮುಚ್ಚುವಂತೆ ತಿಳಿಸಲಾಗಿದೆ ಎಂದು ಪುಣೆ ವಿಭಾಗೀಯ ಆಯುಕ್ತ ಸೌರಭ್ ರಾವ್ ತಿಳಿಸಿದ್ದಾರೆ.

ಪುಣೆ ಉಸ್ತುವಾರಿ ಸಚಿವರೂ ಆಗಿರುವ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಕೆಲವು ನಿರ್ಬಂಧಗಳನ್ನು ಮರಳಿ ಜಾರಿಗೊಳಿಸಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ ಪ್ರಕರಣ ಹೆಚ್ಚಾಗಲು ಜನರ ಉದಾಸೀನ ಕಾರಣ. ಕೊನೆಯ ವ್ಯಕ್ತಿ ಸೋಂಕಿನಿಂದ ಗುಣಮುಖನಾಗುವವರೆಗೂ ತಾಳ್ಮೆ ಬೇಕು
ಡಾ. ಸರ್ಮನ್ ಸಿಂಗ್, ಭೋಪಾಲ್ ಏಮ್ಸ್ ನಿರ್ದೇಶಕ

ವಿವಿಧ ರೂಪಾಂತರ ತಳಿಗಳು ಪತ್ತೆಯಾಗುತ್ತಿರುವ ಭಾರತದಲ್ಲಿ ಸದ್ಯ ಸಮೂಹ ರೋಗ ನಿರೋಧಕತೆ ಸಾಧಿಸುವುದು ತುಂಬಾ ಕಷ್ಟ
ರಣದೀಪ್ ಗುಲೇರಿಯಾ, ದೆಹಲಿ ಏಮ್ಸ್ ನಿರ್ದೇಶಕ

ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸುವುದು, ಕೋವಿಡ್ ಆರೈಕೆ ಕೇಂದ್ರಗಳ ಮರು ಸ್ಥಾಪನೆ, ಸಂಪರ್ಕಿತರ ಪತ್ತೆಹಚ್ಚುವಿಕೆ ಮತ್ತು ಪರೀಕ್ಷೆಯನ್ನು ಹೆಚ್ಚಿಸಲು ನಿರ್ಧರಿಸಲಾಗಿದೆ. ಸ್ಥಳೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಿರ್ಬಂಧ ಹೇರುವ ನಿರ್ಧಾರ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಶನಿವಾರ, ಪುಣೆ ವಿಭಾಗದಲ್ಲಿ 998 ಹೊಸ ಕೊರೊನಾ ವೈರಸ್ ಪ್ರಕರಣಗಳು ಪತ್ತೆಯಾಗಿದ್ದು, ಸೋಂಕಿನಿಂದ 9 ಮಂದಿ ಮೃತಪಟ್ಟಿದ್ದಾರೆ. ಕಳೆದ ಮೂರು ತಿಂಗಳಿನಿಂದ ಜಿಲ್ಲೆಯ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ರಾವ್ ಹೇಳಿದರು. ಆದರೆ, ಈಗ ಕೋವಿಡ್ ಪ್ರಕರಣಗಳ ಹೆಚ್ಚಳವನ್ನು ಗಮನದಲ್ಲಿಟ್ಟುಕೊಂಡು ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂದರು.

ಇಂದೋರ್‌ನಲ್ಲಿ ಏರುಮುಖ: ಮಧ್ಯಪ್ರದೇಶದಲ್ಲಿ ಫೆ.14ರ ಬಳಿಕ ನಿತ್ಯವೂ 200ಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ರಾಜ್ಯದ ಕೈಗಾರಿಕಾ ತಾಣ ಎನಿಸಿರುವ ಇಂದೋರ್‌ನಲ್ಲಿ ಪ್ರಕರಣಗಳು ಏರುಗತಿಯಲ್ಲಿವೆ.

ಇಂದೋರ್‌ನಲ್ಲಿ ಸಂಗ್ರಹಿಸಿದ 100 ರಕ್ತದ ಮಾದರಿಗಳನ್ನು ದೆಹಲಿಯ ರಾಷ್ಟ್ರೀಯ ಸೋಂಕು ನಿಯಂತ್ರಣ ಕೇಂದ್ರ ಮತ್ತು ಪುಣೆ ವೈರಾಲಜಿ ಸಂಸ್ಥೆಗೆ ಕಳುಹಿಸಲಾಗಿದೆ. ರೂಪಾಂತರಗೊಂಡ ಕೊರೊನಾ ವೈರಸ್ ಈ ರಕ್ತದ ಮಾದರಿಗಳಲ್ಲಿ ಇದೆಯೇ ಎಂದು ತಿಳಿದುಕೊಳ್ಳುವುದು ಇದರ ಉದ್ದೇಶ.

ಕೊರೊನಾ ಸೋಂಕು ಪ್ರಕರಣಗಳು ಇಳಿಮುಖವಾಗುತ್ತಿದ್ದಂತೆ ಜನರು ಬೇಜವಾಬ್ದಾರಿಯಿಂದ ವರ್ತಿಸಿದ್ದೇ ಪ್ರಕರಣಗಳು ಮತ್ತೆ ಏರಿಕೆಯಾಗಲು ಕಾರಣ ಎಂದು ಮಧ್ಯಪ್ರದೇಶದ ಇಂದೋರ್ ನೋಡಲ್ ಅಧಿಕಾರಿ ಅಮಿತ್ ಮಲಕರ್ ತಿಳಿಸಿದ್ದಾರೆ.

'ಇತ್ತೀಚಿನ ದಿನಗಳಲ್ಲಿ ಜನರು ಮಾಸ್ಕ್ ಧರಿಸದೇ ಓಡಾಡುತ್ತಿದ್ದಾರೆ. ವ್ಯಕ್ತಿಗಳ ನಡುವೆ ಅಂತರವೂ ಕಾಣುತ್ತಿಲ್ಲ. ಸ್ಯಾನಿಟೈಸರ್ ಬಳಕೆ ಮರೆತೇಹೋಗಿದೆ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿ ಜನವರಿಯಲ್ಲಿ ದಕ್ಷಿಣ ಆಫ್ರಿಕಾದ ರೂಪಾಂತರಗೊಂಡ ವೈರಸ್ ಮಾದರಿಯು ನಾಲ್ಕು ಜನರಲ್ಲಿ ಕಂಡುಬಂದಿತ್ತು ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ಹೇಳಿತ್ತು. ಫೆಬ್ರುವರಿ ಮೊದಲ ವಾರದಲ್ಲಿ ಬ್ರೆಜಿಲ್ ರೂಪಾಂತರ ವೈರಾಣು ಒಬ್ಬ ವ್ಯಕ್ತಿಯಲ್ಲಿ ಗೋಚರವಾಗಿತ್ತು.

ಸಹಜ ಸ್ಥಿತಿಯತ್ತ ದೆಹಲಿ: ಈ ಮಧ್ಯೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಎಲ್ಲ ಚಟುವಟಿಕೆಗಳನ್ನೂ ಪುನರ್ ಆರಂಭಿಸಲಾಗುತ್ತಿದೆ. ಸಾಂಕ್ರಾಮಿಕ ರೋಗದ ಹರಡುವಿಕೆ ತಡೆಗಾಗಿ ಭಾಗಶಃ ಕಾರ್ಯ ನಿರ್ವಹಿಸುತ್ತಿದ್ದ ಶಾಲಾ ಕಾಲೇಜುಗಳು, ನ್ಯಾಯಾಲಯಗಳು, ಸಾರ್ವಜನಿಕ ಸಾರಿಗೆ ಮತ್ತಿತರ ಸೇವೆಗಳು ಪೂರ್ಣ ಪ್ರಮಾಣದಲ್ಲಿ ಆರಂಭಗೊಳ್ಳುತ್ತಿವೆ.

ಲಸಿಕೆ ವೇಗ ಹೆಚ್ಚಳಕ್ಕೆ ಸೂಚನೆ: ಕೆಲವು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಲಸಿಕೆ ನೀಡಿಕೆ ವೇಗವನ್ನು ಗಣನೀಯವಾಗಿ ಹೆಚ್ಚಿಸುವ ಅಗತ್ಯವಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲಾ ರಾಜ್ಯಗಳಿಗೆ ಪತ್ರ ಬರೆದಿದೆ. ಹೆಚ್ಚಿನ ಸಂಖ್ಯೆಯ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಇನ್ನೂ ಲಸಿಕೆಯನ್ನು ಪಡೆಯಬೇಕಿದೆ ಎಂದು ಶುಕ್ರವಾರ (ಫೆ.19) ಬರೆದ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ತಾಳ್ಮೆಯಿಂದ ಕಾಯಿರಿ': ಕೋವಿಶೀಲ್ಡ್ ಲಸಿಕೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಹೆಚ್ಚುತ್ತಿದ್ದು, ಭಾರತದ ಅಗತ್ಯಗಳನ್ನು ಪೂರೈಸುವವರೆಗೆ ಇತರ ದೇಶಗಳು ಕಾಯಬೇಕು ಮತ್ತು ತಾಳ್ಮೆಯಿಂದಿರಬೇಕು ಎಂದು ಸೀರಂ ಇನ್‌ಸ್ಟಿಟ್ಯೂಟ್ ಹೇಳಿದೆ.

ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಭಾನುವಾರ ಬೇರೆ ಊರುಗಳಿಂದ ಪುಣೆ ರೈಲ್ವೆ ನಿಲ್ದಾಣಕ್ಕೆ ಬಂದಿಳಿದ ಜನರ ಮಾದರಿಗಳನ್ನು ಸಂಗ್ರಹಿಸಲಾಯಿತು —ಪಿಟಿಐ ಚಿತ್ರ

'ಹೊಸ ತಳಿಗಳು ಅಪಾಯಕಾರಿ'

'ಮಹಾರಾಷ್ಟ್ರದಲ್ಲಿ ಪತ್ತೆಯಾಗಿರುವ ಕೊರೊನಾ ವೈರಸ್‌ನ ರೂಪಾಂತರ ತಳಿಗಳು ಬೇಗ ಹರಡಬಲ್ಲ ಸಾಮರ್ಥ್ಯವುಳ್ಳವು. ಹಾಗೆಯೇ ಅವು ಅಪಾಯಕಾರಿ' ಎಂದು ಏಮ್ಸ್ ನಿರ್ದೇಶಕ ಡಾ. ರಣದೀಪ್ ಗುಲೇರಿಯಾ ಹೇಳಿದ್ದಾರೆ. ವೈರಾಣುವಿಗೆ ಪ್ರತಿಕಾಯಗಳನ್ನು ಸೃಷ್ಟಿಸಿಕೊಂಡಿರುವ ವ್ಯಕ್ತಿಗೆ ಕೂಡ ರೂಪಾಂತರ ವೈರಾಣುವಿನಿಂದ ಸೋಂಕು ತಗಲುಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ವೈರಸ್‌ನ 240 ಹೊಸ ತಳಿಗಳು ಭಾರತದಾದ್ಯಂತ ಕಾಣಿಸಿಕೊಂಡಿವೆ. ಕಳೆದ ಒಂದು ವಾರದಲ್ಲಿ ಕೆಲವು ರಾಜ್ಯಗಳಲ್ಲಿ ಪ್ರಕರಣಗಳು ಹೆಚ್ಚುತ್ತಿರುವುದರ ಹಿಂದೆ ಈ ಹೊಸ ತಳಿಗಳು ಇವೆ' ಎಂದು ಮಹಾರಾಷ್ಟ್ರ ಕೋವಿಡ್ ಕಾರ್ಯಪಡೆ ಸದಸ್ಯ ಡಾ. ಶಶಾಂಕ್ ಜೋಶಿ ಹೇಳಿದ್ದಾರೆ.

ಮಹಾರಾಷ್ಟ್ರ, ಕೇರಳ, ಮಧ್ಯಪ್ರದೇಶ, ಛತ್ತೀಸಗಡ ಮತ್ತು ಪಂಜಾಬ್‌ನಲ್ಲಿ ಹೊಸ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ.

ಕೋವ್ಯಾಕ್ಸಿನ್ ಬಳಕೆ ಕಡಿಮೆ

ಅಧಿಕೃತ ಲಸಿಕೆ ವಿತರಣಾ ಮಾಹಿತಿಯ ಪ್ರಕಾರ, 17 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಕೋವ್ಯಾಕ್ಸಿನ್‌ನ 100ಕ್ಕಿಂತಲೂ ಕಡಿಮೆ ಡೋಸ್ ಬಳಕೆಯಾಗಿವೆ. ಆರು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೊವ್ಯಾಕ್ಸಿನ್‌ನ ಒಂದೇ ಡೋಸ್ ಅನ್ನೂ ಬಳಸಿಲ್ಲ.

ದಕ್ಷಿಣ ರಾಜ್ಯಗಳ ಪೈಕಿ ಕರ್ನಾಟಕ, ತಮಿಳುನಾಡಿನಲ್ಲಿ ಅತಿಕಡಿಮೆ ಪ್ರಮಾಣದಲ್ಲಿ ಕೋವ್ಯಾಕ್ಸಿನ್ ಬಳಕೆಯಾಗಿದೆ. ಫೆಬ್ರುವರಿ 20ರವರೆಗಿನ ಮಾಹಿತಿ ಪ್ರಕಾರ ಕರ್ನಾಟಕದಲ್ಲಿ ಕೋವಿಶೀಲ್ಡ್‌ನ 5.40 ಲಕ್ಷ ಡೋಸ್ ಬಳಸಿದ್ದರೆ, ಕೋವ್ಯಾಕ್ಸಿನ್‌ನ 5,873 ಡೋಸ್‌ಗಳು ಬಳಕೆಯಾಗಿವೆ.

ಭಾರತಕ್ಕೆ ವಿಶ್ವಸಂಸ್ಥೆ ಶ್ಲಾಘನೆ

ಸಾಂಕ್ರಾಮಿಕ ರೋಗದ ವಿರುದ್ಧದ ಜಾಗತಿಕ ಹೋರಾಟದಲ್ಲಿ ಭಾರತದ ನಾಯಕತ್ವವನ್ನು ವಿಶ್ವಸಂಸ್ಥೆ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಅವರು ಶ್ಲಾಘಿಸಿದ್ದಾರೆ. ವಿಶ್ವ ಮಾರುಕಟ್ಟೆಗೆ ಕೋವಿಡ್ ಲಸಿಕೆಗಳನ್ನು ಪೂರೈಸುವ ಯತ್ನವನ್ನು ಅವರು ಪ್ರಶಂಸಿಸಿದ್ದಾರೆ.

ಭಾರತದ ಕಾಯಂ ಪ್ರತಿನಿಧಿ ಟಿ.ಎಸ್. ತಿರುಮೂರ್ತಿ ಅವರು ಟ್ವೀಟ್ ಮಾಡಿದ್ದು, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಗುಟೆರಸ್ ಬರೆದ ಪತ್ರದ ಬಗ್ಗೆ ಉಲ್ಲೇಖಿಸಿದ್ದಾರೆ. ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಗೆ 2 ಲಕ್ಷ ಕೋವಿಡ್ ಲಸಿಕೆಗಳನ್ನು ನೀಡಿದ ಭಾರತದ ನಡೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಕೋವಿಡ್ ಲಸಿಕೆ: ಶೇ10ರಷ್ಟು ಮಾತ್ರ ಹಾಜರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಪಡೆಯಲು ಭಾನುವಾರ ನಿಗದಿಪಡಿಸಲಾಗಿದ್ದ ಫಲಾನುಭವಿಗಳಲ್ಲಿ ಶೇ 10 ರಷ್ಟು ಮಂದಿ ಮಾತ್ರ ಹಾಜರಾಗಿದ್ದಾರೆ. ಇದು ಈವರೆಗೆ ದಿನವೊಂದಕ್ಕೆ ನಿಗದಿಪಡಿಸಲಾಗಿದ್ದ ಫಲಾನುಭವಿಗಳಲ್ಲಿ ಅತೀ ಕಡಿಮೆ ಹಾಜರಿಯಾಗಿದೆ.



ರಜಾ ದಿನವಾದ ಕಾರಣ ಕೇವಲ 47 ಕೇಂದ್ರಗಳಲ್ಲಿ ಮಾತ್ರ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಲಾಗಿತ್ತು. ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯಲು 8,662 ಮಂದಿಯನ್ನು ಗುರುತಿಸಲಾಗಿತ್ತು. ಅವರಲ್ಲಿ 904 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಉಳಿದವರು ಹಿಂಜರಿಕೆ ಸೇರಿದಂತೆ ನಾನಾ ಕಾರಣಗಳಿಂದ ಗೈರಾಗಿದ್ದಾರೆ. ಲಸಿಕೆ ಪಡೆದವರಲ್ಲಿ ಯಾರಲ್ಲಿಯೂ ತೀವ್ರ ಮತ್ತು ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಲಸಿಕೆ ವಿತರಣೆ ಪ್ರಾರಂಭವಾದಾಗಿನಿಂದ ಈವರೆಗೆ ನಿಗದಿಪಡಿಸಲಾಗಿದ್ದ 8,21,939 ಆರೋಗ್ಯ ಕಾರ್ಯಕರ್ತರಲ್ಲಿ 4,24,491 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಇದರಿಂದ ಶೇ 52 ರಷ್ಟು ಗುರಿ ಸಾಧ್ಯವಾಗಿದೆ. ಇವರಲ್ಲಿ 1.13 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. 2,84,950 ಮುಂಚೂಣಿ ಯೋಧರನ್ನು ಈವರೆಗೆ ಲಸಿಕೆ ಪಡೆಯಲು ಗುರುತಿಸಲಾಗಿತ್ತು. ಅವರಲ್ಲಿ 1,20,172 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದ ಶೇ 42ರಷ್ಟು ಗುರಿ ಸಾಧ್ಯವಾಗಿದೆ.

413 ಮಂದಿಗೆ ಸೋಂಕು: ರಾಜ್ಯದಲ್ಲಿ ಹೊಸದಾಗಿ 413 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.48 ಲಕ್ಷ ದಾಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,294ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 353 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಕಾಯಿಲೆಯಿಂದ ಚೇತರಿಸಿಕೊಂಡವರ ಸಂಖ್ಯೆ 9.29 ಲಕ್ಷ ದಾಟಿದೆ. 6,036 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 127 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ.

ಬೆಂಗಳೂರಿನಲ್ಲಿ 248 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.03 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 24 ಪ್ರಕರಣಗಳು ವರದಿಯಾಗಿದೆ. ಅಲ್ಲಿ ಸೋಂಕಿತರ ಸಂಖ್ಯೆ 53,912ಕ್ಕೆ ಏರಿಕೆಯಾಗಿದೆ. ಕಲಬುರ್ಗಿಯಲ್ಲಿ 23, ಬೆಳಗಾವಿಯಲ್ಲಿ 15, ದಕ್ಷಿಣ ಕನ್ನಡದಲ್ಲಿ 11, ಉಡುಪಿ ಹಾಗೂ ವಿಜಯಪುರದಲ್ಲಿ ತಲಾ 10 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ರೈತರಿಗೆ ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಜೇವಾಲ್ ಕರೆ

'ಬಂಧಿಸಲು ಬಂದರೆ ಪೊಲೀಸರಿಗೆ ಮುತ್ತಿಗೆ'

ಪ್ರಜಾವಾಣಿ ವಾರ್ತೆ

ಚಂಡೀಗಡ (ಪಿಟಿಐ): 'ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸುವವರನ್ನು ಬಂಧಿಸಲು ದೆಹಲಿ ಪೊಲೀಸರು ಬಂದರೆ, ಅವರನ್ನು ಘೇರಾವ್ ಮಾಡಿ' ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ಬಲಬೀರ್ ಸಿಂಗ್ ರಾಜೇವಾಲ್ ಕರೆ ನೀಡಿದ್ದಾರೆ.

ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸುವವರಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ರಾಜೇವಾಲ್ ಈ ಹೇಳಿಕೆ ನೀಡಿದ್ದಾರೆ. 'ನಿಮ್ಮನ್ನು ಬಂಧಿಸಲು ದೆಹಲಿ ಪೊಲೀಸರು ಬಂದರೆ, ನಿಮ್ಮ ಊರಿನ ಎಲ್ಲಾ ಜನರನ್ನು ಸೇರಿಸಿ. ದೆಹಲಿ ಪೊಲೀಸರಿಗೆ ವಿರುದ್ಧವಾಗಿ ನಿಲ್ಲಿ' ಎಂದು ಅವರು ಕರೆ ನೀಡಿದ್ದಾರೆ.

'ಪ್ರತಿಭಟನೆನಿರತ ರೈತರಿಗೆ ಊಟದ ವ್ಯವಸ್ಥೆ ಮಾಡುತ್ತಿರುವವರನ್ನು ಮತ್ತು ನಮಗೆ ಯಾವುದೇ ರೀತಿಯ ನೆರವು ನೀಡುತ್ತಿರುವವರಿಗೆ ದೆಹಲಿ ಪೊಲೀಸರು ನೋಟಿಸ್ ನೋಡಿದ್ದಾರೆ. ಅಂತಹ ನೋಟಿಸ್ ನಿಮಗೆ ಬಂದರೆ, ತಲೆಕೆಡಿಸಿಕೊಳ್ಳಬೇಡಿ. ಅದನ್ನು ನಮಗೆ ನೀಡಿ. ಆದರೆ, ಪೊಲೀಸರ ಎದುರು ಯಾರೂ ಹಾಜರಾಗುವ ಅವಶ್ಯಕತೆ ಇಲ್ಲ. ಕೇಂದ್ರದ ಕಾಯ್ದೆಗಳ ವಿರುದ್ಧ ಆರಂಭವಾದ ಈ ಪ್ರತಿಭಟನೆ ಈಗ ಜನಾಂದೋಲನವಾಗಿ ಬದಲಾಗಿದೆ' ಎಂದು ಅವರು ಹೇಳಿದ್ದಾರೆ.

'ರೈತರಿಗೆ ಬೆಂಬಲ ಸೂಚಿಸಿರುವ ಪಂಜಾಬ್ ಸರ್ಕಾರದ ಎದುರು ಈಗ ನಿಜವಾದ ಸವಾಲು ಇದೆ. ರೈತರನ್ನು ಬಂಧಿಸಲು ಬರುವ ದೆಹಲಿ ಪೊಲೀಸರಿಗೆ ಪಂಜಾಬ್ ಪೊಲೀಸರು ಸಹಕಾರ ನೀಡದಂತೆ ಸರ್ಕಾರ ನೋಡಿಕೊಳ್ಳಬೇಕು' ಎಂದು ಹೇಳಿದರು.

ಪ್ರತಿಭಟನೆ ನಡೆಸುತ್ತಿರುವ ರೈತರ ಜತೆಗೆ ಕೇಜ್ರಿವಾಲ್

ಪ್ರತಿಭಟನೆ ತೀವ್ರ: ವಾರವಿಡೀ ಕಾರ್ಯಕ್ರಮ

ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು, ಹೋರಾಟವನ್ನು ತೀವ್ರಗೊಳಿಸಲು ಸರಣಿ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದಾರೆ. ಮಂಗಳವಾರದಿಂದ ಶನಿವಾರದವರೆಗೆ (ಫೆ. 23ರಿಂದ 27) ಈ ಕಾರ್ಯಕ್ರಮಗಳು ನಡೆಯಲಿವೆ. ಸುದೀರ್ಘ ಕಾಲ ಹೋರಾಟ ನಡೆಸುವುದಕ್ಕೆ ಬೇಕಾದ ಕಾರ್ಯತಂತ್ರ ರೂಪಿಸುವುದಾಗಿಯೂ ರೈತ ಮುಖಂಡರು ಹೇಳಿದ್ದಾರೆ.

23ರಂದು ಪೇಟ ರಕ್ಷಣಾ ದಿನ, 24ರಂದು ದಮನ ವಿರೋಧಿ ದಿನ ಆಚರಿಸಲಾಗುವುದು. 26ರಂದು ಯುವ ಕೃಷಿಕರ ದಿನ ಮತ್ತು 27ರಂದು ರೈತರು–ಕಾರ್ಮಿಕರ ಒಗ್ಗಟ್ಟು ದಿನ ಆಚರಿಸುವುದಾಗಿಯೂ ರೈತರು ಹೇಳಿದ್ದಾರೆ.

'ಸರ್ಕಾರವು ಎಲ್ಲ ದಮನಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ರೈತರ ಬಂಧನ, ವಶಕ್ಕೆ ಪಡೆಯುವುದು, ಪ್ರಕರಣ ದಾಖಲಿಸುವಂತಹ ಕ್ರಮಗಳನ್ನು ಅನುಸರಿಸುತ್ತಿದೆ. ಸಿಂಘು ಗಡಿಯ ಸುತ್ತ ಕೋಟೆ ಕಟ್ಟಲಾಗಿದ್ದು, ಇದು ಅಂತರರಾಷ್ಟ್ರೀಯ ಗಡಿಯಂತೆ ಕಾಣಿಸುತ್ತಿದೆ' ಎಂದು ರೈತ ಮುಖಂಡ ಯೋಗೇಂದ್ರ ಯಾದವ್ ಹೇಳಿದ್ದಾರೆ. ಮಾರ್ಚ್ 8ರಿಂದ ಸಂಸತ್ ಅಧಿವೇಶನ ಆರಂಭವಾಗಲಿದೆ. ಹಾಗಾಗಿ, ಸುದೀರ್ಘ ಕಾಲ ಚಳವಳಿ ನಡೆಸಲು ಬೇಕಾದ ಕಾರ್ಯತಂತ್ರವನ್ನು ಸಂಯುಕ್ತ ಕಿಸಾನ್ ಮೋರ್ಚಾದ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಅವರು ಹೇಳಿದ್ದಾರೆ. ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿ ಪೊಲೀಸರು ಬಂಧಿಸಿರುವ 122 ಜನರ ಪೈಕಿ 32 ಮಂದಿಗೆ ಈವರೆಗೆ ಜಾಮೀನು ಸಿಕ್ಕಿದೆ ಎಂದು ರೈತರ ಮುಖಂಡ ದರ್ಶನ್ ಪಾಲ್ ತಿಳಿಸಿದ್ದಾರೆ.

ರೈತರ ಭೇಟಿಯಾದ ಕೇಜ್ರಿವಾಲ್

ದೆಹಲಿ ಮುಖ್ಯಮಂತ್ರಿ ಮತ್ತು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ಉತ್ತರ ಪ್ರದೇಶದ ಪಶ್ಚಿಮ ಭಾಗದ ರೈತರನ್ನು ಭಾನುವಾರ ಭೇಟಿಯಾದರು. ರೈತರ ಪಾಲಿನ ಮರಣ ಶಾಸನವಾಗಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸುವಂತೆ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಇದೇ 28ರಂದು ಮೀರತ್‌ನಲ್ಲಿ ನಡೆಯಲಿರುವ ರೈತರ ಮಹಾಪಂಚಾಯಿತಿಯಲ್ಲಿ ಕೇಜ್ರಿವಾಲ್ ಅವರು ಭಾಗವಹಿಸಲಿದ್ದಾರೆ. ಉತ್ತರ ಪ್ರದೇಶದಲ್ಲಿ ಕೇಜ್ರಿವಾಲ್ ಅವರ ಮೊದಲ ದೊಡ್ಡ ಕಾರ್ಯಕ್ರಮ ಇದಾಗಿದೆ. ಉತ್ತರ ಪ್ರದೇಶ ವಿಧಾನಸಭೆಗೆ 2022ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಎಎಪಿ ಸ್ಪರ್ಧಿಸಲಿದೆ ಎಂದು ಕೇಜ್ರಿವಾಲ್ ಅವರು ಈಗಾಗಲೇ ಘೋಷಿಸಿದ್ದಾರೆ. ರೈತರ ಪ್ರತಿಭಟನೆಯಲ್ಲಿ ಸಕ್ರಿಯವಾಗಿರುವ 40ಕ್ಕೂ ಹೆಚ್ಚು ಮುಖಂಡರು ಕೇಜ್ರಿವಾಲ್ ಜತೆಗಿನ ಸಭೆಯಲ್ಲಿ ಭಾಗವಹಿಸಿದ್ದರು. ದೆಹಲಿ ವಿಧಾನಸಭೆ ಆವರಣದಲ್ಲಿ ಈ ಸಭೆ ನಡೆದಿದೆ.

ಮಥುರಾ: ಮಸೀದಿ ಸ್ಥಳಾಂತರಕ್ಕೆ ಕೋರಿದ್ದ ಅರ್ಜಿ ಸ್ವೀಕಾರ

ಮಥುರಾ(ಪಿಟಿಐ): ಇಲ್ಲಿನ 17ನೇ ಶತಮಾನದ ಮಸೀದಿಯನ್ನು ಸ್ಥಳಾಂತರಿಸುವಂತೆ ಸಲ್ಲಿಸಲಾಗಿದ್ದ ಎರಡು ಪ್ರತ್ಯೇಕ ಅರ್ಜಿಗಳನ್ನು ಸ್ಥಳೀಯ ನ್ಯಾಯಾಲಯ ಶನಿವಾರ ವಿಚಾರಣೆಗೆ ಅಂಗೀಕರಿಸಿದೆ.

ಕೃಷ್ಣನ ಜನ್ಮಸ್ಥಳ ಎಂದು ಭಕ್ತರು ನಂಬಿರುವ ಮಥುರಾದ ದೇಗುಲದ ಬಳಿಯಿಂದ ಈ ಮಸೀದಿಯನ್ನು ಸ್ಥಳಾಂತರಿಸುವಂತೆ ಕೋರಿ ಈ ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಮುಂದಿನ ವಿಚಾರಣೆಯನ್ನು ಮಾರ್ಚ್ 10ಕ್ಕೆ ನಿಗದಿಪಡಿಸಲಾಗಿದೆ.

ಒಂದು ಅರ್ಜಿಯನ್ನು ವಕೀಲ ಶೈಲೇಂದ್ರ ಸಿಂಗ್ ಮತ್ತು ಇತರ ನಾಲ್ವರು ಸಲ್ಲಿಸಿದ್ದಾರೆ ಎಂದು ಜಿಲ್ಲಾ ಸರ್ಕಾರಿ ವಕೀಲ ಸಂಜಯ್ ಗೌರ್ ತಿಳಿಸಿದ್ದಾರೆ. ಇನ್ನೊಂದು ಅರ್ಜಿಯನ್ನು ಹಿಂದೂ ಸೇನಾ ಮುಖ್ಯಸ್ಥ ಮನೀಶ್ ಯಾದವ್ ಸಲ್ಲಿಸಿದ್ದಾರೆ.

ಮಮತಾ ಸೋದರಳಿಯ ನಿವಾಸದಲ್ಲಿ ಸಿಬಿಐ ಶೋಧ

ಒಂದನೇ ಪುಟದಿಂದ...

'ಉಲ್ಲೇಖಿಸಲಾದ ಪ್ರಕರಣಕ್ಕೂ ನಿಮಗೂ ಸಂಬಂಧವಿದೆ ಎಂದು ಕೆಲವು ಸಾಂದರ್ಭಿಕ ಸಾಕ್ಷ್ಯಗಳು ಹೇಳುತ್ತಿವೆ. ಈ ಬಗ್ಗೆ ನಾವು ತನಿಖೆ ನಡೆಸುತ್ತಿದ್ದೇವೆ. ಈ ಸಂಬಂಧ ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕಿದೆ. ಫೆಬ್ರುವರಿ 21ನೇ ರಂದು ಮಧ್ಯಾಹ್ನ ಮೂರು ಗಂಟೆಗೆ ನಿಮ್ಮ ಮನೆಗೆ ಬರುತ್ತೇವೆ. ಆಗ ನೀವು ಇರಬೇಕು' ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

ರುಜಿರಾ ಅವರ ಸೋದರಿ ಮೇನಕಾ ಗಂಭೀರ್ ಅವರಿಗೂ ವಿಚಾರಣೆ ವೇಳೆ ಹಾಜರಿರುವಂತೆ ಸಿಬಿಐ ಅಧಿಕಾರಿಗಳು ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕುನುಸ್ತೋರಿಯಾ ಮತ್ತು ಕಜೋರಾ ಪ್ರದೇಶದಲ್ಲಿನ ಕಲ್ಲಿದ್ದಲು ಗಣಿಗಳಿಂದ ಕಲ್ಲಿದ್ದಲನ್ನು ಕಳ್ಳಸಾಗಣೆ ಮಾಡಲಾಗಿದೆ. ಜತೆಗೆ ಧನಬಾದ್ ಪ್ರದೇಶದಲ್ಲಿನ ಕಲ್ಲಿದ್ದಲು ಗಣಿಯಲ್ಲಿ ಕಲ್ಲಿದ್ದಲನ್ನು ಕಳ್ಳತನ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ 2020ರ ನವೆಂಬರ್‌ನಲ್ಲಿಯೇ ಸಿಬಿಐ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿದ್ದಾರೆ. ಅದಿರು ಕಳ್ಳಸಾಗಣೆ ಪ್ರಕರಣದ ಮುಖ್ಯ ಆರೋಪಿ ಮಾಂಝಿ ಅಲಿಯಾಸ್ ಲಾಲಾ, ಈಸ್ಟರ್ನ್ ಕೋಲ್‌ಫೀಲ್ಡ್ ಲಿಮಿಟೆಡ್‌ನ ವ್ಯವಸ್ಥಾಪಕರ ವಿರುದ್ಧ ದೂರು ದಾಖಲಿಸಲಾಗಿದೆ.

ಧನಬಾದ್‌ನಲ್ಲಿ ಕಲ್ಲಿದ್ದಲು ಕಳ್ಳತನದಲ್ಲಿ ಅಭಿಷೇಕ್ ಬ್ಯಾನರ್ಜಿ ಅವರ ಪತ್ನಿ ಭಾಗಿಯಾಗಿರಬಹುದು ಎಂಬ ಅನುಮಾನದ ಮೇಲೆ ಈ ಶೋಧ ಕಾರ್ಯ ನಡೆಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಸಾಕ್ಷ್ಯ ಲಭ್ಯವಿದೆಯೇ ಎಂಬುದರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಮೂಲಗಳು ತಿಳಿಸಿವೆ.

ಅಭಿಷೇಕ್ ಬ್ಯಾನರ್ಜಿ ಮನೆಗೆ ಸಿಬಿಐ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿರುವುದು ರಾಜಕೀಯ ದ್ವೇಷದ ನಡೆ. ಅಭಿಷೇಕ್ ಬ್ಯಾನರ್ಜಿ ಅವರನ್ನು ಈಚಿನ ದಿನಗಳಲ್ಲಿ ಬಿಜೆಪಿ ಗುರಿ ಮಾಡುತ್ತಿರುವ ರೀತಿ ನೋಡಿದರೆ, ಏನೋ ಆಗುತ್ತದೆ ಎನಿಸುತ್ತಿದೆ ಎಂದು ಟಿಎಂಸಿ ಮುಖಂಡ ಸೌಗತಾ ರಾಯ್ ಹೇಳಿದ್ದಾರೆ.

ನೆಲದ ಕಾನೂನಿನಲ್ಲಿ ನಮಗೆ ನಂಬಿಕೆಯಿದೆ. ನಮ್ಮನ್ನು ಈ ರೀತಿ ಹೆದರಿಸಬಹುದು ಎಂದು ಅವರು ಅಂದುಕೊಂಡಿರಬಹುದು. ನಾವು ಅವರ ಎದುರು ತಲೆಬಾಗುವವರಲ್ಲ
ಅಭಿಷೇಕ್ ಬ್ಯಾನರ್ಜಿ, ಟಿಎಂಸಿ ಸಂಸದ

ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಕಾನೂನು ನೋಡಿಕೊಳ್ಳುತ್ತದೆ. ತಪ್ಪು ಮಾಡಿಲ್ಲವಾದರೆ, ಕಾನೂನಾತ್ಮಕ ಪ್ರಕ್ರಿಯೆಗಳನ್ನು ರಾಜಕೀಯಗೊಳಿಸುವ ಅವಶ್ಯಕತೆ ಇರುವುದಿಲ್ಲ
ಕೈಲಾಶ್ ವಿಜಯವರ್ಗೀಯ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಸಿಬಿಐ ಅಧಿಕಾರಿಗಳು ಭೇಟಿ ನೀಡಿದ ನಂತರ ಅಭಿಷೇಕ್ ಬ್ಯಾನರ್ಜಿ ಅವರ ನಿವಾಸದ ಎದುರು ಪೊಲೀಸರನ್ನು ನಿಯೋಜನೆ ಮಾಡಲಾಗಿದೆ ಪಿಟಿಐ ಚಿತ್ರ

ಪಶ್ಚಿಮ ಬಂಗಾಳ: ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ₹1 ಇಳಿಕೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯಲ್ಲಿ ಲೀಟರ್‌ಗೆ ₹1 ಇಳಿಕೆ ಮಾಡಿದೆ. ಭಾನುವಾರ ಮಧ್ಯರಾತ್ರಿಯಿಂದ ಇದು ಜಾರಿಗೆ ಬಂದಿದೆ.

'ತೈಲ ದರ ಏರಿಕೆಯಿಂದ ಕಂಗೆಟ್ಟಿರುವ ಜನರಿಗೆ ನೆರವಾಗುವ ನಿಟ್ಟಿನಲ್ಲಿ ತೆರಿಗೆ ಇಳಿಕೆ ಮಾಡಲಾಗಿದೆ' ಎಂದು ಪಶ್ಚಿಮ ಬಂಗಾಳ ಹಣಕಾಸು ಸಚಿವ ಅಮಿತ್ ಮಿತ್ರಾ ಹೇಳಿದ್ದಾರೆ.

'ಕೇಂದ್ರ ಸರ್ಕಾರಕ್ಕೆ ಪ್ರತಿ ಲೀಟರ್ ಪೆಟ್ರೋಲ್‌ನಲ್ಲಿ ₹32.90 ಆದಾಯ ಲಭಿಸಿದರೆ, ರಾಜ್ಯ ಸರ್ಕಾರಕ್ಕೆ ₹18.46 ಲಭಿಸುತ್ತಿದೆ. ಪ್ರತಿ ಲೀಟರ್ ಡೀಸೆಲ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ₹ 31.80 ಹಾಗೂ ರಾಜ್ಯ ಸರ್ಕಾರಕ್ಕೆ ₹12.77 ಆದಾಯ ಲಭಿಸುತ್ತಿದೆ' ಎಂದರು.

'ರಾಜ್ಯಗಳೊಂದಿಗಿನ ಅಧಿಕಾರ ಹಂಚಿಕೆಯನ್ನು ತಪ್ಪಿಸುವ ಸಲುವಾಗಿ ಕೇಂದ್ರ ಸರ್ಕಾರವು ಸೆಸ್ ವಿಧಿಸಿದೆ. ಇದು ಸಂಯುಕ್ತ ವ್ಯವಸ್ಥೆಯ ಆಶಯಕ್ಕೆ ವಿರುದ್ಧವಾಗಿದೆ' ಎಂದು ಆರೋಪಿಸಿದ್ದಾರೆ.

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ: ಗೋವಾ ಜಯಭೇರಿ

ಕಮರಿದ ಬಿಎಫ್‌ಸಿ ಪ್ಲೇ ಆಫ್ ಕನಸು

ಫತೋರ್ಡ: ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಮತ್ತೊಮ್ಮೆ ನಿರಾಸೆ ಅನುಭವಿಸಿತು. ಆತಿಥೇಯ ಎಫ್‌ಸಿ ಗೋವಾ ತಂಡವು ಭಾನುವಾರ ಇಲ್ಲಿ ನಡೆದ ಹಣಾಹಣಿಯಲ್ಲಿ 2–1ರಿಂದ ಗೆದ್ದು ಬೀಗಿತು. ಈ ಸೋಲಿನೊಂದಿಗೆ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡದ ಪ್ಲೇ ಆಫ್ ಪ್ರವೇಶದ ಬಾಗಿಲು ಬಹುತೇಕ ಮುಚ್ಚಿತು.

ಜಯದೊಂದಿಗೆ ಗೋವಾ ತಂಡವು ಅಗ್ರ ನಾಲ್ಕರಲ್ಲಿ ಸ್ಥಾನವನ್ನು ಇನಷ್ಟು ಭದ್ರಪಡಿಸಿಕೊಂಡಿತು. ಅಲ್ಲದೆ 12 ಪಂದ್ಯಗಳಲ್ಲಿ ಅಜೇಯವಾಗುಳಿಯುವ ಮೂಲಕ 2014 ಹಾಗೂ 2015ರಲ್ಲಿ ತಾನು ಸ್ಥಾಪಿಸಿದ್ದ, ಹಾಗೂ ಈ ಋತುವಿನಲ್ಲಿ ಮುಂಬೈ ಸಿಟಿ ಎಫ್‌ಸಿ ನಿರ್ಮಿಸಿದ ದಾಖಲೆಯನ್ನು ಸರಿಗಟ್ಟಿತು.

ವಿಜೇತ ಎಫ್‌ಸಿ ಗೋವಾ ತಂಡದ ಇಗೊರ್ ಅಂಗುಲೊ (20ನೇ ನಿಮಿಷ) ಹಾಗೂ ರಿಡೀಮ್ ತಲಾಂಗ್ (23ನೇ ನಿಮಿಷ) ಗೋಲು ದಾಖಲಿಸಿದರು.

ಬೆಂಗಳೂರು ತಂಡದ ಪರ ಏಕೈಕ ಗೋಲು ಸುರೇಶ್ ವಾಂಗ್‌ಜಮ್ (33ನೇ ನಿಮಿಷ) ಮೂಲಕ ಮೂಡಿಬಂತು.

ಆರಂಭದಿಂದಲೇ ಉಭಯ ತಂಡಗಳು ಜಿದ್ದಾಜಿದ್ದಿನ ಪೈಪೋಟಿ ನಡೆಸಿದವು. 19ನೇ ನಿಮಿಷದಲ್ಲಿ ಬಿಎಫ್‌ಸಿಯ ಆಶಿಕ್ ಕುರುಣಿಯನ್ ಹಳದಿ ಕಾರ್ಡ್ ದರ್ಶನ ಮಾಡಿದರು. ಇದಾದ ಒಂದು ನಿಮಿಷದ ಬಳಿಕ ಸ್ಪೇನ್‌ನ ಇಗೊರ್ ಅಂಗುಲೊ ಮೋಡಿ ಮಾಡಿದರು. ಗ್ಲ್ಯಾನ್ ಮಾರ್ಟಿನ್ಸ್ ನೆರವು ಪಡೆದ ಅವರು ಅತೀ ಸಮೀಪದಿಂದ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಇದಾದ ಮೂರನೇ ನಿಮಿಷದಲ್ಲಿಯೇ ಸುನಿಲ್ ಚೆಟ್ರಿ ಪಡೆಗೆ ಮತ್ತೊಂದು ಆಘಾತ ಎದುರಾಯಿತು. ರಿಡೀಮ್ ತಲಾಂಗ್ ಗೋವಾದ ಮುನ್ನಡೆಯನ್ನು 2–0ಕ್ಕೆ ಹಿಗ್ಗಿಸಿದರು. ಅಲೆಕ್ಸಾಂಡರ್ ಜೇಸುರಾಜ್ ನೆರವಿನಿಂದ ಗೋಲು ದಾಖಲಿಸಿದರು.

ಈ ವೇಳೆ ಗೋವಾ, ಪಂದ್ಯದಲ್ಲಿ ಸಂಪೂರ್ಣ ಪಾರಮ್ಯ ಸಾಧಿಸುವ ಹಂತದಲ್ಲಿದ್ದಾಗ, ಕ್ಲೀಟನ್ ಸಿಲ್ವಾ ನೆರವು ಪಡೆದ ಸುರೇಶ್ ವಾಂಗಜಮ್ ಗೋಲು ದಾಖಲಿಸಿ ಬಿಎಫ್‌ಸಿಯ ಹಿನ್ನಡೆಯನ್ನು ತಗ್ಗಿಸಿದರು.

ಈ ಸೋಲಿನೊಂದಿಗೆ ಬಿಎಫ್‌ಸಿ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿ ಉಳಿಯಿತು.

ಬೆಂಗಳೂರು ಎಫ್‌ಸಿ ತಂಡದ ಎರಿಕ್ ಪಾರ್ಟಲು (ಎಡದಿಂದ ಎರಡನೆಯವರು) ಹಾಗೂ ಗೋವಾ ತಂಡದ ಧೀರಜ್ ಸಿಂಗ್ (ಹಳದಿ ಜೆರ್ಸಿ) ಚೆಂಡಿಗಾಗಿ ಪೈಪೋಟಿ ನಡೆಸಿದರು— ಪಿಟಿಐ ಚಿತ್ರ

ವಿಂಕಾ, ಸನಾಮಾಚಾ ಚಾನು ಚಿನ್ನದ 'ಪಂಚ್'

ನವದೆಹಲಿ (ಪಿಟಿಐ): ಭಾರತದ ಮಹಿಳಾ ಬಾಕ್ಸರ್‌ಗಳಾದ ವಿಂಕಾ (60 ಕೆಜಿ ವಿಭಾಗ) ಹಾಗೂ ಟಿ.ಸನಾಮಾಚಾ ಚಾನು (75 ಕೆಜಿ) ಮಾಂಟೆನೆಗ್ರೊದ ಬುದ್ವಾದಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಬಾಕ್ಸಿಂಗ್ ಟೂರ್ನಿಯಲ್ಲಿ ಚಿನ್ನದ ಪದಕಗಳಿಗೆ ಮುತ್ತಿಟ್ಟರು.

ಎರಡು ಬೆಳ್ಳಿ ಹಾಗೂ ಮೂರು ಕಂಚಿನ ಪದಕಗಳೂ ಭಾನುವಾರ ಭಾರತದ ಬಾಕ್ಸರ್‌ಗಳ ಪಾಲಾದವು.

ರೋಹ್ಟಕ್‌ನ ವಿಂಕಾ ಅವರು ಫೈನಲ್‌ನಲ್ಲಿ 5–0ಯಿಂದ ಮೊಲ್ಡೊವಾದ ಕ್ರಿಸ್ಟಿನಾ ಕ್ರಿಪರ್ ಅವರನ್ನು ಸುಲಭವಾಗಿ ಮಣಿಸಿದರು. 75 ಕೆಜಿ ವಿಭಾಗದಲ್ಲಿ ಮಣಿಪುರದ ಸನಾಮಾಚಾ ಚಾನು ಇಷ್ಟೇ ಅಂತರದಿಂದ ಭಾರತದವರೇ ಆದ ರಾಜ್ ಸಹೀಬಾ ಅವರನ್ನು ಸೋಲಿಸಿದರು.

48 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಭಾರತದ ಗೀತಿಕಾ 1–4ರಿಂದ ಉಜ್ಬೆಕಿಸ್ತಾನದ ಫಜ್ಲೋನಾ ಎದುರು ಮಣಿದು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟರೆ, 57 ಕೆಜಿ ವಿಭಾಗದ ಸೆಮಿಫೈನಲ್ ಹಣಾಹಣಿಯಲ್ಲಿ 1–4ರಿಂದ ಮೊಂಟೆನೆಗ್ರೊದ ಬೋಜನಾ ಗೋಜ್‌ಕೊವಿಚ್ ಎದುರು ಸೋತ ಪ್ರೀತಿ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಪುರುಷರ ವಿಭಾಗದ ಸೆಮಿಫೈನಲ್ ಬೌಟ್‌ಗಳಲ್ಲಿ ಮಣಿದ ಪ್ರಿಯಾಂಶು ದಾಸ್ (49 ಕೆಜಿ), ಜುಗ್ನೂ (91 + ಕೆಜಿ) ಕೂಡ ಕಂಚಿನ ಪದಕಗಳಿಗೆ ಒಡೆಯರಾದರು.

ಕ್ರಾಸ್ ಕಂಟ್ರಿ: ಪರಸಪ್ಪಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪರಸಪ್ಪ ಎಂ. ಹಳಿಜೋಳ ಅವರು ಚಂಡೀಗಢದ ದೇರಾ ಬಸ್ಸಿಯಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನ ಪುರುಷರ 10 ಕಿಲೊ ಮೀಟರ್ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಮಹಿಳೆಯರ ವಿಭಾಗದಲ್ಲಿ ಹರಿಯಾಣದ ಸೋನಿಕಾ ಪ್ರಶಸ್ತಿ ಗೆದ್ದುಕೊಂಡರು. 16 ವರ್ಷದೊಳಗಿನ ಬಾಲಕಿಯರ ಎರಡು ಕಿಲೋಮೀಟರ್ ಓಟದಲ್ಲಿ ರಾಜ್ಯದ ಪ್ರಿಯಾಂಕ ಮಡಿವಾಳಪ್ಪ ಎರಡನೇ ಸ್ಥಾನ ಗಳಿಸಿದರು.

ಧಾರವಾಡದಲ್ಲಿ ತರಬೇತಿ ಪಡೆಯುತ್ತಿರುವ ವಿಜಯಪುರದ ಪರಸಪ್ಪ ಪ್ರಶಸ್ತಿ ಗೆಲ್ಲುವ ನೆಚ್ಚಿನ ಕ್ರೀಡಾಪಟುಗಳು ಎನಿಸಿದ್ದ ಮಧ್ಯಪ್ರದೇಶದ ವಿಕ್ರಂ ಬಾಂಗ್ರಿಯ, ಮಹಾರಾಷ್ಟ್ರದ ಆದೇಶ್ ಯಾದವ್, ರೈಲ್ವೇಸ್‌ನ ಅಭಿಷೇಕ್ ಪಾಲ್, ಎ.ಬಿ. ಬೆಳ್ಳಿಯಪ್ಪ, ದರ್ಶನ್ ಸಿಂಗ್, ಹರಿ ಸಿಂಗ್ ಮತ್ತು ಹಾಲಿ ಚಾಂಪಿಯನ್ ಸರ್ವಿಸಸ್‌ನ ಅನೀಶ್‌ಥಾಪ ಅವರನ್ನು ಹಿಂದಿಕ್ಕಿ 31 ನಿಮಿಷ, 13.21ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಮಂಜು ಮುಸುಕಿದ ವಾತಾವರಣದಲ್ಲಿ ಓಟ ಅಷ್ಟು ಸುಲಭವಾಗಿರಲಿಲ್ಲ. 224 ಮಂದಿ ಸ್ಪರ್ಧಾಳುಗಳಿದ್ದ ಪುರುಷರ ವಿಭಾಗದಲ್ಲಿ ವಿಕ್ರಂ ಬಾಂಗ್ರಿಯಾ 31:15.21 ನಿಮಿಷಗಳಲ್ಲಿ ಓಟ ಪೂರೈಸಿದರೆ ಮೂರನೇ ಸ್ಥಾನ ಗಳಿಸಿದ ಆದೇಶ್ ಯಾದವ್ 31:19.41 ನಿಮಿಷ ತೆಗೆದುಕೊಂಡರು. ಮಹಿಳಾ ವಿಭಾಗದಲ್ಲಿ 173 ಸ್ಪರ್ಧಿಗಳಿದ್ದರು. ಸೋನಿಕಾ 37:09.53 ನಿಮಿಷಗಳಲ್ಲಿ ಗುರಿ ಮುಟ್ಟಿದರೆ ಮಹಾರಾಷ್ಟ್ರದ ಕೋಮಲ್ ಜಗದಾಳೆ (37:11.40 ನಿ) ಎರಡನೇ ಸ್ಥಾನ ಗಳಿಸಿದರು. ಮಹಾರಾಷ್ಟ್ರದವರೇ ಆದ ನಿಕಿತಾ ರಾವುತ್ (37:12.71ನಿ) ಮೂರನೇ ಸ್ಥಾನ ಗಳಿಸಿದರು.

18 ವರ್ಷದೊಳಗಿನ ಬಾಲಕರ ಆರು ಕಿಲೋಮೀಟರ್ ಓಟದಲ್ಲಿ ಹರಿಯಾಣದ ಗಗನ್ ಸಿಂಗ್ (19:55.74ನಿ) ಮೊದಲಿಗರಾದರು. ಮಧ್ಯಪ್ರದೇಶದ ನವೀನ್ ಚೌಹಾಣ್ ಮತ್ತು ಮಹಾರಾಷ್ಟ್ರದ ಕರಣ್ ಗಹಂದುಳೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

16 ವರ್ಷದೊಳಗಿನ ಬಾಲಕರ ಎರಡು ಕಿಲೋಮೀಟರ್ ಓಟದ ಪ್ರಶಸ್ತಿ ಹರಿಯಾಣದ ರೋಹಿತ್ (6:12.34ನಿ) ಮುಡಿಯೇರಿತು. ತಮಿಳುನಾಡಿನ ವಾಲ್ಟರ್ ಮತ್ತು ಉತ್ತರ ಪ್ರದೇಶದ ರಾಹುಲ್ ವರ್ಮಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು. ಬಾಲಕಿಯರ ವಿಭಾಗದಲ್ಲಿ ಉತ್ತರ ಪ್ರದೇಶದ ಸುನಿತಾ ದೇವಿ (6:37.30ನಿ) ಮೊದಲಿಗರಾದರು. ಕರ್ನಾಟಕದ ಪ್ರಿಯಾಂಕ ಮಡಿವಾಳಪ್ಪ ಮತ್ತು ಮಹಾರಾಷ್ಟ್ರದ ಸಾನಿಕ ರುಪ್ನಾರ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

‘ತವರು ದೇಶಗಳಿಗೆ ಪಿಚ್ ಆಯ್ಕೆಯ ಹಕ್ಕು ಇದೆ’

ಅಹಮದಾಬಾದ್: ಚೆನ್ನೈನ ಚೆಪಾಕ್ ಕ್ರೀಡಾಂಗಣದ ಪಿಚ್ ಉತ್ತಮ ಗುಣಮಟ್ಟದ್ದಾಗಿರಲಿಲ್ಲ ಎಂದು ಟೀಕಿಸಿದ್ದ ಇಂಗ್ಲೆಂಡ್‌ನ ಮಾಜಿ ಆಟಗಾರರಿಗೆ ಭಾರತ ತಂಡದ ರೋಹಿತ್ ಶರ್ಮಾ ತಿರುಗೇಟು ನೀಡಿದ್ದಾರೆ.

'ಭಾರತ ತಂಡವು ಬೇರೆ ದೇಶಗಳಿಗೆ ಪ್ರವಾಸ ಮಾಡಿದಾಗ ಪಿಚ್‌ಗಳ ಕುರಿತು ಎಂದೂ ದೂರಿಲ್ಲ. ಭಾರತದಲ್ಲಿ ಸ್ಪಿನ್ ಸ್ನೇಹಿ ಪಿಚ್‌ಗಳು ಇರುವುದು ಸಾಮಾನ್ಯ. ಆದರೂ ಇವತ್ತಿಗೂ ವಿದೇಶಿ ಆಟಗಾರರು ಟೀಕಿಸುತ್ತಾರೆ. ಆತಿಥೇಯ ತಂಡಗಳಿಗೆ ಅನುಕೂಲಕ್ಕೆ ತಕ್ಕಂತೆ ಪಿಚ್ ಸಿದ್ಧಪಡಿಸಿಕೊಳ್ಳುವ ಹಕ್ಕು ಇದೆ’ ಎಂದು ರೋಹಿತ್ ಭಾನುವಾರ ಹೇಳಿದ್ದಾರೆ.

ಇಂಗ್ಲೆಂಡ್ ಮಾಜಿ ನಾಯಕ ಮೈಕೆಲ್ ವಾನ್ ಮತ್ತು ಆಸ್ಟ್ರೇಲಿಯಾದ ಮಾಜಿ ಆಟಗಾರ ಮಾರ್ಕ್ ವಾ ಪಿಚ್ ಕುರಿತು ಟೀಕಿಸಿದ್ದರು.

'ಕಣದಲ್ಲಿರುವ ಎರಡೂ ತಂಡಗಳಿಗೆ ಅದೇ ಪಿಚ್ ಇರುತ್ತದೆ. ಇಬ್ಬರಿಗೂ ಸಮಾನ ಅವಕಾಶಗಳಿರುತ್ತವೆ. ಆದರೂ ಈ ಟೀಕೆಗಳು ಯಾಕೆ. ಅಷ್ಟೇ ತಕರಾರು ಇದ್ದರೆ ಅಂರರಾಷ್ಟ್ರೀಯ ಕ್ರಿಕೆಟ್ ಸಮಿತಿಗೆ (ಐಸಿಸಿ) ದೂರು ನೀಡಿ. ಎಲ್ಲ ದೇಶಗಳಲ್ಲಿಯೂ ತಟಸ್ಥ ಪಿಚ್‌ಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಲಿ’ ಎಂದು ರೋಹಿತ್ ಹೇಳಿದರು.

ಸರ್ಬಿಯಾ ಆಟಗಾರನಿಗೆ 9ನೇ ಪ್ರಶಸ್ತಿ; ರಷ್ಯಾದ ಮೆಡ್ವೆಡೆವ್ ಕನಸು ಭಗ್ನ

ಆಸ್ಟ್ರೇಲಿಯಾ ಓಪನ್‌ಗೆ ಜೊಕೊವಿಚ್ ‘ರಾಜ’

ಮೆಲ್ಬರ್ನ್ (ಎಪಿ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ನೊವಾಕ್ ಜೊಕೊವಿಚ್ ಭಾನುವಾರ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಿದ ಸರ್ಬಿಯಾದ ಈ ತಾರಾ ಆಟಗಾರ 7-5, 6-2, 6-2ರಿಂದ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್ ಅವರನ್ನು ಮಣಿಸಿ ಒಂಬತ್ತನೇ ಬಾರಿ ಆಸ್ಟ್ರೇಲಿಯನ್ ಕಿರೀಟ ಧರಿಸಿದರು. ಇಲ್ಲಿ ಅತಿ ಹೆಚ್ಚು ಪ್ರಶಸ್ತಿ ಗೆದ್ದ ತಮ್ಮದೇ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ರಾಡ್ ಲೇವರ್ ಅರೆನಾದಲ್ಲಿ, ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡ ಜೊಕೊವಿಚ್, ಒಟ್ಟು 18 ಗ್ರ್ಯಾನ್‌ಸ್ಲಾಮ್‌ಗಳ (ಒಂಬತ್ತು ಆಸ್ಟ್ರೇಲಿಯಾ ಓಪನ್, ಐದು ವಿಂಬಲ್ಡನ್, ಮೂರು ಬಾರಿ ಅಮೆರಿಕ ಓಪನ್, ಒಮ್ಮೆ ಫ್ರೆಂಚ್ ಓಪನ್) ಒಡೆಯರಾದರು. ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಹಾಗೂ ಸ್ಪೇನ್‌ನ ರಫೆಲ್ ನಡಾಲ್ ತಲಾ 20 ಬಾರಿ ಪ್ರಶಸ್ತಿ ಜಯಿಸಿದ್ದಾರೆ. ಜೊಕೊವಿಚ್ ಸತತ ಮೂರನೇ ವರ್ಷ ಇಲ್ಲಿ ಚಾಂಪಿಯನ್ ಆದರು.

ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಜೊಕೊವಿಚ್ ತಮ್ಮ ಭರ್ಜರಿ ಸರ್ವ್, ರಿಟರ್ನ್‌ಗಳ ಮೂಲಕ ವಿಜೃಂಭಿಸಿದರು. ಬೇಸ್‌ಲೈನ್ ಹೊಡೆತಗಳಲ್ಲೂ ಅವರ ಪಾರಮ್ಯವಿತ್ತು.

ಮೊದಲ ಸೆಟ್‌ನಲ್ಲಿ ತೀವ್ರ ಪೈಪೋಟಿ ನೀಡಿದ ಡ್ಯಾನಿಯಲ್, ಬಳಿಕ ದಣಿದಂತೆ ಕಂಡುಬಂದರು. ಕೊನೆಯ ಎರಡು ಸೆಟ್‌ಗಳನ್ನು ಅವರು ಸುಲಭವಾಗಿ ಕೈಚೆಲ್ಲಿದರು.

ಕಳೆದ 10 ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಜೊಕೊವಿಚ್ ಅವರಿಗೆ ಒಲಿದ ಆರನೇ ಪ್ರಶಸ್ತಿ ಇದು. ಈ ಗೆಲುವಿನೊಂದಿಗೆ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಮಾರ್ಚ್ 8ರವರೆಗೆ ಅಗ್ರಸ್ಥಾನದಲ್ಲಿ ಮುಂದುವರಿಯುವುದನ್ನು ಖಚಿತಪಡಿಸಿದ್ದು, 311 ವಾರಗಳ ಕಾಲ ಈ ಸ್ಥಾನದಲ್ಲಿದ್ದು, ರೋಜರ್ ಫೆಡರರ್ ದಾಖಲೆಯನ್ನು ಅಳಿಸಿಹಾಕಲಿದ್ದಾರೆ. ಮೆಡ್ವೆಡೆವ್ ಎರಡನೇ ಬಾರಿ ಗ್ರ್ಯಾನ್ ಸ್ಲಾಮ್ ಟೂರ್ನಿಯೊಂದರ ಫೈನಲ್ ಪ್ರವೇಶಿಸಿದ್ದರು.

2019ರ ಅಮೆರಿಕ ಓಪನ್ ಟೂರ್ನಿಯ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅವರು ನಡಾಲ್ ಅವರಿಗೆ ಮಣಿದಿದ್ದರು.

ಈ ಪಂದ್ಯದಲ್ಲಿ ಸೋಲುವುದರೊಂದಿಗೆ ರಷ್ಯಾದ 25 ವರ್ಷದ ಆಟಗಾರನ 20 ಪಂದ್ಯಗಳ ಸತತ ಗೆಲುವಿನ ಸರಪಳಿಯೂ ತುಂಡರಿಸಿತು.

ಎರಡನೇ ಸೆಟ್‌ನಲ್ಲಿ ಸೋತ ಬಳಿಕ ಪಂದ್ಯ ಕೈಜಾರುತ್ತಿರುವುದನ್ನು ಅರಿತ ಮೆಡ್ವೆಡೆವ್ ಹತಾಶಗೊಂಡರು. ನೀಲಿ ಅಂಗಣದಲ್ಲಿ ತಮ್ಮ ರೆಕೆಟ್ ಎಸೆದು, ಅದನ್ನು ಮುರಿದು ಹಾಕಿದರು.

ಇದೇ ಕ್ರೀಡಾಂಗಣದಲ್ಲಿ ಜೊಕೊವಿಚ್, ಸೆಮಿಫೈನಲ್ ಅಥವಾ ಫೈನಲ್ ಪಂದ್ಯಗಳಲ್ಲಿ, ಗ್ರ್ಯಾನ್‌ಸ್ಲಾಮ್ ಚಾಂಪಿಯನ್‌ಗಳಾದ ಫೆಡರರ್, ನಡಾಲ್, ಆ್ಯಂಡಿ ಮರ್ರೆ, ಸ್ಟ್ಯಾನ್ ವಾವ್ರಿಂಕಾ, ಡಾಮ್ನಿಕ್ ಥೀಮ್ ಅವರನ್ನು ಸೋಲಿಸಿದ ಶ್ರೇಯ ಹೊಂದಿದ್ದಾರೆ.

ಪ್ರಶಸ್ತಿಯೊಂದಿಗೆ ನೊವಾಕ್ ಜೊಕೊವಿಚ್ ಸಂಭ್ರಮ –ರಾಯಿಟರ್ಸ್ ಚಿತ್ರ

ಸಮರ್ಥ್ ಬಳಗಕ್ಕೆ ಜಯದ ತವಕ

ವಿಜಯ್ ಹಜಾರೆ ಟ್ರೋಫಿ: ಕರ್ನಾಟಕ–ಬಿಹಾರ ಸೆಣಸು

ಬೆಂಗಳೂರು: ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಆರಂಭದಲ್ಲಿಯೇ ಹಾಲಿ ಚಾಂಪಿಯನ್ ಕರ್ನಾಟಕ ತಂಡವು ತೀವ್ರ ಒತ್ತಡಕ್ಕೆ ಸಿಲುಕಿದೆ.

ಸಿ. ಗುಂಪಿನ ಮೊದಲ ಪಂದ್ಯದಲ್ಲಿ ಉತ್ತರಪ್ರದೇಶ ಎದುರು ಸೋತಿರುವ ಆರ್. ಸಮರ್ಥ್ ನಾಯಕತ್ವದ ಬಳಗವು ಉಳಿದ ನಾಲ್ಕು ಪಂದ್ಯಗಳಲ್ಲಿ ಜಯಿ ಸಿದರೆ ಮಾತ್ರ ನಾಕೌಟ್ ಅವಕಾಶದ ಬಾಗಿಲು ತೆರೆಯಬಹುದು. ಸೋಮವಾರ ಜಸ್ಟ್ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ನಡೆಯಲಿರುವ ಎರಡನೇ ಸುತ್ತಿನಲ್ಲಿ ಸಮರ್ಥ್ ಪಡೆ ಬಿಹಾರ ತಂಡವನ್ನು ಎದುರಿಸಲಿದೆ.

ಬಿಹಾರ, ಮೊದಲ ಸುತ್ತಿನಲ್ಲಿ ರೈಲ್ವೆಸ್ ಎದುರು ಸೋತಿತ್ತು. ಕರ್ನಾಟಕಕ್ಕೆ ಹೋಲಿಸಿದರೆ ಬಲಾಢ್ಯ ತಂಡವೇನಲ್ಲ. ಆದರೂ ಮೈಮರೆಯುವಂತಿಲ್ಲ. ಸಮರ್ಥ್ ತಮ್ಮ ಬ್ಯಾಟಿಂಗ್ ಲಯ ಕಂಡುಕೊಂಡರೆ ಉತ್ತಮ ಆರಂಭ ಲಭಿಸಬಹುದು. ದೇವದತ್ತ ಪಡಿಕ್ಕಲ್ ಮತ್ತು ಅನಿರುದ್ಧ ಜೋಶಿ ಬೀಸಾಟ ಮುಂದುವರಿಸುವ ಭರವಸೆ ಇದೆ.

ಕೆ.ವಿ. ಸಿದ್ಧಾರ್ಥ್ ಮತ್ತು ಕರುಣ್ ನಾಯರ್ ಇನ್ನೂ ತಮ್ಮ ನೈಜ ಆಟಕ್ಕೆ ಕುದುರಬೇಕು. ದೊಡ್ಡ ಮೊತ್ತದ ಸ್ಕೋರ್ ಗಳಿಸಿದರೆ ಅವರಿಗೂ ಮತ್ತು ತಂಡಕ್ಕೆ ಲಾಭ. ಶ್ರೇಯಸ್ ಗೋಪಾಲ್ ಉತ್ತಮ ಬೌಲಿಂಗ್ ಮಾಡಿದ್ದರು. ಬಿ.ಆರ್. ಶರತ್ ಕೆಳಮಧ್ಯಮ ಕ್ರಮಾಂಕಕ್ಕೆ ಬಲ ತುಂಬಬೇಕಿದೆ. ಬಿಹಾರ ತಂಡದ ಆಲ್‌ರೌಂಡರ್‌ಗಳಾದ ಅನುಜ್ ರಾಜ್ ಮತ್ತು ಶಬ್ಬೀರ್ ಖಾನ್ ಅವರಿಬ್ಬರೇ ಕಳೆದ ಪಂದ್ಯದಲ್ಲಿ ಮಿಂಚಿದ್ದರು. ಉಳಿದಂತೆ ಅವರ ಬೌಲಿಂಗ್ ಪಡೆಯ ಸಾಧನೆ ಅಷ್ಟಕ್ಕಷ್ಟೆ. ಆದ್ದರಿಂದ ದೊಡ್ಡ ಅಂತರದ ಜಯ ಸಾಧಿಸಲು ಕರ್ನಾಟಕಕ್ಕೆ ಒಳ್ಳೆಯ ಅವಕಾಶ ಇಲ್ಲಿದೆ.

ಅನಿರುದ್ಧ ಜೋಶಿ

ತಂಡಗಳು: ಕರ್ನಾಟಕ: ಆರ್. ಸಮರ್ಥ್ (ನಾಯಕ), ಬಿ.ಆರ್. ಶರತ್ (ವಿಕೆಟ್‌ಕೀಪರ್), ದೇವದತ್ತ ಪಡಿಕ್ಕಲ್, ಕೆ.ವಿ. ಸಿದ್ಧಾರ್ಥ್, ಕರುಣ್ ನಾಯರ್, ಶ್ರೇಯಸ್ ಗೋಪಾಲ್, ಅನಿರುದ್ಧ ಜೋಶಿ, ಜೆ. ಸುಚಿತ್, ಅಭಿಮನ್ಯು ಮಿಥುನ್, ರೋನಿತ್ ಮೋರೆ, ಪ್ರಸಿದ್ಧಕೃಷ್ಣ, ಡಿ. ನಿಶ್ಚಲ್, ರೋಹನ್ ಕದಂ, ವೈಶಾಖ ವಿಜಯಕುಮಾರ್, ಆದಿತ್ಯ ಸೋಮಣ್ಣ, ಎಂ.ಬಿ ದರ್ಶನ್, ನಿಕಿನ್ ಜೋಸ್, ಎಸ್. ರಕ್ಷಿತ್, ಕೆ.ಎಲ್. ಶ್ರೀಜಿತ್, ಮನೋಜ್ ಭಾಂಡಗೆ, ಶುಭಾಂಗ್ ಹೆಗಡೆ. **ಬಿಹಾರ:** ಆಶುತೋಷ್ ಅಮನ್ (ನಾಯಕ), ವಿಕಾಸ್ ಯಾದವ್, ಎಸ್. ಗಣಿ, ಶಶೀಮ್ ರಾಥೋಡ್, ಬಾಬುಲ್ ಕುಮಾರ್, ಆಕಾಶರಾಜ್, ಶಬ್ಬೀರ್ ಖಾನ್, ಅನುಜ್ ರಾಜ್, ಸಮರ್ ಖಾದ್ರಿ, ರಾಹುಲ್ ಕುಮಾರ್, ವಿಕಾಸ್ ರಂಜನ್, ವಿಶಾಶ್ ಪಟೇಲ್, ಶಶಿ ಆನಂದ್, ರಿಶವ್ ರಾಜ್, ಸೂರಜ್ ಕಶ್ಯಪ್.

ಸಿ ಗುಂಪಿನ ಪಂದ್ಯಗಳು

ರೈಲ್ವೆಸ್–ಒಡಿಶಾ (ಸ್ಥಳ: ಚಿನ್ನಸ್ವಾಮಿ ಕ್ರೀಡಾಂಗಣ)

ಕೇರಳ – ಉತ್ತರ ಪ್ರದೇಶ (ಕೆಎಸ್‌ಸಿಎ ಕ್ರೀಡಾಂಗಣ, ಆಲೂರು)

ಪಂದ್ಯಗಳ ಆರಂಭ: ಬೆಳಿಗ್ಗೆ 9

ಫುಟ್‌ಬಾಲ್ ಆಟಗಾರ ಸಾವು

ಚೆನ್ನೈ (ಪಿಟಿಐ): ಚೆನ್ನೈಯಿನ್ ಎಫ್‌ಸಿ ತಂಡದ 18 ವರ್ಷದೊಳಗಿನ ವಿಭಾಗದ ಮಾಜಿ ಆಟಗಾರ ಅಲೋಯ್ಸಿಯಸ್ ಕ್ಲೆಮೆಂಟ್ (18) ಕೇರಳದಲ್ಲಿ ಭಾನುವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಸಾವಿಗೀಡಾಗಿದ್ದಾರೆ ಎಂದು ತಂಡವು ತಿಳಿಸಿದೆ.

ಕೇರಳ ರಾಜಧಾನಿ ತಿರುವನಂತಪುರದ ಪುಲ್ಲುವಿಳ ಗ್ರಾಮದ ಅವನಾಕುಳಿಯಲ್ಲಿ ಎರಡು ಬೈಕ್‌ಗಳ ನಡುವಿನ ಡಿಕ್ಕಿಯಲ್ಲಿ ಕ್ಲೆಮೆಂಟ್ ಸಾವಿಗೀಡಾಗಿದ್ದಾರೆ ಎಂದು ಅದು ಟ್ವೀಟ್ ಮಾಡಿದೆ.

ಪುಲ್ಲುವಿಳದ ಮೀನುಗಾರ ಕುಟುಂಬದಲ್ಲಿ ಜನಿಸಿದ ಕ್ಲೆಮೆಂಟ್ ಎರಡು ವರ್ಷಗಳಿಂದ ಚೆನ್ನೈಯಿನ್ ಎಫ್‌ಸಿಯಲ್ಲಿದ್ದರು. ಲಾಕ್‌ಡೌನ್ ಮುಗಿದ ನಂತರ ಚೆನ್ನೈಯಿಂದ ತವರೂರಿಗೆ ಅವರು ಬಂದಿದ್ದರು.

ಹೈದರಾಬಾದ್ ರೇಸ್

‘ಎನ್.ಆರ್.ಐ ವ್ಯಾಲಿ’ ಗೆಲ್ಲುವ ನಿರೀಕ್ಷೆ

ಎಲೂಸಿವ್ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಈ ರೇಸ್‌ನಲ್ಲಿ ‘ಎನ್.ಆರ್.ಐ ವ್ಯಾಲಿ’ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.20ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬ್ಯೂಟಿ ಆನ್ ಪೆರೇಡ್ 1. ಪ್ಲಾಟಿನಮ್ ಕ್ಲಾಝ್ 4, ಬಿಗ್ ಡೇ 9

2ನೇ ರೇಸ್: ಮಿರಾನ 8, ಹೊರಸ್ 4, ಕೇಸರಿಯ ಬಾಲಮ್ 5

3ನೇ ರೇಸ್: ಗ್ರ್ಯಾಂಡ್ ಡ್ಯೂಕ್ 3, ಪೈಂಟೆಡ್ ಅಪಾಚೆ 5, ಫಾಟುಮ 10

4ನೇ ರೇಸ್: ಫ್ಲೆಮಿಂಗೊ ಫ್ಲೇಮ್ 3, ಬ್ಲಿಕ್‌ಫ್ಯಾಂಗ್ 8, ಗಸ್ಟಿ ನೋಟ್ 9

5ನೇ ರೇಸ್: ಏರ್ ಸೆಲ್ಯೂಟ್ 1, ಆರ್ಕೇಡಿಯನ್ ಏಂಜೆಲ್ 10, ಫ್ಲೈಯಿಂಗ್ ಕ್ವೀನ್ 4

6ನೇ ರೇಸ್: ಎನ್.ಆರ್.ಐ ವ್ಯಾಲಿ 2, ರೆಡ್ ಸ್ನಾಪರ್ 6, ಚಕಿಟ್ 7

7ನೇ ರೇಸ್: ಗಸ್ಟಿ ಲುಕ್ 2, ಲೈಟ್ನಿಂಗ್ ಪವರ್ 7, ಡಿಲ್ಲಾನ್ 11

8ನೇ ರೇಸ್: ಲೈನ್‌ವೈಲರ್ 1, ಸೋಲ್ ಎಂಪ್ರೆಸ್ 4, ಏಂಜೆಲ್ ಟೆಸೊರೊ 8

ಉತ್ತಮ ಬೆಟ್: ಮಿರಾನ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

‘ಕಿರುಕುಳ’: ಮನು ಆರೋಪ ಅಲ್ಲಗಳೆದ ಏರ್ ಇಂಡಿಯಾ

ಬೆಂಗಳೂರು: ‘ದೆಹಲಿ ವಿಮಾನ ನಿಲ್ದಾಣದಲ್ಲಿ ಅಧಿಕಾರಿಗಳು ತನಗೆ ‘ಕಿರುಕುಳ’ ನೀಡಿದ್ದಾರೆ. ಎಲ್ಲ ದಾಖಲೆಗಳಿದ್ದರೂ ವಿಮಾನ ಹತ್ತಲು ಅವಕಾಶ ನೀಡಲಿಲ್ಲ’ ಎಂದು ಶೂಟರ್ ಮನು ಭಾಕರ್ ಮಾಡಿದ್ದ ಆರೋಪವನ್ನು ಏರ್ ಇಂಡಿಯಾ ಸಂಸ್ಥೆಯು ಭಾನುವಾರ ಅಲ್ಲಗಳೆದಿದೆ. ಈ ಕುರಿತು ಅದು ಹೇಳಿಕೆ ಬಿಡುಗಡೆ ಮಾಡಿದೆ.

ಮನು ಭಾಕರ್

‘ಮನು ಅವರು ಏರ್ ಪಿಸ್ತೂಲ್ ಮತ್ತು ಶೂಟಿಂಗ್ ಉಪಕರಣಗ ಳನ್ನು ಹೊಂದಿದ್ದರಿಂದ, ಅವುಗ ಳನ್ನು ಸಾಗಿಸಲು ವಿನಾಯಿತಿ ಪಡೆಯ ಬೇಕಿತ್ತು. ಅದಕ್ಕೆ ಅಗತ್ಯ ಕಡ್ಡಾಯ ದಾಖಲೆಗಳನ್ನು ಅಧಿಕಾರಿಗಳು ಕೇಳಿದ್ದಾರೆ. ಮಾನದಂಡಗಳ ಪ್ರಕಾರ ಶಸ್ತ್ರಾಸ್ತ್ರಗಳನ್ನು ಸಾಗಿಸಲು ವಿನಾಯಿತಿಗಾಗಿ ಮನು ಮೊದಲು ನೀಡಿರಲಿಲ್ಲ. ಮಾನದಂಡಗಳ ಕುರಿತು ಅವರಿಗೆ ತಿಳಿಸಲಾಯಿತು. ದಾಖಲೆ ಯನ್ನು ನೀಡಿದ ಕೂಡಲೇ, ಶಸ್ತ್ರಾಸ್ತ್ರ ಸೇರಿದಂತೆ ಅವರ ಶೂಟಿಂಗ್ ಉಪಕರಣಗಳನ್ನು ಸಾಗಣೆಗೆ ಸ್ವೀಕರಿಸಲಾಗಿದೆ’ ಎಂದು ಏರ್ ಇಂಡಿಯಾ ಹೇಳಿದೆ.

ಸೈಕ್ಲಿಂಗ್: ಕರ್ನಾಟಕಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಗದಗ: ಮೂರು ದಿನವೂ ಪ್ರಾಬಲ್ಯ ಮೆರೆದ ಕರ್ನಾಟಕ ಇಲ್ಲಿನ ಬಿಂಕದಕಟ್ಟಿ ಸಾಲುಮರದ ತಿಮ್ಮಕ್ಕ ಉದ್ಯಾನದಲ್ಲಿ ಭಾನುವಾರ ಮುಕ್ತಾಯಗೊಂಡ 17ನೇ ರಾಷ್ಟ್ರೀಯ ಎಂಟಿಬಿ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿತು.

ರಾಜ್ಯ ತಂಡ 86 ಪಾಯಿಂಟ್‌ಗಳನ್ನು ಪಡೆದರೆ, ರನ್ನರ್ಸ್ ಅಪ್ ಸ್ಥಾನ ಗಳಿಸಿದ ಮಹಾರಾಷ್ಟ್ರಕ್ಕೆ 41 ಪಾಯಿಂಟ್‌ಗಳು ಲಭಿಸಿದವು.

ಕರ್ನಾಟಕದ ಆ್ಯಡುನಿಸ್ ಟಂಗ್ಛು (ಪುರುಷರ ವಿಭಾಗದ ಅತ್ಯುತ್ತಮ ಸೈಕ್ಲಿಸ್ಟ್) ಮತ್ತು ಮಹಾರಾಷ್ಟ್ರದ ಪ್ರಣೀತಾ ಸೋಮನ್ (ಮಹಿಳಾ ವಿಭಾಗ) ಪ್ರಶಸ್ತಿ ಪಡೆದರು.

ಭಾನುವಾರದ ಫಲಿತಾಂಶ: ಪುರುಷರ ವಿಭಾಗ; (ಕ್ರಾಸ್ ಕಂಟ್ರಿ 23 ಕಿ.ಮೀ.): ಶಿವನ್ (ಕಾಲ: 01:10:43.000, ಹಿಮಾಚಲ ಪ್ರದೇಶ)–1, ವೈಶಾಖ್ ಕೆ.ವಿ. (ಕಾಲ: 01:11:03, ಕರ್ನಾಟಕ)–2, ರಜತ್ (ಕಾಲ: 01:12:20.000, ಉತ್ತರಾಖಂಡ)–3. (27.4 ಕಿ.ಮೀ. ಕ್ರಾಸ್ ಕಂಟ್ರಿ): ಶಿವನ್ (ಕಾಲ: 01:22:24.206, ಹಿಮಾಚಲ ಪ್ರದೇಶ)–1, ಕಮಲೇಶ್ (ಕಾಲ: 01:22:50.390, ಆರ್ಮಿ ಅಡ್ವೆಂಚರ್ ವಿಂಗ್)– 2, ರಜತ್ (ಕಾಲ: 01:23:18.110, ಉತ್ತರಾಖಂಡ)–3. 14 ವರ್ಷದೊಳಗಿನ ಬಾಲಕರು; (15 ಕಿ.ಮೀ. ಕ್ರಾಸ್ ಕಂಟ್ರಿ): ಸಮರ್ಪಣ್ ಜೈನ್ (ಕಾಲ:37:38.946, ಕರ್ನಾಟಕ)–1, ಅದೀಪ್ ವಾಘ್ (ಕಾಲ: 38:03.811, ಮಹಾರಾಷ್ಟ್ರ)–2, ಶಿವಾಂಶ ಶಾಹ (ಕಾಲ: 38:59.968, ಉತ್ತರಾಖಂಡ)–3. 16 ವರ್ಷದೊಳಗಿನವರು: (15 ಕಿ.ಮೀ. ಕ್ರಾಸ್ ಕಂಟ್ರಿ): ಚರಿತಗೌಡ (ಕಾಲ: 28:11.357, ಕರ್ನಾಟಕ)– 1, ಸುಧಾಂಶು (ಕಾಲ: 29:18.310, ಪಶ್ಚಿಮ ಬಂಗಾಳ)– 2, ಅವನೀಶ್ ರಾಣಾ (ಕಾಲ: 30:13.116, ಉತ್ತರಾಖಂಡ)–3. 18 ವರ್ಷದೊಳಗಿನವರು; (18.5 ಕಿ.ಮೀ. ಕ್ರಾಸ್ ಕಂಟ್ರಿ ಒಲಿಂಪಿಕ್): ಅಡೋನಿಸ್ ಟಂಗ್ಛು (ಕಾಲ: 53:07.056, ಕರ್ನಾಟಕ)– 1, ಹರ್ಷಿತ್ ಕೆ.ಜೆ. (ಕಾಲ: 56:52.834, ಕರ್ನಾಟಕ)– 2, ಮಲವ್ ದತ್ತ (ಕಾಲ: 59:28.009, ಚಂಡೀಗಡ)–3. ಪುರುಷರ ವಿಭಾಗ; (23 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್ಸ್): ಕಮಲೇಶ್ (ಕಾಲ: 01:06:42.462)– 1, ಶಿವನ್ (ಕಾಲ: 01:07:29.840, ಹಿಮಾಚಲ ಪ್ರದೇಶ)–2, ಪ್ರಕಾಶ್ ಥಾಪ (ಕಾಲ: 01:09:29.973, ಆರ್ಮಿ ಅಡ್ವೆಂಚರ್ ವಿಂಗ್)– 3. ಮಹಿಳೆಯರ ವಿಭಾಗ; (18.5 ಕಿ.ಮೀ. ಕ್ರಾಸ್ ಕಂಟ್ರಿ): ಪ್ರಣೀತಾ ಸೋಮನ್ (ಕಾಲ: 01:10:29.619, ಮಹಾರಾಷ್ಟ್ರ)– 1, ಜೋತ್ಸ್ನಾ ನರ್ಜೆರಿ (ಕಾಲ: 01:14:57.998, ಕರ್ನಾಟಕ)– 2, ಪ್ರಿಯಾಂಕ ಕರಾಂಡೆ (ಕಾಲ: 01:17:30.557, ಮಹಾರಾಷ್ಟ್ರ)–3. 18 ವರ್ಷದೊಳಗಿನ ಮಿಶ್ರ ವಿಭಾಗ; (18.5 ಕಿ.ಮೀ. ರಿಲೇ): ಅಡೋನಿಸ್, ಹರ್ಷಿತ್, ಸ್ವಾರ್ ನರ್ಜೆರಿ, ಅಕ್ಷತಾ (ಕಾಲ: 01:07: 45.641, ಕರ್ನಾಟಕ)– 1, ನಿಬಿನ್, ಕಿರಣ, ಬಿನಿಲಾ ಮೋಳ್, ಅಗ್ನಾ ಥಾಮಸ್ (ಕಾಲ: 01:09:35.608, ಕೇರಳ)–2, ಜತಿನ್, ಸಂಗಾರಾಮ, ನಿಶಾ ಕುಮಾರಿ, ಮಾನವಿ ಪಾಟೀಲ್ (ಕಾಲ: 01:20:10.068 ಮಹಾರಾಷ್ಟ್ರ)– 3. ಬಾಲಕಿಯರ ವಿಭಾಗ: 14 ವರ್ಷದೊಳಗಿನವರು: (15 ಕಿ.ಮೀ. ಕ್ರಾಸ್ ಕಂಟ್ರಿ): ಸಿದ್ಧಿ ಶಿರ್ಕೆ (ಕಾಲ: 47:38.590, ಮಹಾರಾಷ್ಟ್ರ)– 1, ಶ್ರಾವಣಿ ಪರಿತ್ (ಕಾಲ: 48:45.134, ಮಹಾರಾಷ್ಟ್ರ)– 2, ಸೃಷ್ಟಿ ಸಂಜಯ್ (ಕಾಲ: 51:36.831, ಕೇರಳ)– 3. 16 ವರ್ಷದೊಳಗಿನವರು: (15 ಕಿ.ಮೀ. ಕ್ರಾಸ್ ಕಂಟ್ರಿ), ಕರೆನ್ ಮಾರ್ಷಲ್ (ಕಾಲ: 28:46.191, ಕರ್ನಾಟಕ)– 1, ಅಗ್ನಾ ಅನ್ನ ಥಾಮಸ್ (ಕಾಲ: 28:52.884, ಕೇರಳ)–2, ಪವಿತ್ರಾ ಕುರ್ತಕೋಟಿ (ಕಾಲ: 29:31.413, ಕರ್ನಾಟಕ)–3. 18 ವರ್ಷದೊಳಗಿನವರು: (18.5 ಕಿ.ಮೀ. ಕ್ರಾಸ್ ಕಂಟ್ರಿ ಒಲಿಂಪಿಕ್): ಸ್ವಾರ್ ನರ್ಜೆರಿ (ಕಾಲ: 01:24:06.888, ಕರ್ನಾಟಕ)– 1, ಅಕ್ಷತಾ ಬಿರಾದಾರ (ಕಾಲ: 01:25:51.754, ಕರ್ನಾಟಕ)– 2, ಬಿನಿಲಾ ಮೋಳ್ (ಕಾಲ: 01:29:22.460, ಕೇರಳ)– 3.

ಖೇಲೊ ಇಂಡಿಯಾ ಅಂತರ ವಿ.ವಿ ಕ್ರೀಡಾಕೂಟಕ್ಕೆ ಕರ್ನಾಟಕ ಆತಿಥ್ಯ

ಬೆಂಗಳೂರು: ಅಖಿಲ ಭಾರತ ಅಂತರ ವಿ.ವಿ ಖೇಲೊ ಇಂಡಿಯಾ ಕ್ರೀಡಾಕೂಟಗಳನ್ನು ಕರ್ನಾಟಕದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ. ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಹಾಗೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭಾನುವಾರ ಈ ವಿಷಯ ಪ್ರಕಟಿಸಿದರು.

‘ಕರ್ನಾಟಕದಲ್ಲಿ ಕ್ರೀಡಾಕೂಟಕ್ಕೆ ಸಕಲ ಸೌಲಭ್ಯಗಳು ಇದ್ದು, 150 ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ’ ಎಂದು ಯಡಿಯೂರಪ್ಪ ತಿಳಿಸಿದರು.

ಭಾರತೀಯ ವಿಶ್ವವಿದ್ಯಾಲಯಗಳ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಇತರ ಅಂಗಣಗಳಲ್ಲಿ ಕ್ರೀಡಾಕೂಟಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ.

ಪ್ರಜಾವಾಣಿ

ಕ್ಯಾಚ್ ಇಟ್.. ಕ್ರೀಡಾ ಕಥೆಗಳು

ಮೊಟೇರಾ ಕ್ರಿಕೆಟ್ ಅಂಗಣದಲ್ಲಿ ಹುಂಜ...!

ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವನ್ನು ಅಹಮದಾಬಾದಿನ ಮೊಟೇರಾದಲ್ಲಿ ನಿರ್ಮಿಸಿರುವ ಗುಜರಾತ್ ಕ್ರಿಕೆಟ್ ಸಂಸ್ಥೆಯ ಲಾಂಛನ ಯಾವುದು ಗೊತ್ತ? ಗಮನ ಸೆಳೆಯುವ ಈ ಮ್ಯಾಸ್ಕಾಟ್‌ನ ಹಿಂದಿನ ಕಥೆ ಏನು? ಇಲ್ಲಿದೆ ನೋಡಿ...

QR ಕೋಡ್ ಸ್ಕ್ಯಾನ್ ಮಾಡಿ

LOVED IN 70 COUNTRIES

BAJAJ THE WORLD'S FAVOURITE INDIAN

ಈ ವಾರ ಹೆಚ್ಚಿನ ಬೆಲೆ ಸಲ್ಲದು

ಈಗ ₹5 000*/- ದ ವರೆಗಿನ ಭಾರೀ ಉಳಿತಾಯ

ಆಫರ್ ಫೆಬ್ರುವರಿ 28ರ ವರೆಗೆ ಮಾನ್ಯ

ವೇರಿಯಂಟ್	ಪ್ಲೆಟಿನಾ 100 ES ಡಿಸ್ಕ್	ಪ್ಲೆಟಿನಾ 100 ES ಡ್ರಮ್	ಪ್ಲೆಟಿನಾ 100 KS ಡ್ರಮ್	CT 110 ES
ಈಗಿರುವ ಬೆಲೆ#	~~₹63 629/-~~	~~₹59 910/-~~	~~₹53 120/-~~	~~₹54 023/-~~
ಆಫರ್ ಬೆಲೆ	₹58 629/-	₹54 910/-	₹50 120/-	₹51 023/-

O&M KAN

72198 21111 | www.bajajauto.com

* ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ. ಆಫರ್ ಫೆಬ್ರವರಿ 22ರಿಂದ ಫೆಬ್ರವರಿ 28, 2021 ವರೆಗೆ ಮಾನ್ಯ. ಪ್ಲೆಟಿನಾ 100 ಮತ್ತು CT 110ನ ಆಯ್ದ ವೇರಿಯಂಟ್‌ಗಳ ಮೇಲೆ ಡಿಸ್ಕೌಂಟ್ ಅನ್ವಯಿಸುತ್ತದೆ. ಮುಂದಾಗಿ ಸೂಚನೆ ನೀಡದೆ ಆಫರ್‌ನ್ನು ಪರಿಷ್ಕರಿಸುವ ಅಥವಾ ಹಿಂತೆಗೆಯುವ ಅಧಿಕಾರವನ್ನು ಬಜಾಜ್ ಆಟೊ ಕಾದಿರಿಸಿಕೊಂಡಿದೆ. #ಎಕ್ಸ್-ಶೋರೂಮ್ ಬೆಲೆ, ಕರ್ನಾಟಕ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9900253260• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli Mysore Rd** RV BAJAJ: 7259186162 • **Chandra Layout Moodalapalya** RV BAJAJ: 7353763301 • **Kengeri** RV BAJAJ: 7353763305 • **Giri Nagar** RV BAJAJ: 6361211128• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Mekhri Circle** KALYANI BAJAJ: 8884413595 • **Yelahanka** KALYANI BAJAJ: 9449849618 • **Mathikere** KALYANI BAJAJ: 8884430126 • **Chickbellapur** KALYANI BAJAJ: 8884413594 • **Devenhalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9902934455 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 9620747153 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGAJAMPI BAJAJ: 9449820555, JAGASHREE BAJAJ: 7353773937 • **Chikodi** JAGAJAMPI BAJAJ: 9986145808 • **Gokak** JAGAJAMPI BAJAJ: 8929824099 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A** BAJAJ: 8123712938 • **Bijapur** BIJJARGI BAJAJ: 7349298629 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 7349247162 • **Hiriyur** BTV BAJAJ: Ph: 7349247168 • **Challakere** BTV BAJAJ 8296199371 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8722182492 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** SHREE KAMAKSHI BAJAJ: 9845784351 • **Malur** SHREE KAMAKSHI BAJAJ: 9665524409 • **KGF** SHREE KAMAKSHI BAJAJ: 9900235758 • **Mulbagalu** SHREE KAMAKSHI BAJAJ: 8892616586 • **BANGARAPET** SHREE KAMAKSHI BAJAJ: 8970688361 • **Tumkur** AKSHAYA BAJAJ: 7259040250 • **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 0816-4014516 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9739549252 • **Mandya** POPULAR BAJAJ: 7760967900 • **Chamarajanagara** PATEL BAJAJ: 8722067560 • **Hunsur** STAR BAJAJ: 9916833072 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 7259678777.